ಶೋಧನೆ

(ಒಂದು ಕಿರು ಕಾದಂಬರಿ)

ಈ ಕಿರು ಕಾದಂಬರಿಯು ೧೯೮೦ ರ 'ಸುಧಾ' ವಾರಪತ್ರಿಕೆ ನಡೆಸಿದ ಯುಗಾದಿ ಕಾದಂಬರಿ ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದು, ೧೯೮೧ ರಲ್ಲಿ ಮೊದಲ ಮುದ್ರಣವಾಗಿ ಪುಸ್ತಕರೂಪದಲ್ಲಿ ಬಂತು; ಬಹು ಬೇಗ ಎರಡನೆಯ ಆವೃತ್ತಿಯೂ ಹೊರಬಿದ್ದು, ಇದೀಗ ಮತ್ತೆ ಮುದ್ರಣಗೊಂಡಿದೆ. ಇದರ ಮೊದಲ ಮುದ್ರಣದ ಬೆನ್ನುಡಿಯಲ್ಲಿ. ಡಾ. ಜಿ.ಎಸ್. ಶಿವರುದ್ರಪ್ಪನವರು ಹೀಗೆಂದಿದ್ದಾರೆ: "ಮಾನವೀಯ ಸಂಬಂಧಗಳ ಹಿಂದಿರುವ ಹಲವಾರು ಎಳೆಗಳನ್ನು ಅತ್ಯಂತ ಕುತೂಹಲಕರವಾಗಿ ಮತ್ತು ಸ್ವಾರಸ್ಯವಾಗಿ ನಿರೂಪಿಸುವ ಈ ಕೃತಿ ನಾರಾಯಣ ಅವರ ಕಲೆಗಾರಿಕೆಗೆ ಹಿಡಿದ ಕನ್ನಡಿಯಾಗಿದೆ."

೧

ಶಶಿಧರನ ಬಗ್ಗೆ ನನ್ನ ಕೋಪ ಕ್ಷಣ ಕ್ಷಣಕ್ಕೂ ಹೆಚ್ಚಾಗುತ್ತಿತ್ತು. ಎಲ್ಲದಕ್ಕೂ ಒಂಥರ ಹಟ ಮಾಡ್ತಾನೆ; ಇವನನ್ನು ಕಟ್ಟಿಕೊಂಡು ಜೀವನ ಪೂರ್ತಿ ಏಗಬೇಕಲ್ಲ, ಅದು ಹೇಗಾಗುತ್ತೋ ಅನ್ನುವ ಯೋಚನೆ ಬಾಧಿಸತೊಡಗಿತು. ಆದರೆ ಅವನನ್ನ ಬೇರೆ ಕಳಿಸೋದಕ್ಕೆ ಮಾತ್ರ ಸಾಧ್ಯವಿಲ್ಲ. ಪಾಪ, ನನ್ನನ್ನು ಬಿಟ್ಟರೆ ಅವನಿಗೆ ಇನ್ಯಾರಿದ್ದಾರೆ? ಅದೂ ಜೀವನವಿಡೀ ಯಾರಾದರೂ ಅವನನ್ನ ನೋಡಿಕೊಳ್ಳೋಕೆ ಒಪ್ಪಿಕೋತಾರೆಯೇ? ಎಷ್ಟಾದರೂ ಅವನು ತನ್ನ ಬೆನ್ನಿಗೆ ಬಿದ್ದ ತಮ್ಮ, ಕಷ್ಟವೋ ಸುಖವೋ ನಾನೇ ಅವನ ಬಗ್ಗೆ ಜಾಗ್ರತೆ ವಹಿಸಬೇಕು. ಆ ಜವಾಬ್ದಾರಿಯಿಂದ ನಾನಂತೂ ದೂರ ಸರಿಯೋ ಹಾಗೇ ಇಲ್ಲ. ನಾನು ದೂರ ಹೋಗಬೇಕಂತ ಅನಿಸಿದರೂ ಹಾಗೆ ಮಾಡಲು ಹೇಗೆ ಸಾಧ್ಯ? ಜನ ಏನಂದಾರು? ಅಲ್ಲದೆ ಅವನೆಲ್ಲೋ ನರಳ್ತಾ ಇದ್ದರೆ ನನ್ನ ಮನಸ್ಸು ಸಮಾಧಾನದಿಂದ ಇರಕ್ಕೆ ಸಾಧ್ಯವೇ ಅನ್ನಿಸುತ್ತೆ.

ಆದರೆ ಹೀಗೆಲ್ಲ ಮಾಡ್ತಾ ಇದ್ದರೆ ನಾನು ತಾನೆ ಹೇಗೆ ತುಟಿ ಕಚ್ಚಿಕೊಂಡು ಅನುಭವಿಸ್ತಾ ಇರೋದು? ಇನ್ನೂ ಹುಡುಗ ಆಡಿದ ಹಾಗೆ ಆಡ್ತಾನಲ್ಲ, ಜವಾಬ್ದಾರಿ ಬೇಡವೇ? ಯಾಕೋ ಬೇಜಾರಾಗತ್ತೆ. ಇವಳೂ ಹಾಗೇನೆ ಆಡ್ತಾಳೆ. ಅವನನ್ನ ಕಂಡರೆ ಸೈರಣೆ ಇಲ್ಲ. ಮುಂಚೇನೇ ಎಲ್ಲ ಹೇಳಿದ್ರೂ ಅವಳು ಮಾಡ್ತಾಳಲ್ಲ. ಸಣ್ಣದಕ್ಕೆಲ್ಲ ಅವನನ್ನ ಕೆರಳಿಸೋದು; ನನ್ನ ಇಕ್ಕಟ್ಟಿಗೆ ಸಿಕ್ಕಿಸೋದು. ಇವರಿಬ್ಬರ ಮಧ್ಯೆ ಸಿಕ್ಕಿಕೊಂಡು ನಾನು ನೋಯಬೇಕು. ಯಾರ ಕಡೆ ವಹಿಸಿಕೊಳ್ಳೋದು? ಅವನಂತೂ ಕಾಯಿಲೆ ಮನುಷ್ಯ, ಜೀವನಪೂರ್ತಿ ಬೆನ್ನುಬಿಡದ ಪ್ರಾರಬ್ಧ ಕಾಯಿಲೆ ಅವನಿಗೆ. ಅದರಿಂದ ಅವನ ಮಿದುಳಿನ ಮೇಲೆ ಪರಿಣಾಮ ಆಗಿರುತ್ತೆ. ಚಿಕ್ಕ ಚಿಕ್ಕ ವಿಷಯಗಳಿಗೆಲ್ಲಾ ಉದ್ವಿಗ್ನನಾಗ್ತಾನೆ. ಆದರೆ ಇವಳಿಗೇನು ಧಾಡಿ? ವಿವೇಕ ತಂದುಕೊಂಡು ನಡಕೋಬಾರದೆ. ಒಟ್ಟಿನಲ್ಲಿ ನನ್ನ ಪರಿಸ್ಥಿತಿ ತುಂಬ ಕಷ್ಟದ್ದು.

ಇವಳಂತೂ ಇನ್ನೂ ಗುಂ ಅಂತಾನೇ ಇದ್ದಾಳೆ, ಮೂರು ದಿನದಿಂದ. ಅವಳ ಮುಖ ಕಂಡರೆ ಉರಿದು ಹೋಗುತ್ತೆ ನಂಗೆ. ಆದರೆ ಅವಳು ಎಷ್ಟಾದರೂ ಹೊರಗಿನೋಳು. ಅಣ್ಣಂಗೂ ಅತ್ತಿಗೆಗೂ ವ್ಯತ್ಯಾಸ ಇರಲ್ವೆ? ಅವನ ಜವಾಬ್ದಾರಿ ನಂದು; ನೇರವಾಗಿ ಸಂಬಂಧಿಸಿದೋನು ಅವನು ನಂಗೆ. ಇವಳಿಗಾದರೆ ನನ್ನ ಮೂಲಕ ತಾನೇ ಸಂಬಂಧಿಯಾಗಿರೋದು? ಜೀವನಪೂರ್ತಿ ಅವಳೂ ನವೀಬೇಕಲ್ಲ. ಹಾಗಾಗಿ ಕೆಲವು ಸಲ ಅವಳಿಗೂ ರೇಗುವುದುಂಟು. ಶಶಿಧರನಾದರೂ ಚಿಕ್ಕ ಹುಡುಗ ಅಲ್ವಲ್ಲ. ಪರಿಸ್ಥಿತಿ ಅರ್ಥಮಾಡಿಕೋಬಾರದೇ? ನಮ್ಮ ಜತೇಲಿ ಅಲ್ಲದೆ ಬೇರೆ ಕಡೆ ಇರಕ್ಕೆ ಸಾಧ್ಯ ಇಲ್ಲ ಅಂತ

ಅವನಿಗೇನು ಗೊತ್ತಾಗದೆ? ಕಾಯಿಲೆ ಇದ್ದರೇನಾಯ್ತು; ಪೂರ್ತಿ ಬುದ್ಧಿ ಏನೂ ಇಲ್ಲದೆ ಹೋಗಿಲ್ಲವಲ್ಲ? ತೀರ ಎಳಸಾಗಿ ಆಡ್ತಾನೆ, ಮಾತೆತ್ತಿದರೆ ಮನೆಬಿಟ್ಟು ಹೋಗೋದು.

ಆವತ್ತೂ ಹಾಗೇ ಆಗಿತ್ತಲ್ಲ. ನಾನು ಆಫೀಸಿಂದ ಬರೋ ಹೊತ್ತಿಗೆ ಸರಿಯಾಗಿ ಶುರುವಾಗಿತ್ತು ಯುದ್ಧ. ಮೊದಲೇ ತಲೆ ಚಿಟ್ಟುಹಿಡಿಸಿಕೊಂಡು ಆಫೀಸಿನಿಂದ ಬಂದರೆ ಮನೇಲಿ ಬೇರೆ ಕುರುಕ್ಷೇತ್ರ. ಶಶಿ ಕೆಲಸ ಮುಗಿಸಿಕೊಂಡು ಬಂದೋನೇ ಅಡಿಗೆ ಮನೇಗೆ ಹೋಗಿ ಇದ್ದಬದ್ದ ತಿಂಡೀನೆಲ್ಲ ತಿಂದು ಬಿಟ್ಟಿದ್ದನಂತೆ. ಅವನಿಗೋ ಮೊದಲೇ ಹೊಟ್ಟೆ ಜಾಸ್ತಿ. ಹೋಟಲುಗೀಟಲಲ್ಲಿ ತಿನ್ನಬೇಡಾಂತ ನಾನೇ ಅವನಿಗೆ ಹೇಳ್ತಿದ್ದೆನಲ್ಲ. ಎಣ್ಣೇದೋ ಕರಿದದ್ದೋ ತಿಂದರೆ ಜಾಸ್ತಿಯಾಗಬಹುದು ಅಂತ ನಾನೇ ಅವನಿಗೆ ಹೇಳಿದ್ದು ನಿಜ. ಆದ್ದರಿಂದ ಬೆಳಿಗ್ಗೆ ಕ್ಯಾರಿಯರ್ ಊಟವಾದ ಮೇಲೆ ಅವನಿಗೆ ತಿನ್ನಕ್ಕೆ ಏನೂ ಇಲ್ಲ. ಹೊಟ್ಟೆ ಹಸಿಯದೆ ಏನಾಗುತ್ತೆ? ಬಂದ, ತಿಂದ. ಕೇಳಬಹುದಾಗಿತ್ತು ಅವನ ಅತ್ತಿಗೇನ 'ಎಲ್ಲಾರದೂ ತಿಂಡಿ ಆಗಿದ್ಯಾ' ಅಂತ. ಆದರೆ ನನಗೇಂತ ಇಟ್ಟಿದ್ದ ತಿಂಡೀನೂ ತಿಂದುಬಿಟ್ಟಿದ್ದ. ಸರಿ, ಇವಳಿಗೆ ಪತಿಪ್ರೇಮ ವಿಪರೀತವಾಯಿತು. ಅವನನ್ನ ಬೈಯ್ಯಕ್ಕೆ ಶುರು. 'ಅವರು ದುಡಿದುಕೊಂಡು ಬರ್ತಾರೆ. ಬರೋ ಹೊತ್ತಿಗೇಂತ ತಿಂಡಿ ಮಾಡಿಟ್ಟರು ಹೇಳದೇ ಕೇಳದೆ ಎಲ್ಲಾ ಮುಗಿಸಿಬಿಡೋದೇ?' ಅಂತ ಅವಳಂದಳು. 'ಅವನು ಹೋಟಲಲ್ಲಿ ತಿಂತಾನೇ ಸುಮ್ನಿರಿ, ನಾನೆಲ್ಲೂ ತಿನ್ನೋಹಾಗಿಲ್ಲವಲ್ಲ' ಅಂತ ಶಶಿ.

"ಇಲ್ಲೇನೋ ಇರತ್ತೇಂತ ಬಂದು. ಇಲ್ಲದ್ದು ನೋಡಿ, ಅದೇ ಹಾದೀಲೇ ಹೊರಗಡೆ ಹೋಗಬೇಕೇನು?"

"ಏನು ಹೋದರೆ? ಅವನೇನು ಮುದುಕನ?"

"ಅಣ್ಣನ ಬಗ್ಗೆ ಎಷ್ಟು ಅಸಡ್ಡೆ ನೋಡು? ಅವರಿಲ್ಲದಿದ್ದರೆ ನಿನ್ನ ಯಾರು ನೋಡ್ಕೋತಾ ಇದ್ರು?" ಅಂತ ಇವಳ ವಾದ. ಅವನೇನೂ ಮಾತಲ್ಲಿ ಕಡಿಮೆ ಇಲ್ಲದೋನು. ಮಾತಿಗೆ ಮಾತು ಬೆಳೀತು. ಇಬ್ಬರೂ ಜೋರು ಮಾಡಿದ್ದರು; ನಾನು ಬಂದೆ. ಮೊದಲೇ ದಣಿದಿದ್ದೆ, ಹಸಿದಿದ್ದೆ, ಇಲ್ಲಿ ಬಂದರೆ ಈ ಗೋಳು. "ಏನ್ರೇ ನಿಮ್ದು?" ಸಿಡುಕಿದೆ.

ರಮಾ ಹೇಳಿದಳು. ಅವನೂ ಮಧ್ಯೆ ಬಾಯಿ ಹಾಕಿದ. ವಿಷಯ ಗೊತ್ತಾಯಿತು. "ಹೋಗಲಿ ಬಿಡು, ಇವತ್ತು ಸಾಯಂಕಾಲ ತಿಂಡಿ ತಿನ್ನದೇ ಇದ್ರೆ ಸಾಯಲ್ಲವಲ್ಲ" ಎಂದೆ ಒರಟಾಗಿ.

"ಅಂತೂ ನೀವೂ ನನ್ನೇ ಅಂತೀರಲ್ಲ" ಅಂದಳು. ಒಂದು ಕ್ಷಣ ನಿಜ ಅನ್ನಿಸಿತು. ಗಂಡನಿಗೇಂತ ಮಾಡಿಟ್ಟಿದ್ದನ್ನ ತಿಂದರೆ ಯಾವ ಹೆಂಡತಿಗಾದ್ರೂ ಕೋಪ ಬರಬಹುದಲ್ಲವೇ ಅನ್ನಿಸಿತು.

"ಕೇಳಿ ಹೇಳಿ ಅಲ್ಲವೇನೋ ಕೆಲಸ ಮಾಡಬೇಕಾದದ್ದು?" ಅಂದೆ ಶಶಿಧರನ ಕಡೆ ತಿರುಗಿ.

"ಎಲ್ಲಾದಕ್ಕೂ ಯಾಕೆ ಕೇಳ್ಬೇಕು. ನಮ್ಮ ಮನೆ ಅಲ್ವಾ ಇದು."

"ನಿಮ್ಮ ಮನೇ ಆದ್ರೇ ಮಾಡಿ ಹಾಕೋಳು ನಾನೇ ತಾನೆ?" ಅಂದಳು ರಮಾ ಸಿಡುಕಿನಿಂದ.

"ಬಿಟ್ಟಿ ಏನೂ ತಿನ್ನಲ್ಲವಲ್ಲ ನಾನು?"

"ಹಾಗಾದ್ರೆ ಹೋಟಲಿಗೆ ಹೋಗಿ ಇರು, ಇಲ್ಲೇಕಿದ್ದೀಯಾ?"

"ಹಾಗೆ ಹೇಳೋದಾದ್ರೆ ಅವನು ಹೇಳ್ಲಿ. ಅವನು ತಾನೇ ಮನೆ ಯಜಮಾನ" ಅತ್ತಿಗೆ ಬಗ್ಗೆ ಇವನಿಗೆ ಉದಾಸೀನವೇ ಅನ್ನಿಸ್ತು ನಂಗೆ.

"ಬಾಯಿ ಮುಚ್ಕೊಳೊ. ಮಾಡೋದೆಲ್ಲ ಮಾಡಿ ಈಗ ಅವಳನ್ನೇ ದಬಾಯಿಸ್ತಾ ಇದ್ದಾನೆ. ಸ್ವಲ್ಪವೂ ಬುದ್ಧಿ ಇಲ್ಲ" ಎಂದು ಗದರಿದೆ.

ತಿಂತಾ ಇದ್ದದ್ದನ್ನ ನಿಲ್ಲಿಸಿದ, ಪ್ಲೇಟು ದೂರ ಇಟ್ಟ.

"ಎಲ್ಲಾದಕ್ಕೂ ಕೋಪ ಬೇರೆ, ಮಾಡೋದು ಮಾತ್ರ ಕಂತ್ರಿ ಕೆಲಸ" ಅಂತ ಗೊಣಗಿಕೊಂಡೆ. ದಡಬಡ ಚಪ್ಪಲಿ ಮೆಟ್ಟಿಕೊಂಡು ಶಶಿ ಹೊರಗ್ಹೋಗಿದ್ದ.

ರಾತ್ರಿ ಎಷ್ಟು ಹೊತ್ತಾದರೂ ಬರದೆ ಇದ್ದಾಗ ನಂಗೆ ಗಾಬರಿಯಾಯ್ತು. ಆದರೆ ಪಕ್ಕದಲ್ಲಿದ್ದ ರಮಾ "ಅವನಿಗೇನೂ ಆಗಿರಲ್ಲ ಧಾಡಿ, ಸುಮ್ನಿರಿ" ಅಂದಳು. ಇವಳಿಗೆ ನನ್ನ ತಮ್ಮನ ಬಗ್ಗೆ ಅಸಡ್ಡೆ ಅಂತ ಅಸಮಾಧಾನವಾಯಿತು, ಆದರೆ ಅವಳ ಮೈಯ ಬಿಸಿ ನನ್ನನ್ನ ಕರಗಿಸ್ತಾ ಇತ್ತು. ಸುಖದ ಆಯಾಸದಿಂದ ನಿದ್ದೆ ಬಂದಿತ್ತು.

ಮಾರನೇ ಬೆಳಿಗ್ಗೆ ಐದೂವರೆಗೆ ಶಶಿ ಬಂದು ಬಾಗಿಲು ತಟ್ಟಿದ್ದ. ನಾನೇ ಬಾಗಿಲು ತೆಗೆದಿದ್ದೆ. ಅವನ ಮೇಲೆ ಸಿಟ್ಟು ಅಸಮಾಧಾನಗಳು ಇದ್ದರೂ, ಅವನ ಮುಖ ಕಂಡ ಮೇಲೆ ನನ್ನ ಆತಂಕ ಕಡಿಮೆಯಾಗಿ ಏನೂ ಮಾತನಾಡದೇ ಅವನನ್ನು ಒಳಗೆ ಬರಮಾಡಿಕೊಂಡಿದ್ದೆ. ಅವನು ನೇರವಾಗಿ ಟವಲು ತೆಗೆದುಕೊಂಡು ಬಚ್ಚಲ ಮನೆಗೆ ಹೋಗಿ ದಡದಡಾಂತ ಒಂದು ಬಕೆಟ್ ತಣ್ಣೀರು ಸುರಿದುಕೊಂಡು ಕೆಲಸಕ್ಕೆ ಹೊರಟಿದ್ದ.

ಸಂಜೆ ವಿಚಾರಿಸಿದಾಗ ಗೊತ್ತಾಯಿತು ಹಿಂದಿನ ರಾತ್ರಿಯೆಲ್ಲ ಉಪವಾಸ ಇದ್ದನಂತೆ. ಅವನ ಆಫೀಸಿನ ಸ್ನೇಹಿತ ಗೋವಿಂದಯ್ಯ ಅನ್ನುವವನ ರೂಮಲ್ಲಿ ಮಲಗಿಕೊಂಡಿದ್ದನಂತೆ. ಮನೆ ಜಗಳಾನೆಲ್ಲ ಬೇರೆಯವರ ಹತ್ತಿರವೆಲ್ಲ ಹೇಳಿಕೊಂಡಿದ್ದಾನೇನೋ ಅಂತ ಅಸಮಾಧಾನವಾಯಿತು. ಆದರೆ ಹಿಂದಿನ ದಿನದ ಹಾಗೇ ಆಗಬಾರದೆಂದು ಬಾಯಿಮುಚ್ಚಿಕೊಂಡಿದ್ದೆ.

ಸರಿ, ಈಗಲೂ ಹಾಗೆಯೇ ಆಗಿರಬಹುದು ಅನ್ನಿಸಿತು. ಆದರೆ ಅವನು ಮನೆಬಿಟ್ಟು ಹೋಗಿ ಇವತ್ತಿಗೆ ಮೂರನೇ ದಿನ. ಹೋದ ದಿನ ರಾತ್ರಿಯೆಲ್ಲ ಅವನ ಮೇಲೆ ನನಗೆ ವಿಪರೀತ ಸಿಟ್ಟು ಬಂದಿತ್ತು. ಮನೆ ಬಿಟ್ಟು ಹೋಗಿ ಎಲ್ಲಾದಕ್ಕೂ ಹೆದರಿಸ್ತಾನೆ ಅಂತ ರೋಸಿಹೋಗಿತ್ತು. ಆದರೂ ನಾನಷ್ಟು ಕೋಪ ಮಾಡಿಕೊಳ್ಳಬಾರದಿತ್ತು ಅಂತಲೂ ಅನ್ನಿಸಿತ್ತು. "ಎಲ್ಲಿ ಹೋಗ್ತಾನೆ ಬಿಡಿ. ಗೋವಿಂದಯ್ಯನೋ ಪಾವಿಂದಯ್ಯನೋ ಇದಾನಲ್ಲ. ಅವನ ಪ್ರಾಣ ಸ್ನೇಹಿತ, ಅವನ ಮನೇಲಿ ಬಿದ್ದುಕೊಂಡಿರ್ತಾನೆ" ಅಂತ ತಿರಸ್ಕಾರದಿಂದ ಅಂದಾಗ ರಮಳ ಮೇಲೆ ಕಿಡಿಗಣ್ಣು ಹಾಯಿಸಿದ್ದೆ. ಆದರೆ ತನ್ನ ಮೃದುವಾದ ಸ್ಪರ್ಶದಿಂದ ನನಗವಳು ಮಂಕುಹಿಡಿಸಿಬಿಡುತ್ತಾಳೆ. ಮನಸ್ಸಿಗೆ ಬೇಸರವಾದಾಗ ಅವಳು ಹೆಚ್ಚು ಬೇಕು ಅನ್ನಿಸತ್ತೆ. ಅವಳನ್ನ ಹಿಂಡಿ ಹಿಂಡಿ ಹೀರಿಬಿಡ್ತೀನೇನೋ ಎನಿಸುವ ಹಾಗೆ; ಅಂಥ ಸಂದರ್ಭಗಳಲ್ಲಿ ಅವಳನ್ನ ಸೇರ್ತೀನಿ. ಅವತ್ತೂ ಹಾಗೆಯೇ ಆಯಿತು.

ಮಾರನೇ ದಿನ ಕೂಡ ಬರದೇ ಇದ್ದಾಗ ಆತಂಕವಾಯಿತು. ಎಲ್ಲಿ ಹಾಳಾಗಿ ಹೋದ ಇವನು? ಏನೋ ಒಂದು ರಾತ್ರಿಯಾಗಿದ್ದರೆ ಪರವಾಯಿಲ್ಲ, ಎರಡು ದಿನವಾದರೂ ಬರಲಿಲ್ಲವಲ್ಲ ಅಂತ ದುಮುಗುಟ್ಟುವಂತಾಯಿತು. ದಿನ ದಿನಕ್ಕೆ ಇವನ ಕಾಟ ಜಾಸ್ತಿ ಆಗ್ತಿದೆಯಲ್ಲ ಅನ್ನಿಸಿತು. ಇವತ್ತು ಬಂದರೆ ಇನ್ನೂ ಒಂದೆರಡು ಒದೆತ ಕೊಟ್ಟು ಬುದ್ಧಿ ಕಲಿಸಬೇಕು ಅಂತ ನಿರ್ಧರಿಸಿದ್ದಾಯಿತು. ರಮಳಿಗೂ ಒಂಥರ ಆತಂಕವಾಗಿತ್ತೇನೋ; ನಿನ್ನೆ ರಾತ್ರಿ ಉತ್ಸಾಹದಿಂದ ಇರಲೇ ಇಲ್ಲ. ನನಗೆ ಅವಳ ಬಗ್ಗೆಯೇ ಕೋಪ ಉಕ್ಕಿತ್ತು. ಆದರೆ ಶಶಿ ಮೇಲೆ ಜೋರು ಮಾಡಿದ ಹಾಗೆ ಇವಳ ಮೇಲೆ ಯಾಕೆ ರೇಗಲಾರೆ? ಇವಳಿಗೆ

ನಾನು ದಾಸನಾಗಿ ಬಿಟ್ಟಿದ್ದೇನೆಯೋ ಎಂಬ ಚಿಂತೆ ಮೂಡುತ್ತದೆ. ಹಾಳಾಗಿಹೋಗಲಿ ಎಂದು ಹೊದಿಕೆ ಮುಸುಕಿ ಹಾಕಿಕೊಂಡಿದ್ದೆ.

ಇವತ್ತಂತೂ ಮೂರನೇ ದಿನ ಅವನು ಹೋಗಿ, ಮೊನ್ನೆ ಅವನು ಮನೆ ಬಿಟ್ಟಾಗ ಇನ್ನೂ ನಸುಕು ನಸುಕು. ಫ್ಯಾಕ್ಟರೀಗೆ ಹೋಗೋ ಹೊತ್ತೂಂತ ಕಾಣತ್ತೆ ಸುಮಾರು. ಅಂದರೆ ಎರಡು ಹಗಲುಗಳು, ಎರಡು ರಾತ್ರಿ ಅಂದ ಹಾಗಾಯಿತು, ಏನು ಹುಡುಗಾಟವಾಡ್ತಾನೆ ಈ ಬೋಳಿಮಗ. ಜವಾಬ್ದಾರೀನೇ ಬೇಡವೇ ಇವನಿಗೆ. ನನಗೆ ಎಷ್ಟು ಕಳವಳವಾಗುತ್ತೆ ಅನ್ನೋ ಯೋಚನೆಯೇ ಇವನಿಗೆ ಬಾರದೇ? ಇವನನ್ನ ನಿವಾರಿಸಿಕೊಳ್ಳೋ ಹಾಗೂ ಇಲ್ಲ, ಇರಿಸಿಕೊಳ್ಳೋ ಹಾಗೂ ಇಲ್ಲ – ಅನ್ನೋ ಸ್ಥಿತೀಲಿದ್ದೀನಿ ನಾನು. ಇವತ್ತು ಬರಲಿ ಮಾಡ್ತೀನಿ. ಆದರೆ ಇವತ್ತು ಬರದಿದ್ದರೆ? ಎದೆ ತುಂಬ ಜೋರಾಗಿ ಡವಡವಗುಟ್ಟಲು ಶುರುವಾಗುತ್ತೆ. ಬರದೆ ಎಲ್ಲಿಗೆ ಹೋಗ್ತಾನೆ ಅನ್ನುವ ತಿರಸ್ಕಾರವೂ ಮೂಡುತ್ತೆ. ಆದರೆ ಇವತ್ತೂ ಬರದಿದ್ದರೆ ಏನು ಮಾಡೋದು? ಇವತ್ತೆಲ್ಲ ಯಾಕೆ ಕಾಯಬೇಕು? ಆ ಗೋವಿಂದಯ್ಯನನ್ನು ವಿಚಾರಿಸಿದರೆ ಆಯಿತು. ಮಧ್ಯಾಹ್ನ ಅವನರೂಮಿನ ಕಡೆ ಆಫೀಸಿಂದಬರೋವಾಗ ಹಾಗೇ ಹೋಗಿ ಬರಬೇಕು ಎಂದು ನಿರ್ಧರಿಸುತ್ತೇನೆ. ಅವನ ರೂಮು ನಾನು ಎಂದೂ ಕಂಡವನಲ್ಲ. ಎಲ್ಲೋ ಅರಳೇಪೇಟೆಯಲ್ಲಿ ಅಂತ ಶಶಿ ಹೇಳಿದ್ದ ನೆನಪು. ಅದಾವುದೋ ಗಲ್ಲಿಯಂತೆ, ಹೋಗಿ ವಿಚಾರಿಸಿಕೊಂಡು ಬರಬೇಕು. ದರದರಾಂತ ಎಳಕೊಂಡು ಬಂದು ಇನ್ನು ಈ ಥರ ಮಾಡಬೇಡ ಅಂತ ಚೆನ್ನಾಗಿ ಹೇಳಬೇಕು. ಒಳ್ಳೆ ಪ್ರಾರಬ್ಧ ನನ್ನದು. ಸುಮ್ಮನೆ ಬೇರೆಯವರಿಗಾಗಿ ಒದ್ದಾಡೋದೇ ನನ್ನ ಕರ್ಮವಾಗಿಬಿಟ್ಟಿದೆ. ಎಂದಿಗೆ ಕೊನೇನೊ ಇದೆಲ್ಲ ಗೋಳಿಗೆ!

ಆಫೀಸಲ್ಲೆಲ್ಲ ಶಶಿಯದೇ ಯೋಚನೆ. ಯಾಕೆ ಹೀಗೆ ಮಾಡಿದ? ಇಷ್ಟೊಂದು ಛಲ ಮಾಡ್ತಾರಾ ಯಾರಾದರೂ? ಅದೂ ನನ್ನ ಮೇಲೆ, ಅವನನ್ನ ಹೇಗೆ ನೋಡ್ಕೋತಿದೀನಿ ನಾನು. ನನ್ನಂಥ ಅಣ್ಣ ಅವನಿಗೆ ಬೇರೆ ಸಿಕ್ತಾರಾ? ಯಾವ ಅಣ್ಣನೂ ತನ್ನ ತಮ್ಮನನ್ನು ಈ ಥರ ನೋಡ್ಕೊಳಕ್ಕೆ ಸಾಧ್ಯ ಇಲ್ಲ. ಎಲ್ಲಾರೂ ಹೇಳಿದ್ದನ್ನ ನಾನೇ ಕೇಳಿದ್ದೇನೆ. ಮಗನಿಗಿಂತ ಜೋಪಾನವಾಗಿ ಅವನನ್ನು ಕಾಣುತ್ತಿದ್ದೀನಿ. ಅವನು ದುಡ್ಡೇನೋ ಕೊಡ್ತಾನೆ, ನಿಜ, ಅದು ಅವನ ಊಟ ವಸತಿಗಾಯಿತು. ಆದರೆ ನಾನು ತೋರಿಸೋ ವಿಶ್ವಾಸಕ್ಕೆ ಅವನು ಬೆಲೆ ಕೊಡೋದಕ್ಕೆ ಸಾಧ್ಯವೇ? ಸ್ವಲ್ಪವೂ ಕೃತಜ್ಞತೆಯಿಲ್ಲವೇ ಅವನಿಗೆ?

ಪಾಪ, ಅವನ ಸ್ಥಿತಿ ನೋಡಿದರೆ ಎಂತಹವರಿಗೂ ಕನಿಕರವೆನ್ನಿಸತ್ತೆ. ಜೀವನಪೂರ್ತಿ ಅವನು ಈ ರೋಗದಿಂದ ಮುಕ್ತನಾಗೋಹಾಗಿಲ್ಲ. ಫಿಟ್ಸ್ ಅಂದರೇನು ಸಾಮಾನ್ಯವೇ? ಯಾವಾಗ ಬರುತ್ತೋ? ಎಲ್ಲಿ ಬರುತ್ತೋ ಕಂಡವರಾರು? ಪ್ರತಿದಿನ ಕರಾರುವಾಕ್ಕಾಗಿ ಮಾತ್ರೆ ನುಂಗಿದರೂ ಅದು ಕೆಲವು ಸಲ ಬಂದೇಬಿಡುತ್ತೆ. ಅವನಿಗಿಂತ ಮಾತ್ರೆ ನುಂಗಿಸೋ ವಿಚಾರದಲ್ಲಿ ಆಸಕ್ತಿ ಹೆಚ್ಚು. ಪ್ರತಿದಿನ ರಾತ್ರಿ ಮಾತ್ರೆ ತಗೊಂಡ್ಯಾ ಅನ್ನೋ ಮಂತ್ರ ಜಪಿಸಿ ಜಪಿಸಿ ಅಭ್ಯಾಸವಾಗಿಬಿಟ್ಟಿದೆ. ಮಾತ್ರೆ ತಗೊಂಡರೂ ಪೂರ್ತಿ ನಿಂತಿಲ್ಲವಲ್ಲ, ಇನ್ನೆಂಥ ದ್ರಾಬೆ ಕಾಯಿಲೆ ಅದು ಅನ್ನಿಸತ್ತೆ. ಯಾಕೋ ಪ್ರಾರಬ್ಧ ಕರ್ಮ ಅಂತಾರಲ್ಲ. ಅಂಥದೇನಾದರೂ ಇರಬಹುದೇ ಅನ್ನೋ ಅನುಮಾನವಾಗುತ್ತೆ. ಇದು ಶಶಿಯ ಪ್ರಾರಬ್ಧ ಕರ್ಮವೋ, ನನ್ನದೋ? ಅವನಿಗಿಂತ ನಾನೇ ಹೆಚ್ಚು ಕನಿಕರಕ್ಕೆ ಅರ್ಹನೇನೋ. ನಾವು ನಾವೇ ಎಲ್ಲೂ ಹೋಗೋ ಹಾಗಿಲ್ಲ. ಎಷ್ಟೋ ಸಲ ನಾನು ಮಕ್ಕಳು ರಮ ಎಲ್ಲಾದರೂ ಹೋಗಬೇಕೂಂತ ಅನ್ನಿಸಲ್ಲವೇ ನನಗೆ? ಇನ್ನು ರಮಂಗೆ ಹೇಗೆ ಅನ್ನಿಸಬಹುದು? ಪಾಪ. ಅವಳೂ ಪರಿಸ್ಥಿತೀನ ಅರ್ಥಮಾಡಿಕೋತಾಳೆ. ಮದುವೆಗೆ ಮುಂಚೆ ಅವಳಿಗೆ ಎಲ್ಲ ವಿವರಿಸಿದ್ದು ಒಳ್ಳೇದಾಯಿತು; ನನಗೆ ಜವಾಬ್ದಾರಿ ಸ್ವಲ್ಪ ಕಡಿಮೆ. ಅವಳಿಗೇನೂ ನಮ್ಮನೆ ವಿಚಾರ ತಿಳಿಯದ್ದೇನಲ್ಲ. ನಂಟರಲ್ಲದಿದ್ದರೂ ಅವರ ಮನೆಯೋರೆಲ್ಲ ಪರಿಚಯದವರೇ. ಇನ್ನಾರು ಅವರ ಮನೆಯೋರು ಅಂದರೆ ಅವರಪ್ಪ, ಅಮ್ಮ, ಅವರಣ್ಣ ಅಷ್ಟೇ. ಅವರೂ ಈಗ

ಹೈದರಾಬಾದಿನಲ್ಲಿದ್ದಾರೆ. ರಮ ಒಂಟಿ ತನಾನ ಅನುಭವಿಸುತ್ತಾಳೆ ಏನೋ. ಯಾಕೇಂದ್ರೆ ನಾನು ಹೆಚ್ಚು ಭಾಗ ಹೊರಗೇ ಕಾಲ ಕಳೆಯುವವನು, ಎಲ್ಲ ದುಡಿಯಬೇಕಾದ ಗಂಡಸರೂ ಅಷ್ಟೇ ತಾನೇ. ಇನ್ನು ಮನೇಲಿರೋವಾಗ ಶಶಿಯ ಚಿಂತೆ.

ಇವನು ಎಲ್ಲಿಗೆ ಹೋದ. ಆ ಹಾಳು ಗೋವಿಂದಯ್ಯನಾದರೂ ಬಂದು ಹೇಳಿ ಹೋಗೋದು ಬೇಡವೇ? ಒಂದೆರಡು ಸಲ ಅವನ ರೂಮಲ್ಲೇ ಇವನಿಗೇನಾದರೂ ಅಟ್ಯಾಕ್ ಆಗಬೇಕು, ಆಗ ಮುಂದಿನ ಸಲದಿಂದ ಅವನೇ ತನ್ನ ರೂಮಿಗೆ ಇವನನ್ನ ಸೇರಿಸ್ತಾನೋ ಇಲ್ಲವೋ. ಅವನಿಗೆ ಫಿಟ್ಸ್ ಬರೋ ವಿಚಾರ ವೇನೂ ಅವನಿಗೆ ತಿಳಿಯದ್ದಲ್ಲ ಅನ್ನಿಸತ್ತೆ. ಆಫೀಸಿನಲ್ಲಿ ಎಷ್ಟೋ ಸಲ ಬಂದಿರ್ಬೇಕು. ಸ್ನೇಹಿತರು ಅವನಿಗೆ ಉಪಚಾರ ಮಾಡಿದ್ದನ್ನ ಶಶಿಯೇ ಒಂದೆರಡು ಸಲ ಹೇಳಿದ್ದನಲ್ಲ. ಹಾಗೇ ಆದರೆ, ಗೋವಿಂದಯ್ಯ ಒಬ್ಬನೇ ಇದ್ದಾಗ ಏನಾದ್ರೂ ಅಟ್ಯಾಕ್ ಬಂದಿದ್ರೆ, ಇವನು ಇನ್ನೆಲ್ಲಿಗೆ ಹೋಗ್ತಾನಂತೆ ಇನ್ನು ಮೇಲೆ. ಬುದ್ಧಿ ಬರಬೇಕು ಇವನಿಗೆ.

ಸಾಯಂಕಾಲ ಮನೆಗೆ ಬಂದರೆ, ನಾನು ಮಧ್ಯಾಹ್ನವೆಲ್ಲ ಯೋಚನೆ ಮಾಡ್ತಿದ್ದ ಗೋವಿಂದಯ್ಯಾನೇ ಅಲ್ಲಿ ಕೂತಿದ್ದಾನೆ! ನನ್ನ ಕಂಡು ನಮಸ್ಕಾರ ಮಾಡಿದ.

"ಯಾವಾಗ ಬಂದ್ರಿ?"

"ಈಗ ತಾನೇ ಬಂದೇ ಸಾರ್, ಅಮ್ಮ ಒಳಗೆ ಕರದ್ರು. ನೀವೂ ಬಂದ್ರಿ" ಅಂದ.

"ಏನು ಸಮಾಚಾರ?" ಅಂದೆ. ಹಾಗೆ ನೋಡಿದರೆ ಹೇಳೋ ಸಮಾಚಾರ. ಅದೂ ಗೋವಿಂದಯ್ಯನನ್ನ ವಿಚಾರಿಸೋ ಸಮಾಚಾರ ನನ್ನ ಬಳಿಯೇ ಇದ್ದದ್ದು, ಆದರೆ ಅದನ್ನ ಅವನೇ ಹೇಳಕ್ಕೆ ಬಂದಿದ್ದಾನೆ. ಶಶಿ ಏನಾದರೂ ಹೇಳಿ ಕಳ್ಸಿರಬೇಕು. ಅಲ್ಲ, ಎಂಥ ದುಷ್ಟ ಅವನು. ಹೇಳಿ ಬೇರೆ ಕಳಿಸೋದು! ಮನೇ ಗುಟ್ಟು ರಟ್ಟುಮಾಡಬಾರದೂಂತ ಅವನಿಗೆ ತಿಳಿಯೋದಿಲ್ಲವೇ? ವಿಪರೀತ ಕೋಪ ಬಂತು. ಆದರೆ ಬೇರೆಯೋರ ಮುಂದೆ ನನ್ನ ಸಿಟ್ಟನ್ನು ಯಾಕೆ ತೋರಿಸಿಕೋಬೇಕು? ಶಶಿಗೆ ಬುದ್ಧಿ ಇಲ್ಲಾಂದರೆ ನನಗೂ ಇಲ್ಲವೇ. ಇರಲಿ, ಅವನೇನು ಹೇಳಿಕಳ್ಸಿದಾನೋ ನೋಡೋಣ ಅನ್ನಿಸಿ "ಏನು ಸಮಾಚಾರ?" ಪುನಃ ಕೇಳಿದೆ.

"ಏನಿಲ್ಲ ಸಾರ್. ಶಶಿಧರ್‌ಗೆ ಈಗೊಂದು ಎರಡು ದಿನದಿಂದ ನಮ್ಮ ಬಾಸ್ ಹೇಳಿ ಕಳಿಸ್ತಿದಾರೆ. ಆದರೆ ಅವರ್ಯಾಕೋ ಮೂರು ದಿನದಿಂದ ಆಫೀಸಿಗೇ ಬಂದಿಲ್ಲ. ಏನು ವಿಚಾರ ತಿಳಕೊಂಡು ಹೋಗೋಣ ಅಂತ ಬಂದೆ." ನನ್ನ ಎದೆ ಈ ಮಾತು ಕೇಳಿ ಧಸಕ್ಕೆಂದಿತು. ಅಯ್ಯೋ ದೇವರೇ, ಅವನ ವಿಚಾರ ಏನೋ ಹೇಳ್ತಾನೆ ಅಂತ ನಾನಿದ್ದರೆ, ಇನ್ನೊಂದು ಸಮಸ್ಯೇನ ತಂದು ಹಾಕ್ತಾ ಇದಾನಲ್ಲ ಈತ! ಹಾಗಾದರೆ ಶಶಿಯ ವಿಷಯ ಇವನಿಗೆ ಗೊತ್ತಿಲ್ಲ. ಇವನ ರೂಮಿಗೇ ಹೋಗಿ ಇದ್ದಿದ್ರೆ ಇವನು ಯಾಕೆ ಇಲ್ಲಿ ಬರ್ತಾ ಇದ್ದ.

ರಮ ಗೋವಿಂದಯ್ಯನ ಮಾತು ಕೇಳಿ ಅಡಿಗೆ ಮನೆಯಿಂದ ಹೊರಗೆ ಬಂದು ಏನೋ ಮಾತಾಡಕ್ಕೆ ಬಾಯಿ ತೆರೆಯುತ್ತಾಳೆ. ಯಾರಿಗೂ ಗೊತ್ತಾಗದ ವಿಚಾರ ಡಾಣಾ ಡಂಗುರ ಏಕೆ ಮಾಡಬೇಕೂಂತ ನಾನು ಅವಳಿಗೆ ಕಣ್ಸನ್ನೆ ಮಾಡಿ ಸುಮ್ಮನಿರಿಸುತ್ತೇನೆ. ವಿಷಯ ನಾನು ತಿಳಿದಿರೋದಕ್ಕಿಂತ ಗೂಢವಾಗಿದೆ. ಎದೆಯ ಶಬ್ದ ನನಗೇ ಕೇಳಿಸುವಷ್ಟು ಜೋರಾಗುತ್ತದೆ. ಅವನು ಎಲ್ಲೋ ಹೋಗಿರೋ ವಿಚಾರ ಗುಲ್ಲಾಗುವುದಕ್ಕಿಂತ ಮುಂಚೆ ಶಶಿಯನ್ನು ಎಳೆದು ಕರಕೊಂಡು ಬರಬೇಕು. ಹೇಗೆ, ಎಲ್ಲೀಂತ ಹೋಗೋದು; ಅವನಿಗೇನಾದರೂ ಆಗಿದೆಯೇ? ಊರು ಬಿಟ್ಟೇ ಹೋಗಿದ್ದಾನೆಯೇ? "ಅವನಿಗೆ ಹೇಳ್ತೀನಿ" ಅಂತ ಮಾತು ಜಾರಿಸಿ ಗೋವಿಂದಯ್ಯನನ್ನು ಬೇಗ ಸಾಗಹಾಕುತ್ತೇನೆ. ಅವನಿಗಾಗಿ ತಂದ ಕಾಫಿಯನ್ನು ರಮ ವಾಪಸು ತೆಗೆದುಕೊಂಡು ಹೋಗಬೇಕಾಗುತ್ತದೆ. ಬಟ್ಟೆ ಬದಲಾಯಿಸುವುದರಲ್ಲಿ, ಕಾಫಿ ತಿಂಡಿ ಸೇವನೆಯಲ್ಲಿ ಗಡಿಬಿಡಿ. ಯಾಕೆ

ಹೀಗೆಲ್ಲ ಆಗ್ತಿದೆ? ಎಲ್ಲಿ ಹೋದ ಅವನು? ಬಡಪಾಯಿ ಎಷ್ಟು ಕಷ್ಟಪಡ್ತಾನೋ, ಏನೋ. ಏನಾದರೂ ಆಗಿ ಹೋದರೆ? ಅವತ್ತು ಆಗಿತ್ತಲ್ಲ ಹಾಗೇನಾದರೂ ಆಗಿದ್ದರೆ, ಇನ್ನೂ ತೀವ್ರವಾಗಿ.

ಅವನು ಮೊದಮೊದಲು ಫ್ಯಾಕ್ಟರಿಗೆ ಹೋಗ್ತಿದದ್ದು ಬೈಸಿಕಲ್ ಮೇಲೆಯೇ. ನಾನು ಬೇಡಾಂತ ಎಷ್ಟೋ ಸಾರಿ ಹೇಳಿದ್ದರೂ ಕೇಳ್ತಿರಲಿಲ್ಲ, ಅವನು, ಕೆಟ್ಟ ಹಟ ಕೆಲವು ಸಾರಿ. ತಾನೂ ಸುಖಪಡಲಾರ. ನಮಗೂ ಪ್ರಾಣಕ್ಕೆ ತರ್ತಾನೆ. ಒಂದು ಭಾನುವಾರ ಮಧ್ಯಾಹ್ನ ಯಾರೋ ಇಬ್ಬರು ಅಪರಿಚಿತರು ಅವನನ್ನ ಟ್ಯಾಕ್ಸಿಯಲ್ಲಿ ಮನೆಗೆ ಕರಕೊಂಡು ಬಂದರು. ನೋಡಿದರೆ ಮೈಕೈ ಎಲ್ಲಾ ಗಾಯ! ನನಗೆ ಗಾಬರಿಯಾಗಿತ್ತು. ಹಣೆಗೆ ಪಟ್ಟಿ ಕಟ್ಟಿದೆ. ಕೈಗೆ ಬ್ಯಾಂಡೇಜು ಹಾಕಿದೆ! ಮಂಕಾಗಿ ಬಂದ. ಏನು ಸಮಾಚಾರ ವಿಚಾರಿಸಿದೆ.

ನಡೆದದ್ದಿಷ್ಟು: ಅವತ್ತು ಭಾನುವಾರ. ರಜವಾದ್ದರಿಂದ ಮೆಜೆಸ್ಟಿಕ್ ಹತ್ತಿರ ಯಾವುದೋ ಸಿನಿಮಾ ಒಂದಕ್ಕೆ ಹೋಗಿದ್ದನಂತೆ. ಮುಗಿಸಿಕೊಂಡು ಸೈಕಲ್ ಹತ್ತಿ ಮನೆ ಕಡೆ ಬರ್ತಿದ್ದ. ಕಾರ್ಪೊರೇಷನ್ ಹತ್ತಿರ ನಾಲ್ಕು ದಾರಿಗಳು ಸೇರುತ್ತವಲ್ಲ, ಅಲ್ಲಿ ಆಕ್ಸಿಡೆಂಟ್ ಆಯ್ತಂತೆ. ಕೆಂಪು ದೀಪ ಬಂತು ಹಸಿರು ದೀಪ ಕಾಯ್ತಾ ಎಲ್ಲ ವಾಹನಗಳೂ ನಿಂತಿದ್ವು. ಹಸಿರು ಬಂತು. ಎಲ್ಲರೂ ಹೊರಟು ಒಂದು ನಿಮಿಷವಾಗಿರ್ಬೇಕು, ಇನ್ನೂ ಐವತ್ತು ಅಡಿ ಬಂದಿರಲಿಲ್ಲ. ಇವನು ಸೈಕಲ್ಲಿಂದ ಬಿದ್ದ. ಭರೋ ಅಂತ ಬರ್ತಿದ್ದ ಹತ್ತಾರು ವಾಹನಗಳು ಇದ್ದಕ್ಕಿದ್ದಂತೆ ಅಸ್ತವ್ಯಸ್ತವಾಯಿತು. ಇದನ್ನು ನಿರೀಕ್ಷಿಸದೇ ಇದ್ದ ವಾಹನ ಚಾಲಕರು ತಕ್ಷಣ ನಿಂತರು. ಆದರೆ ಒಂದು ಕಾರು, ಇನ್ನೇನು ಇವನ ಮೇಲೆ ಹರೀಬೇಕು, ತಕ್ಷಣ ಬಲಗಡೆ ತಿರುಗಿ ಇವನ ಕಾಲ ಮೇಲೆ ಹರಿದಿತ್ತು. ಜನಗುಂಪು ಸೇರಿದರು. ಪೋಲೀಸಿನೋನು ಬಂದ, ನೋಡಿದರೆ ಇವನ ಕಣ್ಣುಗಳು ತೇಲುಗಣ್ಣಾಗಿವೆ, ಬಾಯಲ್ಲಿ ನೊರೆ ಕಾಣಿಸಿಕೊಂಡಿದೆ. ಎಲ್ಲರಿಗೂ ಗೊತ್ತಾಯಿತು ಫಿಟ್ಸ್ ಬಂದಿದೆ ಅಂತ. ಫುಟ್‌ಪಾತ್ ಮೇಲೆ ಕರಕೊಂಡು ಹೋಗಿ ಮಲಗಿಸಿದರು. ತಣ್ಣೀರು ಚಿಮುಕಿಸಿದರು, ಗಾಳಿ ಹಾಕಿದರು. ಎರಡು ನಿಮಿಷದಲ್ಲಿ ಇವನು ಎದ್ದು ಕೂತ, ಜ್ಞಾನ ಬಂತು. ಅದರ ಜೊತೆಗೇ ಮೈ–ಕೈಲಿ ಗಾಯಗಳಾದದ್ದರ ನೋವಿನ ಅರಿವು.

ಪೋಲೀಸ್ ಕಾನ್‌ಸ್ಟೇಬಲ್ ವಿಷಯ ಅರ್ಥಮಾಡಿಕೊಂಡ., ಇದು ಆಕ್ಸಿಡೆಂಟಲ್ಲ, ಫಿಟ್ಸ್‌ನಿಂದಾಗಿ ಬಿದ್ದದ್ದು ಅಂತ ಕೇಸು ಗೀಸೂಂತ ಹೋಗಲಿಲ್ಲ. ಕಾರಿನವನು ಗಾಬರಿಗೊಂಡಿದ್ದ. ಕಾರಿನ ಯಜಮಾನನೇ ಕಾರನ್ನು ಮನೆಗೆ ಕಳಿಸಿ, ಇವನನ್ನು ಟ್ಯಾಕ್ಸಿಯಲ್ಲಿ ಆಸ್ಪತ್ರೆಗೆ ಕರೆದುಕೊಂಡು ತನ್ನ ಜೊತೆಗಾರನ ಸಂಗಡ ಶಶಿಯನ್ನು ಇಲ್ಲಿ ಕರಕೊಂಡು ಬಂದದ್ದು. ಇನ್ನೂ ಅವರಿಬ್ಬರ ಮುಖದ ಮೇಲೆ ಗಾಬರಿ ಹೋಗಿರಲಿಲ್ಲ. ನಾನು ಅವರಿಗೆ ಥ್ಯಾಂಕ್ಸ್ ಹೇಳಿ ಟ್ಯಾಕ್ಸಿ ಚಾರ್ಜು ಕೊಡಲು ಹೋದೆ. ಅವರು ಅದನ್ನು ಒಪ್ಪಲಿಲ್ಲ. "ನಾವು ಬೆಳಿಗ್ಗೆ ಎದ್ದ ಘಳಿಗೆ ಚೆನ್ನಾಗಿತ್ತು ಸಾರ್. ಪೂರ್ತಿ ಇವರು ಸಿಕ್ಕಿಹಾಕಿಕೊಂಡುಬಿಡಬೇಕಾಗಿತ್ತು, ಏನೋ ಅದು ತಪ್ಪಿತು. ನಮ್ಮ ತಪ್ಪೇನೂ ಇಲ್ಲದೆ ಕೋರ್ಟು ಕಚೇರಿ ಅಂತ ಅಲೀಬೇಕಾಗಿತ್ತು, ಇಲ್ಲದಿದ್ದರೆ. ಇವರಿಗೆ ತಾನೇ ಏನೇನಾಗ್ತಿತ್ತೊ; ದೇವರು ದೊಡ್ಡೋನು" ಅಂದರು. "ಇನ್ನು ಮೇಲೆ ಸೈಕಲ್ ತುಳೀಬೇಡೀಂತ ಹೇಳಿ ಸಾರ್, ಆ ಕಾಯಿಲೆ ಇರೋರು ಹೀಗೆ ಒಂಟಿಯಾಗಿ ಸೈಕಲ್ ಮೇಲೆ ಬರಬಾರ್ದು" ಅಂದರು. ನನಗೆ ಅವಮಾನವಾಯ್ತು. ನನಗೆ ಮಾನ ತರಲ್ಲ ಇವನು ಅನ್ನಿಸಿ ಶಶಿಯ ಮೇಲೆ ಕೋಪ ಬಂತು.

ಅವರನ್ನು ಕಳಿಸಿಕೊಟ್ಟಮೇಲೆ ಶಶಿಯನ್ನ ಚೆನ್ನಾಗಿ ಬೈದೆ. ಮೊದಲೇ ಗಾಯದ ನೋವಿನಿಂದ ನರಳುತ್ತಿದ್ದ ಅವನಿಗೆ ನನ್ನ ಚುಚ್ಚು ಮಾತುಗಳು ಹೆಚ್ಚು ನೋವುಂಟು ಮಾಡಿರಬೇಕು. "ಕಾರಿಗೆ ಪೂರ್ತಿ ಸಿಕ್ಕಿ ನಾನು ಸತ್ತೇ ಹೋಗಿದ್ದಿದ್ದರೆ ಚೆನ್ನಾಗಿತ್ತು" ಎಂದುಕೊಂಡದ್ದು ಕೇಳಿ ನನ್ನ ಕೋಪವೆಲ್ಲ ಜರ್‍ರನೆ ಇಳಿದುಹೋಗಿತ್ತು. ಆದರೆ ಸೈಕಲ್ ಇನ್ನು ಮೇಲೆ ತುಳಿಯಬಾರದೆಂದು ಅವನಿಗೆ ಕಟ್ಟಪ್ಪಣೆ ಮಾಡಿದ್ದೆ. ನುಗ್ಗಾಗಿದ್ದ ಸೈಕಲನ್ನು ರಿಪೇರಿ ಮಾಡಿಸಿದರೆ ತಾನೇ ಇವನು ತುಳಿಯೋದು ಎಂದು ಅದನ್ನು ಹಾಗೆಯೇ ಅಟ್ಟದ ಮೇಲೆ ಎಸೆದಿದ್ದೆ.

ಏನಾದರೂ ಇಂಥದ್ದು ಆಗಿಹೋಗಿದೆಯೇ? ಎಲ್ಲಿ ಹೋದ ಅವನು. ಅವನು ಒಬ್ಬನೇ ತನ್ನನ್ನು ನಿಭಾಯಿಸಿಕೊಳ್ಳಬಲ್ಲನೆ. ಏನಾದ್ರೂ ಅಣ್ಣ ಅಂತ ವಾಪಸು ಬಂದಿದ್ದರಾಗುತ್ತಿತ್ತಲ್ಲ. ಇನ್ನೆಲ್ಲಾದರೂ ಆಕ್ಸಿಡೆಂಟೋ ಗೀಕ್ಸಿಡೆಂಟೋ ಆಗಿ ಕೈಕಾಲು ಮುರಿದುಕೊಂಡರೇನು ಗತಿ? ಡ್ರಾಫ್ಟ್ಸ್‌ಮನ್‌ಗೆ ಕೈತಾನೇ ಮುಖ್ಯ. ಡ್ರಾಯಿಂಗ್ ಮಾಡಬೇಕಲ್ಲ. ಅದೇ ಊನವಾದರೆ ಇವನಿಗೆ ಕೆಲಸ ಉಳಿಯುವುದು ಹೇಗೆ? ಸಂಪಾದನೆ ಮಾಡಿದರೇ ಈ ಗತಿ, ಇನ್ನು ಸಂಪಾದನೆಯಿಲ್ಲದೆ ಯಾವಾಗಲೂ ಮನೇಲೇ ಬಿದ್ದಿರೋ ಹಾಗೆ ಆದರೆ ಗತಿಯೇನು? ನನ್ನ ಹಿಂದಿನ ಜನ್ಮಗಳ ಕರ್ಮ ಇವನಿಂದ ಹೀಗೆಲ್ಲ ಮಾಡಿಸುತ್ತದೆಯೇ?

ನಾಳೆ ರಜ ಹಾಕಿ ಅವನು ಎಲ್ಲೆಲ್ಲಿ ಹೋಗ್ತಿದ್ದನೋ ಎಲ್ಲ ಕಡೆ ಹುಡುಕಿ ಕೊಂಡು ಬರಬೇಕು. ಅವನು ಈ ಸಲ ಮನೆಗೆ ಬಂದರೆ ಸಾಕು. ಹೀಗೆ ಇನ್ನು ನಡೆಯದ ಹಾಗೆ ನೋಡಿಕೊಳ್ಳುತ್ತೇನೆ. ಅವನನ್ನ ಏನೂ ಅನ್ನ ಬೇಡಾಂತ ರಮಂಗೆ ಚೆನ್ನಾಗಿ ಹೇಳಬೇಕು. ಅವನ ಪರಿಸ್ಥಿತಿ ತಿಳಿದರೂ ಇವಳು ಕ್ಯಾತೆ ಯಾಕೆ ತೆಗೀಬೇಕು. ಒಟ್ಟಲ್ಲಿ ನನ್ನ ಕರ್ಮ.

ಎಲ್ಲೀಂತ ಅವನನ್ನ ಹುಡುಕೋದು? ಅವನೇನಾದರೂ ತಾನೇ ಮಾಡಿಕೊಂಡಿರಬಹುದೇ? ಆದರೆ ಹಾಗೆ ಮಾಡಿಕೊಳ್ಳುವಂತಹದ್ದು ಏನಾಗಿದೆ ಈಗ ಅಂತ? ನಾನೇನೋ ಅವರಿಬ್ಬರ ಜಗಳ ನೋಡಲಾರದೆ ಅವನಿಗೊಂದೆರಡು ಏಟು ಕೊಟ್ಟಿದ್ದು ನಿಜ. ಆದರೆ ಅಷ್ಟಕ್ಕೇ ಅವನು ಏನಾದರೂ ಮಾಡಿಕೊಳ್ಳು ತ್ತಾನೆಯೇ? ಆದರೆ ಅಂತಹ ಕೆಲಸ ಮಾಡಿಕೊಳ್ಳೋದಕ್ಕೆ ಕಾರಣ ಯಾಕೆ ಬೇಕು. ಅಸಮಾಧಾನ ಆದರೆ ಸಾಕಾಗಲ್ಲವೇ? ಅವನು ಹೊರಟಾಗ ಅವನು ಹೀಗೆಲ್ಲ ಮಾಡಿಕೊಳ್ಳಬಹುದು ಅಂತ ಅನ್ನಿಸುವಂತೆ ಕಾಣಿಸುತ್ತಿರಲಿಲ್ಲವಲ್ಲ! ಛೇ, ನನ್ನ ಬಗ್ಗೆ ಶಶಿಗೆ ತುಂಬ ಅಭಿಮಾನ, ಗೌರವ. ನಾನು ಹಿಂದೆಯೂ ಒಂದೆರಡು ಬಾರಿ ಏಟು ಕೊಟ್ಟಿರಲಿಲ್ಲವೆ? ಏಟುಕೊಟ್ಟಿದ್ದು ಅವನಿಗೆ ನೋವುಂಟು ಮಾಡಬೇಕೂಂತೇನೂ ಅಲ್ಲ. ನನ್ನ ಕೋಪ ಇನ್ನು ಹೇಗೆ ಪ್ರಕಟವಾಗೋದು? ಕೋಪಕ್ಕಿಂತ ನನ್ನ ಅಸಹಾಯಕತೆ; ರಮ – ಅವನು ಜಗಳವಾಡಿದರೆ ಇನ್ನೇನು ಮಾಡಲಿ? ರಮಂಗೆ ಹೊಡೆಯೋಕೆ ಸಾಧ್ಯವೇ? ಎಷ್ಟಾದರೂ ನಾನು ಅಣ್ಣ, ಶಶಿ ಅದನ್ನೆಲ್ಲ ಮನಸ್ಸಿಗೆ ಹಚ್ಚಿಕೊಂಡಿರಲಾರ. ಯಾವುದಾದರೂ ಊರಿಗೆ ಹೋಗಿರ ಬಹುದು. ಆದರೆ ಹೋಗುವಾಗ ಮಾತ್ರೆ ತಗೊಂಡಿರಲಿಲ್ಲ. ಅವನಿಗೇನು ಗೊತ್ತಿಲ್ಲವೇ? ಯಾವುದಾದರೂ ಔಷಧಿ ಅಂಗಡಿಗೆ ಹೋಗಿ ತೆಗೆದುಕೊಂಡಿರುತ್ತಾನೆ. ನಾಳೆ ಹುಡುಕಿಯೂ ಸಿಕ್ಕದಿದ್ದರೆ, ಅವನು ಬರದಿದ್ದರೆ ಏನು ಮಾಡುವುದು? ಪೋಲೀಸ್ ಕಂಪ್ಲೇಂಟ್ ಕೊಡುವುದೊಂದೇ ಬಾಕಿ. ಯಾಕೋ ಪರಿಸ್ಥಿತಿ ವಿಕೋಪಕ್ಕೆ ಹೋಗ್ತಿದೆಯಲ್ಲ, ಏನೂ ಆಗದೆ ಇರಲಿ, ಅವನು ನಾಳೆ ಬಂದುಬಿಡಲಿ, ದೇವರೇ ಏನೂ ಆಗಿರದೆ ಇರಲಿ.

– – –

ಶಶಿ ಮನೆಬಿಟ್ಟ ಹಿಂದಿನ ದಿನ ನಮ್ಮ ಪೃಥ್ವೀಶನ ಹುಟ್ಟುಹಬ್ಬ. ಹುಟ್ಟು ಹಬ್ಬ ಅಂದರೆ ಅವತ್ತಿನ ದಿನ ಅವನು ಹುಟ್ಟಿದ್ದಲ್ಲ. ನ್ಯಾಯವಾಗಿ ನೋಡಿದರೆ ತಿಂಗಳ ಹಿಂದೆಯೇ ಅದನ್ನು ಮಾಡಬೇಕಾಗಿತ್ತು. ಆದರೆ ರಮಳದು ಎಷ್ಟಾದರೂ ಹೆಂಗಸರಿಗೆ ಸಹಜವಾದ ಸಂಪ್ರದಾಯದ ಬುದ್ಧಿ. ಅದೇನೋ ಹೆಚ್ಚಿಸಿ ಮಾಡುವುದಂತೆ. ಹುಟ್ಟಿದ ದಿನಕ್ಕೆ ಸರಿಯಾದ ದಿನವೇ ಹುಟ್ಟುಹಬ್ಬ ಮಾಡದೆ ಒಂದಷ್ಟು ದಿನ ತಡವಾಗಿ ಮಾಡಿದರೆ ಆಯುಸ್ಸು ಹೆಚ್ಚುತ್ತದೆಂದು ಅವಳ ನಂಬಿಕೆ. ಅದನ್ನು ನಾನು ತಮಾಷೆ ಮಾಡಿದ್ದೆ: ಹಾಗಾದರೆ ಒಂದು ವರ್ಷವೇ ಹೆಚ್ಚಿಸಿ ಮಾಡಿದರೆ ಅವನ ಆಯುಸ್ಸು ಇನ್ನೂ ಹೆಚ್ಚುತ್ತೆ, ಖರ್ಚೂ ಉಳಿತಾಯವಾಗುತ್ತೆ ಎಂದು. ಆ ಮಾತಿಗೆ ಅವಳು ಕಿಡಿಕಾರಿದ್ದಳು. "ನೀವೇನು ತಿಳಿದೇ ಮಾತಾಡ್ತೀರೋ ಅಥವಾ ತಿಳಿಯದೇ ಮಾತಾಡ್ತೀರೋ ಏನು ಮಾತಾಡಿದರೆ ಏನಾಗುತ್ತೆ ಅಂತ ಗೊತ್ತಾಗೊಲ್ಲವಾ?" ಅಂದಿದ್ದಳು. ನನ್ನ ಮಾತಿನಲ್ಲಿದ್ದದ್ದು ಕೇವಲ ಹಾಸ್ಯ, ಅದರಿಂದ ಇನ್ನಾವುದೋ ಅಗಾಧ ಪರಿಣಾಮವಾಗುತ್ತದೆಂದು ನನಗೆ ಅರ್ಥವೇ ಆಗಿರಲಿಲ್ಲ.

ಅವತ್ತು ಸಾಯಂಕಾಲ ಪೃಥ್ವಿಗೆ ಆರತಿ ಇಟ್ಟುಕೊಂಡಿದ್ದಳು. ನಮ್ಮ ನೆರೆಹೊರೆಯ ಮನೆಯವರನ್ನಲ್ಲದೆ ನನ್ನ ಸ್ನೇಹಿತೆಯರನ್ನೂ ಸಾಯಂಕಾಲ ಫಲಾಹಾರಕ್ಕೆ ಕರೆದಿದ್ದಳು; ಅವಳ ಸೂಚನೆಯಂತೆ ನಾನೂ ನನ್ನ ಸ್ನೇಹಿತರನ್ನು ಆಹ್ವಾನಿಸಿದ್ದೆ. ಪೃಥ್ವಿಗೆ ಸಡಗರ, ತನಗೆ ಹುಟ್ಟಿದ ಹಬ್ಬವೆಂದು ಹೆಮ್ಮೆಯಿಂದ ಬೀಗುತ್ತ ಓಡಾಡುತ್ತಿದ್ದ, ಅವನ ಅಕ್ಕ ಸುಷ್ಮಾ ಕೂಡ ಹೊಸಬಟ್ಟೆ ತೆಗೆದುಕೊಂಡಿದ್ದಳು. ನನಗೆ ಒಂಥರಾ ವೈಭವದ ವಾತಾವರಣವೆಂದರೆ ಅಷ್ಟಕ್ಕಷ್ಟೆ; ರಮಾ ಕೇಳಿದಷ್ಟು ದುಡ್ಡು ಕೊಟ್ಟರೆ ತೀರಿತು, ಮಿಕ್ಕಾವುದರಲ್ಲೂ ನಾನು ಹೆಚ್ಚು ಆಸಕ್ತಿ ವಹಿಸುವಂಥವನಲ್ಲ.

ಆದರೆ ಶಶಿ ಇಂಥ ಸಂದರ್ಭಗಳಲ್ಲಿ ತುಂಬ ಆಸಕ್ತಿಯಿಂದ ಕೆಲಸ ನಿರ್ವಹಿಸುತ್ತಿದ್ದ. ಎಲ್ಲ ಹಬ್ಬ ಹರಿದಿನಗಳಲ್ಲೂ ಅವನದೇ ಅಲಂಕಾರದ ಕೆಲಸ. ಮನೆಯ ಮುಂದೆ ತೋರಣ ಕಟ್ಟುವುದರಿಂದ ಹಿಡಿದು, ದೀಪಾಲಂಕಾರದವರೆಗೆ ಅವನದೇ ಉಸ್ತುವಾರಿ. ಆದ್ದರಿಂದಲೇ ಮಕ್ಕಳಿಗೆ ಅವನನ್ನು ಕಂಡರೆ ತುಂಬ ಅಕ್ಕರೆ. ಗಣೇಶನ ಹಬ್ಬ ಬಂದರೆ ಮಂಟಪ ಮಾಡಿ ಅದಕ್ಕೆ ಸೀರಿಯಲ್ ಲೈಟು ಹಾಕಿ, ಬಣ್ಣದ ಕಾಗದದಿಂದ ವಿವಿಧಾಕಾರದ ಬಂಟಿಂಗುಗಳನ್ನು ಕತ್ತರಿಸಿ ಅಲಂಕಾರ ಮಾಡುತ್ತಿದ್ದರೆ ಮಕ್ಕಳಿಬ್ಬರೂ ಬೆರಗುಗಣ್ಣುಗಳಿಂದ ಅವನ ಕತ್ತರಿಸುವ ಕೈಗಳನ್ನೇ ನೋಡುತ್ತ ಕೂರುತ್ತಿದ್ದರು. ಇವನೂ ಆ ಗೋಂದು ತಗೊಂಬಾ, ಈ ದಾರ ಕಟ್ಟು, ಇಲ್ಲಿ ಹಿಡಿದುಕೋ ಅಂತೆಲ್ಲ ಹೇಳುತ್ತ ಹುಡುಗರನ್ನೂ ತನ್ನ ಕೆಲಸ ಕಾರ್ಯದ ಜೊತೆ ಸೇರಿಸಿಕೊಳ್ಳುತ್ತಾ ಕೆಲಸ ಮಾಡುತ್ತಿದ್ದುದರಿಂದಲೇ ಮಕ್ಕಳು ಪ್ರತಿಯೊಂದಕ್ಕೂ ಶಶಿಯನ್ನೇ ಕೇಳುತ್ತಿದ್ದುವು. ಪೆನ್ಸಿಲ್ ಒರೆದುಕೊಡಲೂ ಶಶಿಯೇ ಬೇಕು; ಜೊತೆಗೆ ಊಟಕ್ಕೆ ಕೂತುಕೊಳ್ಳಲೂ ಅವನೇ ಆಗಬೇಕು. ಎಲ್ಲಾದರೂ ಹೋಗ ಬೇಕಾದರೆ ಜೊತೆಗಿರಬೇಕು.

ರಮಳಿಗೆ ಮಕ್ಕಳನ್ನು ಶಶಿಯ ಉಸ್ತುವಾರಿಯಲ್ಲಿ ಬಿಡುವುದಕ್ಕೆ ಹಿಂಜರಿಕೆ. ಸುಷ್ಮಾ ಹುಟ್ಟಿದ ಹೊಸತರಲ್ಲಂತೂ ಅವಳನ್ನು ಶಶಿ ಎತ್ತಿಕೊಳ್ಳಲು ಯಾವಾಗಲೂ ಮುಂದಾಗುತ್ತಿದ್ದ. ಆದರೆ ಅವನು ಎತ್ತಿಕೊಂಡು ಹೊರಟರೆ ರಮಾ ಬೇಡವೆನ್ನುತ್ತಿದ್ದಳು. ಶಶಿಯ ಮುಖ ಆಗೆಲ್ಲ ಪೆಚ್ಚಾಗುತ್ತಿತ್ತು. ಇಂಥ ಸಂದರ್ಭಗಳಲ್ಲಿ ನಾನು ಹೇಗೆ ಮಧ್ಯೆ ಹೋಗುವುದು? ಇಬ್ಬರೇ ಇದ್ದಾಗ ಆ ಬಗ್ಗೆ ರಮಳನ್ನು ಕೇಳಿದ್ದೆ. 'ದಾರಿಯಲ್ಲಿ ಒಬ್ಬನೇ ಮಗುವನ್ನೆತ್ತಿಕೊಂಡು ಹೋಗುವಾಗ ಅವನಿಗೆ ಅಟ್ಯಾಕ್ ಗಿಟ್ಯಾಕ್ ಬಂದರೇನು ಗತಿ' ಎನ್ನುತ್ತಿದ್ದಳು. ಇದನ್ನು ಕೇಳಿದ ಮೇಲೆಯೂ ಅವಳು ಮಾಡಿದ್ದು ಸರಿಯಲ್ಲ ಎಂದು ಹೇಗೆ ಹೇಳುವುದು? ಅವಳು ಹೇಳುವುದರಲ್ಲಿ ತಪ್ಪಾವುದೂ ಕಾಣುತ್ತಿರಲಿಲ್ಲ. ಆದರೆ ನನ್ನ ತಮ್ಮನಿಗೆ ಅಷ್ಟೂ ಸ್ವಾತಂತ್ರ್ಯವಿಲ್ಲವೇ ಎಂದು ಅವಳ ಬಗ್ಗೆ ಕೋಪವೂ ಬರುತ್ತಿತ್ತು.

ಜೊತೆಯಲ್ಲಿ ಊಟಕ್ಕೆ ಕೂತರಂತೂ ಕೆಲವು ವೇಳೆ ಪರಿಸ್ಥಿತಿ ಬಿಗಡಾಯಿಸಿಬಿಡುತ್ತಿತ್ತು. ಈ ಮಕ್ಕಳೋ ಅವನ ಪಕ್ಕದಲ್ಲಿಯೇ ಊಟಕ್ಕೆ ಕೂತು ಕೊಳ್ಳಬೇಕೆಂದುಹಟಮಾಡುತ್ತಿದ್ದವು. ರಮ ಅದೆಷ್ಟೋ ಬಾರಿ ಮಕ್ಕಳನ್ನು ಅವನಿಂದ ದೂರ ಕೂಡಿಸಬೇಕೆಂದು ತಟ್ಟೆಯನ್ನು ಹಾಕುವ ವ್ಯವಸ್ಥೆ ಮಾಡುತ್ತಿದ್ದಳು. ಆದರೆ ಅವು ತಮ್ಮ ತಟ್ಟೆಯನ್ನೆತ್ತಿಕೊಂಡು ಅವನ ಪಕ್ಕದಲ್ಲಿಯೇ ಕೂರುತ್ತಿದ್ದವು, ಅನ್ನುವ ಹಾಗಿಲ್ಲ ಅನುಭವಿಸುವ ಹಾಗಿಲ್ಲ ಎಂಬ ಪರಿಸ್ಥಿತಿ ರಮಳದು. ಪಕ್ಕದಲ್ಲಿ ಕೂತರೇನು ಇವರಪ್ಪನ ಮನೆ ಗಂಟುಹೋಗೋದು ಎಂದು ನಾನೂ ಕೆಲವು ವೇಳೆ ಅಸಮಾಧಾನಗೊಂಡಿದ್ದೆ, ಆದರೆ ಶಶಿ ಸುಮ್ಮನೆ ಊಟ ಮಾಡುವ ಸ್ವಭಾವದವನಲ್ಲ. ಹುಡುಗರನ್ನು ಚೇಷ್ಟೆ ಮಾಡುತ್ತಿದ್ದ. ಅವರ ಗಮನ ಬೇರೆಡೆ ಸೆಳೆದು ಅವರ ತಟ್ಟೆಯಲ್ಲಿದ್ದ ಹೋಳುಗಳನ್ನು ಮಾಯ ಮಾಡುವುದು, ತಟ್ಟೆ ಬೇರೆಡೆ ಹೋಗಿ ಬಿಡುವಂತೆ ಮಾಡುವುದು ಇತ್ಯಾದಿ ಚೇಷ್ಟೆಗಳಿಂದ ಹುಡುಗರನ್ನು ರಂಜಿಸುತ್ತಿದ್ದ. ಈ ಹುಡುಗರೂ ಅವನ ತಾಳಕ್ಕೆ ಕುಣಿಯುತ್ತಿದ್ದವು, ಅವನ ತಟ್ಟೆಯಲ್ಲಿದ್ದುದನ್ನು ತೆಗೆದುಕೊಂಡು ತಿಂದು ಬಿಡುತ್ತಿದ್ದುವು, ಇದನ್ನು ಕಂಡು ನನಗೇ ಎಷ್ಟೋ ವೇಳೆ ತಳಮಳವಾಗುತ್ತಿತ್ತು. ಎಪಿಲೆಪ್ಸಿಯೇನೂ ಅಂಟುರೋಗವಲ್ಲ ಎಂಬುದು ನನಗೆ ಗೊತ್ತು. ಶಶಿಯ ಸ್ಥಿತಿಯಿಂದ ಯೋಚನೆಗೀಡಾದ ನಾನು ಆರೋಗ್ಯದ ಬಗ್ಗೆ ಕೆಲವು ಗ್ರಂಥಗಳನ್ನು

ಓದಿಕೊಂಡಿದ್ದೆ; ಡಾಕ್ಟರುಗಳಲ್ಲಿ ಅದರ ವಿಚಾರ ಚರ್ಚೆಮಾಡಿ ಕೆಲವು ಅಂಶಗಳನ್ನು ಗ್ರಹಿಸಿದ್ದೆ. ಆದರೆ ನನ್ನ ಮಕ್ಕಳು ಅವನ ಎಂಜಲು ತಿಂದರೆ ನನಗೆ ಏನೇನೋ ನೆನಪಿಗೆ ಬಂದು ಬಿಡುತ್ತಿದ್ದವು. ರಮಳಂತೂ ಹುಡುಗರು ಆದಷ್ಟೂ ಅವನಿಂದ ದೂರವಿರುವಂತೆಯೇ ನೋಡಿಕೊಂಡಿರುತ್ತಿದ್ದಳು. ಅವನ ಜೊತೆಗಿದ್ದರೂ ಅವನಿಗೆ ಅಂಟಿಕೊಂಡು ಕೂತುಕೊಳ್ಳದ ಹಾಗೆ, ಅವನು ಅವುಗಳಿಗೆ ಮುತ್ತುಕೊಡದ ಹಾಗೆ ಎಚ್ಚರವಹಿಸಿ ಅಂಥ ಪ್ರಸಂಗಗಳನ್ನು ನಿವಾರಿಸುತ್ತಿದ್ದಳು. ಇನ್ನು ಎಂಜಲು ತಿಂದರೆ ಸುಮ್ಮನೆ ಬಿಡುತ್ತಾಳೆಯೇ? ಮಕ್ಕಳನ್ನು ಗದರಿಕೊಳ್ಳುವಳು. ನಾನೂ ಹಲವಾರು ಬಾರಿ ಮಕ್ಕಳನ್ನು ಗದರಿಸಿದ್ದೆ, ಅವನಿಗೇ ನೇರವಾಗಿ ಹೇಗೆ ಹೇಳುವುದು ಎಂಬ ಸಂಕೋಚ ನನಗೆ. ರಮ ಕೆಲವು ವೇಳೆ ನೇರವಾಗಿ ಅಂದುಬಿಡುತ್ತಿದ್ದಳು. ಆ ಮಾತು ಕೇಳಿಸಿಕೊಂಡು ಶಶಿಯ ಮುಖ ನೋಡಿದಾಗ ನನಗೆ ದುಃಖ ಉಮ್ಮಳಿಸುವಂತಾಗುತ್ತಿತ್ತು, ಇವನಿಗ್ಯಾಕೆ ಈ ರೋಗ ಅಂಟಿಕೊಂಡಿತು. ಇದರಿಂದ ಅವನಿಗೂ ಬಿಡುಗಡೆಯಿಲ್ಲ ಎನಿಸಿ, ಅದರ ಬೆನ್ನ ಹಿಂದೆಯೇ ಇವನಿಂದ ನಮಗೂ ಬಿಡುಗಡೆಯಿಲ್ಲವೇ ಎಂಬ ಆಲೋಚನೆ ಮೂಡುತ್ತಿತ್ತು, ಆದರೆ ಅವನಿರದಿದ್ದರೆ ಮಕ್ಕಳ ನಗು ಕಡಿಮೆಯೇ.

ಆವತ್ತೂ ಹಾಗೆಯೇ. ಪೃಥ್ವಿಯ ಅಲಂಕಾರವನ್ನೆಲ್ಲ ಶಶಿಯೇ ಮಾಡಿದ್ದ, ರಮಾ ನೋಡಿಕೊಂಡೇ ಇದ್ದಳು. ಹಾಲಿನ ಮೂಲೆ ಮೂಲೆಗಳಿಗೆ ಬಂಟಿಂಗುಗಳನ್ನು ಅಂಟಿಸಿದ್ದ. ಒಂದಷ್ಟು ಬಣ್ಣಬಣ್ಣದ ಬಲೂನುಗಳನ್ನು ಊದಿ ಕಟ್ಟಿದ್ದ. ಒಂದು ಬರ್ತ್‌ಡೇ ಕೇಕನ್ನು ತಂದು ಪೃಥ್ವಿಯಿಂದ ಕತ್ತರಿಸಬೇಕೆಂಬ ಆಲೋಚನೆಯಿಂದ ಕಾರ್ಯಸನ್ನದ್ಧನಾಗಿದ್ದ. ಬಂದವರನ್ನು ತನ್ನ ಮಾತುಗಳಿಂದ ಜೋರಾಗಿ ನಗಿಸಿ ಮೆಚ್ಚುಗೆ ಸಂಪಾದಿಸುತ್ತಿದ್ದ. ಅವನು ಏನೋ ಒಂದು ಕೊಂಗ ಮಾತನ್ನಾಡಿ ಜನರನ್ನು ತಮಾಷೆ ಮಾಡುವುದರಲ್ಲಿ ನಿಸ್ಸೀಮ. ಅವನ ಜೋಕುಗಳು ಎಳಸು ಅನ್ನಿಸುತ್ತಿದ್ದವು ನನಗೂ ಕೂಡ. ಬಂದವರ ಹತ್ತಿರ, ದೊಡ್ಡವರ ಹತ್ತಿರ ಕೂಡ, ಹೀಗೆ ಮಾತಾಡುತ್ತಾನಲ್ಲ ಎಂದು ಹಲವು ಬಾರಿ ನನಗೆ ಮುಜುಗರವಾಗುತ್ತಿತ್ತು. ರಮ ಸಿಡಿಮಿಡಿಗುಟ್ಟುತ್ತಿದ್ದಳು.

ಅವನ ಮಾತು ಎಂದರೆ ಕೊನೆಯಿಲ್ಲದ ಪ್ರವಾಹ. ಬೇರೆಯೋರು ಏನಾದರೂ ಒಂದು ಮಾತಾಡಿದರೆ ಅದಕ್ಕೇನೋ ಒಂದು ಮಾರುತ್ತರ ಕೊಡುತ್ತಿದ್ದ. ಅದಕ್ಕೆ ಕೊನೆಯೇ ಇರುತ್ತಿರಲಿಲ್ಲ. ಅವನ ಮಾತಲ್ಲಿ ಏನು ತಪ್ಪು ಎಂದು ವಿವರಿಸಿ ಹೇಳುವುದಕ್ಕಾಗದು. ಆದರೆ ಆ ಮಾತು ನಮ್ಮೆಲ್ಲರ ಮಾತುಗಳಂತೆ ಇಲ್ಲ ಎನಿಸುತ್ತಿದ್ದವು, ನನಗಿಂತ ಹಿರಿಯರಾದ ನನ್ನ ಕಲೀಗ್ ಒಬ್ಬರು ಬಂದರು. ಅವರದು ಸ್ವಲ್ಪ ಸ್ಥೂಲ ದೇಹ, ಹೊಟ್ಟೆ ದಪ್ಪ. ಯಾವಾಗಲೂ ಷರ್ಟನ್ನು ಒಳಗೆ ಸೇರಿಸಿ ಪ್ಯಾಂಟಿನ ಮೇಲೆ ಬೆಲ್ಟ್ ಕಟ್ಟುತ್ತಿದ್ದರು. ಮೊದಲಿಂದ ಅವರು ಶಶಿಯನ್ನು ಕಂಡಿದ್ದವರೇ. ಅವರು ಬಂದಾಗ ಇವನು "ಏನ್ಸಾರ್ ಚೆನ್ನಾಗಿದ್ದೀರಾ?" ಎಂದ.

"ನೋಡಪ್ಪ, ಇಷ್ಟರಮಟ್ಟಿಗೆ."

"ಇಷ್ಟರ ಮಟ್ಟಿಗೆ ಏನು ಬಂತು ಸಾರ್, ಚೆನ್ನಾಗೇ ಇದ್ದೀರ."

"ಹೌದು ಕಣಯ್ಯ, ಚೆನ್ನಾಗೇ ಇದ್ದೀನಿ."

"ಮತ್ತೆ, ಇಷ್ಟರಮಟ್ಟಿಗೆ ಅಂತ ಅಂದಿರಲ್ಲ ಸಾರ್."

"ಚೆನ್ನಾಗಿದ್ದೀರಾ ಅಂತ ಯಾರಾದರೂ ಕೇಳಿದಾಗ ಹಾಗೇ ಅಲ್ಲವೇನಯ್ಯಾ ಎಲ್ಲರೂ ಉತ್ತರ ಕೊಡೋದು."

"ಆದರೆ ನೀವು ಎಲ್ಲರೂ ಅಲ್ಲವಲ್ಲ."

"ಎಲ್ಲರೂ ಮಾತಾಡಿದ ಹಾಗೇ ತಾನೇ ನಾವೂ ಮಾತಾಡೋದು?"

"ಹಾಗಾದರೆ ಎಲ್ಲರೂ ಊಟಮಾಡಿದ ಹಾಗೆ ನೀವೂ ಊಟ ಮಾಡ್ತೀರಾ ಸಾರ್?"

"ಹೌದು ಮತ್ತೆ."

"ಹಾಗಾದರೆ ಎಲ್ಲರ ತರಹ ನೀವಿಲ್ಲವಲ್ಲ ಸಾರ್" ಎಂದ. ಅವರ ಮುಖ ಒಂಥರವಾಯಿತು. ಮುಂದೆ ಮಾತಾಡದೆ ಸುಮ್ಮನಾದರು. ನನಗೆ ಸಿಟ್ಟುಬಂತು. "ಲೋ ಹೋಗಿ ಒಳಗಡೆ ಏನಾದರೂ ಕೆಲಸ ಇದೆಯಾ ನೋಡು" ಎಂದೆ "ಒಳಗಡೆಯೇನಿದೆ, ನನ್ನ ಕೆಲಸವೆಲ್ಲ ಹೊರಗಡೇನೇ. ಒಳಗಡೆ ಕೆಲಸ ನಿನ್ನ ಶ್ರೀಮತೀದು" ಎಂದು ಹೇಳಿದ. ಅವನಿನ್ನೂ ತಾನು ತಮಾಷೆಯಾಗೇ ಮಾತಾಡ್ತಿದ್ದೀನಿ ಅಂದುಕೊಂಡಿದ್ದನೇನೋ. ನಾನು ಜೋರಾಗಿ ಕೂಗಿ ಅವನನ್ನು ಬೇರೆಡೆ ಕಳಿಸಿದ್ದೆ. ಆಮೇಲೆ "ದಯವಿಟ್ಟು ಬೇಜಾರು ಮಾಡಿಕೋಬೇಡಿ ಸಾರ್" ಎಂದು ಅವರನ್ನು ಕ್ಷಮೆ ಯಾಚಿಸಿದ್ದೆ. "ಬಿಡಿ ಪಾಪ, ಕಾಯಿಲೆ ಹುಡುಗ" ಅಂದಿದ್ದರು.

ಈ ಕಾಯಿಲೆಯಿಂದ ಹೀಗೆ ಪರಿಣಾಮ ಮಾತಿನ ಮೇಲೂ ಆಗುತ್ತದೆಯೇ? ಅವನ ಮಾತಿನಲ್ಲಿಯೂ ಒಂದು ರೀತಿಯ ವಿಚಿತ್ರ ತರ್ಕವಿರುತ್ತಿತ್ತು. ಒಂದು ಹೇಳಿದರೆ ಅದಕ್ಕೆ ಸಂಬಂಧಿಸದೇ ಇರುವ ಇನ್ನೇನನ್ನೋ ಅವನು ಹೇಳುವುದಿಲ್ಲ. ಆದರೆ ಆ ತಾರ್ಕಿಕತೆ ನಾವು ಮಾಡುವ ತರ್ಕ ಸರಣಿಯಂತೆ ಇರುತ್ತಿರಲಿಲ್ಲ. ಅದರಲ್ಲೇನು ವಿಚಿತ್ರ ಎಂದು ಬೊಟ್ಟು ಮಾಡಿ ತೋರಿಸುವುದೂ ಸಾಧ್ಯವಿರಲಿಲ್ಲ. ಹಾಸ್ಯದ ಮಾತಾದರೂ ಅದರ ತರ್ಕರೀತಿ "ಯಾಕೆ ಮಾತಾಡಬಾರದೋ, ನಾನೇನು ಮಾಡಿದೆ?" ಎನ್ನುತ್ತಿದ್ದ. ಅವನು ಮಾಡಿದ್ದೇನು ಎಂದು ನಾನು ಹೇಳಲಾರದವನಾಗಿದ್ದೆ.

ಬಂದವರನ್ನೆಲ್ಲಾ ಅವನೇ ಸ್ವಾಗತಿಸಬೇಕು. ಅವನು ಕಾಣಿಸದಿದ್ದರೆ ಅವನ ಪರಿಚಯವಿದ್ದವರೆಲ್ಲ "ಎಲ್ಲಿ ಶಶಿ?' ಎಂದು ಕೇಳುತ್ತಿದ್ದರು. ಅವನನ್ನು ಕಂಡರೆ ಹಾಗಾದರೆ ಇತರರಿಗೆ ಇಷ್ಟವೇ ಅನ್ನಿಸುತ್ತಿತ್ತು. ಅವನ ಮಾತಿನ ಜಾಲಕ್ಕೆ ಸಿಲುಕಿ ಹಾಕಿಕೊಂಡವರೂ "ಅಯ್ಯೋ ಪಾಪ, ಕಾಯಿಲೆ ಹುಡುಗ' ಎಂದು ಲೊಚಗುಟ್ಟಿ ಅವನನ್ನು ಪಾಪದ ಜ್ವಾಲೆಯಲ್ಲಿ ನರಳಿಸುತ್ತಿದ್ದರು. ಅವನ ಜೊತೆಯೇ ಜೀವನವಿಡೀ ಇರಬೇಕಾದ ಪ್ರಸಂಗ ಬಂದರೆ ಇವರೆಲ್ಲ ಇಷ್ಟೇ ಸಹಾನುಭೂತಿ ಯಿಂದ ಇರುತ್ತಿದ್ದರೇ ಎಂದು ನನಗನ್ನಿಸುತ್ತಿತ್ತು. ಅವನನ್ನು ಬೈದರೆ, ನನ್ನದೇ ತಪ್ಪು ಎಂಬಂತೆ ಅವನ ಕಡೆ ವಹಿಸಿಕೊಳ್ಳುವವರನ್ನು ಕಂಡರೆ ನನಗೆ ಸಿಟ್ಟೂ ಬರುತ್ತಿತ್ತು, ಇವರಿಗೆಲ್ಲ ಕಷ್ಟಗೊತ್ತಿಲ್ಲ. ಅರ್ಧ ಗಂಟೆ ಅವನನ್ನು ಕಾಣುವವರು; ನಾನು ಸಾಯುವವರೆಗೂ ಅವನೊಡನೆ ಏಗಬೇಕಲ್ಲ, ಇವರಿಗೇನು ಗೊತ್ತು ಕಷ್ಟ ಎಂದು ಅಸಹನೆಯಿಂದ ಕುದಿಯುತ್ತಿದ್ದೆ.

ನಮ್ಮ ಮನೆಯಲ್ಲಿ ಬಂದವರಿಗೆಲ್ಲ ಹಾಕುವಷ್ಟು ಕುರ್ಚಿಗಳಿಲ್ಲ. ಅದಕ್ಕೆ ಮನೆಯಲ್ಲಿದ್ದ ಚಾಪೆ ಜಮಖಾನೆಗಳನ್ನೆಲ್ಲ ಜಮಾಯಿಸಿ ಒಬ್ಬರು ಕುಳಿತುಕೊಳ್ಳಲು ಸಾಕಾಗುವಷ್ಟು ಅಗಲಕ್ಕೆ ಮಡಿಸಿ ಗೋಡೆಯ ಬದಿಗೆ ಹಾಸಿದ್ದೆವು. ಬಂದವರು ಸ್ವಲ್ಪ ಕಷ್ಟಪಟ್ಟುಕೊಂಡೇ ಕೂರಬೇಕಾದ ಪರಿಸ್ಥಿತಿ. ಆದರೆ ವಿಯಿಲ್ಲವಲ್ಲ. ಹೊರಗಡೆಯ ಹಾಲಿನಲ್ಲಿ ಗಂಡಸರು ಕೂತಿದ್ದರೆ, ಒಳಗಡೆಯ ರೂಮಿನಲ್ಲಿ ಹೆಂಗಸರು ತುಂಬಿಕೊಂಡಿದ್ದರು.

ಶಶಿ ಒಂದು ಸಣ್ಣ ಸ್ಟೂಲು ತಂದು ಅದರ ಮೇಲೆ ಬರ್ತ್‌ಡೇ ಕೇಕ್ ಇಟ್ಟ. ಮೇಣದ ಬತ್ತಿಗಳನ್ನು ಹತ್ತಿಸಿದ. ಪೃಥ್ವಿಯನ್ನು ಅನಾಮತ್ತಾಗಿ ಎತ್ತಿಕೊಂಡು ಒಳಗಿನಿಂದ ಕರೆತಂದು ಅದರ ಮುಂದೆ ನಿಲ್ಲಿಸಿ ಮೇಣದ ಬತ್ತಿಗಳನ್ನು ಆರಿಸಲು ಹೇಳಿದ. ಹಾಗೆಯೇ ಪೃಥ್ವಿ ಹೊಸ ಉತ್ಸಾಹದಿಂದ ಮಾಡಿದ. ಅವನಿಗೂ ಇದು ಹೊಸದು, ನಮಗೂ ಹೊಸದು. ತಾನು ಎಂದೂ ಕಾಣದ್ದನ್ನು ಮಾಡುವ ಹುಮ್ಮಸ್ಸು ಪೃಥ್ವಿಯದು. ಆಮೇಲೆ ಚಾಕುವಿನಿಂದ ಅದನ್ನು ಕತ್ತರಿಸಿ ಎಲ್ಲರಿಗೂ ಸ್ವಲ್ಪ ಸ್ವಲ್ಪ ಹಂಚುವಂತೆ ಸಹಾಯ ಮಾಡಿದ ಶಶಿ. ಕೆಲವರು ಹ್ಯಾಪಿ ಬರ್ತ್‌ಡೇ ಟು ಯೂ ಅಂತ ಕೂಗಿದರು. ಮನೆಯಲ್ಲೆಲ್ಲ ನಗು ಗದ್ದಲ ಮಾತುಗಳೇ ತುಂಬಿಕೊಂಡಿದ್ದವು.

ರಮ ಪೃಥ್ವಿಯನ್ನು ಒಳಗೆ ಕರೆದುಕೊಂಡು ಹೋಗಿ ಯಥಾಪ್ರಕಾರದ ಆರತಿ ಎತ್ತಿದಳು. ಬಂದ ಹೆಂಗಸರಿಂದ ಹಾಡು ಹೇಳಿಸಿದ್ದಳು. ಆಮೇಲೆ ಅವಳು ನಾನು ಬಂದವರಿಗೆಲ್ಲ ತಿಂಡಿ ಹಂಚಲು ಸಿದ್ಧರಾದೆವು. ಮೊದಲೇ ಪ್ಲೇಟುಗಳಲ್ಲಿ ಹಾಕಿ ಸಿದ್ಧಪಡಿಸಿದ್ದ ತಿಂಡಿಯನ್ನು ಒಂದೊಂದು ಕೈಯಲ್ಲಿ ಒಂದೊಂದು ಪ್ಲೇಟಿನಂತೆ ಹಿಡಿದು ಒಳಗಿನಿಂದ ತಂದು ಎಲ್ಲರ ಮುಂದೂ ಇಡಲು ತೊಡಗಿದೆವು. ಶಶಿ ಬಂದು ನಾನು ತರುತ್ತಿದ್ದ ಪ್ಲೇಟುಗಳನ್ನು ತೆಗೆದುಕೊಂಡು ನನಗೂ ಸ್ನೇಹಿತರ ಜೊತೆಯಲ್ಲಿ ಕೂತು ತಿನ್ನಲು ಹೇಳಿದ. ನಾನು ಬೇಡವೆಂದೆ. ಆದರೆ ಕೆಲವರು ಸ್ನೇಹಿತರು ಅವನ ಮಾತಿಗೆ ದನಿಕೂಡಿಸಿದರು. ನಾನು ವಿಧಿಯಿಲ್ಲದೆ ಒಂದೆಡೆ ಕುಳಿತೆ. "ತಾವು ಮನೇ ಯಜಮಾನರು, ಒಂದು ಕಡೆ ಕೂತು ತಿನ್ನಬೇಕು ಸಾರ್, ಕೆಲಸಕ್ಕೆ ನಾವಿದ್ದೀವಿ" ಅಂತ ಶಶಿ ನಾಟಕೀಯವಾಗಿ ನನಗೆ ಹೇಳಿದಾಗ ಎಲ್ಲರೂ ಗೊಳ್ ಅಂತ ನಕ್ಕರು. ಆ ಮಾತು ಕೇಳಿ ನಗಬೇಕೋ ಅಳಬೇಕೋ ಗೊತ್ತಾಗದೆ ಸುಮ್ಮನೆ ಕುಳಿತೆ. "ನೋಡಿದಿರಾ ಬದರೀನಾಥ್, ಹೇಗಿದಾರೆ ನಿಮ್ಮ ತಮ್ಮ" ಅಂತ ಒಬ್ಬರು ಶಶಿಯ ಬಗ್ಗೆ ಮೆಚ್ಚುಗೆ ತೋರಿಸಿದರೆ ಇನ್ನೊಬ್ಬರು "ತಮ್ಮ ಅಂದರೆ ಹೀಗಿರಬೇಕು" ಎಂದರು. "ತುಂಬ ಜಾಲಿ ಮನುಷ್ಯ," "ಅವರು ಇದ್ದರೆ ಮನೆ ತುಂಬಿಕೊಂಡಿರುತ್ತೆ" ಎಂದೆಲ್ಲ ಶಹಭಾಸ್‌ಗಿರಿ ಕೊಟ್ಟರು.

ಶಶಿಯದು ಅತಿ ಉತ್ಸಾಹ, ದಡಭಡ ಓಡಾಟ. ಅವರತ್ತಿಗೆಗೆ ಒಳಗೆ ಹೆಂಗಸರಿಗೆ ತಿಂಡಿ ಹಂಚುವುದರಲ್ಲಿ ನಿರತಳಾಗಿರಲು ಹೇಳಿ, ತಾನು ದೊಡ್ಡ ಟ್ರೇಯೊಂದರಲ್ಲಿ ಒಟ್ಟಿಗೆ ಐದಾರು ಪ್ಲೇಟುಗಳನ್ನು ಇಟ್ಟುಕೊಂಡು ಬಂದು ಒಬ್ಬೊಬ್ಬರ ಮುಂದೂ ನಿಂತು "ಸ್ವೀಕರಿಸಬೇಕು ಸಾರ್" ಎಂದು ಹೇಳುತ್ತಿದ್ದ. ಬಂದವರಲ್ಲಿ ಸಾಕಷ್ಟು ಮಂದಿ ಆಗಲೇ ತಿಂಡಿ ತಿನ್ನಲು ಆರಂಭಿಸಿದ್ದರು. ಇನ್ನು ಕೆಲವರಿಗೆ ತಿಂಡಿ ಬರಬೇಕಾಗಿತ್ತು. ಎಲ್ಲರೂ ಮಾತುಕತೆಯಲ್ಲಿ ತೊಡಗಿದ್ದರು.

ಟ್ರೇಯಲ್ಲಿ ತಿಂಡಿ ತಟ್ಟೆಗಳನ್ನಿಟ್ಟುಕೊಂಡು ಬರುತ್ತಿದ್ದ ಶಶಿಯ ಕಡೆ ನನ್ನ ಗಮನ ಹರಿಯಿತು. ಅವನು ದವಡೆ ಹಲ್ಲು ಮಸೆಯುವಂತಿದ್ದ. ಬೆವರು ಕಾಣಿಸಿಕೊಂಡಂತಿತ್ತು. ಮುಖ ವಿಲಕ್ಷಣವಾಯ್ತು. ಕಾಲುಗಳು ಸ್ಥಿರತೆಯನ್ನು ಕಳೆದುಕೊಂಡವುಗಳಂತೆ ಕಂಡವು. ಅವನಿಗೆ ಏನಾಗುತ್ತಿದೆ ಎಂಬುದು ನನಗೆ ತಿಳಿಯಿತು. ತಟ್ಟನೆ ಎದ್ದು ಅವನ ಕಡೆ ಹೊರಟೆ. ಬಳಿ ಬರುವುದರೊಳಗಾಗಿ ಅವನು ಕೈಯಲ್ಲಿದ್ದ ಟ್ರೇಯನ್ನು ಎತ್ತಿಹಾಕಿದ್ದ. ಅವನ ರಟ್ಟೆಯನ್ನು ಹಿಡಿದುಕೊಂಡು ನಿಧಾನವಾಗಿ ನಡೆಸಿಕೊಂಡು ಬಂದೆ.

ಟ್ರೇ ಬಿದ್ದ ಸದ್ದಿಗೆ ಎಲ್ಲರೂ ಗಾಬರಿಯಾದರು. ತಾವು ತಿನ್ನುತ್ತಿದ್ದ ತಿಂಡಿ ತಟ್ಟೆಗಳನ್ನು ನೆಲದ ಮೇಲಿರಿಸಿ ಮೇಲೆ ಎದ್ದರು. ನಮ್ಮ ಕಡೆಗೆ ಹಲವರು ಬಂದರು. ಒಳಗಡೆಯಿಂದ ಹೆಂಗಸರು ಏನಾಯಿತು ಎಂದು ನೋಡಲು ಬಂದರು. ನಗುಮಾತುಗಳಿಂದ ತುಂಬಿದ್ದ ಮನೆ ಒಂದು ಕ್ಷಣದಲ್ಲಿ ಮೌನವಾಯಿತು, ಆ ಮೇಲೆ "ಏನಾಯಿತು' ಎಂಬ ಪ್ರಶ್ನೆ ಹಲವಾರು ಬಾಯಿಗಳಿಂದ ಬಂದುವು. "ಕೈ ಜಾರಿತಾ?" ಅಂದರು ಕೆಲವರು. "ಪಾಪ, ಅಟ್ಯಾಕೇನೋ" ಅಂದರು ಮತ್ತೆ ಕೆಲವರು. ಎಲ್ಲರೂ ಗುಂಪುಗೂಡಿದರು.

ಶಶಿಗೆ ಅಟ್ಯಾಕ್ ಬಂದಾಗ ಅವನ ಕೈ ಕಾಲುಗಳು ತೀರ ಜೋರಾಗೇನೂ ಅಲುಗಾಡುವುದಿಲ್ಲ. ಕೆಲವರಿಗೆ ಫಿಟ್ಸ್ ಬಂದಾಗ ನಾನು ಕಂಡಿದ್ದೀನಲ್ಲ, ವಿಪರೀತ ಅಲುಗಾಟ. ಆದರೆ ಫಿಟ್ಸ್‌ನಲ್ಲಿ ಬೇಕಾದಷ್ಟು ಬಗೆಗಳಿವೆಯೆಂದು ತಿಳಿದುಕೊಂಡಿದ್ದೆ. ಇವನಿಗೆ ಔಷಯಿಂದಾಗಿ ತೀವ್ರವಾದ ಮೂರ್ಛೆಯೇನೂ ಬರುತ್ತಿರಲಿಲ್ಲ. ಕೈಕಾಲು ಹಿಡಿತ ತಪ್ಪಿದರೂ ಅವನೆಂದೂ ಮೂರ್ಛೆಯಲ್ಲಿ ಧೊಪ್ಪೆಂದು ಕೆಳಗೆ ಬಿದ್ದವನಲ್ಲ. ಇದ್ದ ಜಾಗದಲ್ಲಿಯೇ ದಟ್ಟಡಿಯಿಡುತ್ತ ಓಡಾಡಿ ಬಿಡುವ ರೀತಿ ಅವನಿಗೆ ಬರುವ ಅಟ್ಯಾಕ್. ಎಷ್ಟೋ ಸಲ ನಾನು ಹಿಡಿದುಕೊಂಡು ಬಲವಾಗಿ ಎಳೆದರೂ ನನ್ನನ್ನೂ ಮೀರಿದ ಬಲದಿಂದ ಮುಂದೆ ಹೋಗುತ್ತಿದ್ದ. ಕಬ್ಬಿಣ ಕೊಡುವುದರಿಂದ ಏನೂ ಪ್ರಯೋಜನವಿಲ್ಲವೆಂದು ಡಾಕ್ಟರರು ಹೇಳಿದ್ದರು. ಬಂದ ಮೂರ್ಛೆ ತಾನಾಗಿ ಹೋಗಬೇಕೇ ಹೊರತು, ಎಚ್ಚರ ಬೇಗ ಬರಿಸಲು ಸಾಧ್ಯವೇ ಇಲ್ಲವಂತೆ. ಆದರೆ ರೋಗಿಗೆ ಮೂರ್ಛೆ ಬಂದಾಗ ಹತ್ತಿರ

ಹರಿತವಾದ ಆಯುಧಗಳೋ ಬೆಂಕಿಯೋ ಇದ್ದರೆ ಅಪಾಯವಾದ್ದರಿಂದ ಒಂದೆಡೆ ಕೂಡಿಸಿದರೆ ಸಾಕು ಎಂಬುದನ್ನು ಡಾಕ್ಟರ್‌ರಿಂದ ತಿಳಿದು ಅದರಂತೆ ಈ ಅಟ್ಯಾಕುಗಳನ್ನು ನಿಭಾಯಿಸುತ್ತಿದ್ದೆ.

ಎಲ್ಲರ ಮುಖದಲ್ಲೂ ಒಂದು ರೀತಿಯ ಗಾಬರಿ, ಕಳವಳ. ಅವರ ಮಾತುಗಳು. 'ನೀರು ತಟ್ಟಿ'. 'ಬೀಗದ ಕೈ ಕೊಡಿ', 'ಮಲಗಿಸಿ' ಇತ್ಯಾದಿ ಸೂಚನೆ ಗಳು ಕಿವಿಗೆ ಬಂದು ಅಪ್ಪಳಿಸುತ್ತಿದ್ದವು. ಇವರೆಲ್ಲ ಯಾಕೆ ಸುಮ್ಮನಿರಬಾರದು ಎನ್ನಿಸುವಷ್ಟು ತಲೆ ಚಿಟ್ಟು ಹಿಡಿಯಿತು. ನಾನು ಎಷ್ಟು ವರ್ಷದಿಂದ ಇವನನ್ನು ಈ ಸ್ಥಿತಿಯಲ್ಲಿ ಕಂಡವನು, ಇವರೆಲ್ಲ ದೊಡ್ಡ ವೈದ್ಯರುಗಳ ಹಾಗೆ ಸಲಹೆ ಕೊಡುವುದರ ಬದಲು ಸುಮ್ಮನಿರುವ ವಿವೇಕವೇಕೆ ತೋರಿಸಬಾರದು ಎಂಬ ಅಸಹನೆಯುಂಟಾ ಯಿತು. ಆದರೆ ಅವರ ಮೇಲೆ ಕೋಪವನ್ನು ಪ್ರಕಟವಾಗಿ ತೋರಿಸುವಷ್ಟು ತಲೆ ಕೆಡಿಸಿಕೊಳ್ಳುವುದಿಲ್ಲ ನಾನು. ಅವರ ಮೇಲೆ ಸಿಟ್ಟು ತೋರಿಸಲು ನನಗೇನು ಅಧಿಕಾರ ಎಂಬ ಪ್ರಜ್ಞೆ ನನ್ನಲ್ಲಿತ್ತು. ಅವರು ಹೇಳಿದ್ದನ್ನು ಕೇಳದ ಹಾಗೆ ಸುಮ್ಮನೆ ನನ್ನ ಎಂದಿನ ರೀತಿಯಲ್ಲಿ ಅವನ ಮೂರ್ಛೆಯ ಸ್ಥಿತಿಯನ್ನು ಎದುರಿಸಿದೆ.

ಒಂದೆರಡು ನಿಮಿಷಗಳ ನಂತರ ಶಶಿ ಸ್ಥಿಮಿತಕ್ಕೆ ಬಂದ. ತನಗೇನಾಯಿತೆಂಬುದರ ಅರಿವು ಅವನಿಗೆ ಬಂತು. ಎದ್ದು ಕೂತ. "ಹೋಗಿ ಬಾಯಿ ತೊಳೆದುಕೊಂಡು ಬಾ" ಅಂತ ಹೇಳಿದೆ. ನನ್ನ ಧ್ವನಿಯಲ್ಲಿದ್ದ ಭಾವವಾವುದು; ಬರಿಯ ಸೂಚನೆಯ ನಿರ್ವಿಕಾರತೆಯೇ? ಶಶಿಯ ಬಗ್ಗೆ ಕನಿಕರವೇ? ಎಂಥ ಸನ್ನಿವೇಶದಲ್ಲಿ ಇದಾಯಿತು ಎಂಬ ಜಿಗುಪ್ಸೆಯೇ? ನನ್ನ ಜೀವನವಿಡೀ ಕವಿಯುವ ಈ ಕತ್ತಲೆಯಿಂದ ಹೊರಬರುವುದು ಹೇಗೆ ಎಂಬ ಆಲೋಚನೆಯೇ? ಮೊದಲೇ ಗದ್ದಲ ಸಡಗರವೆಂದರೆ ನನಗೆ ಹೆಚ್ಚಾಗಿ ಸರಿಹೋಗದು. ಅಂಥದ್ದರಲ್ಲಿ ಹೀಗಾದರೆ ನನ್ನ ಬಾಯಿಂದ ಮಾತುಗಳೇ ಹೆಚ್ಚು ಹೊರಡಲಾರವು. ಏನೋ ಅಪರಾಧ ಮಾಡಿದವನಂತೆ ಎಲ್ಲರ ಮುಖ ನೋಡಲು ಹಿಂಜರಿಕೆ, ಒಂದು ಬಗೆಯ ಪರಿತಾಪ ಇವುಗಳಿಂದ ಮೂಕನಾದೆ.

ಕೆಲವರಾಗಲೇ ಹೇಳದೇ ಕೇಳದೇ ಹೊರಟುಹೋಗಿದ್ದರು, ಹಲವರು ಪಿಸುಮಾತಿನಲ್ಲಿ ತೊಡಗಿದ್ದರು. ಇನ್ನು ಕೆಲವರು ನನ್ನೆಡೆಗೆ ಸಹಾನುಭೂತಿಯನ್ನು ಸೂಚಿಸುವ ನೋಟ ಹರಿಸಿದ್ದರು. ಒಂದಿಬ್ಬರು ಹತ್ತಿರ ಬಂದು ಸಮಾಧಾನಪಡಿಸಲು ಕೈ ಹಿಡಿದು ಹಿಸುಕಿದರು. ನಾನೇನು ಹೇಳಬೇಕು ಅವರಿಗೆ? 'ಶಶಿಯನ್ನು ನೋಡಿಕೊಳ್ಳಿ' ಎಂದು ಹೇಳಿ ಹೋದರು. ಕೆಲವರಿಗೆ ನನ್ನ ಮುಖ ನೋಡುವುದಕ್ಕೇ ಸಂಕೋಚವಾಗಿ ಹಿಂದೆ ಸರಿದರು. ಅಂತೂ ಒಬ್ಬೊಬ್ಬರಾಗಿ ಹೊರಟುಹೋದಾಗ ಮನೆ ಬಿಕೋ ಎಂದು ಹಾಳು ಸುರಿಯುವ ಸ್ಥಿತಿಗೆ ಬಂದಿಳಿಯಿತು.

ಮಕ್ಕಳಿಬ್ಬರೂ ಪೆಚ್ಚಾಗಿ ಮೂಲೆಯೊಂದರಲ್ಲಿ ಕುಳಿತಿದ್ದರು. ಅವರು ಮಧ್ಯಾಹ್ನವೆಲ್ಲ ಪಟ್ಟ ಸಂಭ್ರಮವನ್ನು ಕಂಡಿದ್ದ ನನಗೆ ಈಗಿನ ಅವರ ರೀತಿಯಿಂದ ಹೊಟ್ಟೆ ಕಿವುಚಿದಂತಾಯಿತು. ಕಣ್ಣು ಮಂಜಾಯಿತು. ಮನೆಯಲ್ಲೆಲ್ಲ ತಿಂಡಿಯೇ ಚೆಲ್ಲಿದೆ. ಯಾರೊಬ್ಬರೂ ಇನ್ನೂ ಪೂರ್ತಿ ತಿಂಡಿ ತಿಂದಿರಲಿಲ್ಲ. ಏನಾಯಿತೋ ಎಂದು ಒಂದೇ ಕಡೆ ಎಲ್ಲ ನುಗ್ಗಿದ್ದರಿಂದ ನೆಲದ ಮೇಲೆ ಬಿದ್ದ ತಿಂಡಿಯನ್ನು ತುಳಿದು ಅದು ನೆಲಕ್ಕೆ ಮೆತ್ತಿಕೊಂಡಿತ್ತು. ಗಾಳಿ ಬಂದಾಗ ಲೈಟು ಅಲುಗಿ ಕಟ್ಟಿದ್ದ ಬಂಟಿಂಗುಗಳ ನೆರಳು ಗೋಡೆಯ ಮೇಲೆಲ್ಲ ಅಲ್ಲಾಡಿ ಆವುದೋ ಭೂತ ಮನೆಯನ್ನು ಪ್ರವೇಶ ಮಾಡಿದೆಯೋ ಎಂಬಂತೆ ಕಾಣಿಸುತ್ತಿತ್ತು.

ರಮಳ ಮುಖ ನನಗೆ ನೋಡಲಾಗಲಿಲ್ಲ. ಒಂದು ಕಡೆ ಮಂಡಿಗಳ ನಡುವೆ ಮುಖವಿರಿಸಿ ಅಳುತ್ತ ಕೂತಿದ್ದಳು. ಶಶಿಯೂ ಪೆಚ್ಚಾಗಿಬಿಟ್ಟಿದ್ದ. ಯಾರನ್ನು ಯಾರು ಸಮಾಧಾನ ಮಾಡಬೇಕು? ಇದಕ್ಕೆಲ್ಲ ಯಾರು ಜವಾಬ್ದಾರಿ ತೆಗೆದು ಕೊಳ್ಳುವವರು? ಇಂಥವು ನಡೆಯದಂತೆ ಏನಾದರೂ ಮಾಡಲು ಸಾಧ್ಯವಿಲ್ಲವೇ? ಯಾರ ಕರ್ಮಫಲ ಇದು?

ಆದರೆ ಎಷ್ಟು ಹೊತ್ತು ಹೀಗೆ ಉಳಿತುಕೊಳ್ಳುವುದು? ಮನೆಯನ್ನೆಲ್ಲ ಚೊಕ್ಕಟ ಮಾಡಬೇಡವೇ? ಇನ್ನೂ ಹೆಚ್ಚು ಹೊತ್ತಾಗಿರದಿದ್ದರೂ, ಊಟ– ಮಲಗುವ ವ್ಯವಸ್ಥೆ ಮಾಡಬೇಡವೇ? ಕೊನೆಯ ಪಕ್ಷ ಮಕ್ಕಳಿಗೆ ಊಟ ಹಾಕಿ ಮಲಗಿಸಬೇಡವೇ? ನಾವು ಊಟಮಾಡುವ ಹಾಗೇ ಇದೆ. ರಮಳಿಗೆ ಈಗ ಕೆಲಸ ಮಾಡು ಎನ್ನಲೇ?

ನಾನೇ ಮೇಲೆದ್ದು ನಿಟ್ಟುಸಿರಿನ ಜೊತೆಗೆ ಅಸ್ತವ್ಯಸ್ತವಾಗಿ ಬಿದ್ದ ಪ್ಲೇಟುಗಳನ್ನೆಲ್ಲ ಒಂದೊಂದಾಗಿ ತೆಗೆದು ಜೋಡಿಸಿಡಲು ಪ್ರಯತ್ನಿಸುತ್ತೇನೆ. ಕೈಗಳು ಯಾಂತ್ರಿಕವಾಗಿ ಆ ಕೆಲಸದಲ್ಲಿ ತೊಡಗಿದ್ದರೂ ಮನಸ್ಸೆಲ್ಲ ಏನೋ ಗಾಢಾಂಧಕಾರ ಆವರಿಸಿದೆ. ಏನೋ ಅಸ್ಪಷ್ಟ ಭಾವನೆ ತುಂಬಿದೆ. ಒಳಗಿನಿಂದ ಪರಕೆಯೊಂದನ್ನು ತಂದು ಚೆಲ್ಲಾಪಿಲ್ಲಿಯಾದ ತಿಂಡಿಯ ಚೂರುಗಳನ್ನು ಗುಡಿಸಲು ತೊಡಗುತ್ತೇನೆ. ಸುಷ್ಮಾ ಮುಂದೆ ಬಂದು ನನ್ನ ಕೈಯಿಂದ ಪರಕೆ ತೆಗೆದುಕೊಳ್ಳುತ್ತಾಳೆ, ಅವಳನ್ನು ತಬ್ಬಿಕೊಂಡು ಅತ್ತುಬಿಡಬೇಕು ಎನ್ನಿಸುತ್ತದೆ. ಈ ಮಕ್ಕಳು ತಮ್ಮ ಹುಟ್ಟುಹಬ್ಬದ ದಿನ ಕೂಡ ಸಂತೋಷವಾಗಿರದ ಹಾಗಾಯಿತೇ ಎನ್ನಿಸಿ ನನ್ನ ಮಕ್ಕಳಾಗಿ ಇವು ಏನೂ ಸುಖಪಡಲಾರವು ಎನಿಸುತ್ತದೆ. ಪಾಪ, ರಮ ಕೂಡ ಈ ಪರಿಸ್ಥಿತಿಗೆ ಸಿಕ್ಕುವಂತಾಯಿತಲ್ಲ. ಅವಳಿಗೆ ನಾನೇನೋ ದೊಡ್ಡ ಅನ್ಯಾಯ ಮಾಡಿದ್ದೇನೆಂಬ ಪಾಪ ಪ್ರಜ್ಞೆ ನನ್ನ ಹೃದಯವನ್ನು ಹಿಂಡುತ್ತದೆ.

ಮನೆಯಲ್ಲೆಲ್ಲ ಕೆಟ್ಟ ಮೌನ. ಪ್ಲೇಟು ಎತ್ತಿಡುವ, ಕಸ ಬಳಿಯುವ ಸ್ಟೂಲು ಜರುಗಿಸುವ ಸದ್ದು. ತಲೆಯ ಮೇಲೆ ಒನಕೆಯಿಂದ ಕುಟ್ಟಿದ ಸ್ವಲ್ಪ ಹೊತ್ತಾದ ಮೇಲೆ ರಮಳ ಹತ್ತಿರ ಹೋಗಿ ಅವಳ ತಲೆ ಎತ್ತಲು ಪ್ರಯತ್ನಿಸುತ್ತೇನೆ. ಅವಳು ಕೊಸರಿಕೊಳ್ಳುತ್ತಾಳೆ. ಅವಳ ಕೈಹಿಡಿದುಕೊಳ್ಳಲು ಹೋದರೆ ನನ್ನನ್ನು ದಬ್ಬುತ್ತಾಳೆ. ನನ್ನ ಮೇಲೇಕೆ ಇನ್ನು ಅಸಹನೆ ಎಂಬ ಸಿಟ್ಟು ನನಗೂ ಬರುತ್ತದೆ. ಆದದ್ದಕ್ಕೆ ನಾನೇನು ಹೊಣೆಯಲ್ಲವಲ್ಲ. ನನ್ನನ್ನು ಕಂಡರೆ ಇವಳೇಕೆ ಬೇಸರ ಪಡಬೇಕು. ಇವಳನ್ನೇ ನಾನು ಕೈಕಾಲಿಗೆ ಬಿದ್ದು ನನ್ನ ಮದುವೆಯಾಗು ಎಂದು ಕೇಳಿದೆನೇನು. ನಮ್ಮ ಮನೆಯ ಪರಿಸ್ಥಿತಿ ಎಲ್ಲ ಅವಳಿಗೇ ತಿಳಿದಿತ್ತಲ್ಲ. ಅವರ ಮನೆಯಲ್ಲಿ ಇದ್ದ ವಿಷಯವನ್ನೆಲ್ಲ ತಿಳಿಸಿ, ಕೊನೆಯವರೆಗೂ ಶಶಿ ನನ್ನ ಜೊತೆಯಲ್ಲಿರುತ್ತಾನೆಂದು ಹೇಳಿರಲಿಲ್ಲವೆ? ಅದಕ್ಕೆಲ್ಲ ಒಪ್ಪಿಗೆಯಿತ್ತು ಈಗ ಹೀಗಾಡಿದರೆ ತಿಂದುಕೊಬ್ಬು. ಇವಳೊಬ್ಬಳಿಗೇ ದುಃಖವಾದವಳ ಹಾಗೆ ಆಡ್ತಾಳೆ.

ಎಷ್ಟು ಹೊತ್ತೂಂತ ಹೀಗೆ ಇರೋಕೆ ಸಾಧ್ಯ. "ಏಳೇ ಮೇಲೆ, ಊಟಗೀಟ ಹಾಕು ಮಕ್ಕಳಿಗೆ. ನಾವೂ ಒಂದಷ್ಟು ತಿಂದು ಮಲಗೋಣ" ಎನ್ನುತ್ತೇನೆ.

"ಆಯ್ತಲ್ಲ ಊಟ ಚೆನ್ನಾಗಿ" ಎಂಬ ರಮಳ ಮಾತಲ್ಲಿ ವ್ಯಂಗ್ಯ ಅಸಹನೆ ತುಂಬಿರುತ್ತದೆ.

"ಯಾರೇನು ಮಾಡೋಕಾಗತ್ತೆ?"

"ಇಲ್ಲ ಮಾಡಕ್ಕಾಗಲ್ಲ. ಸಾಯೋವರೆಗೂ ಹೀಗೆ ನರಳಬೇಕು."

"ನಮ್ಮ ಹಣೇಲಿ ಬರೆದದ್ದು ಏನು ಮಾಡೋದು?"

"ನೋಡಿ, ಮಕ್ಕಳ ಮುಖ ನೋಡಿ. ಅವುಗಳಂತೂ ಆಗ್ಲಿಂದಲೇ ಆಕಾಶ ತಲೇ ಮೇಲೇ ಬಿದ್ದವರ ಹಾಗೆ ಸಂಕಟಪಡುತ್ತಿವೆ."

"ನೀನು ಹೇಳೋದು ನಿಜ ಕಣೆ. ಆದರೆ ಇದಕ್ಕೆ ಪರಿಹಾರವೆಲ್ಲೀಂತ?"

"ಅವನನ್ನ ಎಲ್ಲಾದರೂ ಸಾಗಹಾಕಿ."

ನನಗೆ ಸಿಟ್ಟು ತಡೆಯಲಾಗಲಿಲ್ಲ. "ಏನೇ ನೀನು ಹೇಳೋದು" ಅಂತ ಕಿರುಚಿದೆ. ಶಶಿಯನ್ನು ಎಲ್ಲಾದರೂ ಸಾಗಹಾಕಬೇಕೆ? ಅವನಿಗೆ ನನ್ನ ಬಿಟ್ಟರೆ ಬೇರೆ ಯಾರು ದಿಕ್ಕು? ಅವನು ಬೇರೆ ಕಡೆ ಕ್ಷೇಮವಾಗಿ ಇರೋ ಹಾಗೆ ಏನಾದರೂ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಿದ್ದಿದ್ದರೆ? ಬೇರೆ ಕೆಲವು ದೇಶಗಳಲ್ಲಿ ಮೂರ್ಛೆ ರೋಗ ಬರುವವರಿಗೇ ಪ್ರತ್ಯೇಕವಾದ ಹಾಸ್ಪಲುಗಳಿರುತ್ತವೆಂದು ಓದಿದ್ದೆ. ಅಂಥದೇನಾದರೂ ಇದ್ದಿದ್ದರೆ, ಆದರೆ ಹಾಗೆ ಬಿಟ್ಟರೆ ಜನ ಈ ಜನ ಏನೆಂದು ಕೊಂಡಾರು? ಜನಕ್ಕೇನು ಗೊತ್ತಾಗುತ್ತೆ ನನ್ನ ಕಷ್ಟ ಅನ್ನಿಸಿದರೂ ಅವನನ್ನು ಬಿಡುವುದು ಹೇಗೆ? ನನ್ನ ಮೇಲೆ ಅವನು ಅವಲಂಬಿಸಿ, ತುಂಬ ಭರವಸೆ ಇಟ್ಟುಕೊಂಡಿದ್ದಾನೆ. ಅವನನ್ನು ಕೈಬಿಡು ಅಂತ ಹೇಳ್ತಾಳಲ್ಲ ಈ ರಾಕ್ಷಸಿ. ಮನುಷ್ಯತ್ವವಿದೆಯಾ ಇವಳಿಗೆ?

ನನ್ನ ಗಟ್ಟಿಯಾದ ಧ್ವನಿ ಕೇಳಿ ಶಶಿ ಬಂದು ನಿಂತ. ಅವನ ಮುಖ ನೋಡಿದೆ. ಏನು ಅವಸ್ಥೆ ಬಂದಿದೆ ನನಗೆ ಅನ್ನಿಸಿತು. ಅತ್ತ ದರಿ, ಇತ್ತ ಪುಲಿ ಎಂಬುವ ಪರಿಸ್ಥಿತಿಯೇ ನನ್ನದು!

"ಲೋ ಅಣ್ಣ ನಾಳೆಯಿಂದ ನಾನು ಬೇರೆಲ್ಲಾದ್ರೂ ಇರ್ತೀನಿ ಕಣೋ" ಎಂಬ ಶಶಿಯ ಮಾತು ಕೇಳಿ ನನಗೆ ಆಶ್ಚರ್ಯವಾಯಿತು. ಅವನೆಡೆಗೆ ತಿರುಗಿದೆ.

"ಬಾಯಿ ಮುಚ್ಚಿಕೊಂಡು ಕೂತಿರು."

"ಎಲ್ಲರಿಗೂ ತೊಂದರೆ, ನಾನು ಹೋಗ್ತೀನಿ."

"ಸುಮ್ಮನೇ ಇರ್ತೀಯೋ ಇಲ್ಲವೋ ನೀನು?" ನನ್ನ ಧ್ವನಿ ನನಗರಿವಿಲ್ಲದಂತೆ ದೊಡ್ಡದಾಗಿತ್ತು. ಸುಮ್ಮನೆ ಕಿರುಚಾಡಬೇಕು ಅನ್ನಿಸುತ್ತದಲ್ಲ. "ನಾನು ಬೇರೆ ಹೋದರೆ ನಿನಗೇನೊ? ಇಲ್ಲೇ ಇರ್ತೀನಿ ಅಂತ ನಾನೇನು ಬರಕೊಟ್ಟಿಲ್ಲವಲ್ಲ."

"ಇವರು ಬರಕೊಟ್ಟಿದ್ದಾರಲ್ಲ" ಎಂಬ ರಮಳ ವ್ಯಂಗ್ಯಪೂರಿತ ಧ್ವನಿಯಿಂದ. ನಾನು ಸಿಡಿಲಾದೆ. "ಮಾತಾಡದೇ ಸುಮ್ನಿರೇ ಬೇವಾರ್ಸಿ" ಎಂದು ಕಿರುಚಿದೆ.

"ಹೌದು, ನಾನೇನೂ ಮಾತಾಡಬಾರದು. ನನಗೆ ಯಾವ ಸ್ವಾತಂತ್ರ್ಯವೂ ಇಲ್ಲ" ಎಂದವಳು ಅಳತೊಡಗಿದಳು.

ಶಶಿ ರೂಮಿಗೆ ಹೋದ. ಅವನ ಹಿಂದೆಯೇ ನಾನು ಹೋದೆ. ಅವನೇನು ಮಾಡ್ತಾನೋ ಎಂದು ನೋಡುವ ಕುತೂಹಲವೇ? ಗಳುವಿನ ಮೇಲೆ ಒಣಗಿಹಾಕಿದ್ದ ಬಟ್ಟೆಗಳನ್ನೆಲ್ಲ ತೆಗೆದು ಒಂದೆಡೆ ಜೋಡಿಸಿದ. ತನ್ನ ಶರಟು ಪ್ಯಾಂಟುಗಳನ್ನೆಲ್ಲ ಮಡಿಸಿಡಲುತೊಡಗಿದ. ಅದನ್ನು ಕಂಡ ನನಗೆ ಸಹನೆಯೊಡೆಯಿತು. "ಏನು ಮಾಡ್ತಾ ಇದ್ದೀಯೋ ನೀನು?" ಮಾತಿಲ್ಲ. ಇನ್ನೊಮ್ಮೆ ಕೇಳಿದರೆ ನನ್ನ ಧ್ವನಿ ಏರಿತ್ತೇ ವಿನಾ ಅವನಿಂದ ಉತ್ತರವಿಲ್ಲ ನನಗೆ ಸಿಟ್ಟು, ಅವನ ರಟ್ಟೆ ಹಿಡಿದೆ, ಕೊಸರಿಕೊಂಡು ಮೊದಲಿನಂತೆಯೇ ಬಟ್ಟೆಗಳನ್ನು ಜೋಡಿಸುವುದರಲ್ಲಿ ತೊಡಗಿದ್ದ. ನಾನು ಇವನ ಬಗ್ಗೆ ಎಷ್ಟು ಆಸ್ಥೆ ವಹಿಸುತ್ತಿದ್ದೀನಿ, ಇವನಿಗಾಗಿ ಎಷ್ಟು ಕಷ್ಟಪಡ್ತಾ ಇದ್ದೀನಿ. ಹೆಂಡತಿಯ ವಿರೋಧ ಕಟ್ಟಿಕೊಂಡಿದ್ದೀನಿ. ಇವನು ಮಾತ್ರ ನನಗೆ ಏನೂ ಕೇಳುವ ಅಧಿಕಾರವಿಲ್ಲ ಎನ್ನುವಂತೆ ಕೇಳಿದ ಮಾತಿಗೆ ಉತ್ತರವನ್ನೂ ಕೊಡದೆ ಸುಮ್ಮನಿದ್ದಾನೆ! ಎಷ್ಟು ಸೊಕ್ಕು ಇವನಿಗೆ. ನನ್ನ ಮೈಮೇಲೆ ಬಂದಿತ್ತು. ಅವನ ಕೈಗಳನ್ನು ಒರಟಾಗಿ ಹಿಡಿದು ನನ್ನ ಕಡೆಗೆ ತಿರುಗಿಸಿಕೊಂಡು "ಹೇಳಿದ್ದು ಕೇಳಿಸಲಿಲ್ಲವೇನೋ?" ಎಂದೆ. ಸುಮ್ಮನೇ ಇದ್ದ. ನನ್ನ ಕಂಡರೆ ಇವನಿಗೆಷ್ಟು ತಿರಸ್ಕಾರ. ಒಂದು ಕಡೆ ಅವಳು, ಇನ್ನೊಂದು ಕಡೆ ಇವನು – ನನ್ನ ಪಾಪದ ಎರಡು ತುದಿಗಳು, ಅನಾದಿ ಕಾಲದ ಶತ್ರುಗಳು,

ಶಶಿಯದು ಮಾತಿಲ್ಲ, ಕತೆಯಿಲ್ಲ; ಮೊದಲಿನ ಕೆಲಸದಲ್ಲಿ ಮತ್ತೆ ಮಗ್ನ. ಹಲ್ಲು ಕಚ್ಚಿ ಒಂದೇಟು ಕೊಟ್ಟೆ ಅವನ ಕೆನ್ನೆ ಮೇಲೆ. ಅದನ್ನ ಸವರಿಕೊಂಡು ನನ್ನ ಕಡೆ ಒಂದು ಸಾರಿ ನೋಡಿದ. ಆದರೆ ಮತ್ತೆ ತನ್ನ ಕೆಲಸವೇ ತನಗೆ. ನನ್ನ ಮಾತಿಗೆ ಬೆಲೆಯೇ ಇಲ್ಲವೇ ಹಾಗಾದರೆ. "ನನ್ನ ಮಾತು ಕೇಳಲ್ಲವೇನೋ" ಉಹ್ಞೂ, ಹರ ಇಲ್ಲ; ಶಿವ ಇಲ್ಲ. ಈ ಸೂಳೇ ಮಗಂಗೆ ಬುದ್ಧಿ ಕಲಿಸಬೇಕು, ಎಷ್ಟು ಹಟ ಇವನದು. ಪಕ್ಕದಲ್ಲಿದ್ದ ಒಂದು ಕೋಲು ತೆಗೆದುಕೊಂಡು ಒಂದೆರಡು ಬೆನ್ನ ಮೇಲೆ ಬಾರಿಸಿದೆ. ಒಂದು ಅಣುವಿನಷ್ಟೂ ಪ್ರತಿಭಟನೆ ಇಲ್ಲ. ಕಣ್ಣು ರೆಪ್ಪೆಗಳನ್ನು ಪಟಪಟ ಆಡಿಸಿ ಒಂದು ದೀರ್ಘವಾದ ನಿಟ್ಟುಸಿರು ಬಿಟ್ಟು, ಒಮ್ಮೆ ಕಣ್ಣು ಮುಚ್ಚಿಕೊಂಡು ನೀಳವಾಗಿ ಉಸಿರೆಳೆದುಕೊಂಡು ಮತ್ತೆ ತನ್ನ ಕೆಲಸದಲ್ಲಿ ತೊಡಗಿದ. "ಹಲ್ಕ, ಸುವ್ವರ್, ನನ್ನ ಮಾತಿಗೇ ಬೆಲೆಯೇ ಇಲ್ಲವಾ?" ಎಂದು ಹುಚ್ಚನ ಹಾಗೆ ನಾಲ್ಕು ಬಾರಿಸಿದ್ದೆ ಕೋಲಿನಿಂದ. ಅವನಂತೂ ಒಂದೂ ಮಾತಾಡಿದವನಲ್ಲ.

ಗಲಾಟೆ ಕೇಳಿ ರಮ ಮಕ್ಕಳು ಓಡಿಬಂದರು. ಮಕ್ಕಳಂತೂ ಹೆದರಿಬಿಟ್ಟಿದ್ದರು. ರಮ ನನ್ನ ಕೈಯ ಕೋಲು ಕಿತ್ತುಕೊಂಡಳು. ರೂಮಿನಿಂದ ಹೊರಗೆ ಎಳೆದುಕೊಂಡು ಹೊರಟಳು. ಹೋಗುವಾಗ, "ಅಣ್ಣ ಅನ್ನೋ ಮರ್ಯಾದೆ ಬೇಡವೇನೋ ನಿಂಗೆ? ಕಣ್ಣಲ್ಲಿ ಕಣ್ಣಿಟ್ಟು ಕಾಪಾಡಿದ್ದಾರೆ. ಅವರ ಒಂದು ಮಾತು ಕೇಳಕ್ಕಾಗಲ್ವ ನಿಂಗೆ. ಈಗ ಸುಮ್ಮನೆ ಹೋಗು" ಎಂದಳು ಸಿಡುಕಿನಿಂದ. ಅವನ ಕಡೆ ನೋಡಿದೆ. ಅವನೂ ನಮ್ಮಿಬ್ಬರ ಕಡೆ ನೀಳವಾಗಿ ನೋಡಿದ, ಆಮೇಲೆ ಕೈಯಲ್ಲಿದ್ದ ಬಟ್ಟೆಯನ್ನೆಲ್ಲ ಒಂದು ಮೂಲೆಯಲ್ಲಿ ಎಸೆದು ಹೊರಗೆ ಹೋದ.

ಆ ರಾತ್ರಿ ಯಾರಿಗೂ ಊಟವಿಲ್ಲ, ನಿದ್ದೆ ಇಲ್ಲ. ನಾವಿಬ್ಬರೂ ಒಟ್ಟಿಗೇ ಮಲಗಿದ್ದರೂ ಗಾವುದ ದೂರವಿದ್ದೆವು. ಮಾತಿಲ್ಲ. ಮಧ್ಯೆ ಮಧ್ಯೆ ನಿಟ್ಟುಸಿರು. ಮಗ್ಗುಲು ಹೊರಳಿಸಿದೆವು ನೂರಾರು ಸಲ, ಕಣ್ಣು ಸೋತವೇ ಹೊರತು ನಿದ್ದೆ ಬರಲಿಲ್ಲ. ಕಣ್ಣು ತೆರೆದುಕೊಂಡು ಸೂರು ನೋಡುತ್ತಿದ್ದರೆ ಒಂದೆರಡು ನಿಮಿಷ, ಕಣ್ಣುಗಳು ಮುಚ್ಚಿಕೊಳ್ಳುತ್ತಿದ್ದವು. ಮುಚ್ಚಿದ ಕಣ್ಣೊಳಗೆ ಏನೇನೋ ಕಾಣುತ್ತಿದ್ದವು. ನನ್ನ ಜೀವನದ ಬಗ್ಗೆ, ಸುತ್ತ ಮುತ್ತಲ ಜನಗಳ ಬಗ್ಗೆ, ಈ ಪ್ರಪಂಚದ ಬಗ್ಗೆ ಬರೀ ಶೂನ್ಯ ಭಾವನೆ, ಅವನು ಹೇಗೆ ಮಲಗಿದ್ದನೋ ಯಾರಿಗೆ ಗೊತ್ತು. ಅವನ ಹೊರಳಾಟ ಕೂಡ ಕೇಳಿಸದು. ಬೇರೆ ರೂಮಿನಲ್ಲಿದ್ದ ನಿಜ, ಆದರೆ ಮಂಚದ ಕಿರಿಕಿರ ಕೇಳಿಸಬೇಕಾಗಿತ್ತು, ಹೊರಳಾಡಿದ್ದರೆ. ವಿಚಿತ್ರ ಮನುಷ್ಯ ಅನ್ನಿಸಿತು. ಮಕ್ಕಳು ಮಾತ್ರ ನಿದ್ದೆ ಮಾಡಿದವು.

ಬೆಳಗಿನ ಜಾವ ಅವನೆದ್ದು ಯಥಾಪ್ರಕಾರ ತಣ್ಣೀರು ಹಾಕಿಕೊಂಡು ಬಟ್ಟೆ ಧರಿಸಿ ಹೊರಟ. ಹೊರಡುವಾಗ ಪ್ರತಿದಿನ ಹೇಳುವಂತೆ ಹೇಳಿದ. ಗಟ್ಟಿಯಾಗಿರುತ್ತಿದ್ದ ಅವನ ಧ್ವನಿ ಈಗ ಮೆದುವಾಗಿತ್ತು. ನಾನು ಉತ್ತರಿಸಲಿಲ್ಲ. ಆದರೆ ಕಿಟಕಿಯಿಂದ ಹೊರಗೆ ಕುತೂಹಲ ತಾಳದೇ ನೋಡಿದೆ. ಕೈಯಲ್ಲೇನೂ ಇರಲಿಲ್ಲ. ಸುಮ್ಮನೇ ಹೆದರಿಸಿದನಾ ಹಾಗಾದರೆ ಎಂದು ಕೊಂಡಾಗ ಮುಸಿನಗೆ ಮೂಡಿತ್ತು. ಅವನು ಹೋಗಿ ಆಗಲೇ ಮೂರು ದಿವಸ.

– – –

ಶಶಿಧರ ನನಗಿಂತ ಆರು ವರ್ಷಗಳಷ್ಟು ಚಿಕ್ಕವನು. ನಾನೇ ಹಿರಿಯ ಮಗ. ನನ್ನ ಅವನ ನಡುವೆ ಇನ್ನಿಬ್ಬರು ಮಕ್ಕಳಂತೆ – ಎರಡೂ ಹೆಣ್ಣುಗಳು ಆಗಿದ್ದವು; ಆದರೆ ಬಹುಬೇಗ ಹೋದುವಂತೆ. ನನಗೆ ಅವರ ನೆನಪೂ ಇಲ್ಲ. ಅವಕ್ಕೇನಾದರೂ ಈ ರೋಗವಿತ್ತೇ? ಜ್ಞಾಪಿಸಿಕೊಂಡರೇ ಎದೆ ನಡುಕವುಂಟಾಗುವುದು. ತಂಗಿ ಯೊಬ್ಬಳು ಬೇರೆ ಇದ್ದು, ಅವಳಿಗೂ ಮೂರ್ಚೆ ಬರುತ್ತಿದ್ದರೆ? ಜೀವನವಿಡೀ ನೋಡಿಕೊಳ್ಳುವುದಲ್ಲದೆ, ಹೆಣ್ಣು ಮಗಳನ್ನು ಮನೆಯಲ್ಲಿಟ್ಟುಕೊಳ್ಳುವ ಅಪಖ್ಯಾತಿ ಬೇರೆ! ಇಲ್ಲದಿದ್ದರೆ, ಯಾರು ತಾನೇ ಗೊತ್ತಿದ್ದೂ ಮೂರ್ಛೆ ರೋಗದವಳನ್ನು ಮದುವೆ ಆಗುತ್ತಾರೆ? ಆಗಬಹುದು,

ಆದರೆ ಖಂಡಿತ ಹೃತ್ಪೂರ್ವಕವಾಗಿಯಲ್ಲ; ಹಣದಾಸೆಗೋ ಇನ್ನಾವುದೋ ಆಮಿಷಕ್ಕೊಳಗಾಗಿ, ಆಗ ಬೇರೆಯೇ ರೀತಿಯ ಸಮಸ್ಯೆಗಳು ಪ್ರಾಯಶಃ ಉದ್ಭವವಾಗುತ್ತಿದ್ದುವೆನಿಸುತ್ತದೆ. ಕೊನೆಯ ಪಕ್ಷ, ನಾನು ಅಷ್ಟರಮಟ್ಟಿಗೆ ಅದೃಷ್ಟವಂತ.

ಹುಡುಗನಾಗಿದ್ದಾಗ ಶಶಿಧರ ಹೇಗಿದ್ದ ಎಂಬ ನೆನಪು ನನಗಿನ್ನೂ ಒಂದಷ್ಟಿದೆ, ಮಸುಕು ಮಸಕಾಗಿ, ಮಗುವಿನಲ್ಲಿ ಅವನು ಬೆಳ್ಳಗೆ, ಗುಂಡಗುಂಡ ಗಿದ್ದವನು. ಹಾಗೆ ನೋಡಿದರೆ ಅವನಿಗಿಂತ ನಾನು ಕಪ್ಪು, ನೋಡಲು ಅವನೇ ವಾಸಿ, ಈಗ ಅವನು ಹಾಗಿಲ್ಲದಿರಬಹುದು. ಆದರೆ ಮೊದಲು ತುಂಬ ಚೆನ್ನಾಗಿದ್ದ. ನಮ್ಮಮ್ಮನಿಗೆ ಅವನ ಬಗ್ಗೆ ಹೆಚ್ಚು ಪ್ರೀತಿ–ಕೊನೆಯ ಮಗನಲ್ಲವೇ? ಜೊತೆಗೆ ನೋಡಲು ಚೆನ್ನಾಗಿದ್ದವನು. ಆದರೆ ಅವಳು ನನಗೇನೂ ಕಡಿಮೆ ಮಾಡಿದಳು ಎನ್ನಿಸುವುದಿಲ್ಲ; ಅಥವಾ ಶಶಿಧರನ ಬಗ್ಗೆ ಹುಡುಗನಾಗಿದ್ದಾಗ ನಾನು ಹೊಟ್ಟೆಕಿಚ್ಚು ತೋರಿಸಿದ್ದ ಸ್ಪಷ್ಟ ನೆನಪು ಯಾವುದೂ ಉಳಿದಿಲ್ಲ.

ಅವನಿಗೆ ಹೇಗೆ ಈ ರೋಗ ಬಂತು ಎಂದು ನಾನೆಷ್ಟೋ ಬಾರಿ ಯೋಚಿಸಿದ್ದೇನೆ. ಇದರಲ್ಲಿ ಹಲವಾರು ಬಗೆಗಳಿವೆಯತೆ; ಕೆಲವು ವಂಶ ಪಾರಂಪರ್ಯವಾಗಿ ಬರುವಂಥವು. ಇವನಿಗೇನಾದರೂ ಹಾಗೇ ಬಂದಿರಬಹುದೇ? ಅಪ್ಪ–ಅಮ್ಮನಿಗಿಲ್ಲದಿದ್ದರೇನು, ಆ ಹಿಂದಿನ ತಲೆಮಾರಿನ ಯಾರಿಗಾದರೂ ಇದ್ದಿರಬಹುದು. ವಂಶದಲ್ಲಿ ತಾನೇ ಇದು ಹೇಗೆ ಬರಬಹುದು! ಕೆಟ್ಟ ಅಭ್ಯಾಸಗಳಿಂದೇನಾದರೂ ಬರಬಹುದೇ? ಎಷ್ಟೋ ವೇಳೆ ಮನಸ್ಸಿಗೆ ಈ ವಿಚಾರದಿಂದಾಗಿ ಬೇಸರವಾದಾಗ ಅದೇನು ವಂಶವೋ ನಮ್ಮದು ಎಂದು ಬೇಸರಪಟ್ಟಿದ್ದೇನೆ. ಹಾಗೇನಾದರೂ ವಂಶದಲ್ಲಿ ಇಳಿದುಬಂದಿದ್ದರೆ, ಅಕಸ್ಮಾತ್ ನನಗೇ ಈ ರೋಗ ಅಂಟಿಕೊಳ್ಳಬಹುದಾಗಿತ್ತಲ್ಲವೇ ಎಂಬ ಕಲ್ಪನೆಯುಂಟಾದಾಗ ಮೈನಡುಕವುಂಟಾಗುತ್ತದೆ. ನಾನು ಅದೃಷ್ಟವಂತನಲ್ಲವೇ ಎನಿಸುತ್ತದೆ. ಇಲ್ಲದಿದ್ದರೆ ಯಾವ ಯಾವ ರೀತಿಯಲ್ಲಿ ಅನುಭವಿಸಬೇಕಾಗಿತ್ತೋ. ನಾನು ಶಶಿಯನ್ನು ಕಾಣುವಂತೆ ಮಿಕ್ಕವರು ನನ್ನನ್ನು ಕಾಣುತ್ತಿದ್ದರೆ? ಅದರಲ್ಲೂ ದೊಡ್ಡ ಮಗನಾದ ನನಗೇ ಬಂದರೆ ಸಾಕುವವರಾರು? ಹುಶ್, ಅಪಘಾತದಿಂದ ನಾನು ಪಾರಾದೆನೆಂಬ ಅನ್ನಿಸಿಕೆ.

ಶಶಿಗೆ ಅಪಘಾತದಿಂದ ಇದು ಬಂದಿರಲಿಕ್ಕಿಲ್ಲ. ಮೆದುಳಿಗೆ ಏಟುಬಿದ್ದು ಮೂರ್ಛೆ ಬರಬಹುದಂತೆ. ಆದರೆ ಗಾಯ ವಾಸಿ ಆದಮೇಲೆ ಇದು ಹೋಗುತ್ತದೆ. ಅಥವಾ ಮೆದುಳಿಗೆ ಆದ ಜಖಂ ಸರಿಪಡಿಸಿದ ಮೇಲೆ ಅದು ಮರುಕಳಿಸಲಾರದು. ಆದರೆ ಶಶಿ ಚಿಕ್ಕವನಿದ್ದಾಗ ಯಾವುದೇ ಅಂಥ ಪ್ರಸಂಗವುಂಟಾದಂತೆ ನನಗೆ ನೆನಪಿಲ್ಲ. ಮೊದಲ ಬಾರಿಗೆ ಅವನಿಗೆ ಮೂರ್ಛೆ ಹೇಗೆ ಬಂತು ಎಂದು ನೆನಪಿಸಿಕೊಳ್ಳಲು ಪ್ರಯತ್ನಿಸುತ್ತೇನೆ. ಒಮ್ಮೆ ನಾವಿಬ್ಬರೂ ಊಟಕ್ಕೆ ಕೂತಿದ್ದೆವು. ಅವನಿಗಾಗ ಸುಮಾರು ಎಂಟು ವರ್ಷವಿರಬೇಕು. ಎರಡನೆಯ ಕ್ಲಾಸೋ ಮೂರನೆಯದೋ ಓದುತ್ತಿದ್ದ. ನಾನು ಪ್ರಾಯಶಃ ಹೈಸ್ಕೂಲಿನಲ್ಲಿದ್ದೆ; ಎರಡನೆಯ ವರ್ಷವಿರಬೇಕು. ಅಮ್ಮ ಬಡಿಸುತ್ತಿದ್ದಳು. ಊಟದ ಮಧ್ಯೆ ಅವನು ಒಂದೆರಡು ನಿಮಿಷ ಸುಮ್ಮನೆ ಯಾವುದೋ ಗುಂಗಿನಲ್ಲಿದ್ದಂತೆ ಕೂತಿದ್ದ. ಇದು ನಮ್ಮ ಗಮನಕ್ಕೆ ಬರುತ್ತಿರಲಿಲ್ಲವೇನೋ. ಆಗತಾನೇ ಅಮ್ಮ ಅನ್ನ ಹಾಕಿ ಹುಳಿ ಬಡಿಸುತ್ತಿದ್ದಳು. ಇವನು ಬೇಕು ಬೇಡ ಎನ್ನದೆಯೇ ಕೂತಿರುವಾಗ ಅಮ್ಮನಿಗೆ ಕೋಪ ಬಂತು. ಬೆನ್ನ ಮೇಲೆ ಗುದ್ದು ಹಾಕಿ "ಏನೋ ಅಂಥದ್ದು ಯೋಚನೆ ನಿಂಗೆ, ಬೇಕು ಬೇಡ ಅನ್ನದೆ ಕೂತಿದ್ದೀಯಲ್ಲ" ಅಂದಳು. ಆದರೆ ಆ ಗುದ್ದಿನಿಂದ ಅವನು ಎಚ್ಚತ್ತಂತೆ ಕಾಣಿಸಲಿಲ್ಲ. ಆಮೇಲೆ ಒಂದು ನಿಮಿಷದ ಮೇಲೆ ಅವನು ತನ್ನ 'ಧ್ಯಾನ'ದಿಂದ ಹೊರಬಂದ, "ಏನಾಯಿತೋ?" ಎಂದು ಅಮ್ಮ–ನಾನು ಇಬ್ಬರೂ ಅವನ ಮೈಯಲುಗಿಸಿ ಕೇಳಿದೆವು. ಅವನು "ಏನಿಲ್ಲ" ಅಂದ. ಆದರೆ ಅವನು ಇದ್ದಕ್ಕಿದ್ದ ಹಾಗೆ ಮಂಕಾಗಿದ್ದನೇನೋ ಅನ್ನಿಸುತ್ತದೆ ನನಗೆ. ಅಮ್ಮ ಗಾಬರಿಯಾದಳು. ಎಷ್ಟು ವಿಚಾರಿಸಿದರೂ ತನಗೇನಾಯಿತೆಂದು ಅವನು ಹೇಳಲಿಲ್ಲ. "ಏನೂ ಇಲ್ಲ" ಎಂಬುದೇ ಉತ್ತರ. ಅದು ಅವನ ಮೊದಲ ಅಟ್ಯಾಕ್ ಆಗಿರಬಹುದೇ ಎಂದು ಈಗ ನನಗೆ ಅನುಮಾನವಾಗುತ್ತದೆ; ಏಕೆಂದರೆ ಮಕ್ಕಳಲ್ಲಿ ಮೊದಲು ಆ ರೀತಿಯಾಗಿಯೇ ಈ ರೋಗ ಕಾಣಿಸಿಕೊಳ್ಳುತ್ತದೆಂದು ಓದಿದ ನೆನಪು.

ಮುಂದೆ ಈ ರೋಗದ ಸ್ಪಷ್ಟ ಸೂಚನೆಗಳು ಕಾಣಿಸಿದವು. ಸ್ಕೂಲಲ್ಲಿ ಹೋದಾಗಲೂ ಹೀಗೇ ಆಗುತ್ತಿತ್ತಂತೆ; ಅವನ ಸ್ನೇಹಿತರು ಹೇಳುತ್ತಿದ್ದರು. ಒಮ್ಮೆಯಂತೂ ಆಡುತ್ತಿದ್ದಾಗ ಅವನಿಗೆ ಅಟ್ಯಾಕ್ ಆಗಿರಬೇಕು. ಬಿದ್ದು ಮೈ ಕೈ ಎಲ್ಲ ತರಚಿಕೊಂಡು ಬಂದಿದ್ದ. ಆದರೆ ಅದು ಈ ರೋಗವೆಂಬ ಕಲ್ಪನೆ ನಮಗೆ ಬಂದಿರಲಿಲ್ಲ. ನಾನಂತೂ ಚಿಕ್ಕವನು. ಅಮ್ಮನಿಗೆ ಇದರ ಅರಿವಿರಲಿಲ್ಲವೇನೋ ಹುಡುಗ ಅನ್ಯಮನಸ್ಕನಾಗಿರುತ್ತಾನೆಂದೇ ಅವಳಿಗೆ ಅನ್ನಿಸಿದ್ದಿರಬೇಕು. ಹರಕೆ ಗಿರಕೆ ಹೊತ್ತಳು ಅಂತ ಕಾಣುತ್ತೆ. ಗಾಯ ಮಾಡಿಕೊಂಡು ಬಂದಾಗ ಎಡವಿ ಬಿದ್ದೆನೆಂದು ಅವನೇ ಹೇಳಿದ್ದ.

ಆದರೆ ಅವನು ಹೈಸ್ಕೂಲಿಗೆ ಸೇರಿದಾಗ ಈ ವಿಚಾರ ನಮಗೆ ಗೊತ್ತಾಯಿತು. ಅದೂ ಅವರ ಸ್ಕೂಲಿನ ಮೇಷ್ಟರೊಬ್ಬರಿಂದ. ಅವರು ಅಪ್ಪನಿಗೆ ಪರಿಚಯವಂತೆ. ಅವರೊಮ್ಮೆ ಸಾಯಂಕಾಲ ಶಶಿಯ ಜೊತೆಗೇ ನಮ್ಮ ಮನೆಗೆ ಬಂದರು. ಅಪ್ಪ ಕೂಡ ಅದೇ ತಾನೇ ಬಂದು ಕೈಕಾಲು ತೊಳೆದು ಕಾಫಿ ಕುಡಿಯುತ್ತಿದ್ದರು. ಎಂದೂ ಮನೆಗೆ ಬಾರದ ಪರಿಚಿತರ ಆಗಮನದಿಂದ ಅಪ್ಪನಿಗೆ ಸಡಗರ. ಅದೂ ಬಂದವರು ಶಶಿಯ ಮೇಷ್ಟರು ಬೇರೆ. "ಬನ್ನಿ ಬನ್ನಿ" ಎಂದು ಸಡಗರದಿಂದ ಕರೆದರು.

ಕಾಫಿ ಕುಡಿದಾದ ಮೇಲೆ ಅಪ್ಪ, "ಅಪರೂಪಕ್ಕೆ ಬಂದಿರಿ? ಏನು ಸಮಾಚಾರ" ಅಂದರು.

"ಅಂಥದೇನಿಲ್ಲ. ಒಂದು ಸಣ್ಣ ವಿಷಯ ತಿಳಿಸಕ್ಕೆ ಬಂದೆ" ಎಂದರು ಮೇಷ್ಟರು ಸಂಕೋಚ ಅನುಮಾನಗಳಿಂದ.

"ಯಾಕೆ, ಶಶಿ ಏನಾದರೂ ಮಾಡಿದನೇನು?" ಅಪ್ಪನಿಗೆ ಗಾಬರಿ.

"ಛೆ, ಛೆ, ಅವನು ತುಂಬ ಒಳ್ಳೆಯ ಹುಡುಗ."

"ಹಾಗಾದರೆ ಇನ್ನಾವ ವಿಷಯ?"

"ಅವನ ಬಗ್ಗೇನೇ, ಆದರೆ ಅವನ ನಡವಳಿಕೆ ವಿಚಾರವಲ್ಲ."

"ಚೆನ್ನಾಗಿ ಓದಲ್ಲವೇನು? ನಿಮ್ಮ ಕೈಯಲ್ಲಿದ್ದಾನೆ. ಚೆನ್ನಾಗಿ ಬುದ್ಧಿ ಕಲಿಸಿ. ನಿಮಗೆ ಹೇಗೆ ತೋಚುತ್ತೊ ಹಾಗೆ ಅವನಿಗೆ ಶಿಕ್ಷೆ ಕೊಡಿ."

"ಅದೆಲ್ಲ ಅಲ್ಲ. ಸ್ವಲ್ಪ ಅನುಮಾನ ಬಂದಿದೆ ನನಗೆ. ಏನೂ ತಪ್ಪು ತಿಳಿದುಕೋಬೇಡಿ. ಅವನ ಆರೋಗ್ಯದ ವಿಚಾರ."

ಅಪ್ಪನ ಮನಸ್ಸಿನಲ್ಲಿ ಆಗ ಏನಾಗುತ್ತಿದ್ದಿರಬಹುದು? ಒಂದು ರೀತಿಯ ಒಗಟಿನಂತೆ ಮಾತನಾಡುತ್ತಿದ್ದ ಮೇಷ್ಟರ ಧಾಟಿ ಎಂತಹವರಲ್ಲೂ ಕಾತರವುಂಟು ಮಾಡುವ ರೀತಿಯದಾಗಿತ್ತು. ನನಗೂ ಸ್ವಲ್ಪ ಹಾಗೇ ಅದದ್ದರ ಜೊತೆಗೆ ಅವರೇನು ಹೇಳುತ್ತಾರೋ ಎಂಬ ಕುತೂಹಲ ಬೇರೆ ಹೆಚ್ಚಾಯಿತು. ನನಗೇ ಹಾಗಾಗಿರ ಬೇಕಾದರೆ ಇನ್ನು ಅಪ್ಪನಿಗೆ? ಅಪ್ಪ ವಿಹ್ವಲರಾಗಿ "ದಯವಿಟ್ಟು ಬಿಡಿಸಿ ಹೇಳಿ ಮೇಷ್ಟ್ರೇ, ಒಗಟು ಮಾತನಾಡಬೇಡಿ" ಎಂದಾಗ ಅವರು ಅಂಗಲಾಚುವ ಧ್ವನಿಯನ್ನೇ ತಾಳಿದ್ದಂತೆ ಕಂಡಿತು.

"ಇದು ನನ್ನ ಅನುಮಾನ ಅಷ್ಟೆ" ಎಂದು ಪ್ರಾರಂಭಿಸಿದ ಮೇಷ್ಟರು ನಡೆದ ವಿಚಾರ ತಿಳಿಸಿದರು. ಆವತ್ತು ಮಧ್ಯಾಹ್ನ ಶಶಿಯ ಕ್ಲಾಸಿನಲ್ಲಿ ಈ ಮೇಷ್ಟರ ಪಾಠವಿತ್ತಂತೆ. ಪಾಠದ ಮಧ್ಯೆ ಯಾವನೋ ಹುಡುಗ ಗಮನವಿಟ್ಟು ಕೇಳದೆ ಅತ್ತ ಇತ್ತ ಮಿಸುಕಾಡುತ್ತಿದ್ದುದನ್ನು ಕಂಡು ಆ ಹುಡುಗನನ್ನು ಬೈದರಂತೆ. ಆದರೆ ಅವನು "ಸಾರ್. ಶಶಿಧರ ಹೇಗೆಹೇಗೋ ಆಡ್ತಿದ್ದಾನೆ" ಅಂದಾಗ ಇವರು ತಮ್ಮ ಸ್ಥಳದಿಂದ ಆ ಹುಡುಗನ ಹಿಂದಿನ ಬೆಂಚಲ್ಲಿ ಕೂತ ಶಶಿಧರನ ಹತ್ತಿರ ಹೋದರು. ಅವನು ತುಂಬ ಬೆವತಿದ್ದ, ಬಾಯ ಕೊನೆಯಲ್ಲಿ ಒಂದಷ್ಟು ಜೊಲ್ಲು ಕಾಣಿಸಿಕೊಂಡಿತ್ತು. ಕೈ ಮುಷ್ಠಿಗಳು ಬಿಗಿಯಾಗಿದ್ದವು. ಪಕ್ಕದ

ಹುಡುಗರನ್ನು ಬೆಂಚಿನಿಂದ ಮೇಲಕ್ಕೇಳಿಸಿ ಅವನನ್ನು ಬೆಂಚಿನ ಮೇಲೆ ಮಲಗಿಸಿದರಂತೆ. ಒಂದೆರಡು ಕ್ಷಣಗಳ ನಂತರ ಶಶಿ ಎಚ್ಚರವಾದ "ಏನಪ್ಪ?" ಎಂದವರು ಮೃದುವಾಗಿ ಕೇಳಿದರೆ ಅವನು "ಏನಿಲ್ಲ" ಎಂದನಂತೆ. ಅವನನ್ನು ಬೇರೊಬ್ಬ ಹುಡುಗನೊಟ್ಟಿಗೆ ಹೊರಗೆ ಕಳಿಸಿ ಮುಖ ಬಾಯಿ ತೊಳೆದು ಬರಲು ಹೇಳಿದರಂತೆ. ಸಾಯಂಕಾಲ ಸ್ಕೂಲು ಆದ ಮೇಲೆ ನನ್ನನ್ನು ನಿಮ್ಮ ಮನೆಗೆ ಕರಕೊಂಡು ಹೋಗು ಎಂದು ತಾವೇ ಬಂದರಂತೆ. "ಇದು ಎಪಿಲೆಪ್ಸಿ ಅನ್ನೋ ಅನುಮಾನ ನಂಗೆ" ಎಂದು ಮೆದುವಾಗಿ ಹೇಳಿದರು. ಅಪ್ಪ ತಲೆಯ ಮೇಲೆ ಕೈ ಹೊತ್ತು ಕೂತರು. ನನಗೂ ಏನೋ ಒಂಥರ ಆಯಿತು, ಅಪ್ಪನ ರೀತಿ ನೋಡಿ, ಮೇಷ್ಟರು ಹೇಳಿದ್ದು ಸಂಪೂರ್ಣವಾಗಿ ಅರ್ಥವಾಗಿರಲಿಲ್ಲ; ಎಪಿಲೆಪ್ಸಿ ಎಂಬುದನ್ನು ಅದುವರೆಗೆ ಕೇಳಿರಲಿಲ್ಲ. ಅಪ್ಪನ ಚಿಂತೆಯನ್ನು ಕಂಡು ಮೇಷ್ಟರು ಅವರ ಭುಜದ ಮೇಲೆ ಕೈಯಿಟ್ಟು "ಸಮಾಧಾನ ಮಾಡಿಕೊಳ್ಳಿ ಇದು ನನ್ನ ಅನುಮಾನ, ಅಷ್ಟೆ, ದೇವರ ದಯೆಯಿಂದ ನನ್ನನುಮಾನ ಸುಳ್ಳಾಗಿರಲಿ, ಆದರೂ ಡಾಕ್ಟರಿಗೆ ತೋರಿಸಿ ಈಗಲಿಂದಲೇ ಉಪಚಾರ ಮಾಡಿದರೆ ಸರಿಹೋಗುತ್ತೇನೋ" ಎಂದು ಹೇಳಿ ಹೊರಟು ಹೋದರು.

ಮೇಷ್ಟರು ಹೇಳಿದ ವಿಚಾರಾನ ಅಮ್ಮನಿಗೆ ಅಪ್ಪ ವಿವರಿಸಿದಾಗ ಅವಳು ಗೊಳೋ ಎಂದು ಅಳುತ್ತ ಕೂತಳು. "ಎಂಥ ಶಿಕ್ಷೆ ಕೊಟ್ಟ್ಯಪ್ಪ ದೇವರೇ" ಅಂತ ಗೋಳಾಡಿದಳು. ಏನಾಗಿದೆ ಎಂಬ ಅರಿವು ನನಗೆ ಅಷ್ಟೊಂದಿರಲಿಲ್ಲ. ಆದರೆ ಆ ಹೊತ್ತಿಗಾಗಲೇ ಬೇರೆಯವರಿಗೆ ಮೂರ್ಛೆರೋಗ ಬಂದಿದ್ದನ್ನು ಕಂಡಿದ್ದ ನಾನು ಅಪ್ಪನ ವಿವರಣೆ ಕೇಳಿ ಶಶಿಗೆ ಯಾವ ರೋಗವಿರಬಹುದು ಎಂಬ ಕಲ್ಪನೆಯುಂಟಾಯಿತು. ಬರಬರುತ್ತ ಅವನ ಮೂರ್ಛೆಯ ಅವ ಮತ್ತು ಉಲ್ಬಣಿಕೆ ಹೆಚ್ಚಾದವು. ಡಾಕ್ಟರರಿಗೆ ತೋರಿಸಿಕೊಂಡು ಬಂದಾಗಿತ್ತು. ಅವರಂತೂ ನಿತ್ಯವೂ ನುಂಗಬೇಕೆಂದು ಮಾತ್ರೆಗಳನ್ನು ಬರೆದುಕೊಟ್ಟರು. ಮಾತ್ರೆಗಳನ್ನು ಒಂದೆರಡು ದಿನ ಬಿಟ್ಟರೆ ಮೂರ್ಛೆ ವಿಪರೀತ ಬರುತ್ತಿತ್ತು. ಬೇಗ ಬೇಗ ಬರುತ್ತಿತ್ತು. ಮೊದಮೊದಲು ನನಗೆ ಗಾಬರಿ ಆಗುತ್ತಿತ್ತು. ಅಮ್ಮ ಅಪ್ಪ ಅವನನ್ನು ಹಿಡಿದುಕೊಳ್ಳುತ್ತಿದ್ದರು. ಅಪ್ಪ ಮನೆಯಲ್ಲಿಲ್ಲದಾಗ ಅಮ್ಮನೊಬ್ಬಳಿಂದ ಅವನನ್ನು ತಡೆಯುವುದು ಸಾಧ್ಯವಿರಲಿಲ್ಲ. ನನ್ನನ್ನು ಕರೆಯುತ್ತಿದ್ದಳು. ನನಗೆ ಮೊದಮೊದಲು ಭಯವಾಗುತ್ತಿತ್ತು. ಅಮ್ಮ ಕೂಗಿದಾಗ ಹೋಗಲು ಹಿಂಜರಿದರೆ "ಬೇಗ ಬಾರೋ, ಶನಿ, ನೀನೇನು ಸಾಯೋದಿಲ್ಲ ಎಂದು ಅಬ್ಬರಿಸುತ್ತಿದ್ದಳು. ಕಾಲ ಸರಿದಂತೆ ನನಗೆ ಇದೆಲ್ಲ ಅಭ್ಯಾಸವಾಯಿತು.

ಪ್ರತಿನಿತ್ಯ ಔಷಧಿಯ ಸೇವನೆಯಿಂದ ಮೂರ್ಛೆ ಹತೋಟಿಗೆ ಬಂದರೂ ಪೂರ್ತಿ ನಿಂತು ಹೋಗಲಿಲ್ಲ. ಇದು ಪೂರ್ತಿ ಗುಣ ಆಗುವ ಕಾಯಿಲೆ ಅಲ್ಲ ಎಂದು ಡಾಕ್ಟರು ಹೇಳಿದ್ದರು. ಹೀಗಾಗಿ ಔಷಧದ ಸೇವನೆಯಿಂದ, ರೋಗದ ಹೊಡೆತದಿಂದ ಶಶಿ ಮಂಕಾಗುತ್ತ ಬಂದ. ಅಂದರೆ ಅವನ ನಿತ್ಯ ಜೀವನದಲ್ಲಿ ಅವನು ಉತ್ಸಾಹದಿಂದಿರಲಿಲ್ಲವೆಂದಲ್ಲ; ಅವನ ಬುದ್ಧಿ ಮಂದವಾಯಿತೇನೋ! ಅವನ ಮಾತು ವಿಚಿತ್ರ ಆಗಿದೆಯೇನೋ ಎನ್ನಿಸುವುದು ಇದರಿಂದಲೇ ಎನಿಸುತ್ತದೆ. ಇದು ಮೆದುಳಿನ ಸಮಸ್ಯೆಯಾದ್ದರಿಂದ ಮೆದುಳಿಗೆ ಪ್ರತಿ ಮೂರ್ಛೆಯಿಂದಲೂ ಒಂದಷ್ಟು ಆಘಾತ ಆಗುತ್ತದೆ. ಈ ಆಘಾತಗಳನ್ನು ತಡೆಯಲು ಮೂರ್ಛೆ ಬರುವುದನ್ನು ಕಡಿಮೆ ಮಾಡಬೇಕು. ಅದಕ್ಕಾಗಿ ಪ್ರತಿನಿತ್ಯದ ಔಷ. ದೀರ್ಘ ಕಾಲದ ಔಷದಿಯ ಸೇವನೆಯಿಂದಾಗಿ ಉಂಟಾಗುವ ಅನ್ಯ ಪರಿಣಾಮಗಳು, ಅದರಿಂದ ಮಿದುಳಿನ ಶಕ್ತಿ ಕುಂಠಿತವಾಗುತ್ತದೆಯೆಂದು ಡಾಕ್ಟರು ವಿವರಿಸಿದ್ದರು.

ಮುಂದೆ ಶಶಿಯ ಉಪಚಾರದ ಹೊಣೆ ಸಂಪೂರ್ಣವಾಗಿ ನನ್ನ ಮೇಲೆ ಬಿದ್ದ ನಂತರ, ಸಹಾನುಭೂತಿಯಿಂದ ಅವನಿಗೇನಾದರೂ ಮಾಡಲು ಸಾಧ್ಯವೋ ಎಂಬ ಕಾತರದಿಂದ, ಈ ರೋಗದ ಬಗ್ಗೆ ಪರಿಣತರು ಸಾಮಾನ್ಯ ಜನರಿಗಾಗಿ ಬರೆದ ಪುಸ್ತಕಗಳನ್ನು ಓದಿದ್ದೆ, ಮೂರ್ಛೆಯೇ ರೋಗವಲ್ಲ, ಅದು ಸಿಂಪ್ಟಮ್ ಅಷ್ಟೇ ಅಂತೆ. ಎಂದರೆ ಆ ಮೂರ್ಛೆಗೆ ಹಲವಾರು ಕಾರಣಗಳು; ಆದರೆ ಬಹು ಸಂಖ್ಯೆಯ ಮೂರ್ಛೆ ರೋಗಗಳಲ್ಲಿ ಕಾರಣವಾವುದೆಂದು ಹೇಳಲಾಗುವುದಿಲ್ಲ.

ಮೂರ್ಛೆ ಬರುವುದಕ್ಕೆ ಹಿನ್ನೆಲೆಯೆಂದರೆ ಮೆದುಳಿನಲ್ಲಿ ಉತ್ಪತ್ತಿ ಆಗುವ ವಿಪರೀತ ಎಲೆಕ್ಟ್ರಿಕಲ್ ಡಿಸ್ಚಾರ್ಜ್. ಇದು ಸಾಮಾನ್ಯವಾಗಿ ಎಲ್ಲರಲ್ಲೂ ಇರುತ್ತದೆ. ಆದರೆ ರೋಗಿಗಳಲ್ಲಿ ಈ ಡಿಸ್ಚಾರ್ಜ್ ತುಂಬ ಹೆಚ್ಚು. ಆದ್ದರಿಂದಲೇ ಮೆದುಳಿನಲ್ಲಿ ಉಂಟಾದ ಈ ವಿದ್ಯುತ್ತು ನರಗಳ ಮೂಲಕ ದೇಹವನ್ನು ವ್ಯಾಪಿಸಿಕೊಳ್ಳುತ್ತದಂತೆ. ಅದಕ್ಕೇ ಮೂರ್ಛೆ ಕಾಣಿಸಿಕೊಂಡಾಗ ಮೈಯೆಲ್ಲ ಅಲುಗಾಡುವುದು, ಷಾಕ್‌ನಿಂದಾಗಿ; ಜೊತೆಗೆ ಪ್ರಜ್ಞೆ ಹೋಗುವುದು.

ಇಷ್ಟು ವೈದ್ಯರು ಹೇಳುವ ರೀತಿ. ಆದರೆ ಅದು ಬಂದಾಗ ಶಶಿಗೆ ಏನಾಗುತ್ತಿರಬಹುದು ಎಂದು ನಾನು ಊಹಿಸಿಕೊಳ್ಳಲು ಈ ವಿವರಣೆಯ ಹಿನ್ನೆಲೆಯಲ್ಲಿ ಪ್ರಯತ್ನಿಸುತ್ತೇನೆ. ಅವನಿಗೆ ನೋವಾಗುತ್ತದೆಯೇ? ಸಂಕಟವಾಗು ತ್ತದೆಯೇ? ಎಲೆಕ್ಟ್ರಿಕಲ್ ಡಿಸ್ಚಾರ್ಜ್‌ನಿಂದ ಷಾಕ್ ಹೊಡೆದರೆ ಮೈ ಜುಂ ಎನ್ನುತ್ತದೆಯೇ? ಆದರೆ ಮೂರ್ಛೆ ಕಾಲದಲ್ಲಿ ಪ್ರಜ್ಞೆ ತಪ್ಪಿರುವುದರಿಂದ ರೋಗಿಗೆ ಆದದ್ದೇನೂ ತಿಳಿಯಲಾರದಲ್ಲ. ಇದೆಂಥ ರೋಗವಿದು! ಅದು ದೇಹವನ್ನೆಲ್ಲ ವ್ಯಾಪಿಸಿಕೊಂಡಾಗ ಏನೂ ಗೊತ್ತಾಗದು. ಆದರೆ ನಿಧಾನವಾಗಿ ಇಡೀ ಅಸ್ತಿತ್ವದ ಮೇಲೆ ಪರಿಣಾಮ ಬೀರಿ ಜೀವನವನ್ನೇ ಹಾಳು ಮಾಡುತ್ತದಲ್ಲ. ಎನಿಸಿ ಬೇಸರವಾಗುತ್ತದೆ.

ಮಿಕ್ಕನಾದಂತೆ ಶಶಿಧರ ಬೇರೆಯವರಂತೆಯೇ ಇದ್ದಾನಲ್ಲ. ಊಟ, ತಿಂಡಿ, ನಿದ್ದೆ – ದೈನಂದಿನ ಜೀವನ ನಮ್ಮದರಂತೆಯೇ, ಹಾಗಾದರೆ ಮಿಕ್ಕೆಲ್ಲ ಆಸೆ– ಆಕಾಂಕ್ಷೆಗಳೂ ನಾರ್ಮಲ್ ಆಗಿಯೇ ಇರಬೇಕಲ್ಲ. ಸಿಟ್ಟು ಕೋಪ, ಬೇಸರ ಎಲ್ಲವೂ ಅವನಲ್ಲಿ ಕಾಣಿಸಿಕೊಳ್ಳುತ್ತವೆ. ಅವನಿಗೆ ಲೈಂಗಿಕ ಆಸೆಯೂ ಇರಬೇಕಲ್ಲ. ಎಷ್ಟೋ ಜನರು ಮದುವೆ ಆಗಿದ್ದಾರಲ್ಲವೇ? ಆದರೆ ಮಕ್ಕಳಿಗೆ ಈ ರೋಗ ಬರುವ ಸಾಧ್ಯತೆಗಳು ಇರುತ್ತವಂತಲ್ಲ. ಇಬ್ಬರೂ–ಗಂಡ–ಹೆಂಡಿರು–ಮೂರ್ಛೆರೋಗದವರಾದರೆ ಮಕ್ಕಳಿಗೆ ಖಂಡಿತ ರೋಗ ಬರುತ್ತದೆ.

ಈ ರೋಗವನ್ನುಳಿದು ಮಿಕ್ಕಂತೆ ಅವನೂ ನಮ್ಮಂತಲ್ಲವೇ? ಆದರೆ ನಾನು ಚಿಕ್ಕವನಾಗಿದ್ದಾಗ ಮನೆಯಲ್ಲಿ ಶಶಿಗೆ ಮೂರ್ಚೆಬಂದು ಅದನ್ನು ಹುಡುಗರಾದರೂ ನೋಡಿದಾಗ "ಈ ಶಶಿಗೆ ಯಾಕೆ ಹೀಗಾಗುತ್ತೆ?" ಅಂತ ಕೇಳಿದಾಗ ನನಗೆ ಕೋಪ–ಅಪಮಾನಗಳುಂಟಾದಂತೆ ಎನಿಸುತ್ತಿದ್ದವು. ಅವನಿಂದಾಗಿ ನಮ್ಮ ಮನೆಯವರಿಗೆಲ್ಲ ಏನೋ ಕುಂದು ಬಂದಿದೆಯೆನಿಸುತ್ತಿತ್ತು. ಅವನ ರೋಗದ ಬಗ್ಗೆ ಯಾರಾದರೂ ಕೇಳಿದರೆ ನಾಚಿಕೆಯಾಗುತ್ತಿತ್ತಲ್ಲ! ಅಷ್ಟೇಕೆ. ಈಗಲೂ ಎಷ್ಟೋ ಬಾರಿ ಮೂರ್ಚೆ ಬಂದ ಸನ್ನಿವೇಶಗಳಲ್ಲಿ ಅವನ ಬಗ್ಗೆ ಬೇಸರಪಟ್ಟುಕೊಂಡಿಲ್ಲವೇ? ಜೀವನಪೂರ್ತಿ ಗಂಟು ಬಿದ್ದ ಸಮಸ್ಯೆ ಎಂದು ನನಗನಿಸಲಿಲ್ಲವೇ?

ಮೂರ್ಛೆಯಿಂದಾಗಿ ನಿಧಾನವಾದ ಪರಿಣಾಮ ಮೆದುಳಿನ ಮೇಲೆ ಆಗಿ, ನಂತರ ಕ್ರಮೇಣ ದೇಹದ ಮೇಲಾಗುತ್ತದೆ. ಆದರೆ ಹುಟ್ಟುತ್ತಲೇ ಮಂಕರಾಗಿರುವವರು ಎಷ್ಟು ಜನರಿಲ್ಲ? ಮೂರ್ಚೆ ಬರದೇ ಇವನಿಗಿಂತ ದಡ್ಡರಾದವರು ಬೇಕಾದಷ್ಟು ಜನರಿದ್ದಾರೆ. ಅವರಿಗಿಂತ ಇವನು ಮೇಲಲ್ಲವೇ? ಆದರೆ ಜನ ಏಕೆ ಇವನನ್ನು ಗಾಬ ರಿಯಿಂದ ದೂರದಿಂದಲೇ ನೋಡುತ್ತಾರಲ್ಲ! ಇವನು ತುಂಬ ಬುದ್ಧಿವಂತನಲ್ಲದಿರ ಬಹುದು, ಆದರೆ ಸಾಕಷ್ಟು ಬುದ್ಧಿ ಶಕ್ತಿಯಿದೆ. ಡ್ರಾಫ್ಟ್‌ಮನ್‌ಶಿಪ್ ಪಾಸಾಗಿ ಡ್ರಾಯಿಂಗ್ ಮಾಡುತ್ತಾನಲ್ಲ. ಇಷ್ಟು ಬುದ್ಧಿ ಶಕ್ತಿ ಏನು ಕಡಿಮೆಯೇ? ತನ್ನ ಜೀವನಕ್ಕೆ ಬೇಕಾದ ಹಾಗೆ ಸಂಪಾದನೆ ಮಾಡುತ್ತಾನೆ; ಅವನ ಕಾಲಮೇಲೆ ಅವನು ನಿಂತಿದ್ದಾನೆ. ನಾನು ನೋಡಿಕೊಳ್ಳುವುದು ಎಂದರೇನು ಹಾಗಾದರೆ? ಮನೆಯಲ್ಲಿಟ್ಟು ಕೊಂಡಿರುವುದು ತಾನೇ?

ಅವನೇ ಒಂದು ಮನೆ ಮಾಡಿ ಮದುವೆಯಾದರೆ? ಹೆಂಡತಿ ನನ್ನ ಕೆಲಸ ವಹಿಸಿಕೊಳ್ಳಬಹುದಲ್ಲ. ಯಾರಾದರೂ ಬಡ ಹುಡುಗಿಯನ್ನು ಮದುವೆಗೆ ಒಪ್ಪಿಸಬಹುದೆನಿಸುತ್ತದೆ; ದಿಕ್ಕಿಲ್ಲದವಳಾದರೆ ಅವಳಿಗೂ ಒಂದು ನೆಲೆಯಾಗುತ್ತದೆ.

ಇವನಿಗೂ ದಿಕ್ಕಾಗುತ್ತದೆ ಎನಿಸಿತ್ತು. ಆದ್ದರಿಂದ ಅವನಿಗೆ ಒಮ್ಮೆ "ನೀನು ಯಾಕೋ ಮದುವೆ ಮಾಡಿಕೊಂಡು ಹಾಯಾಗಿರಬಾರದು?" ಎಂದಿದ್ದೆ.

"ನಾನು ಸಾಯೋದಲ್ಲದೆ ಯಾವಳ್ನೋ ಹುಡುಗೀನು ಕೊಲ್ಲಬೇಕಾ?" ಎಂದು ಮರುಪ್ರಶ್ನೆ ಮಾಡಿದ್ದ.

"ಕೊಲ್ಲೋದೇನಿದೆಯೋ ಇದರಲ್ಲಿ? ನಿನ್ನ ನೋಡಿಕೊಳ್ಳೋಕೆ ಒಬ್ಳು ದಿಕ್ಕಾದರೂ ಸಿಕ್ಕುತ್ತಲ್ಲ ಕೊನೇಪಕ್ಷ."

"ಅಂದರೆ ನಾನು ನಿನ್ನ ಜೊತೇಲಿರೋದು ನಿಂಗೆ ಬೇಜಾರಾಗಿದೆ ಅನ್ನು. ಅಷ್ಟು ಹೇಳಕ್ಕೆ ಇಷ್ಟೊಂದು ಮಾತು ಯಾಕೆ? ನಾನು ಬೇರೆ ಹೋಗ್ತೀನಿ ಬಿಡು" ಎಂದಿದ್ದ. ನನಗಾಗ ಸಿಟ್ಟು ಬಂದಿತ್ತು.

"ಮಹಾ ಬುದ್ಧಿವಂತ ಕಣಯ್ಯ ನೀನು. ಏನೋ ಒಳ್ಳೇದಕ್ಕೆ ಹೇಳಿದರೆ ಏನೇನೋ ಅರ್ಥಮಾಡ್ತಾನೆ. ನೀನೇನು ಅಂದುಕೊಂಡಿದ್ದೀಯೋ ಹಾಗೇ ಮಾಡು ನಮಸ್ಕಾರ" ಎಂದಿದ್ದೆ.

ಈ ಮಾತುಕತೆಯಿಂದ ಎರಡು ವಿಚಾರ ನನ್ನ ಆಲೋಚನೇಲಿ ಸಿಕ್ಕಿ ಹಾಕಿಕೊಂಡವು. ಇವನು ಎಷ್ಟು ಚೆನ್ನಾಗಿ ಆಲೋಚನೆ ಮಾಡ್ತಾನೆ. ತನ್ನ ಮದುವೆಯಿಂದ ಹುಡುಗಿ ಒಬ್ಬಳಿಗೆ ತಾನು ಭಾರವಾಗ್ತೀನಿ ಅನ್ನೋ ಪರಿಜ್ಞಾನ ಇವನಿಗಿದೆಯಲ್ಲ. ಎಲ್ಲರಂತಿರೋ ಹುಡುಗಿಗೆ ತನ್ನಂಥ ರೋಗಿ ಗಂಡ ಸಿಕ್ಕರೆ ಅವಳ ಆಶೋತ್ತರಗಳಿಗೆ ಕುಂದು ಉಂಟಾಗುತ್ತೆ ಅನ್ನುವಷ್ಟು ಸೂಕ್ಷ್ಮವಾಗಿ ವಿಚಾರ ಮಾಡ್ತಾನಲ್ಲ ಇವನು, ರೋಗದಿಂದ ಇವನ ಸೂಕ್ಷ್ಮತೆಗೇನೂ ಕುಂದುಬಂದಿಲ್ಲ ವೇನೋ ಅನ್ನಿಸಿತ್ತು. ಇನ್ನೊಂದು ಅಂದರೆ ಅವನು ಹೇಳಿದ್ದ ಮಾತು. ನಿನಗೆ ದಿಕ್ಕಾಗುತ್ತೆ ಅಂದಾಗ ನಾನು ಜೊತೇಲಿರೋದು ಬೇಜಾರಾ ಅಂದಿದ್ದ. ನಿಜವಾಗಲೂ ನನ್ನ ಮನಸ್ಸಲ್ಲಿ ಆ ಯೋಚನೆ ಇತ್ತೇ? ಅವನು ಮದುವೆಯಾಗಿ ಬೇರೆ ಹೋದರೆ ನನ್ನ ಜವಾಬ್ದಾರಿ ಕಡಮೆ ಆಗತ್ತೆ ಅನ್ನೋ ಆಲೋಚನೆ ಸುಪ್ತಪ್ರಜ್ಞೆಯಲ್ಲಿ ಮನೆಮಾಡಿಕೊಂಡಿದೆಯೇ? ಅವನಿಲ್ಲದಿದ್ದರೆ ನನ್ನ ಸಂಸಾರ ಇನ್ನೂ ಸುಖಮಯವಾಗುವುದಿಲ್ಲವೇ? ಉಹ್ಞೂ, ಆ ಅರ್ಥದಿಂದ ನಾನು ಅವನಿಗೆ ಮದುವೆಯ ಸೂಚನೆ ಕೊಡ್ಲಿಲ್ಲ. ಒಂದು ಅಂಶ ಬಿಟ್ಟು, ಮಿಕ್ಕ ಎಲ್ಲದರಲ್ಲೂ ನಮ್ಮ ಹಾಗೆಯೇ ಇರೋನಿಗೆ ಆ ಸುಖ ಯಾಕೆ ಕಡಮೆಯಾಗಬೇಕು ಅನ್ನುವ ಬುದ್ಧಿಯಲ್ಲವೇ ತನ್ನದು? ಹೋಗಲಿ. ಮದುವೆ ಬೇಡ. ಹೇಗಾದರೂ ಆ ಸುಖಪಡಿ ಅಂತ ಹೇಳಲೇ. ಥೂ, ನನ್ನ, ಇಂಥದನ್ನೇನಾ ನಾನು ಹೇಳೋದು. ಯಾವಳಾದರೂ ಸೂಳೇ ಮನೆಗೆ ಹೋಗು ಅಂತ ಅಣ್ಣ ತಮ್ಮನಿಗೆ ಹೇಳೋಕಾಗತ್ತಾ? ಅಥವಾ ಅವನೇ ಇಂಥ ಪ್ರಯತ್ನವೇನಾದರೂ ಮಾಡಿದಾನೆಯೋ? ಹಾಗಂದು ಕೊಂಡಾಗ ನನ್ನ ಕಲ್ಪನೆ ಹರಡಿಕೊಳ್ಳುತ್ತೆ. ಇವನು ಯಾವಳಾದರೂ ಒಬ್ಬಳ ಜೊತೆ ಮಲಗಿರುವಾಗ ಇವನಿಗೆ ಅಟ್ಯಾಕ್ ಆದರೆ ಅವಳ ಗತಿ ಏನಾಗಬೇಕು? ಇನ್ನೊಂದು ಸಲ ಇವನನ್ನು ಹತ್ತಿರ ಸೇರಿಸ್ತಾಳಾ? ಮದುವೆಯಾದರೂ ಹೆಂಡತಿಗೂ ಇದೇ ತಾನೇ ಆಗೋದು ಅನ್ನಿಸಿ ನನ್ನ ಕಲ್ಪನೆ ಇನ್ನೂ ಉಗ್ರವಾಗುತ್ತದೆ. ಹೆಂಡತಿ ಅಂದಾಗ ರಮ ನೆನಪಿಗೆ ಬರುತ್ತಾಳೆ. ನನಗೂ ಏನಾದರೂ ಮೂರ್ಛೆ ಬಂದು ಗಿಂದಿದ್ದಿದ್ದರೆ ರಮ ಹೇಗಿರ್ತಾ ಇದ್ದಳು. ಭಯವಾಗುತ್ತೆ. ಶಶಿ ತುಂಬ ಸಮಜಂಸವಾಗಿ ಯೋಚನೆ ಮಾಡ್ತಾನೇನೋ ಅನ್ನಿಸಿ ಗೌರವವುಂಟಾಗುತ್ತೆ.

ಮದುವೆ ಅಂದರೆ ಬರೀ ಸುಖ ಅಲ್ಲವಲ್ಲ. ಜವಾಬ್ದಾರಿ ಬೇರೆ. ಹೆಂಡತಿಯನ್ನ ನೋಡ್ಕೊಳ್ಳೋದರ ಜೊತೆಗೆ ಮುಂದೆ ಮಕ್ಕಳೂ ಆಗ್ತವಲ್ಲ. ಅವನ್ನ ಸಾಕಬೇಕು. ಅಕಸ್ಮಾತ್ ಮಗುವಿಗೇನಾದರೂ ರೋಗ ಬಂದರೆ ಎದೆ ಡವಡವಗುಟ್ಟುತ್ತದೆ. ಸುಷ್ಮಾ, ಪೃಥ್ವಿಯರು ನೆನಪಾಗುತ್ತಾರೆ. ನಮ್ಮ ವಂಶದಲ್ಲಿರೋ ಶಶಿಗೆ ಬಂದ ಕಾಯಿಲೆ ನನ್ನ ಮಕ್ಕಳಿಗೆ ಬಂದರೆ! ಬರೋದಕ್ಕೆ ಅಡ್ಡಿಯೇನಿಲ್ಲವಲ್ಲ ಎನ್ನಿಸಿ ವಿಲಕ್ಷಣ ಸಂಕಟವಾಗುತ್ತೆ. ಎಷ್ಟೋ ಸಲ ಪೃಥ್ವಿಯೊ ಸುಷ್ಮಾನೋ ಎಲ್ಲೋ ನೆಟ್ಟನೋಟದಿಂದ ನೋಡ್ತಾ ಇದ್ದರೆ ತಕ್ಷಣ ಅವತ್ತು ಊಟ ಮಾಡ್ತಾ ಇರೋವಾಗ ಶಶಿ ನೋಡ್ತಿದ್ದನಲ್ಲ, ಆ ದೃಶ್ಯ

ನೆನಪಾಗುತ್ತದೆ. ಅವರನ್ನು ಮೈ ಹಿಡಿದು ಅಲುಗಿಸಿ ಯಾಕೋ ಎಂದು ಕೇಳುತ್ತೇನೆ. ಅವರು ನನ್ನ ಅಲುಗಿಸುವಿಕೆಯಿಂದ ಗಾಬರಿಯಾಗಿ "ಯಾಕಣ್ಣ, ಅದನ್ನ ನೋಡ್ತಾ ಇದ್ದೆ ಅಷ್ಟೆ" ಎಂದು ಅಸಮಾಧಾನದಿಂದ ಹೇಳುತ್ತಾರೆ. ಸುಷ್ಮಾಳ ವಯಸ್ಸಿನಲ್ಲಲ್ಲವೇ ಶಶಿಗೆ ಮೊದಲಬಾರಿ ಹಾಗಾದದ್ದು ಅನ್ನಿಸಿ ಅವಳನ್ನು ನೋಡಿದರೆ ಏನು ಗತಿಯೋ ಎಂಬ ತವಕವುಂಟಾಗುತ್ತದೆ. ಅದಕ್ಕೇ ಇರಬೇಕು ರಮ ಕೂಡ ಮಕ್ಕಳನ್ನು ಶಶಿಯು ಹತ್ತಿರ ಬಿಡುವುದಕ್ಕೆ ಹೆದರ್ತಾಳೆ. ಜೊತೆಗಿದ್ದಾಗ, ಅವನಿಗೆ ಮೂರ್ಛೆ ಬಂದು ಅದರಿಂದ ಏನಾದರೂ ಆಗಬಹುದೆಂಬ ಗಾಬರಿಯ ಜೊತೆಗೆ, ಹುಡುಗರಿಗೂ ಈ ರೋಗ ಬಂದರೆ ಎಂಬ ಕಲ್ಪನೆ ಅವಳಿಗುಂಟಾಗುತ್ತಿರಬೇಕೇನೋ. ಅದರಿಂದಲೇ ಶಶಿಯ ಬಗ್ಗೆ ಅವಳ ಅಸಹನೆ ಇರಬೇಕು ಅನ್ನಿಸುತ್ತೆ. ಇದರಲ್ಲೇನೂ ಅಸಹಜತೆಯಿಲ್ಲವಲ್ಲ. ನಾನು ಯಾಕೆ ಅವಳ ಬಗ್ಗೆ ಕೆಲವು ಸಾರಿ ಕ್ರೂರವಾಗಿ ಆಲೋಚನೆ ಮಾಡ್ತೀನಿ?

೨

ಅಂದುಕೊಂಡಿದ್ದಂತೆ ನಿನ್ನೆ ರಾತ್ರಿಯೇ ಒಂದು ಕಂಪ್ಲೇಂಟನ್ನು ತಯಾರುಮಾಡಿದ್ದೆ. ಇಷ್ಟು ವರ್ಷ ವಯಸ್ಸಿನ, ಇಷ್ಟು ಅಳತೆ ಎತ್ತರವಿರುವ ನನ್ನ ತಮ್ಮ ಮೂರು ದಿನಗಳಿಂದ ಕಾಣೆಯಾಗಿದ್ದಾನೆ ಎಂದು ಅದರ ಒಕ್ಕಣೆ. ಆದರೆ ಏನೋ ನೆನಪಿಗೆ ಬಂದು ಅದನ್ನು ಹರಿದು ಮೊದಲಿನಿಂದ ಬರೆದೆ; ಅವನಿಗೆ ತುಂಬ ದಿನಗಳಿಂದ ಫಿಟ್ಸ್ ಕಾಯಿಲೆಯಿತ್ತು ಎಂಬುದನ್ನು ಸೇರಿಸಿ ಬರೆದೆ. ಪಕ್ಕದ ಮನೆಯ ಪ್ರಭಾಕರರಾಯರಿಗೆ ಮೊದಲೇ ತಿಳಿಸಿದ್ದೆ; ನನ್ನ ಜೊತೆಯಲ್ಲಿ ಪೋಲೀಸ್ ಸ್ಟೇಷನ್‌ವರೆಗೂ ಬರಬೇಕು ಎಂದು. ನಾನೊಬ್ಬನೇ ಓಡಾಡಲಾರನೇನೋ ಅನ್ನಿಸಿತ್ತು; ಒಬ್ಬರಿಗಿಂತ ಇಬ್ಬರು ಮೇಲು ಎಂದುಕೊಂಡು ಅವರನ್ನು ಒಪ್ಪಿಸಿದ್ದೆ,

ಬೆಳಗ್ಗೆ ಎದ್ದವನೇ ರೆಡಿಯಾಗತೊಡಗಿದೆ. ಯಾಕೋ ದಿನಕ್ಕಿಂತ ಇವತ್ತು ಲೇಟಾಗಿ ಎಚ್ಚರವಾಗಿತ್ತು. ರಮ ಕೂಡ ಎಬ್ಬಿಸಲಿಲ್ಲ. ಅವಳಿಗೆ ಈ ವಿವರವನ್ನೆಲ್ಲ ಹೇಳಿರಲಿಲ್ಲ. ಆದಷ್ಟು ಮಟ್ಟಿಗೆ, ಮೂರು ದಿನಗಳಿಂದ ಶಶಿ ಮನೆಗೆ ಬಂದಿಲ್ಲ ಎಂಬ ವಿಚಾರವು ಇತರರಲ್ಲಿ ಹಬ್ಬಬಾರದೆಂದು ನಿಗಾ ವಹಿಸಿದ್ದೆ; ಸುಮ್ಮನೆ ಮನೆಯ ವಿಷಯವೆಲ್ಲ ಬೀದಿಗುಲ್ಲು ಏಕಾಗಬೇಕು. ಕಂಪ್ಲೇಂಟ್ ವಿಚಾರವನ್ನೂ ಅಷ್ಟೊಂದು ವಿವರವಾಗಿ ರಮಾಗೆ ಹೇಳಿರಲಿಲ್ಲ. ಬಾರದಿದ್ದರೆ ಪೋಲೀಸರಿಗೆ ವಿಚಾರ ತಿಳಿಸಬೇಕೆಂದೇನೋ ಒಮ್ಮೆ ಸೂಚಿಸಿದ್ದೆ, ಅಷ್ಟೆ. ಪ್ರಭಾಕರರಾವ್‌ಗೆ ಎಂಟೂವರೆ ಗಂಟೆಗೇ ಮನೆ ಬಿಡೋಣವೆಂದು ಹೇಳಿದ್ದೆ. ಸ್ಟೇಷನ್ನಿಗೆ ಹೋಗಿ ಕಂಪ್ಲೇಟ್ ಕೊಟ್ಟು ವಾಪಸ್ಸು ಬಂದರೆ ಆಫೀಸಿಗೆ ಹೋಗಲು ಅವರಿಗೆ ಅನುಕೂಲವಾಗುತ್ತದೆ.

ಮೊದಲು ಒಂದು ಲೋಟ ಕಾಫಿ ಕುಡಿದು ಶೇವ್ ಮಾಡಕೊಂಡು ಸ್ನಾನಕ್ಕೆ ಹೊರಟೆ. ಹಂಡೆಯಲ್ಲಿ ನೀರು ಮರಳುತ್ತಿತ್ತು. ನನಗೆ ಸ್ವಲ್ಪ ಬಿಸಿಬಿಸಿಯೇ ಆಗಬೇಕು ಸ್ನಾನದ ನೀರು. ಶಶಿ ಎಂದೂ ಬಿಸಿ ನೀರು ಸ್ನಾನ ಮಾಡಿದವನಲ್ಲ. ಬಿಸಿನೀರಿಗಿಂತ ತಣ್ಣೀರು ವಾಸಿಯೆಂದು ಡಾಕ್ಟರು ಹೇಳಿದ್ದರು. ಮಿದುಳಿನ ವಿದ್ಯುತ್ ಡಿಸ್ಚಾರ್ಜ್‌ನ್ನು ಸ್ವಲ್ಪವಾದರೂ ತಣಿಸಬಹುದೆಂದು ತಣ್ಣೀರು ಸ್ನಾನವನ್ನೇ ಮಾಡಬೇಕೆಂದು ಸಲಹೆಯಿತ್ತಿದ್ದರು. ಆದರೆ ಶಶಿಯದು ಸ್ವಲ್ಪ ಪರುಠಾವಣೆ ಹೆಚ್ಚು. ಮೈಗೆ ಸಾಬೂನು ಎರಡೆರಡು ಬಾರಿ ಹಾಕಿಕೊಂಡು ತಿಕ್ಕಿ ತಿಕ್ಕಿ ಸ್ನಾನಮಾಡುವವನು. ಬೇರೆಯವರಂತೆ ಏನಾದರೂ ಗುನುಗಿಕೊಂಡು ಸ್ನಾನಮಾಡುವ ಸ್ವಭಾವವಲ್ಲ ಅವನದು: ಹೀಗಾಗಿ ಹೆಚ್ಚು ಹೊತ್ತು ಅವನು ಬಚ್ಚಲಮನೆಯಲ್ಲಿದ್ದರೆ ಎಷ್ಟೋ ಸಲ ಗಾಬರಿಯಾಗಬೇಕು. ಅಂತಹ ಸ್ನಾನದ ವೈಖರಿ ಅವನದು.

ಇನ್ನೂ ಟೈಮಿದೆಯಲ್ಲ ಎಂದುಕೊಂಡು ಸ್ನಾನಮಾಡುತ್ತಿದ್ದೇನೆ. ಅಷ್ಟರಲ್ಲಿ ರಮ ಬಂದು ಬಾಗಿಲು ತಟ್ಟಿದಳು. "ಏನೇ?" ಎಂದು ಸಿಡುಕಿದೆ. "ಪ್ರಭಾಕರ ರಾವ್ ಬಂದಿದಾರೆ ಕಣ್ರೀ" ಅಂದಳು. "ಟೈಂ ಎಷ್ಟು?" ಎಂದೆ, "ಎಂಟಕ್ಕೆ ಹತ್ತು

ನಿಮಿಷವಿದೆ" ಅಂದಾಗ ಅದ್ಯಾಕೆ ಪ್ರಭಾಕರರಾವ್ ಇಷ್ಟು ಬೇಗ ಬಂದರು ಅಂದು ಕೊಂಡೆ, ಎಂಟೂವರೆಗಲ್ಲವೇ ಹೋಗೋಣ ಅಂದಿದ್ದು. ಎಂಟು ಗಂಟೆ ಅಂದುಕೊಂಡೇನಾದರೂ ಬೇಗ ಬಂದರೋ ಅನ್ನಿಸಿತು. "ಕೂತಿರು ಅಂತ ಹೇಳು, ಕಾಫಿ ಕೊಡು" ಅಂದೆ ಒಳಗಿನಿಂದಲೇ. ಅವಳು ಹೋದಳೆಂದು ಕಾಣಿಸುತ್ತದೆ. ಹಾಲಿನಿಂದ ಅವಳು ಪ್ರಭಾಕರರಾವ್ ಮಾತನಾಡುತ್ತಿದ್ದ ಶಬ್ದ ಮೆಲ್ಲಗೆ ಕೇಳಿಸುತ್ತಿತ್ತು. ಇನ್ನೂ ಬೇಕಾದಷ್ಟೂ ಸಮಯವಿದ್ದರೂ ಅವರು ಬಂದು ಕಾಯುತ್ತಿದ್ದಾರೆ ಪಾಪ, ಅವರನ್ನೇಕೆ ಕಾಯಿಸಬೇಕು. ಬೇರೆ ಏನಾದರೂ ಕೆಲಸವಿರಬಹುದು ಅದಕ್ಕೇ ಇನ್ನೂ ಬೇಗ ಹೋಗೋಣವೆಂದು ಬಂದಿರಬೇಕು ನಾಪತ್ತೆಯಾಗಿರುವವನು ನನ್ನ ತಮ್ಮ ಅವನನ್ನು ಹುಡುಕಲು ನನಗಿಂತ ಮೊದಲು ಅವರೇ ತಯಾರಾಗಿ ಬಂದಿದ್ದಾರೆ, ನಾನಿನ್ನೂ ಸಾವಕಾಶವಾಗಿದ್ದೇನಲ್ಲ ಅನ್ನಿಸಿ ನಾಚಿಕೆಯಾಯಿತು.

"ಐ ಯಾಮ್ ಸಾರಿ, ನಿಮ್ಮನ್ನು ಕಾಯಿಸಿ ಬಿಟ್ಟೆ" ಎಂದು ಹೇಳಿಕೊಂಡೇ ಬಚ್ಚಲು ಮನೆಯಿಂದ ಹಾಲಿನ ಕಡೆ ಅವಸರವಸರವಾಗಿ ಬಂದೆ. ಪ್ರಭಾಕರರಾವ್ ಕುರ್ಚಿಯಲ್ಲಿ ಕೂತಿದ್ದರು. ಆದರೆ ನಾನು ನಿರೀಕ್ಷಿಸಿದ ಹಾಗೆ ಅವರು ತಯಾರಾಗಿ ಬಂದಿರಲಿಲ್ಲ. ಪಂಚೆ ಬನೀನುಗಳಲ್ಲಿಯೇ ಇದ್ದರು. ಇದ್ಯಾಕೆ ಇವರು ಹೀಗೆ ಅಂದುಕೊಂಡೆ. "ಇದೇನು ಪ್ರಭಾಕರ ರಾವ್, ಹೀಗೆ?" ಎಂದೆ ಕುತೂಹಲದಿಂದ, ಏನಿಲ್ಲ ಒಂದು ವಿಷಯ....' ಅಂದರು ಅನುಮಾನಿಸುತ್ತ. ಓ, ಇವರಿಗೆ ಜೊತೆಗೆ ಬರಕ್ಕಾಗಲ್ಲವೇನೊ ಅದಕ್ಕೇ ಹೀಗೆ ರಾಗವೆಳೆಯುತ್ತಿದ್ದಾರೆ. ಇವರು ಬರಲು ಆಗದಿದ್ದರೆ ಇನ್ಯಾರನ್ನು ಕರೆದುಕೊಂಡು ಹೋಗುವುದು ಎಂಬ ಚಿಂತೆಯಲ್ಲಿ ಮುಳುಗಿದೆ. ಅದೇ ಗುಂಗಿನಲ್ಲಿ ಬಟ್ಟೆ ಹಾಕಿಕೊಳ್ಳಲು ನನ್ನ ರೂಮಿನ ಕಡೆ ಧಾವಿಸಿದೆ. ಪ್ರಭಾಕರರಾವ್ ನನ್ನನ್ನು ಹಿಂಬಾಲಿಸಿದರು. ಇನ್ನೇನಾದರೂ ಗುಟ್ಟಿನ ಸಮಾಚಾರವಿರಬಹುದೇ ಎಂಬ ಅನುಮಾನವಾಯಿತು. ಅವರ ಮುಖವನ್ನು ನೋಡಿದೆ. ಅವರು ಆ ಕಡೆ ಈ ಕಡೆ ನೋಡಿದರು. ರಮಳಾಗಲೀ ಮಕ್ಕಳಾಗಲೀ ಇರಲಿಲ್ಲ. ನಾನು ಬಂದದ್ದು ಕಂಡು ರಮ ಒಳಗೆ ಹೋಗಿದ್ದಳು. ಮಕ್ಕಳೆಲ್ಲಿದ್ದರೋ; ಪ್ರಾಯಶಃ ಎಂದಿನಂತೆ ಕಾಫಿ ಕುಡಿದು ಪಕ್ಕದ ಮನೆಗೆ ಹೋಗಿರಬೇಕು. ಯಾರೂ ಇಲ್ಲದ್ದನ್ನು ಕಂಡು ಅವರು ಮೆಲುದನಿಯಲ್ಲಿ "ಇವತ್ತಿನ ಪೇಪರ್ ನೋಡಿದಿರಾ?" ಎಂದರು. ಹೌದು ಬೆಳಿಗ್ಗೆ ತಡವಾಗಿ ಎದ್ದದ್ದು. ಬೇಗ ಹೋಗಬೇಕೆಂಬ ತರಾತುರಿ ಇವುಗಳಿಂದ ಪೇಪರ್ ನೋಡಿರಲಿಲ್ಲ. ಪ್ರತಿನಿತ್ಯ ಮುಖ ತೊಳೆದು ಪೇಪರೋದುತ್ತಿದ್ದ ಹವ್ಯಾಸದ ನನಗೆ ಇವತ್ತು ಪೇಪರಿನ ನೆನಪೇ ಬಂದಿರಲಿಲ್ಲ. "ಇಲ್ಲ, ಏನಾದರೂ ವಿಶೇಷವಿದೆಯೇನು?" ಎಂದು ಕೇಳಿದೆ ಕುತೂಹಲದಿಂದ.

ಅವರ ಕೈಯಲ್ಲಿ ಪೇಪರಿತ್ತು. ಬಾಗಿಲನ್ನು ನಿಧಾನವಾಗಿ ಮುಂದೆ ಮಾಡಿ ಬಂದರು. ಕುರ್ಚಿಯಲ್ಲಿ ಕುಳಿತರು. "ಬಟ್ಟೆ ಹಾಕಿಕೊಳ್ಳಿ" ಅಂದರು. "ಯಾಕೆ, ಏನು ಹೇಳಿ, ಆಮೇಲೆ ಬಟ್ಟೆ ಹಾಕಿಕೊಂಡರಾಯಿತು" ಎಂದು ಅವರ ಬಳಿಗೆ ಹೋದೆ. ಅವರು ಪೇಪರನ್ನು ತೆಗೆದು ಒಳಗಿನ ಯಾವುದೋ ಒಂದು ಪುಟದ ಒಂದು ಕಾಲಂ ಕಡೆ ಬೆರಳು ಬಡಿದು "ನೋಡಿ" ಅಂದರು. ಗುರುತಿಸಲಾಗದ ಶವವೊಂದರ ಪತ್ತೆ ಎಂಬ ಶೀರ್ಷಿಕೆಯಲ್ಲಿ ಸುದ್ದಿಯೊಂದು ಪ್ರಕಟವಾಗಿತ್ತು. ಅದರ ಕಡೆಗೆ ಕಣ್ಣೋಡಿತು: ಅದರಲ್ಲಿದ್ದ ವಿಷಯವಿಷ್ಟು: ಸುಮಾರು ಮೂವತ್ತೆರಡು– ಮೂವತ್ತಮೂರು ವರ್ಷ ವಯಸ್ಸಿನ ಗಂಡಸಿನ ದೇಹವೊಂದು ಬಾಣಸವಾಡಿಯ ಹತ್ತಿರದ ಒಂದು ಬಾವಿಯಲ್ಲಿ ತೇಲುತ್ತಿದ್ದುದು ಪತ್ತೆಯಾಗಿದೆ. ಅದನ್ನು ಗುರುತಿಸ ಲಾಗಲಿಲ್ಲ. ವ್ಯಕ್ತಿಗೆ ಸಂಬಂಸಿದೆಯೆಂದು ನಂಬಲಾದ ಬಟ್ಟೆಗಳು ಪೋಲೀಸರ ವಶದಲ್ಲಿವೆ. ಸಂಬಂಧಪಟ್ಟವರು ಯಾರಾದರೂ ಇದ್ದರೆ ಪೋಲೀಸರನ್ನು ಸಂಪರ್ಕಿಸ ತಕ್ಕದ್ದು ಎಂದು ಪ್ರಿಂಟಾಗಿತ್ತು. ಎದೆ ಧಸಕ್ಕೆಂದು ಸಿಡಿಲು ಬಡಿದಂತಾಯಿತು. ವಯಸ್ಸು ನೋಡಿದರೆ ಶಶಿಯ ವಯಸ್ಸಿಗೆ ಹತ್ತಿರವೇ, ಆದರೆ ಬಾಣಸವಾಡಿಯಲ್ಲಿ, ನಮ್ಮ ಮನೆಯಲ್ಲಿ, ಅಲ್ಲಿಗೆ ಅವನೇಕೆ ಹೋಗಿರುತ್ತಾನೆ ಎಂಬ ಸಂಶಯ ಕಾಡಿತು. ಆದರೆ ಇಲ್ಲದ ಅಧೈರ್ಯ ನನ್ನನ್ನಾವರಿಸಿತು. ನನ್ನ ದೃಷ್ಟಿ ಪ್ರಭಾಕರರಾಯರ ಕಡೆ ಹರಿಯಿತು. ನನ್ನನ್ನು ಪ್ರಾಯಶಃ ನೋಡುತ್ತಿದ್ದ ಅವರು ನಾನು ಅವರತ್ತ ಮುಖ ಮಾಡಿದ ಕೂಡಲೇ "ನೋಡಿ, ಈ ಸುದ್ದಿ

ಓದಿದಾಗ ನಿಮಗೆ ತೋರಿಸಬೇಕು ಅಂತ ಬಂದೆ. ಇದು ಶಶಿಗೆ ಸಂಬಂಧಪಟ್ಟದ್ದು ಹೌದೋ ಅಲ್ಲವೋ ಯಾರಿಗೆ ಗೊತ್ತು. ನೀವು ರೆಡಿಯಾಗಿ. ನಾನು ಒಂದೈದು ನಿಮಿಷದಲ್ಲಿ ಬಂದ್ಬಿಡ್ತೀನಿ" ಅಂದರು. ನಾನು "ಹ್ಞೂ" ಎಂದು ಮೆಲ್ಲಗೆ ಉಸುರಿದೆ. ಅವರು ಹೊರಟರು. ನಾನು ಬೇಗ ಡ್ರೆಸ್ ಮಾಡಿಕೊಳ್ಳತೊಡಗಿದೆ.

– – –

ತರಾತುರಿಯಿಂದ ತಲೆ ಬಾಚಿಕೊಂಡೆ. "ಏನಾದರೂ ತಿಂಡಿ ಮಾಡಲೇನು?" ಎಂದು ರಮ ಕೇಳಿಕೊಂಡು ಬಂದಳು. "ಏನೂ ಬೇಡ" "ಇನ್ನೂ ಇಪ್ಪತ್ತು ನಿಮಿಷ ಇದೆ ಕಣ್ರೀ. ಎಂಟೂವರೆಗೆ ತಾನೇ ಎಲ್ಲೋ ಹೋಗ್ಬೇಕು ಅಂತಿದ್ದದ್ದು, ಪ್ರಭಾಕರರಾಯರು ಈಗ ಹೋಗಿದ್ದಾರೆ. ಅವರು ಬರೋದರೊಳಗೆ ಏನಾದರೂ ಮಾಡಬಹುದು" ಎಂದಳು. ಅವಳ ಮಾತು ಕೇಳಿ ಸಿಟ್ಟು ಬಂತು. "ಏನೂ ಬೇಡಾಂತ ಹೇಳ್ಲಿಲ್ಲವೇನೇ. ಸುಮ್ಮನೆ ಯಾಕೆ ಹರಟುತ್ತೀ" ಎಂದು ಸಿಡುಕಿದೆ. "ಹೋಗಲಿ ಬಿಡಿ" ಎಂದು ಪೆಚ್ಚಾಗಿ ಒಳಹೋದಳು. ಅವಳಿಗೆ ವಿಷಯ ಗೊತ್ತಾಗಿದ್ದರೆ ಇಷ್ಟೊತ್ತಿಗೆ ರಂಪ ಮಾಡಿ ಬಿಡುತ್ತಿದ್ದಳು. ಪ್ರಭಾಕರರಾವ್ ಹೊರಗಿನಿಂದ. ಕೂಗುತ್ತಿದ್ದುದು ಕೇಳಿಸಿತು. "ಬನ್ನಿ. ರೆಡಿಯಾಗಿದೀನಿ, ಹೋಗೋಣ."

ರಮಳಿಗೆ "ನಾನೆಷ್ಟು ಹೊತ್ತಿಗೆ ಬರುತ್ತೇನೋ ಯಾತಕ್ಕೂ ಕಾಯಬೇಡ" ಎಂದು ಹೇಳಿ ಹೊರಟೆ. ಹೊರಗೆ ಬಂದಾಗ ಮನೆಯೊಳಗಿದ್ದಾಗ ಉಂಟಾದಷ್ಟು ತಹತಹ ಇಲ್ಲವೆನಿಸಿತು. ಜೊತೆಗೆ ಪ್ರಭಾಕರರಾವ್ ಇದ್ದುದರಿಂದ ಏನೋ ಧೈರ್ಯವುಂಟಾದ ಹಾಗೆ ಕಾಣಿಸಿತು. ಒಂದಷ್ಟು ದೂರ ಹೋಗಿ ಮನೆ ಮರೆಯಾದ ಮೇಲೆ ಅವರು "ಕಂಪ್ಲೇಂಟ್ ಬರೆದಿದ್ದೀರೋ ಇಲ್ಲ ಅಲ್ಲೇ ಬರಕೊಡ್ತೀರೋ?" ಎಂದು ಪ್ರಶ್ನಿಸಿದರು.

"ನಿನ್ನೆ ರಾತ್ರೀನೇ ಬರದಿಟ್ಟಿದ್ದೆ" ಎಂದು ಜೇಬುಗಳನ್ನು ತಡಕಾಡಿ ಅದನ್ನು ಹೊರತೆಗೆದು ಮಡಿಕೆಗಳನ್ನು ಬಿಚ್ಚಿ ಅವರ ಕೈಗೆ ಇತ್ತೆ. ಅವರು ಓದಿಕೊಂಡು "ಒಂದ್ಕೆಲಸ ಮಾಡಿ" ಎಂದರು. ನಾನವರ ಕಡೆ ನೋಡಿದೆ.

"ಇದನ್ನು ಮೊದಲೇ ಕೊಡಬೇಡಿ. ಪೇಪರ್‌ನಲ್ಲಿ ಸುದ್ದಿ ಬಂದಿದೆಯಲ್ಲ. ಅದರ ವಿಷಯ ಕೇಳಿ ತಿಳಿದುಕೊಳ್ಳೋಣ. ಆ ಮೇಲೆ ಇದು" ಎಂದು ಅದರ ಮೇಲೆ ಬೆರಳಿಂದ ಬಡಿದು ಹೇಳಿದರು.

"ಹ್ಞೂಂ" ಎಂದು ಮುಂದೆ ಸಾಗಿದೆ.

ನಮ್ಮ ಏರಿಯಾದ ಪೋಲೀಸ್ ಸ್ಟೇಷನ್ನಿಗೆ ಬಂದೆವು. ಹೊರಗಡೆ ಒಬ್ಬ ಕಾನ್‌ಸ್ಟೇಬಲ್ ನಿಂತಿದ್ದ. ನಮ್ಮನ್ನು ಕಂಡೊಡನೆ "ಏನು ಬೇಕಾಗಿತ್ತು ಸಾರ್?" ಅಂದ.

"ಇನ್‌ಸ್ಪೆಕ್ಟರ್ ಇದಾರಾ?"

"ಮನೇಲಿದಾರೆ: ಬತ್ತಾರೆ, ಕುಂತ್ಕಳಿ."

"ಎಷ್ಟು ಹೊತ್ತಾಗತ್ತೆ ಅವರು ಬರೋದು?"

"ಪಕ್ಕದಾಗೇ ಅವರ ಮನೆ ಸಾರ್. ಶಿವಪೂಜೆ ಮುಗಿಸಿ ಬಂದ್ಬಿಡ್ತಾರೆ" ಎಂದು ಹೇಳಿ ನಮ್ಮನ್ನು ಒಂದು ಬೆಂಚಿನ ಕಡೆ ಕಳಿಸಿದ.

ಮತ್ತೆ ಕಾಯುವ ಕೆಲಸ. ಅಂತೂ ಇಂತೂ ಒಂದು ಇಪ್ಪತ್ತು ನಿಮಿಷವಾದ ಮೇಲೆ ಇನ್‌ಸ್ಪೆಕ್ಟರ್‌ರ ಸವಾರಿ ಬಂತು. ಅವರು ರೂಮಿನಲ್ಲಿ ಹೋಗಿ ಕೂತು ಕೊಂಡ ಮೇಲೆ ನಾವಿಬ್ಬರೂ ಹಿಂಬಾಲಿಸಿದೆವು, ನಮಸ್ಕಾರ ಮಾಡಿದೆವು. ತಲೆ

ಹೀಗಾಡಿಸಿ ಬನ್ನಿ ಅಂದರು, ಒಳಹೊಕ್ಕಾಗ ಅವರು ತೋರಿಸಿದ, ಅವರ ಟೇಬಲ್ಲಿನ ಮುಂದಿದ್ದ ಕುರ್ಚಿಗಳಲ್ಲಿ ಕೂತೆವು. "ಏನಾಗಬೇಕಾಗಿತ್ತು?" ಎಂಬ ಪ್ರಶ್ನೆ ಕಿವಿಗೆ ಬಿದ್ದಾಗ ನಾನು ಪ್ರಭಾಕರ ರಾಯರ ಮುಖ ನೋಡಿದೆ. ಅವರೂ ನನ್ನೆಡೆಗೆ ತಿರುಗಿದರು. ನನ್ನ ಮುಖವನ್ನು ಓದಿದವರ ಹಾಗೆ ಅವರು ತಮ್ಮ ಪ್ಯಾಂಟಿನ ಹಿಪ್ ಪಾಕೆಟ್‌ನಲ್ಲಿದ್ದ ಕಾಗದ ತೆರೆದರು. ಅದು ನಮ್ಮ ಸುದ್ದಿಯ ಭಾಗವಿದ್ದ ನ್ಯೂಸ್ ಪೇಪರ್ ಕಟಿಂಗ್. ಅದನ್ನು ಬಿಚ್ಚಿ ಇನ್‌ಸ್ಪೆಕ್ಟರ್ ಕಡೆ ಚಾಚುತ್ತ "ಸಾರ್, ಈ ನ್ಯೂಸ್ ವಿಷಯದ ಬಗ್ಗೆ ನಿಮ್ಮ ಆಫೀಸಿನಲ್ಲಿ ಮಾಹಿತಿಯಿದೆಯಾ?" ಎಂದರು.

ಇನ್‌ಸ್ಪೆಕ್ಟರ್ ಪೇಪರ್ ಕಟಿಂಗ್ ಕೈಗೆತ್ತಿಕೊಂಡು ಅದನ್ನು ಓದಿದರು. ಕಾನ್‌ಸ್ಟೇಬಲ್ ಒಬ್ಬನನ್ನು ಕರೆದು ಯಾವುದೋ ಫೈಲ್ ಎತ್ತಿಕೊಡಲು ಹೇಳಿ ಮತ್ತೆ ಪೇಪರಿನ ಭಾಗ ಓದಲು ತೊಡಗಿದರು, ಅದನ್ನು ಹಿಂದೆ ಮುಂದೆ ತಿರುಗಿಸಿದರು. ಫೈಲಿನಲ್ಲಿ ಒಂದೆರಡು ಹಾಳೆಗಳನ್ನು ತಿರುಗಿಸಿ, ಪೇಪರ್ ಕಟಿಂಗ್‌ನತ್ತ ನೋಡಿ, ಒಂದು ಕಾಗದವನ್ನು ಓದುತ್ತ "ಯಾಕೆ ನಿಮ್ಮ ಮನೆಯಲ್ಲಿ ಯಾರಾದರೂ ನಾಪತ್ತೆಯಾಗಿದ್ದಾರಾ?" ಅಂದರು. ಪ್ರಭಾಕರರಾವ್ ಕಡೆ ನೋಡುತ್ತ. ಅವರು ನನ್ನ ಕಡೆ ನೋಡಿ "ಇವರ ತಮ್ಮ ಸರ್" ಎಂದರು.

"ಕಂಪ್ಲೇಂಟ್ ಯಾಕೆ ಮೊದಲೇ ಕೊಡಲಿಲ್ಲ?" ಎಂದರು. ಅವರ ಧ್ವನಿ ಅನವಶ್ಯಕವಾಗಿ ಗಡುಸಾಗಿತ್ತೆಂದು ನನಗೆ ತೋರಿತು.

"ಎಲ್ಲೋ ಹೋಗಿರಬೇಕೆಂದುಕೊಂಡೆವು ಸಾರ್" ಎಂದೆ.

"ಅಲ್ರೀ, ಮೂರು ದಿನದಿಂದ ಮನೆಗೆ ಬರ್ಲಿಲ್ಲ. ಎಲ್ಲಿ ಹೋಗ್ತೀನಿಂತ ಹೇಳಿ ಹೋಗಿಲ್ಲ. ಸ್ವಲ್ಪ ಮುಂಚೇನೆ ನಿಗಾ ವಹಿಸಬೇಕಾಗಿತ್ತು, ಅಲ್ವ?" ಎಂದು ಪ್ರಶ್ನಾರ್ಥಕವಾಗಿ ನಮ್ಮೆಡೆ ನೋಡಿ "ಏನಾದರೂ ವೈಮನಸ್ಯ ಉಂಟಾಗಿತ್ತ?" ಎಂದರು. ನಾನು ಸಣ್ಣಗೆ ಬೆವರಿದೆ. ಗಂಟಲು ಕಟ್ಟಿಕೊಂಡಂತಾಯಿತು. ಉತ್ತರ ಬರಲು ತಡವಾದುದನ್ನು ಕಂಡು ಪ್ರಭಾಕರ ರಾವ್ ನನ್ನ ಕಡೆ ನೋಡಿದರು. ನಾನು ಧೈರ್ಯ ತಂದುಕೊಂಡು "ಅವನು ಎಪಿಲೆಪ್ಟಿಕ್ ಪೇಷಂಟ್ ಸಾರ್" ಎಂದೆ. ಹ್ಞೂ ಎಂದುಕೊಂಡರು, ಒಂದು ಕ್ಷಣದ ನಂತರ. "ಮತ್ತೆ ಮನೇಲಿ ಎಲ್ಲಿ ಹೋಗ್ತೀನಿ ಅಂತ ಹೇಳಿ ಹೋಗ್ಲಿಲ್ಲ ಅಂತ ಹೇಳಿದ್ರೀ" ಅಂದರು. ಈಗ ನನಗೆ ಜ್ಞಾಪಕಕ್ಕೆ ಬಂತು. "ಹಾಗಲ್ಲ ಸರ್, ಅವನು ಫ್ಯಾಕ್ಟರೀಗೆ ಹೋಗೋದಕ್ಕೆಂತ ಹೊರಟ. ಆದರೆ ಮೂರು ದಿವಸದಿಂದ ಮನೆಗೆ ಬರಲಿಲ್ಲ. ಹಿಂದೆ ಒಂದು ಸಾರಿ ಹೀಗೇನೆ ಅವರ ಸ್ನೇಹಿತನ ರೂಮಿನಲ್ಲೇ ಮಲಗಿದ್ದ. ಈಗಲೂ ಹಾಗೇನೇ ಅಂತ ಅಂದು ಕೊಂಡಿವಿ."

"ಹಿಂದೆ ಎಷ್ಟು ದಿವಸ?"

"ಒಂದು ದಿನ."

"ಮತ್ತಿವಾಗ ಮೂರು ದಿನವಾಗಿದೆಯಲ್ಲ. ಹೋಗಲಿ ಫ್ಯಾಕ್ಟರೀಲಿ ವಿಚಾರಿಸಿದಿರಾ?" ಏನು ಹೇಳುವುದೋ ದಿಕ್ಕು ತೋಚದಾಯಿತು. ಅವನುಫ್ಯಾಕ್ಟರೀಗೆ ಹೋಗೇ ಇಲ್ಲವಲ್ಲ, ಆದರೆ ಅದನ್ನು ಹೇಗೆ ಹೇಳುವುದು "ಇಲ್ಲ ಸಾರ್" ಅಂತ, ಸುಳ್ಳು ಹೇಳಿದೆ.

"ಅವನೇನು ಮಗೂನೆ ಸಾರ್, ಮೂವತ್ನಾಲ್ಕು ವರ್ಷ. ಎಲ್ಲಾದಕ್ಕೂ ಅಣ್ಣಂಗೆ ಹೇಳೇ ಹೋಗ್ಬೇಕು ಅಂತ ನಿಯಮ ಹೇಗೆ ಮಾಡೋದು?" ಪ್ರಭಾಕರರಾವ್ ವಿವರಣೆ ನೀಡಿದರು.

"ಅವನಿಗೆ ಆಗಾಗ ಮೂರ್ಛೆ ಬರ್ತಿತ್ತು ಸಾರ್, ಅದಕ್ಕೇ ಹೆದರಿಕೆಯಾಗ್ತಿದೆ" ಎಂದೆ.

"ಸರಿ" ಎಂದು ಇನ್‌ಸ್ಪೆಕ್ಟರು, ನಮ್ಮೆಡೆಯೇ ನೋಡುತ್ತ "ನಮ್ಮಲ್ಲಿ ಡೀಟೈಲ್ಸ್ ಇಲ್ಲ. ಪೇಪರ್‌ನಲ್ಲಿ ಬಂದಿರೋ ಅಷ್ಟೆ ಸುದ್ದಿ ನಮಗೂ ತಲುಪಿಸಿದಾರೆ. ಎಲ್ಲ ವಿಚಾರಾನೂ ಕಮೀಷನರ್ ಆಫೀಸಲ್ಲಿ ಸಿಕ್ಕತ್ತೆ, ಅಲ್ಲಿ ವಿಚಾರಿಸಬೇಕು" ಎಂದರು.

"ಅಲ್ಲಿಗೇ ಹೋಗ್ತೀವಿ ಸಾರ್" ಎಂದು ಮೇಲೆದ್ದೆವು. ಕೈಮುಗಿದು ಅಲ್ಲಿಂದ ಬೀಳ್ಕೊಂಡೆವು. ಆ ಇನ್‌ಸ್ಪೆಕ್ಟರನ ಮಾತಿನ ರೀತಿ ಕಂಡು ಎದೆ ಝಲ್ಲೆನ್ನುತ್ತಿತ್ತು. ಹೊರಗೆ ಬಂದಾಗ ಹಾಯೆನಿಸಿತು.

ಸದ್ಯ, ಕಮೀಷನರ್ ಆಫೀಸಿನಲ್ಲಿ ನಮಗೆ ಬೇರೆ ರೀತಿಯ ಸ್ವಾಗತ ದೊರಕಿತು. ಈ ಕೇಸ್‌ನ ಡೀಲ್ ಮಾಡ್ತಿದ್ದ ಇನ್‌ಸ್ಪೆಕ್ಟರ ಹತ್ತಿರ ಹೋದಾಗ ಅವರು, "ಪ್ಲೀಸ್ ಕಮಿನ್" ಎಂದು ಹೇಳಿ, "ವಾಟ್ ಕೆನ್ ಐ ಡೂ ಫಾರ್ ಯು?" ಎಂದರು. ಅವರು ಹಾಗೆ ಹೇಳಿದ ಧಾಟಿಯಿಂದಲೇ ನನಗೆ ಸ್ವಲ್ಪ ಧೈರ್ಯವುಂಟಾಯಿತು. ಏನೇನೋ ಪ್ರಶ್ನೆಗಳನ್ನು ಆ ಹಿಂದಿನ ಇನ್‌ಸ್ಪೆಕ್ಟರ ಹಾಗೆ ಹಾಕಿ ಕೊಲ್ಲುತ್ತಾರೇನೋ ಅಂದುಕೊಂಡಿದ್ದ ನನಗೆ ಸಮಾಧಾನ ಬಂತು. ಅವರು ಪ್ರಶ್ನೆ ಕೇಳಿದಾಗ ಯಥಾ ಪ್ರಕಾರ ನನ್ನ ಮುಖ ಪ್ರಭಾಕರರಾವ್ ಕಡೆ ತಿರುಗಿತು, ಅವರೇ ಅದರ ಪ್ರಸ್ತಾಪ ಮಾಡಿದರು.

ಪ್ರಭಾಕರರಾವ್ ಸುದ್ದಿಯ ವಿಚಾರ ಹೇಳಿ ಮುಗಿಸಿದ ಮೇಲೆ ನಾನು "ನನ್ನ ತಮ್ಮನಿಗೆ ಎಪಿಲೆಪ್ಸಿ ಸಾರ್. ತುಂಬ ಆತಂಕ ಅದಕ್ಕೋಸ್ಕರವೇ" ಅಂದೆ. "ನ್ಯಾಚುರಲ್" ಅಂದರು. "ಡೀಟೈಲ್ಸ್ ಬೇಕಲ್ಲ ಸಾರ್" ಎಂದೆ. ಅವರೇ ಎದ್ದು ಒಂದು ಫೈಲು ತೆಗೆದು ಆ ವಿಚಾರ ಹೇಳತೊಡಗಿದರು. ಮೊನ್ನೆ ಮಧ್ಯಾಹ್ನ ಯಾರೋ ಕಮೀಷನರ್ ಆಫೀಸಿಗೆ ಫೋನ್ ಮಾಡಿದರಂತೆ. ಬಾಣಸವಾಡಿಯ ಹನುಮಂತರಾಯನ ಗುಡಿಯಿದೆಯಲ್ಲ. ಅದರ ಕಾಂಪೌಂಡಿನ ಆಚೆ ಯಾರದೋ ಬಟ್ಟೆಗಳು ಮಡಿಸಿಟ್ಟಿದ್ದು ಕಾಣಿಸುತ್ತಿದೆಯೆಂದು ಹೇಳಿದ. "ಅದಕ್ಕೇನ್ರೀ" ಎಂದಾಗ, ಹತ್ತಿರದಲ್ಲೇ ಒಂದು ದೊಡ್ಡ ಬಾವಿಯಿದೆ. ಅಲ್ಲಿ ಯಾರಾದರೂ ಸ್ನಾನಗೀನ ಮಾಡಕ್ಕೇಂತ ಇಳಿದಿರಬಹುದು ಅಂತ ಅನುಮಾನ ಅಂದರು. ನೀವ್ಯಾರು ಮಾತಾಡೋದು ಅಂದಾಗ ದೇವಸ್ಥಾನದ ಅರ್ಚಕರ ಮಗ ಅಂತ ಹೇಳಿದರು. ಈಗಲೇ ಬರ್ತೀವಿ ಅಂತ ಅವರಿಗೆ ದೇವಸ್ಥಾನದಲ್ಲಿಯೇ ಇರಕ್ಕೆ ಹೇಳಿ ಇನ್‌ಸ್ಪೆಕ್ಟರು ಒಬ್ಬ ಪಿ. ಸಿ. ಜೊತೆಗೆ ಹೋದರಂತೆ.

ಅರ್ಚಕರ ಮಗ ವಿದ್ಯಾವಂತ. ಅದಕ್ಕೇ ಬಟ್ಟೆಯನ್ನು ಮುಟ್ಟಿರಲಿಲ್ಲ. ಅದು ಸುಲಭವಾಗಿ ಯಾರ ಕಣ್ಣಿಗೂ ಕಾಣಿಸುವ ಜಾಗದಲ್ಲಿ ಇರಲಿಲ್ಲ. ಮಧ್ಯಾಹ್ನ ಯಾಕೋ ಆ ಕಡೆ ಹೋದಾಗ ಅಲ್ಲಿ ಬಟ್ಟೆಗಳು ಮಡಿಸಿಟ್ಟದ್ದು ಕಾಣಿಸಿತು. ಹತ್ತಿರ ಹೋಗಿ ನೋಡಿದಾಗ, ಮಂಡಿಸಿದ್ದರೂ, ನೆಟ್‌ಬನಿಯನ್ನು ಷರ್ಟು, ಪ್ಯಾಂಟುಗಳೆಂದು ತಿಳಿಯುತ್ತಿತ್ತು. ಬಾವಿಯ ಕಡೆ ನೋಡಿದರೆ ಯಾರೂ ಸ್ವಲ್ಪ ಮುಂಚೆ ಇಳಿದ ಸುಳಿವು ಕಾಣಲಿಲ್ಲವಂತೆ. ಏನಾದರೂ ಆಗಲಿ ಅಂತ ಪೋಲೀಸರಿಗೆ ಫೋನ್ ಮಾಡಿದ್ದನಂತೆ. ಬಟ್ಟೆಗಳನ್ನು ಪೋಲೀಸರು ವಶಕ್ಕೆ ತೆಗೆದುಕೊಂಡರು. ಅರ್ಚಕರ ಮಗನ ಹೇಳಿಕೆಯನ್ನು ರೆಕಾರ್ಡ್ ಮಾಡಿಕೊಂಡರು. ಯಾರಾದರೂ ಬಾವಿಗೆ ಯಾವುದೇ ಕಾರಣದಿಂದ ಇಳಿದಿದ್ದರೂ ಹೊರಗೆ ಬಂದಿದ್ದರೆ ಬಟ್ಟೆ ಹಾಕಿಕೊಂಡು ಹೋಗಬೇಕಾಗಿತ್ತು ಏನೋ ಆಗಿದೆಯೆನ್ನಿಸಿ ಇನ್‌ಸ್ಪೆಕ್ಟರು ಅವತ್ತೆಲ್ಲ ಈ ಬಾವಿಯನ್ನು ಕಾಯಬೇಕೆಂದು ಪಿ.ಸಿ.ಗೆ ಹೇಳಿಬಂದರಂತೆ. ಪಿ.ಸಿ. ರಾತ್ರಿ ದೇವಸ್ಥಾನದಲ್ಲಿಯೇ ಮಲಗಿದ್ದನಂತೆ, ಬೆಳಿಗ್ಗೆ ಎದ್ದು ಮುಖ ತೊಳೆದು ಅರ್ಚಕರ ಮನೆಯವರು ಕೊಟ್ಟ ಕಾಫಿ ಕುಡಿದು ಬಂದು ಬಾವಿಯನ್ನು ನೋಡಿದರೆ ಒಂದು ಹೆಣ ತೇಲುತ್ತಿತ್ತಂತೆ! ಸರಿ ಅವನು ಫೋನ್ ಮಾಡಿದ. ಇನ್‌ಸ್ಪೆಕ್ಟರು ಅಲ್ಲಿಗೆ ಹೋದರು. ಜನರ ಗುಂಪು ಸೇರಿತು. ಬಾವಿಯಿಂದ ಹೆಣ ತೆಗೆಸಿದರು. ಮಹಜರು ನಡೆಸಿ ದೇಹದ ಫೋಟೋಗಳನ್ನು ತೆಗೆದುಕೊಂಡು ಅದನ್ನು ಪೋಸ್ಟ್‌ಮಾರ್ಟಮ್‌ಗೆ ಕಳಿಸಿದ್ದರು.

ನನಗೆ ಕುತೂಹಲ ಭಯ ಎಲ್ಲ ಉಂಟಾಯಿತು. ಒಮ್ಮೆಗೆ "ಫೋಟೋ ನೋಡಬಹುದೇ ಸಾರ್" ಎಂದೆ. "ಶೂರ್" ಎನ್ನುತ್ತ ಫೈಲಿನಲ್ಲಿ ಇಟ್ಟಿದ್ದ ಎರಡು ಚಿತ್ರಗಳನ್ನು ನಮ್ಮ ಕಡೆಯಿಟ್ಟರು. ಒಂದು ದೇಹದ ಮುಂಭಾಗದ ಚಿತ್ರ, ಇನ್ನೊಂದು

ಎಡಭಾಗದಿಂದ ತೆಗೆದದ್ದು. ಮುಖವೆಲ್ಲ ಊದಿತ್ತು. ದೇಹವಂತೂ ದಪ್ಪಗೆ ಆಗಿತ್ತು. ಯಾರ ಮುಖವೆಂದು ಗುರುತಿಸುವುದು ಕಷ್ಟವೇ ಸರಿ. ಮುಖದ ಎದುರಿಂದ ತೆಗೆದ ಫೋಟೋನ ಸೂಕ್ಷ್ಮವಾಗಿ ಗಮನಿಸಿದೆ. ಶಶಿಯ ಎಡಗಣ್ಣಿನ ಕೆಳಗೆ ಒಂದು ಮಚ್ಚೆ ಇತ್ತು. ಅಷ್ಟೇನೂ ದೊಡ್ಡದಲ್ಲ. ಅಂಥದೆ ಗುರುತು ಫೋಟೋದಲ್ಲಿ ಕಾಣಿಸುತ್ತಿದೆ ಎನ್ನಿಸಿತು. ಹಾಗಾದರೆ ಶಶಿಯದೇ ಇರಬಹುದೇ ಈ ದೇಹ ಅನ್ನಿಸಿತು. ಮುಖವನ್ನೆಲ್ಲ ಗಮನಿಸಿದೆ. ಬೇರೆ ಕಡೆಯೂ ಅಂತಹ ಕಲೆಗಳು ಸಣ್ಣದಾಗಿರುವಂತೆ ತೋರುತ್ತದಲ್ಲ ಅನ್ನಿಸಿತು. ಅವನದಿರಲಾರದು. ಆದರೆ ಅವನ ಹಣೆಯ ಮೇಲ್ಭಾಗದ ಕೂದಲ ರೀತಿ ಶಶಿಯದೇ ಇದ್ದ ಹಾಗಿದೆ. ಯಾಕೋ ಗೊಂದಲವೆನ್ನಿಸಿ ನಿಟ್ಟುಸಿರುಬಿಟ್ಟೆ.

"ಐಡೆಂಟಿಫೈ ಮಾಡಕ್ಕಾಗತ್ತಾ?" ಅಂದರು ಇನ್ಸ್‌ಪೆಕ್ಟರ್.

"ಕಷ್ಟ ಅಲ್ಲವಾ?" ಎಂದರು ಪ್ರಭಾಕರರಾವ್ ನನ್ನೆಡೆ ತಿರುಗಿ.

"ಏನೋ ಸಾರ್. ಯಾಕೋ ಕನ್‌ಫ್ಯೂಸ್ ಆಗ್ತಿದೆ. ಒಂದು ಸಲ ಅವನದೇ ಅನ್ನಿಸಿದರೆ ಇನ್ನೊಂದು ಸಲ ಅವನದಲ್ಲವೇನೋ ಅನ್ನಿಸತ್ತೆ" ಎಂದು ಸಂಶಯ ವ್ಯಕ್ತಪಡಿಸಿದೆ.

"ಬಾಡಿ ಇಲ್ಲವಾ ಸಾರ್' ಅಂದೆ.

"ಉಹ್ಞೂ" ಅಂದರು. ಬಾವಿಯಲ್ಲಿ ತೇಲುವ ಹೊತ್ತಿಗೇ ಮೈಯೆಲ್ಲ ಊದಿಕೊಂಡಿರತ್ತೆ. ನೀರು ಕುಡಿದು ಹೊಟ್ಟೆ ಉಬ್ಬರಿಸಿರತ್ತೆ. ದೇಹ ನೀರಲ್ಲಿ ತೇಲೋದು ಅಂದರೆ ಬಿದ್ದು ಮೂರು ದಿನವಾಗಿದೆ ಸುಮಾರು ಅಂತ ತಾನೇ, ಅಷ್ಟರಲ್ಲಿ ದೇಹ ಎಲ್ಲ ಡೀಕಂಪೋಸ್ ಆಗಕ್ಕೆ ತೊಡಗಿರತ್ತೆ. ಹೆಚ್ಚು ಕಾಲ ಇಟ್ಟರೆ ಕೊಳೆತು ವಾಸನೆ ಬಂದು ಅಧ್ವಾನವಾಗತ್ತೆ. ಯಾರಾದರೂ ತಪ್ಪಿಸಿಕೊಂಡಿದ್ರೆ, ಕಾಣೆಯಾಗಿದ್ರೆ ಕಂಪ್ಲೇಂಟ್ ಕೊಟ್ಟಿರುತ್ತಾರೆ. ಬಂದು ವಿಚಾರಿಸ್ತಾರೆ ಅಂತ ಡೀಟೈಲ್ಸ್ ಎಲ್ಲ ಪೋಲೀಸ್ ಸ್ಟೇಷನ್‌ಗಳಿಗೆ ಕಳಿಸುವುದು ರೂಢಿ" ಅಂದರು. "ನೀವು ಕಂಪ್ಲೈಂಟ್ ಕೊಡಲಿಲ್ಲವಾ?" ಅಂದರು ಹಿಂದಿನ ಇನ್ಸ್‌ಪೆಕ್ಟರಿಗೆ ಹೇಳಿದ್ದನ್ನೇ ಮತ್ತೊಮ್ಮೆ ಹೇಳಿದೆ.

"ಪಾಪ" ಅಂದರು. "ನೋಡಿ, ದೇಹ ಇಟ್ಕೊಳ್ಳಕ್ಕೆ ಆಗಲ್ಲವಲ್ಲ" ಅಂತ ಅದನ್ನು ಸಂಸ್ಕಾರಕ್ಕೆ ಒಳಗುಮಾಡಿದ್ದಾಗಿ ಹೇಳಿದರು. ನಾನೂ ನಿಮ್ಮವನೇ ಅಂದರು. ನಾನೇ ಖುದ್ದಾಗಿ ಬಾಡೀನ ನೋಡಿದೆ. ಕಿವಿ ಚುಚ್ಚಿತ್ತು. ಹಿಂದೂ ಅಂತ ತೀರ್ಮಾನ ಮಾಡಿದೆ; ಆದರೆ ಮೈಮೇಲೆ ಜನಿವಾರವಿರಲಿಲ್ಲ ನೋಡಿ, ಯಾರೋ ಎನ್. ಬಿ. ಅಂತ ಅಂದ್ಕೊಂಡೆ. ಪಾಪ, ಬ್ರಾಹ್ಮಣ ಅಂತ ಗೊತ್ತಾಗಿದ್ದಿದ್ರೆ ಕ್ರಿಮೇಟ್ ಮಾಡಿಸ್ಬೋದಾಗಿತ್ತು. ಆದರೆ ಈಗ ಅದನ್ನು ಬರಿ ಮಾಡ್ಸಿದ್ದೀವಿ" ಅಂದರು. "ಎಲ್ಲಿ ಸಾರ್?" ಎಂದು ಪ್ರಭಾಕರರಾವ್ ಕೇಳಿದ್ದಕ್ಕೆ ಜಾಗ ಹೇಳಿದರು. "ಬೇಕಾದರೆ, ಈಗಲೂ ಮ್ಯಾಜಿಸ್ಟ್ರೇಟ್ ಆರ್ಡರ್ ತಗೊಂಡು ಎಕ್ಸ್‌ಹ್ಯೂಮ್ ಮಾಡಿಸಬಹುದು, ಸುಡಲೇ ಬೇಕು ಅಂದರೆ" ಅಂದರು. ಒಳಗೆ ಹೂತಿರೋ ದೇಹವನ್ನು ತೆಗೆದರೆ ಹೇಗೆ ಕಾಣಿಸಬಹುದು. ನಾನು ಕೊನೆಯದಾಗಿ ನೋಡಿದ್ದ ಶಶಿಯ ಮುಖಕ್ಕೂ ಈ ಫೋಟೋಗೂ ಹೋಲಿಕೆಯೇ ಕಾಣ್ತಿಲ್ಲ. ಇನ್ನು ನೆಲದಲ್ಲಿ ಹೂತು ಬಿಟ್ಟಿದ್ದಾರೆ ಬೇರೆ. "ಅಂತದ್ದೇನು ನೆಸೆಸಿಟಿ ಇಲ್ಲ ಸಾರ್, ಅವನಿಗೆ ಇನ್ನೂ ಉಪನಯನವಾಗಿರಲಿಲ್ಲ" ಅಂದರು ಪ್ರಭಾಕರರಾವ್. ನನ್ನ ಮನಸ್ಸನ್ನ ಅರ್ಥಮಾಡಿಕೊಂಡವರ ಹಾಗೆ ಅವರಿಗೆ ಮನಸ್ಸಿನಲ್ಲೇ ವಂದಿಸಿದೆ. "ಯೂ ಆರ್ ರೈಟ್. ಅಲ್ದೆ ಮ್ಯಾಜಿಸ್ಟ್ರೇಟ್ ಆರ್ಡರ್ ಗೀರ್ಡರು ಅಂದ್ರ ಬರೀ ಕಾಂಪ್ಲಿಕೇಷನ್ ಯಾಕೆ? ನೀವೂ ನಮ್ಮೋರು ಅಂತ ಹೇಳ್ತೀನಿ, ಆದದ್ದಾಯಿತು, ಸುಡೋದೋ ಹೂಳೋದೋ ಒಂದು ಆಗಿದೆಯಲ್ಲ" ಅಂದರು.

ನನಗಿನ್ನೂ ಅನುಮಾನ. ಈ ದೇಹ ಅವನದೇ ಹೌದು ಅಂತ ಅನ್ನಿಸ್ತಾ ಇದೆ. ಆದರೆ ಪೂರ್ತಿ ಖಾತರಿಯಾಗಿಲ್ಲ. ಆದರೂ ಶಶಿಯೇ ಸತ್ತಿರೋನು ಅನ್ನೋ ರೀತಿಯಲ್ಲಿ ಮಾತಾಡ್ತಿದ್ದೀನಲ್ಲ ಅನ್ನಿಸಿ. "ಬಟ್ಟೆಗಳನ್ನು ನೋಡಬಹುದೇ ಸಾರ್"

ಎಂದೆ. ಇನ್ಸ್‌ಪೆಕ್ಟರು ಬಟ್ಟೆಗಳನ್ನು ಒಳಗಿನಿಂದ ತರಿಸಿದರು. ಒಂದೊಂದಾಗಿ ಪರಿಶೀಲನೆ ನಡೆಸಿದೆವು; ನಾನೂ ಪ್ರಭಾಕರರಾವ್. ಶರ್ಟ್, ಪ್ಯಾಂಟು, ನೆಟ್‌ಬನೀನು. ಅವನ ಬಟ್ಟೆಗಳನ್ನು ನಾನು ಯಾಕೆ ಅಷ್ಟೊಂದು ಸೂಕ್ಷ್ಮವಾದ ವಿವರಗಳ ಸಮೇತ ಜ್ಞಾಪಕ ಇಟ್ಟುಕೋಬೇಕು. ಅಳತೆ ನೋಡಿದರೆ ಅವನಿಗೆ ಸರಿಹೋಗೋ ಹಾಗೆಯೇ ಇದೆ. ಆದರೆ ಅವನದೇ ಅಂತ ಹೇಗೆ ಹೇಳೋದು. ಆ ಪ್ಯಾಂಟು ಸ್ವಲ್ಪ ಹಳೆಯದು. ಅಂಥ ಬಣ್ಣದ್ದನ್ನು ಅವನು ಹಾಕಿಕೊಂಡಿದ್ದ ನೆನಪೇನೋ ಬರತ್ತೆ, ಆದರೆ ಆ ಬಣ್ಣದ ಪ್ಯಾಂಟು ಅವನೊಬ್ಬನ ಹತ್ತಿರವೇ ಇರತ್ತೇನು? ಖಾತರಿಯಾಗಿ ಅವನದೇ ಅಂತ ಹೇಳೋದು ಹೇಗೆ? ಆದರೆ ಶರ್ಟು ಸ್ವಲ್ಪ ಹೊಸತು. ಒಂದೆರಡು ಬಾರಿ ಮಾತ್ರ ಒಗೆತಕ್ಕೆ ಹಾಕಿರಬೇಕು. ಒಂದು ಕಡೆ ಕಾಲರಿನ ಹಿಂಭಾಗದಲ್ಲಿ ಶರ್ಟು ಹೊಲಿದ ಟೈಲರ್ ಶಾಪಿನ ಲೇಬಲ್ ಇತ್ತು. ಅದರ ಕೆಳಗೇ ಪಿ.ಎಲ್. ಎನ್ನುವ ಮಡಿವಾಳನ ಗುರುತಿತ್ತು. ಪಿ.ಎಲ್. ಮಾತ್ರ ನನ್ನ ಜ್ಞಾಪಕಕ್ಕ ಬಂತು. ಅವನು ನಮ್ಮನೆ ಹಿಂದಿನ ಬೀದಿಯಲ್ಲಿದ್ದ. ಅಗಸರವನ ಅಂಗಡಿಗೇ ಬಟ್ಟೆ ಒಗೆಯಕ್ಕೆ ಕೊಡ್ತಿದ್ದದ್ದು. ಪದ್ಮಾ ಲಾಂಡ್ರಿ ಅಂತಲೋ ಪದ್ಮನೀ ಲಾಂಡ್ರಿ ಅಂತಲೋ ಇರಬೇಕು. ನನ್ನ ಬಟ್ಟೆಗಳನ್ನು, ಮಕ್ಕಳ ಬಟ್ಟೆಗಳನ್ನು ರಮನೇ ಒಗೀತಿದ್ದಳು. ಶಶಿ ಬಟ್ಟೆಗಳನ್ನು ಒಗೆಯಕ್ಕೆ ಟೈಮಿಲ್ಲ ಅಂತ ಲಾಂಡ್ರಿಗೆ ಕೊಡ್ತಾ ಇದ್ದ. ಅದೇ ಲಾಂಡ್ರಿ ಹೌದು. ಇದು ಅವನ ಶರ್ಟೇ ಅನ್ನಿಸುತ್ತೆ. ಟೈಲರ್ ಶಾಪಿಗೆ ಹೋಗಿ ಅವನು ಅಲ್ಲೇ ಬಟ್ಟೆ ಹೊಲಿಸ್ತಿದ್ದನೇನೋ ವಿಚಾರಿಸಬೇಕು. ಅಂದರೆ ಈ ದೇಹ ಶಶಿಯದೇ ಅಂತ ತೀರ್ಮಾನಿಸಬಹುದೆ? ನೂರಕ್ಕೆ ನೂರರಷ್ಟು ಖಾತರಿಯಾಗಿ ಹೇಳಬಹುದೇ?

"ಪೋಸ್ಟ್‌ಮಾರ್ಟಂ ರಿಪೋರ್ಟ್ ಹೇಗಿದೆ ಸಾರ್?" ಎಂದು ಕೇಳಿದೆ. "ಏನೋ ಹೆಡ್ ಇಂಜುರಿ ಅಂದರು ಡಾಕ್ಟರು. ಡೀಟೇಲ್ಡ್ ರಿಪೋರ್ಟ್ ಇವತ್ತು ಸಾಯಂಕಾಲ ಬರಬಹುದು. ಯಾಕೆ, ಗುರುತು ಸಿಕ್ಕಲಿಲ್ಲವಾ ಬಟ್ಟೆಯಿಂದಲೂ?" ನನ್ನ ಅನುಮಾನಗಳನ್ನು ಹೇಳಿದೆ. ಅವನದೇ ಇದ್ದ ಹಾಗಿದೆ ಅಂದೆ. "ಇನ್ಯಾರೂ ಬಂದಿಲ್ಲ, ಬೇರೆ, ಅವರದೇ ಇರಬಹುದು ಹೌ ಸ್ಯಾಡ್" ಎಂದರು ಪ್ರಭಾಕರ ರಾಯರು. ಇನ್ಸ್‌ಪೆಕ್ಟರ್‌ನ ಕೇಳಿ ಈಸಿಕೊಂಡು ಒಂದು ತುಂಡು ಪೇಪರ್‌ನಲ್ಲಿ ಟೈಲರ್ ಶಾಪಿನ ಲೇಬಲ್ ಮೇಲಿದ್ದ ಹೆಸರು, ಲಾಂಡ್ರಿಯ ಇನಿಷಿಯಲ್‌ಗಳನ್ನು ಗುರುತು ಹಾಕಿಕೊಂಡೆ– ದಯವಿಟ್ಟು ಈ ವಿಷಯದಲ್ಲಿ ಹೆಲ್ಪ್ ಮಾಡಬೇಕು ಸಾರ್" ಎಂದು ಇನ್ಸ್‌ಪೆಕ್ಟರ್‌ನ ಕೇಳಿಕೊಂಡೆ.

"ಡೆಫನೆಟ್‌ಲೀ, ನಾವಿರೋದೇ ಅದಕ್ಕೆ. ಅಲ್ಲದೆ ನೀವು ನಮ್ಮವರು ಬೇರೆ, ಯಾವುದೂ ಕಾಂಪ್ಲಿಕೇಷನ್ ಬರದ ಹಾಗೆ ತೀರ್ಮಾನ ಮಾಡೋಣ. ನಾಳೆ ಬನ್ನಿ. ಅಷ್ಟು ಹೊತ್ತಿಗೆ ಪೋಸ್ಟ್ ಮಾರ್ಟಂ ರಿಪೋರ್ಟ್ ಬಂದಿರುತ್ತೆ. ಡೆತ್ ಸರ್ಟಿಫಿಕೇಟ್ ಮಾಡಿಸಿಕೊಟ್ಟರೆ ಸಾಕು. ಇನ್ನೇನೂ ಸಮಸ್ಯೆಗಳು ಬರಲ್ಲ" ಅಂದರು. ನಮ್ಮ ಅಡ್ರಸ್ ತೆಗೆದುಕೊಂಡರು. ನಾವು ಅಲ್ಲಿಂದ ಹೊರಟೆವು.

ಮನೆಗೆ ಬಂದಾಗ ಮಧ್ಯಾಹ್ನ ಮೂರು ಗಂಟೆ. ಹೊಟ್ಟೆಗೆ ಏನೂ ಇಲ್ಲ. ಮೈಕೈಯೆಲ್ಲ ನೋವು ಬೇರೆ, ರಮ ಆತಂಕದಿಂದ ಕಾಯ್ತಾ ಇದ್ಲು. "ಯಾಕೆ ಇಷ್ಟೊತ್ತು, ಏನಾಯ್ತು." ಎಂಬ ಪ್ರಶ್ನೆ ನನ್ನ ಎದುರಿಸ್ತು. "ಮೊದಲು ಊಟ ಹಾಕು" ಎಂದು ಒಂದಷ್ಟು ಅನ್ನವನ್ನ ಗಬಗಬ ತಿಂದೆ. ಹಾಗೂ ಅನಿಸ್ತು. ಶಶಿಧರ ಸತ್ತಿದಾನೆ. ನಾನು ಸ್ನಾನ ಕೂಡ ಮಾಡದೆ ಊಟ ಮಾಡಿದ್ದೀನಲ್ಲ. ಆದರೆ ಆ ದೇಹ ಶಶಿಯದೇ ಅಂತ ನಿರ್ಧಾರವಾಗಿಲ್ಲವಲ್ಲ ಪೂರ್ತಿಯಾಗಿ ಅಂತ, ನನ್ನ ನಾನೇ ಸಮಾಧಾನ ಮಾಡಿಕೊಂಡೆ.

ಊಟವಾದ ಮೇಲೆ ರಮಾಗೆ ಎಲ್ಲ ವಿಚಾರ ಹೇಳ್ದೆ. ಅವಳೂ ಗಾಬರಿಯಾದಂತೆ ಕಾಣಿಸಿತು. "ಅಯ್ಯೋ ದೇವರೇ" ಅಂದಳು. ಇವೆಲ್ಲ ಬೂಟಾಟಿಕೆಯೇ ಅನ್ನಿಸಿತು. ಅವಳ ಮನಸ್ಸಲ್ಲಿಯೇ ಏನಿದೆಯೋ. ಇದನ್ನು ಅವಳು ನಿರೀಕ್ಷಿಸ್ತಾ ಇದ್ದಳೇ ಅಥವಾ ಇದಕ್ಕಾಗಿ ನಿರೀಕ್ಷಣೆ ಮಾಡ್ತಾ ಇದ್ದಳೇ ಅರ್ಥ ಮಾಡಿಕೊಳ್ಳೋದು ಎಷ್ಟು ಕಷ್ಟ ಅನ್ನಿಸಿತು. ಅವಳಿಗೆ ಶಶಿಧರ ಸತ್ತರೆ ಸಮಾಧಾನವಾಗತ್ತೇನೋ ಅಂದ್ಕೊಂಡೆ. ಒಂಥರ ಅವನ ಸಾವಿಗೆ ಅವಳೇ ಕಾರಣವೇನೋ ಎಂಬ ಅನುಮಾನ ಬಂತು.

ನಾನಲ್ಲವೇ ಅವನನ್ನು ಹೊಡೆದದ್ದು? ಆದರೆ ಆ ಜಗಳದ ವಿಚಾರವನ್ನ ಪೋಲೀಸರಿಗೆ ಹೇಳಲಿಲ್ಲವಲ್ಲ. ಯಾಕೆ ಹೇಳಲಿಲ್ಲ ನಾನು ಅಂತ ಕೇಳಿಕೊಂಡೆ. ಹೊಳೆಯಲಿಲ್ಲ. ನನ್ನ ಮನಸ್ಸಿನಲ್ಲಿ ಏನಿದೆ ಅಂತ ನನಗೇ ಗೊತ್ತಿಲ್ಲ. ಇನ್ನು ರಮಳ ಬಗ್ಗೆ ನಾನು ತೀರ್ಪುಕೊಡೋದು ಯಾವ ನ್ಯಾಯ ಅನ್ನಿಸಿತು.

– – –

ನಾಳೆ ಪೂರ್ತಿ ಪೋಸ್ಟ್ ಮಾರ್ಟಂ ರಿಪೋರ್ಟ್‌ನಲ್ಲಿ ಏನು ಬಂದಿರತ್ತೋ ಏನು ಕತೆಯೋ, ಶಶಿಯನ್ನು ಯಾರಾದರೂ ಕೊಲೆ ಮಾಡಿರಬಹುದು ಅಂತ ಅನ್ನಲು ಕಾರಣವೇ ಇಲ್ಲ. ಅವನಿಗಾಗದವರು, ಅದೂ ಕೊಲೆ ಮಾಡುವಷ್ಟು ದ್ವೇಷ ಇಟ್ಟುಕೊಂಡವರು ಯಾರಾದರೂ ಇರಬಹುದು ಅನ್ನೋ ಅನುಮಾನದ ಕಣ ಕೂಡ ಬರಲು ಸಾಧ್ಯವಿಲ್ಲ. ಎಲ್ಲರ ಜೊತೆಯಲ್ಲಿ ಅವನು ಚೆನ್ನಾಗಿದ್ದವನು ಅವನಿಗಾದರೂ ಅಷ್ಟು ತೀವ್ರವಾಗಿ ದ್ವೇಷಿಸುವುದು ಸಾಧ್ಯವಿತ್ತೇ? ಅಲ್ಲದೆ ಬಾವಿಯಲ್ಲಿ ಬಟ್ಟೆ ಸಮೇತ ಬೀಳದೆ ಬಟ್ಟೆಗಳನ್ನೆಲ್ಲ ಕಳಚಿ ಓರಣವಾಗಿ ಮಡಿಸಿಟ್ಟಿದೆಯಲ್ಲ. ಕೊಲೆ ಮಾಡಿದ್ದರೆ ಹೊಡೆದು ಹಾಗೆಯೇ ಎಸೆಯ ಬೇಕಾಗಿತ್ತಲ್ಲವೇ? ಅಥವಾ ಹೊಡೆದು ಅನುಮಾನ ಬಾರದಿರಲೀಂತ ಅವರೇ ಬಟ್ಟೆ ಕಳಚಿ ಮಡಿಸಿಟ್ಟು ಬಾವಿಗೆ ದೇಹವನ್ನು ಎಸೆದಿರಬಹುದೇ? ಆದರೆ ಅಂತಹ ಶತ್ರುಗಳಾರೂ ಇರಲಿಕ್ಕೆ ಸಾಧ್ಯವೇ ಇಲ್ಲವಲ್ಲ ಇವನಿಗೆ. ದುಡ್ಡಿಗಾಗಿ ಕೊಲೆ ಮಾಡಿರಬಹುದು ಅನ್ನೋದಕ್ಕೆ ಅವನೆಂದೂ ಹಣವನ್ನು ಹೆಚ್ಚಾಗಿ ಇಟ್ಟುಕೊಂಡು ಹೋದವನೇ ಅಲ್ಲ. ಹೊರಗಡೆ ಹೋಗುವಾಗ, ಅವನು ಆವತ್ತು ಮನೆ ಬಿಟ್ಟದ್ದು ಬೆಳಗಿನ ಜಾವ. ನಾನು ಕಂಡಹಾಗೆ ಅವನ ಹತ್ತಿರ ನಗದು ಹೆಚ್ಚಿರಲಾರದು. ಅಲ್ಲದೆ ಅವನು ಬಾಣಸವಾಡಿಗೆ ಯಾಕೆ ಹೋದ? ಏನೋ ಅರ್ಥವೇ ಆಗಲ್ಲ.

ಅವನು ಆತ್ಮಹತ್ಯೆಯೇನಾದರೂ ಮಾಡಿಕೊಂಡಿರಬಹುದೇ? ಅವನಿಗೆ ಹಿಂದಿನ ರಾತ್ರಿ ಬೇಜಾರಾಗಿರಬೇಕು ಅನ್ನುವುದರಲ್ಲಿ ಅನುಮಾನವೇ ಇಲ್ಲ. ಅವನ ಅತ್ತಿಗೆಗಿಂತ ನಾನೇ ಹೆಚ್ಚು ಕ್ರೂರವಾಗಿದ್ದೆನಲ್ಲ; ಎಷ್ಟೊಂದು ಹೊಡೆದುಬಿಟ್ಟೆ! ಅವನಂತೂ ಒಂದು ಮಾತೂ ಆಡಲಿಲ್ಲ. ಗಂಟಲು ತುಂಬ ತುಂಬಿಕೊಂಡವನೇ ಹಾಗೇ ಇದ್ದ. ನನ್ನ ಕಡೆ ಒಂದೆರಡು ಬಾರಿ ನೋಡಿದ್ದ ಅಷ್ಟೆ, ಅವನ ನೋಟದಲ್ಲಿ ಏನು ಭಾವನೆ ತುಂಬಿತ್ತು ಅನ್ನುವುದನ್ನು ನನಗೆ ತಿಳಿಯಲು ಸಾಧ್ಯವೇ ಇಲ್ಲ: ಆಗಂತೂ ನಾನು ಕೋಪದಿಂದ ಕುದಿಯುತ್ತಿದ್ದೆ. ಈಗ ಅವನ ಮುಖದ ರೀತಿಯನ್ನು ಕಲ್ಪನೆಮಾಡಿಕೊಳ್ಳುವುದು ಸಾಧ್ಯವಿಲ್ಲ. ಸದ್ಯ ಏನೂ ಬರೆದು ಜೇಬಲ್ಲಿಟ್ಟುಕೊಂಡಿರಲಿಲ್ಲವಲ್ಲ. ಏನಾದರೂ ಚೀಟಿ ಬರೆದು ನಾನು ಹೊಡೆದ ವಿಷಯ, ರಮ ಕೊಡುತ್ತಿದ್ದ ಕಿರುಕುಳದ ವಿಷಯ ವಿವರವಾಗಿ ತಿಳಿಸಿದ್ದಿದ್ದರೆ! ನಾನು ಅಷ್ಟು ಹೊಡೆದರೂ ಮರುಮಾತಾಡದೆ ಸಹಿಸಿಕೊಂಡನಲ್ಲ. ರೊಚ್ಚಿನಿಂದ ತನ್ನ ಸಾವಿಗೆ ನಾವೇ ಕಾರಣ ಅಂತ ಬರೆದಿಟ್ಟಿದ್ದರೆ ಏನಾಗುತ್ತಿತ್ತೋ. ಅವನು ಸಾಯುವಾಗಲೂ ತನಗೆ ತಿಳಿದಂತೆ ತನ್ನ ಸುಳಿವು ನೀಡುವ ಯಾವ ಕುರುಹನ್ನೂ ಇಡದೆ ಹೋಗಿದ್ದಾನಲ್ಲ. ಇದೆಲ್ಲ ಮುಂದಾಲೋಚನೆಯೇ? ಕೋಪದಲ್ಲಿ ಎಲ್ಲವನ್ನೂ ಮರೆತು ಹೊಡೆಯುತ್ತಿದ್ದ ನಾನು ಒಂದು ಕಡೆ ನಿಂತಿದ್ದರೆ, ಇನ್ನೊಂದು ಕಡೆ ಅವನು ಏಟು ತಿನ್ನುತ್ತ ಸಾಯುವುದು ಹೇಗೆ ಎಂದು ಆಲೋಚನೆ ಮಾಡುತ್ತಿದ್ದೇನೆ? ಯಾಕೋ ಅವನ ಈ ರೀತಿಯ ಮುಂದೆ ನಾನು ತುಂಬ ಚಿಕ್ಕವನಾಗಿಬಿಡುತ್ತಿದ್ದೇನೆ. ಬುದ್ಧಿ ಅವನಿಗಿಂತ ಹೆಚ್ಚಾಗಿದ್ದರೂ ವಿವೇಕ ಮಾತ್ರ ನನಗೆ ತುಂಬ ಕಡಮೆಯಲ್ಲವೇ?

ಶಶಿ ತನ್ನ ವಿಷಯ ಏನೂ ಬರೆದಿಡದೆ ಹೋಗಿದ್ದರೇನಾಯ್ತು, ಪೋಸ್ಟ್‌ಮಾರ್ಟಂ ರಿಪೋರ್ಟಿನಲ್ಲಿ ತಿಳಿಯುತ್ತದಲ್ಲ, ಅದು ಆತ್ಮಹತ್ಯೆಯೇ ಎಂದು. ಹಾಗೇನಾದರೂ ರಿಪೋರ್ಟನಲ್ಲಿದ್ದರೇನು ಗತಿ! ಪೋಲೀಸರು ಮತ್ತೆ ಇನ್ವೆಸ್ಟಿಗೇಷನ್ ಮುಂದುವರಿಸುತ್ತಾರೆ. ಮನೆಯವರೆಲ್ಲರ ಹೇಳಿಕೆ ತಗೋತಾರೆ; ನೆರೆಹೊರೆಯ ಮನೆಯವರ ಹೇಳಿಕೆಗಳನ್ನೂ ಖಂಡಿತ ಪಡೆಯುತ್ತಾರೆ. ನಮ್ಮ ಸಂಸಾರದ ಚರಿತ್ರೆಯೆಲ್ಲ ದಾಖಲಾಗುತ್ತೆ. ಅಕ್ಕ ಪಕ್ಕದವರು ನಮ್ಮ ಜಗಳದ ಬಗ್ಗೆ ಹೇಳದೇ ಇರುತ್ತಾರೆಯೇ! ನಾವೆಷ್ಟು ಕೆಳದನಿಯಿಂದ ಜಗಳವಾಡಿದ್ದರೂ ಪಕ್ಕದ ಮನೆಗೆ ನಮ್ಮ ಮನೆಯ ಗೋಡೆ

ಅಂಟಿಕೊಂಡಿದೆಯಲ್ಲ, ಅವರಿಗೆ ಕೇಳಿಸದಿರು ತ್ತದೆಯೇ? ಖಂಡಿತ ನಮ್ಮ ಜಗಳದ ಬಗ್ಗೆ, ಆಗಾಗ್ಗೆ ಅತ್ತಿಗೆ-ಮೈದುನರಿಗೆ ಆಗುತ್ತಿದ್ದ ಜಗಳ, ನಾನು ಗಟ್ಟಿಯಾಗಿ ಕೂಗುತ್ತಿದ್ದ ಪ್ರಸಂಗಗಳು (ದರಿದ್ರ, ನನಗೆ ಸಿಟ್ಟು ಬಂದರೆ ಯಾವಾಗಲೂ ಅಟ್ಟ ಹಾರಿಹೋಗುವ ಹಾಗೇ ಕೂಗುವುದು. ನನ್ನ ಗಂಟಲೊಂದಷ್ಟು ಇಂಗಿಹೋಗಬೇಕು), ಆವತ್ತಿನ ಹಿಂದಿನ ರಾತ್ರಿಯ ಸುದೀರ್ಘ ಜಗಳ – ಎಲ್ಲ ವಿಚಾರವನ್ನೂ ಪೋಲೀಸರಿಗೆ ನೆರೆಹೊರಯವರು ಹೇಳಬಹುದು. ನಾನು ಕೋಲಿನಿಂದ ಹೊಡೆದಾಗ ಅವನ ಮೈಮೇಲೆ ಬಾಸುಂಡೆಗಳೆದ್ದಿರಬಹುದೇ? ಗೆಣ್ಣಿನಂತಹ ಕಡೆ ಏಟು ಬಿದ್ದು ರಕ್ತ ಒಸರಿರಬಹುದೇ? ಹಾಗೇನಾದರೂ ಆಗಿದ್ದರೆ ನನ್ನನ್ನೇ ಕೊಲೆಗಾರನೆಂದು ಪೋಲೀಸರು ಕೇಸು ಹಾಕಬಹುದಲ್ಲವೇ? ಎದೆಯ ನಡುಕ ತಡೆಯಲು ಅಸಾಧ್ಯವಾಗುತ್ತದೆ. ಕಣ್ಣು ತುಂಬಿ ಬರುತ್ತಿದೆ. ಶಶಿ ಏನೋ ಮಾಡಿಕೊಳ್ಳಲು ಹೋಗಿ ನನ್ನ ಜೀವಕ್ಕೆ ಮುಳುವು ಆಗುತ್ತಿದ್ದಾನಲ್ಲ. ನಾನೇನು ಅಂಥದ್ದು ಮಾಡಿದ್ದು ಅವನಿಗೆ? ಏಟು ಕೊಟ್ಟೆ ನಿಜ. ಆದರೆ ನಾನು ಅಂತಹ ಪರಿಸ್ಥಿತಿಯಲ್ಲಿರಲಿಲ್ಲವೆ? ರಮ-ಶಶಿ ಇವರ ಮಧ್ಯೆ ಸಿಕ್ಕು ನಾನು ನುಗ್ಗಾಗಲಿಲ್ಲವೇ? ಶಶಿಗೆ ನಾನೇನೂ ಉಪಕಾರ ಮಾಡಿಲ್ಲವೇ! ಇಷ್ಟು ವರ್ಷ ಅವನನ್ನು ಜೋಪಾನ ಮಾಡಿದವನು ನಾನು ತಾನೆ? ಅವನ ಮೇಲೆ ಸಿಟ್ಟು ಮಾಡಿಕೊಳ್ಳುವುದಕ್ಕೆ ನನಗೆ ಹಕ್ಕಿಲ್ಲವೇ? ಒಂದೆರಡು ಏಟು ಕೊಡುವ ಅಧಿಕಾರ ನನಗಿಲ್ಲವೇ? ನನ್ನ ಮಕ್ಕಳಿಗೇ ಒಂದೆರಡು ಬಾರಿ ಹೊಡೆದಿಲ್ಲವೇ? ಅವರುಗಳ ಮೇಲೆ ಕೋಪ ಮಾಡಿಕೊಂಡ ಪ್ರಸಂಗಗಳಿಗೇನು ಕಡಮೆಯೇ? ನಾನು ಶಶಿಯನ್ನು ಹೊಡೆದದ್ದು ಅವನು ಸಾಯಲಿ ಎಂದೇ? ಅವನನ್ನು ಸಾಯಿಸಬೇಕೆಂದಿದ್ದರೆ ಕ್ಷೇಮವಾಗಿ ಬೇರೆ ಕಡೆ ಇರಲು ಹೇಳಿದ್ದರೆ ಆಗುತ್ತಿರಲಿಲ್ಲವೇ? ರಮಳಿಗೂ ಸಂತೋಷ ಆಗುತ್ತಿತ್ತು. ಇವನನ್ನು ಹೊಡೆದು ಅಪಖ್ಯಾತಿಯನ್ನು ಪಡೆಯುವುದೂ ತಪ್ಪುತ್ತಿತ್ತು. ಹೋಗು ಎಂದವಳು ರಮ, ಇವನು ಹೊರಡುವುದಕಕೇ ತಯಾರಾದ. ಅದನ್ನು ಬೇಡ ಎಂದೇ ತಾನೇ ನಾನು ತಡೆದದ್ದು. ಅವನು ಕ್ಕರಿಸಲು ತೊಡಗಿದಾಗ ಅಣ್ಣ ಎಂಬ ಅಧಿಕಾರದಿಂದ, ಇಷ್ಟು ದಿನ ನೋಡಿಕೊಂಡ ನೈತಿಕ ಹಿನ್ನೆಲೆಯಿಂದ, ನನ್ನ ಬಳಿಯೇ ಇರಲಿ, ಅವನಿಗಿನ್ನಾರು ದಿಕ್ಕು ಎಂಬ ಕಕ್ಕುಲತೆಯಿಂದ ತಾನೇ ನಾನು ಹೊಡೆದದ್ದು. ಪ್ರೀತಿ ಎಲ್ಲಿರತ್ತೋ ಅಲ್ಲಿ ದಂಡಿಸುವ ಅಧಿಕಾರವೂ ಇರುತ್ತದಲ್ಲವೇ? ಅವನು ಹಾಳಾಗಿ ಹೋಗಲಿ ಎಂದು ನನ್ನ ಮನಸ್ಸಿನಲ್ಲಿದ್ದರೆ ಆತನನ್ನು ಅವನ ಪಾಡಿಗೆ ಬಿಡಬಹುದಾಗಿತ್ತು. ಅಹಂಕಾರಕ್ಕೆ ಉದಾಸೀನವೇ ಮದ್ದು ಎಂದು ಸುಮ್ಮನಿರಬಹು ದಾಗಿತ್ತು. ಶಶಿಗೂ ಈ ವಿಚಾರವೆಲ್ಲ ತಿಳಿಯದೇ? ಅವನಿಗೆ ಖಂಡಿತ ನನ್ನ ಪ್ರೀತಿಯ ಬಗ್ಗೆ ಖಾತರಿಯಿತ್ತು. ಅದಕ್ಕೆ ಏನೂ ಸುಳುಹು ಕೊಡದೆ ಸಾಯಲು ಹೋಗಿದ್ದಾನೆ. ಇಲ್ಲದಿದ್ದರೆ ದ್ವೇಷ ತೀರಿಸಿಕೊಳ್ಳುತ್ತಿರಲಿಲ್ಲವೆ. ಕೊನೆಯ ಪಕ್ಷ ಸಾವಿನಲ್ಲಿ!

ಮೈಮೇಲಿನ ಗಾಯ, ಗುರುತುಗಳು ಏನಾದರೂ ರಿಪೋರ್ಟಿನಲ್ಲಿ ನಮೂದಾದರೆ ನನ್ನ ಗತಿಯೇನು? ನನ್ನ ಮೇಲೆ, ರಮಳ ಮೇಲೂ ಇರಬಹುದು, ಕೊಲೆಯ ಆಪಾದನೆ ಬರುತ್ತದೆ. ನನ್ನಂತೂ ಜೈಲಿಗೇ ಹಾಕುತ್ತಾರೇನೋ! ನಾನೇ ತಾನೇ ಹೊಡೆದದ್ದು? ಆಗ ರಮ, ಮಕ್ಕಳ ಗತಿಯೇನು? ಎಲ್ಲಿಗೆ ಹೋಗಬೇಕು ಅವರು? ಜೈಲು ಎಂದರೆ ಕೆಲಸವಿಲ್ಲ! ಆಪಾದನೆ ರುಜುವಾತಾದರೆ! ಅಯ್ಯೋ ದೇವರೇ, ಏನೆಲ್ಲ ಅನಾಹುತ ಆಗುತ್ತಿದೆ. ಈ ರೀತಿ ಆಗುವುದೆಂದು ಕನಸಿನಲ್ಲಿಯೂ ಊಹಿಸಲು ಸಾಧ್ಯವಿಲ್ಲವಲ್ಲ.

ಏನೋ ಹೆಡ್ ಇಂಜುರಿ ಎಂದು ಡಾಕ್ಟರು ಹೇಳಿದರು ಅಂತ ಪೋಲೀಸ್ ಇನ್‌ಸ್ಪೆಕ್ಟರು ತಿಳಿಸಿದ್ದರು. ಮೈಮೇಲೆ ಗಾಯದ ಗುರುತುಗಳು ಕಾಣಿಸಲಿಲ್ಲ ವೇನೋ, ಅಥವಾ ಹಾಗೆ ಕಾಣಿಸಿಕೊಂಡಿದ್ದರೂ ತಲೆಗೆ ಏಟು ಬಿದ್ದ ರೀತಿಯಲ್ಲೇ ಮೈನ ಹಲವಾರು ಕಡೆ ಬಿದ್ದಿರಬಹುದಲ್ಲ, ಅದರಿಂದ ಕಲೆ ಉಳಿದಿರಬಹುದು. ನಮ್ಮ ಜಗಳದ ವಿಷಯ, ಶಶಿಯನ್ನು ನಾನು ಹೊಡೆದ ವಿಷಯ ಸದ್ಯ ಹೇಳಲಿಲ್ಲವಲ್ಲ, ಅಕಸ್ಮಾತ್ ನನ್ನ ಪ್ರಾಮಾಣಿಕತೆಯ ಹುಚ್ಚಿನಿಂದೇನಾದರೂ ಆ ವಿಚಾರ ಬಾಯಿಬಿಟ್ಟಿದ್ದರೆ ನಿಜವಾಗಿಯೂ ನನ್ನ ಗೋರಿ ನಾನೇ ತೋಡಿಕೊಳ್ಳುತ್ತಿದ್ದೆ. ಹಾಳಾಯಿತು ಆ ಪ್ರಾಮಾಣಿಕತೆ. ಈಗ ಮೈ

ಮೇಲೆ ಗಾಯದ ಗುರುತು ಕಂಡರೂ ಅದಕ್ಕೆ ನಾನು ಹೊಣೆ ಎಂದು ಹೇಳುವ ಹಾಗಿಲ್ಲ. ದೇವರು ದೊಡ್ಡವನು, ಎಲ್ಲವನ್ನೂ ಹೇಳದ ರೀತಿಯಲ್ಲಿ ನನ್ನ ಬಾಯಿ ತಡೆದು ಕಾಪಾಡಿದ!

ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ರುಜುವಾತಾದರೆ ಆಗ ನನ್ನ ಗತಿಯೇನಾಗಬಹುದು? ಜಗಳದ ವಿಷಯ ಯಾರೂ ಹೇಳದೆ, ಅವನು ಯಾಕೋ ತಾನಾಗಿ ಸತ್ತಿದ್ದಾನೆ ಎಂದು ತೀರ್ಮಾನವಾದರೆ ನನ್ನ ಸ್ಥಾನವಾವುದು? ಪೋಲೀಸರು ಮತ್ತಷ್ಟು ತನಿಖೆ ನಡೆಸಬಹುದು. ಯಾರೂ ಏನೂ ಹೇಳಲಿಲ್ಲವೆಂದು ಕೊಳ್ಳೋಣ. ಅಕ್ಕಪಕ್ಕದ ಮನೆಯವರೆಲ್ಲ ಒಳ್ಳೆಯವರು. ನನ್ನ ಬಗ್ಗೆ ಅಭಿಮಾನವಿಟ್ಟಿದ್ದಾರೆ, ಅದು ನನ್ನ ಪುಣ್ಯ, ಪ್ರಭಾಕರರಾವ್ ನನಗೆಷ್ಟು ಸಹಾಯ ಮಾಡುತ್ತಿದಾರೆ! ಹಾಗಾಗಿ ಯಾರೂ ನನಗೆ ಕೆಡುಕಾಗುವಂಥದು ಏನೂ ಹೇಳಲಾರರೇನೋ. ನಾಳೆ ರಿಪೋರ್ಟ್ ನೋಡಿ, ಅದರಲ್ಲಿ ಆತ್ಮಹತ್ಯೆ ಎಂದು ತೀರ್ಮಾನಿಸಿದ್ದರೆ ಇವರಿಗೆಲ್ಲ ಒಂದು ಮಾತು ಹೇಳಿದರೆ ಸಾಕೇನೋ. ವಿಚಾರ ಕಾಂಪ್ಲಿಕೇಟ್ ಆಗಲಾರದು. ಹಾಗೆ ನಾನು ಇನ್‌ವಾಲ್ವ್ ಆಗದ ಹಾಗೆ ಶಶಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆಂದು ತೀರ್ಮಾನವಾದರೆ ನನಗೆ ಶಿಕ್ಷೆ ಕೊಡುತ್ತಾರೆಯೇ? ಈ ಬಗ್ಗೆ ನನಗೆ ಕಾನೂನು ಗೊತ್ತಿಲ್ಲ. ಏನಾಗತ್ತೋ ನೋಡಬೇಕು.

ಇನ್‌ಸ್ಪೆಕ್ಟರ ಮಾತಿನ ಧಾಟಿ ನೋಡಿದರೆ ಆತ ನಮ್ಮ ಬಗ್ಗೆ ತುಂಬ ಸಹಾನುಭೂತಿಯಿಂದ ಇರುವ ಹಾಗೆ ಕಾಣುತ್ತದೆ. ಎಲ್ಲ ಸರಿಯಾಗಿ ಮುಗಿದುಹೋದರೆ ಆತನಿಗೆ ಏನಾದರೂ ಸನ್ಮಾನ ಮಾಡಬೇಕು. ಎಂಥ ಒಳ್ಳೆ ಮನುಷ್ಯ! ಮಧ್ಯಾಹ್ನ ನಮ್ಮವರು ನಮ್ಮವರು ಅಂತ ಹೇಳುತ್ತಿದ್ದಾಗ ನನಗೆ ಒಂದು ರೀತಿ ಕಸಿವಿಸಿಯಾಗಿತ್ತು ನಿಜ, ಆದರೆ ಈಗ ಆತನ ಆ ಭಾವನೆಯೇ ನಮ್ಮನ್ನು ಕಾಪಾಡುವ ಹಾಗೆ ಕಾಣುತ್ತಿದೆ. ಹೇಗೋ ಅಂತೂ ದಡ ಕಂಡರೆ ಸಾಕು. ಅನದು ಅಸಾಮಾನ್ಯ ಸಾವೇನಲ್ಲ ಎಂದು ತೀರ್ಮಾನವಾಗಿಬಿಟ್ಟರೆ ಎಂಥ ದೊಡ್ಡ ಹೊರೆ ಇಳಿದ ಹಾಗಾಗುತ್ತದೆ!

ಅವನ ಡೆತ್ ಸರ್ಟಿಫಿಕೇಟ್ ಸಿಕ್ಕರೆ ಶಶಿಯ ಪ್ರಾವಿಡೆಂಟ್ ಹಣ ಇನ್‌ಶೂರೆನ್ಸ್ ದುಡ್ಡು ನನಗೇ ಬರುತ್ತದಲ್ಲವೇ? ಅವನು ತನ್ನ ಇನ್‌ಶೂರೆನ್ಸ್ ಪಾಲಿಸಿಯಲ್ಲಿ ನನ್ನ ಹೆಸರನ್ನೇ ನಾಮಿನಿಯಾಗಿ ಹಾಕಿದ್ದು ನನಗೆ ಚೆನ್ನಾಗಿ ಗೊತ್ತಿದೆ. ನಾನೇನೂ ಅವನನ್ನು ಇನ್‌ಶೂರ್ ಮಾಡಿಸು ಅಂತ ಹೇಳಿರಲೇ ಇಲ್ಲ, ಅವನಾಗವನೇ ಮಾಡಿಸಿಕೊಂಡದ್ದು. ವ್ಯವಹಾರವೆಲ್ಲ ನನ್ನ ಕಣ್ಣ ಮುಂದೆಯೇ ನಡೆಯಿತು. ನಮ್ಮ ಗುರುತಿನೊಡನೆ ಅವನಿಗೆ ಪಾಲಿಸಿ ಕೊಡಿಸಿದ್ದು. ಹೆಂಡತಿಯ ಹೆಸರಲ್ಲಿ ಇನು ಬಿಸಿನೆಸ್ ಮಾಡ್ತಿದ್ದ. ಎಷ್ಟೋ ಜನರ ಹಾಗೆ, ನನ್ನದಂತೂ ವಿಮೆ ಇತ್ತಲ್ಲ, ಶಶಿಯದು ಮಾಡಿಸಿ ಅಂತ ಹೇಳಿದಾಗ, ಅವನ್ನೇ ಕೇಳಿ ಅಂತ ನಾನು ಹೇಳಿದ್ದೆ. ಅವನು ಒಪ್ಪಿಕೊಂಡಿದ್ದ. ಹೆಚ್ಚಿನ ಹಣಕ್ಕೆ ಇನ್‌ಶೂರ್ ಮಾಡಿಸಿದ್ದ.

ಫಾರಂ ತುಂಬುವಾಗ ನನಗೆ ಜ್ಞಾಪಕಕ್ಕೆ ಬಂದಿತ್ತು. ಮೂರ್ಛೆ ರೋಗ ಇರುವವರಿಗೆ ವಿಮೆ ಮಾಡಿಸಲು ಕಾನೂನು ಅಡ್ಡಿ ಬಾರದೆ ಎಂದು. ನಾನು ಓದಿದ ಹಲವಾರು ಪುಸ್ತಕಗಳಲ್ಲಿ ಈ ವಿಷಯದ ಪ್ರಸ್ತಾಪ ಇತ್ತು. ಎಷ್ಟೋ ದೇಶಗಳಲ್ಲಿ ಅಂತಹ ರೋಗಿಗಳಿಗೆ ವಿಮೆಯ ಅವಕಾಶವಿಲ್ಲವಂತೆ. ಯಾಕೆಂದರೆ ಮೂರ್ಛೆ ಬರುವುದಕ್ಕೆ ನಿಯತಿಯಿಲ್ಲದ್ದರಿಂದ ಆಕಸ್ಮಿಕಗಳಲ್ಲಿ ಸಿಲುಕಿ ಅಂತಹ ರೋಗಿಗಳು ಸಾಯಬಹುದಾದ ಸಾಧ್ಯತೆಗಳು ಹೆಚ್ಚು. ಹೀಗಾಗಿ ಇನ್‌ಶೂರೆನ್ಸ್ ಕಂಪನಿಗಳು ಅಂತಹ ರಿಸ್ಕ್ ತೆಗೆದುಕೊಳ್ಳಲು ಹಿಂಜರಿಯುತ್ತವೆ ಎಂದು. ಆದರೆ ಕೆಲವು ದೇಶಗಳಲ್ಲಿ ಹೆಚ್ಚಿನ ಔದಾರ್ಯ ತೋರಿಸಿದ್ದಾರಂತೆ. ಮೂರ್ಛೆ ಬರುವುದು ಹತೋಟಿಯಲ್ಲಿದೆ ಅಂತ ವೈದ್ಯರು ಸರ್ಟಿಫಿಕೇಟ್ ಕೊಟ್ಟರೆ ಸ್ವಲ್ಪ ಹೆಚ್ಚಿನ ಪ್ರೀಮಿಯಂ ದರ ಹಾಕಿ ಇನ್‌ಶೂರ್ ಮಾಡಿಸುತ್ತಾರಂತೆ, ನಮ್ಮಲ್ಲಿ ಹೇಗಿದೆಯೋ ಕಾನೂನು, ನನಗೆ ತಿಳಿಯದು. ಬೇರೆ ದೇಶಗಳಲ್ಲಿ ಕಂಪೆನಿಗಳು ಖಾಸಗಿಯವಾದ್ದರಿಂದ ಹೆಚ್ಚು ನಿರ್ಬಂಧಗಳಿರಬಹುದು, ಆದರೆ ನಮ್ಮಲ್ಲಿ ಲೈಫ್ ಇನ್‌ಶೂರೆನ್ಸ್ ರಾಷ್ಟ್ರೀಕರಣವಾಗಿರುವುದರಿಂದ, ಸ್ವಲ್ಪ ವಿನಾಯಿತಿ ತೋರಿಸುವ ಕಾನೂನುಗಳಿರಬಹುದು. ಇಂತಹ ಕಾಯಿಲೆಯವರ ಬಗ್ಗೆ ಹೆಚ್ಚಿನ ಭದ್ರತೆಯೊದಗಿಸಿಕೊಡುವ ಉದ್ದೇಶದಿಂದ ವಿನಾಯಿತಿ ಇರಬಹುದು. ಆದ್ದರಿಂದಲೇ ಈ ವಿಚಾರ ಆಗ ಪ್ರಸ್ತಾಪ

ಮಾಡಿದ್ದೆ. ಈ ವಿಷಯ ಕೇಳಿದ ಏಜಂಟ್‌ಗೆ ಒಂದು ಕ್ಷಣ ಗೊಂದಲ. ಆ ಏಜಂಟ್‌ಗೇ ಈ ವಿಚಾರದ ಬಗ್ಗೆ ಸ್ಪಷ್ಟತೆ ಇರಲಿಲ್ಲ. ಏಜಂಟರಿಗೆಲ್ಲ ಕಾನೂನಿನ ನಿಖರವಾದ ಪರಿಚಯ ಎಲ್ಲಿರಲು ಸಾಧ್ಯ? ಅದಕ್ಕೇ ಅವನು "ಈ ವಿಚಾರ ಹೇಳೋದೇ ಬೇಡ ಸುಮ್ನಿರಿ" ಎಂದ.

"ಈಗ ಆ ವಿಚಾರ ಹೇಳದೆ, ಆಮೇಲೆ ಅದು ತಪ್ಪೂಂತ ಗೊತ್ತಾದರೆ ನಮ್ಮ ಮೇಲೆ ಅಪವಾದ. ಜೊತೆಗೆ ಕಟ್ಟಿದ ದುಡ್ಡೂ ಹೋಗತ್ತಲ್ಲ" ಎಂದಿದ್ದೆ.

"ಒಂದ್ಸಲ ಪಾಲಿಸಿ ಬಂದಾದ ಮೇಲೆ ಇದರ ಬಗ್ಗೆ ಯಾರು ಸಾರ್ ಹೇಳಕ್ಕೆ ಹೋಗ್ತಾರೆ ಕೆಲಸವಿಲ್ಲದೆ?"

"ಮೆಡಿಕಲ್ ಎಕ್ಸಾಮಿನೇಷನ್ ಮಾಡಿಸಬೇಕಲ್ಲ. ಅದರಲ್ಲಿ ಒಂದು ಕಾಲಂ ಇರೋ ಹಾಗೆ ನೆನಪು. ಕ್ರಾನಿಕ್ ರೋಗಗಳು ಏನಾದರೂ ಇದೆಯೇ ಅಂತ. ಆಗ ಏನ್ಮಾಡ್ತೀರಿ?"

"ಅದಕ್ಕೆ ಯಾಕೆ ಸಾರ್ ಯೋಚನೆ ಮಾಡ್ತೀರಿ? ನಮ್ಮ ಎಕ್ಸಾಮಿನರ್ ತುಂಬ ಒಳ್ಳೇ ಮನುಷ್ಯ. ಅದೂ ಅಲ್ಲದೆ ಇವರಿಗೆ ಎಪಿಲೆಪ್ಸಿ ಇದೇಂತ ನೋಡಿ ಬಿಟ್ಟಾಕ್ಷಣ ಎಲ್ಲಿ ಗೊತ್ತಾಗತ್ತೆ. ನೀವು ಹೇಳದೇ ಇದ್ದರೆ, ಎರಡೇ ನಿಮಿಷ ಈ ಮೆಡಿಕಲ್ ಎಕ್ಸಾಮಿನೇಷನ್ನು, ಹೈಟು, ವೈಟು, ಚೆಸ್ಟು, ಮಿಕ್ಕಿದ್ದೆಲ್ಲ ನಾರ್ಮಲ್, ಕ್ರಾನಿಕ್ ಡಿಸೀಸ್ ಕಾಲಂ ಬಂದಾಗ "ಏನಾದರೂ ಇದೆಯಾ?' ಅಂತ ಕೇಳ್ತಾರೆ ಡಾಕ್ಟ್ರು. 'ಇಲ್ಲ' ಅಂದರೆ ಆಯಿತು ಎಂದು ನಕ್ಕಿದ್ದ, ನಾನ್ಯಾಕೆ ಅಡ್ಡಿ ಮಾಡಬೇಕು? ಪಾಪ, ಶಶಿಗೆ ಒಂದಷ್ಟು ಆಪದ್ಧನವಾಗತ್ತೆ ಅದರಿಂದ ಎಂದು ಸುಮ್ಮನಾಗಿದ್ದೆ.

"ಅವನಿಗೆ ಕೆಲಸ ಸಿಕ್ಕಿದ್ದೂ ಈ ರೀತಿ ಮುಚ್ಚು ಮರೆಯಿಂದಲೇ ತಾನೆ? ಹಾಗೆ ಮುಚ್ಚುಮರೆ ಮಾಡಬೇಕಾಗಿಯೂ ಬಂದಿತ್ತು. ಅನಿವಾರ್ಯವಾಗಿ, ಶಶಿ ಡ್ರಾಫ್ಟ್ಸ್‌ಮನ್ ಕೋರ್ಸ್ ಮುಗಿಸಿದ ಮೇಲೆ ಅವನ ಕೆಲಸದ ಪ್ರಶ್ನೆ ಬಂದಿತ್ತು. ಕೆಲವು ಕಡೆಗಳಲ್ಲಿ ಅರ್ಜಿ ಹಾಕಬೇಕಾಗಿ ಬಂದಾಗ ಅದರ ಕಾಲಂ ಭರ್ತಿ ಮಾಡುವಾಗ ಈ ವಿಚಾರವನ್ನು ಪ್ರಾಮಾಣಿಕವಾಗಿ ನಮೂದಿಸಿತ್ತು. ಆದರೆ ಅಂತಹ ಕಂಪನಿಗಳು ಈ ರೋಗವಿದೆ ಅನ್ನೋ ಕಾರಣವನ್ನೇ ಕೊಟ್ಟು ಇವನಿಗೆ ಕೆಲಸ ಕೊಟ್ಟಿರಲಿಲ್ಲ. ತನ್ನ ಕೆಲಸ ಮಾಡುವುದರಲ್ಲಿ ಶಶಿಯೇನೂ ಕಳಪೆಯಲ್ಲ. ಅವನಿಗೆ ಇಮ್ಯಾಜಿನೇಷನ್ ಇಲ್ಲದಿರಬಹುದು. ಆದರೆ ಹೇಳಿದಷ್ಟು ಕೆಲಸವನ್ನು ಅಚ್ಚುಕಟ್ಟಾಗಿ, ಚಾಚೂ ತಪ್ಪದೆ ಮಾಡುವ ಸ್ವಭಾವ ಅವನದು. ಅವನು ಡ್ರಾಯಿಂಗ್ ಬರೆಯುತ್ತಿದ್ದುದೂ ಹಾಗೆಯೇ. ತುಂಬ ನೀಟಾಗಿ ಮಾಡುತ್ತಿದ್ದ. ಕೆಳಗಿನ ಹಂತಗಳಲ್ಲಿ ಆಗಬೇಕಾದ ಕೆಲದ ರೀತಿ ಇದೇ ತಾನೇ? ಮೇಲಿನೋರು ಏನೋ ಹೇಳಿದರೆ ಇವನು ತನ್ನ ಐಡಿಯಾನೆಲ್ಲ ತುರುಕಿ ಕೆಲಸ ಹಾಳುಮಾಡಿದರೆ? ಅದರ ಬದಲು ಹೇಳಿದಷ್ಟು ಮಾಡಿದರೆ ಎಲ್ಲ ಸುಗಮ. ಆ ಅರ್ಥದಲ್ಲಿ ನೋಡಿದರೆ ಶಶಿ ತುಂಬ ಒಳ್ಳೆಯ ಕೆಲಸಗಾರ. ಆದರೆ ಅವನ ದುರದೃಷ್ಟ ಈ ಕಾಯಿಲೆ ಅಂಟಿಕೊಂಡಿದೆ. ಅದೇ ಕಾರಣದಿಂದಾಗಿ ಅವನಿಗೆಲ್ಲೂ ಕೆಲಸ ಸಿಕ್ಕದಿದ್ದರೆ ಗತಿಯೇನು? ಅವನ ಪಾಡು ಅವನು ನೋಡಿಕೊಳ್ಳಬಹುದಾದ ಅವಕಾಶ ತಪ್ಪಿಹೋಗುತ್ತದಲ್ಲ. ನಾನೇನೋ ಅವನನ್ನ ಇರೋವರೆಗೂ ಕಾಪಾಡಿಕೊಂಡು ಹೋಗಬೇಕು ಎಂದು ನಿರ್ಧರಿಸಿದ್ದೆ ನಿಜ. ಆದರೆ ಪರಿಸ್ಥಿತಿ ಹೇಗೆ ಬರುತ್ತೋ ಕಂಡವರಾರು? ಅವನಿಗಿಂತ ಮುಂಚೆ ನಾನೇ ಸಾಯುವ ಹಾಗಾದರೆ? ಅವನನ್ನು ಮುಂದೆ ನೋಡಿಕೊಳ್ಳುವರಾರು? ಕೆಲಸವಿದ್ದು, ಹಣ ಸಂಪಾದನೆ ಮಾಡಿದರೆ. ದುಡ್ಡಿಗಾಗಿ ಅವನನ್ನು ನೋಡಿಕೊಳ್ಳುವವರು ಯಾರಾದರೂ ಬರ್ತಾರೆ. ಅಥವಾ ಎಷ್ಟೋ ಸಲ ಯೋಚನೆ ಮಾಡಿದ ಹಾಗೆ ಅವನು ಮದುವೇನೂ ಮಾಡಿಕೋಬಹುದು.

ನಾನೇನೋ ಆಗ ಅವನನ್ನು ನೋಡಿಕೊಳ್ಳೋ ನಿರ್ಧಾರವನ್ನು ಕೈಗೊಂಡಿದ್ದೆ ನಿಜ. ಆದರೆ ನನ್ನ ಮನಸ್ಸೇ ಮುಂದೆ ಏನಾಗತ್ತೊ ಹೇಳುವವರಾರು? ನನ್ನ ಸಂಸಾರದ ಸ್ಥಿತಿ ಯಾವ ಬದಲಾವಣೆಗಳನ್ನು ಕಾಣುತ್ತೋ. ನಮ್ಮಿಬ್ಬರ ಸಂಬಂಧ ಇದೇ

ರೀತಿ ಇರೋದಕ್ಕೆ ಸಾಧ್ಯ ಅಂತ ಯಾರು ಖಂಡಿತವಾಗಿ ಹೇಳೋರು? ಅಲ್ಲದೆ ಅವನು ಕೆಲಸಮಾಡದೆ ಮನೇಲಿ ಕೂತು ಏನು ಮಾಡಬೇಕು? ಅವನು ಕಲಿತದ್ದು ವ್ಯರ್ಥವಾಗೋದು ಒಂದು ಕಡೆ, ಸೋಮಾರಿತನದಿಂದ ಕಾಲ ಕಳೆಯಬೇಕಾಗಿ ಬಂದದ್ದು ಇನ್ನೊಂದು ಕಡೆ, ಈಗೆಲ್ಲ ಅವನು ಮನೇಲಿರೋದು ಅಂದ್ರೆ ಸಾಯಂಕಾಲ, ರಾತ್ರಿ, ಅಷ್ಟು ಹೊತ್ತು ಮನೇಲಿರೋದನ್ನೇ ಎಷ್ಟೋ ಸಲ ಸಹಿಸದ ಈ ರಮ, ಇನ್ನು ಅವನು ಇಪ್ಪತ್ನಾಲ್ಕು ಗಂಟೇನೂ ಮನೇಲೇ ಬಿದ್ದಿರೋ ಹಾಗೆ ಆದರೆ? ಅದೂ ಸಂಪಾದನೆಯಿಲ್ಲದೆ ದೇವರೇ ಗತಿ. ಅದಕ್ಕೇ ಇವೆಲ್ಲ ಯೋಚನೆಗಳನ್ನು ಮಾಡಿ ಹೇಗೋ ಅವನಿಗೊಂದು ಕೆಲಸಾಂತ ಕೊಡಿಸಬೇಕು ಎಂಬ ನಿರ್ಧಾರ ನಾನು ಆಗ ಕೈಗೊಂಡದ್ದು; ಒಳ್ಳೇದೇ ಆಯಿತು.

ಈಗ ಶಶಿ ಕೆಲಸಕ್ಕಿದ್ದ ಫ್ಯಾಕ್ಟರಿಯಲ್ಲಿ ಅವನಿಗೆ ಕೆಲಸ ಸಿಕ್ಕಿದ್ದೂ ಈ ರೀತಿ ಮುಚ್ಚು ಮರೆಯಿಂದಲೇ. ಇದು ಅರ್ಧ ಸರ್ಕಾರದ್ದು ಬೇರೆ. ಪೂರ್ತಿ ಖಾಸಗಿಯಾದ ಕಡೆಗಳಲ್ಲಿರೋ ಹಾಗೇ ತುಂಬ ಸ್ಟ್ರಿಕ್ಟ್, ಭಾರೀ ಲಂಚಕೊಟ್ಟು ಶಶಿಯನ್ನು ಅಲ್ಲಿ ಸೇರಿಸಿದ್ದೆ.

ದುಡ್ಡು ಹೊಂದಿಸಲು ರಮಳಿಂದ ದೊರೆತ ಸಹಾಯ ಕೂಡ ಮರೆಯುವಂಥದ್ದಲ್ಲ. ಮದುವೆಯ ತನ್ನ ಕೆಲವು ಒಡವೆಗಳನ್ನು ಕೊಟ್ಟು ಬ್ಯಾಂಕಲ್ಲಿಟ್ಟು ಹಣ ತರುವಂತೆ ಅವಳಾಗಿಯೇ ಹೇಳಿದಳು. ಅವಳೇನೂ ಮನುಷ್ಯಳಲ್ಲವೇ? ಕಷ್ಟ ಸುಖ ಅರಿಯದವಳೇ. ಆದರೆ ಮಕ್ಕಳಾದ ಮೇಲೆ ಅವಳ ಮನಸ್ಸು ಕೊಂಚ ಬದಲಾಯಿಸಿತೇನೋ. ಮಕ್ಕಳಿಗೇನಾದರೂ ಆಗಬಹುದೆಂಬ ಅವಳ ಭಯ ಅಸಹಜವೇನಲ್ಲವಲ್ಲ, ಅಂತೂ ಅವಳ ಔದಾರ್ಯ ಯೋಚನೆಗೀಡಾಗಿದ್ದ ನನಗೆ ಅನಿರೀಕ್ಷಿತವಾಗಿದ್ದಷ್ಟೇ ಅಲ್ಲ. ನನ್ನ ಹೊರೆಯನ್ನು ಬಹು ಮಟ್ಟಿಗೆ ಕಡಿಮೆ ಮಾಡಿತ್ತು.

ಇಷ್ಟೆಲ್ಲ ಸುಳ್ಳೋ ಪಳ್ಳೋ ಹೇಳಿ, ಲಂಚ ರುಷುವತ್ತು ಕೊಟ್ಟು ನಾನು ಶಶಿಯನ್ನು ಒಂದು ನೆಲೆಗೆ ತಂದದ್ದು ಅವನನ್ನು ಕೊಲ್ಲುವುದಕ್ಕೇನಾ? ಯಾರಾದರೂ ಹಾಗಂದುಕೊಂಡರೆ ನನಗೆ ತುಂಬ ಅನ್ಯಾಯ ಮಾಡಿದ ಹಾಗೆ. ಅವನ ಸಾವು ಅಸಹಜವಾದದ್ದು ಅಂತಲೇನಾದರೂ ತೀರ್ಮಾನವಾಗಿ ನನಗೆ ಅದರಿಂದ ತೊಂದರೆಯಾದರೆ ಇದಕ್ಕಿಂತ ದೊಡ್ಡ ದುರಂತ ಇರಲಾರದು. ಆದರೆ ಪ್ರೀತಿ–ಕಕ್ಕುಲತೆಗೆ ಇಷ್ಟರಮಟ್ಟಿಗಿನ ಅನ್ಯಾಯವಾಗಲಾರದು. ಇನ್‌ಸ್ಪೆಕ್ಟರ್‌ನ ಮಾತಿನ ಧಾಟಿಯಲ್ಲಿ ಸಾಂತ್ವನದ ರೀತಿಯಿತ್ತೇ ಹೊರತು ಹೆದರಿಸುವ ಬಗೆಯಿರಲಿಲ್ಲ. ಹೇಗೋ ಅಂತೂ ಇದು ಪಾರುಗಂಡರೇ ಸಾಕು.

ಈ ಶವ ಶಶಿಯದೇ ಆಗಿಲ್ಲದಿರಬಹುದು. ಯಾರಿಗೆ ಗೊತ್ತು? ಅವನು ಬೇರೆಲ್ಲೋ ಹೋಗಿ ಬದುಕಿರಬಹುದು; ಒಂದಷ್ಟು ದಿನವಾದ ಮೇಲೆ ಬರಬಹುದು; ನಾಳೆಯೇ ಬರಬಹುದು. ಈವತ್ತು ರಾತ್ರಿಯೇ ಕಾಣಿಸಿಕೊಂಡರೆ? ಅದೆಂಥ ಅನಿರೀಕ್ಷಿತ ಪರಿಣಾಮವುಂಟುಮಾಡಬಹುದು? ಅವನು ಚೆನ್ನಾಗಿರಲಿ, ದೇವರೇ. ಆದರೆ ಪ್ಯಾಂಟು ಶರ್ಟುಗಳು ಅವನವೇ ಇದ್ದ ಹಾಗಿವೆಯಲ್ಲ. ನಾಳೆ ಕಮಿಷನರ್ ಆಫೀಸಿಗೆ ಹೋಗುವುದಕ್ಕೆ ಮುಂಚೆ ಲಾಂಡ್ರಿ ಮತ್ತು ಟೈಲರಿಂಗ್ ಶಾಪುಗಳನ್ನು ಕಂಡು ಈ ವಿಚಾರ ಖಚಿತಪಡಿಸಿಕೊಳ್ಳಬೇಕು.

– – –

ಶಶಿಗೆ ಹಣದ ಬಗ್ಗೆ ವ್ಯಾಮೋಹ ಹೆಚ್ಚೆಂದು ಎಂಥವರಿಗೂ ತಿಳಿಯುತ್ತದೆ. ತಿಂಗಳಿಗೆ ಇಂತಿಷ್ಟೆಂದು ನನಗೆ ಹಣಕೊಡುವುದನ್ನು ಬಿಟ್ಟರೆ ಅವನಿನ್ನೆಂದೂ ಹೆಚ್ಚಿನ ವಸ್ತುವನ್ನು ಮನೆಗೆ ತಂದವನಲ್ಲ. ಮನೆಗೊಂದು ತರಕಾರಿಯೆಂದೋ ಹಣ್ಣೆಂದೋ ಅಪರೂಪದ ವಸ್ತುವೆಂದೋ ಯಾವತ್ತೂ ಕೊಂಡು ಬಂದಿಲ್ಲ. ಕೊನೆಗೆ ಮಕ್ಕಳಿಗೆ ಎಂದು ಒಂದಷ್ಟು ಮಿಠಾಯಿಗಳನ್ನು ಅಪರೂಪಕ್ಕೂ ತರುವಂತಹ ಬುದ್ಧಿ ಅವನಲ್ಲೆಂದೂ ಹುಟ್ಟಿರಲಿಲ್ಲ. ಎಷ್ಟೋ ವೇಳೆ ಆ ಹುಡುಗರ ಕೈಲಿದ್ದ ಚಿಲ್ಲರೆ ಕಾಸಿಂದ ಪೆಪ್ಪರಮಿಂಟು ಚಾಕಲೇಟುಗಳನ್ನು ಕೊಳ್ಳಲು ಅವಕ್ಕೆ ಪುಸಲಾಯಿಸಿ ತಾನೊಂದಷ್ಟು ಗಿಲಿಬುಕೊಂಡುದನ್ನು

ನಾನೇ ಕಂಡಿದ್ದೇನೆ. ಅವನ ಈ ರೀತಿ ತಮಾಷೆಯದಾಗಿರಬಹುದು ಆದರೆ ಅದು ಅವನ ಇನ್ನೊಂದು ಮುಖವನ್ನೂ ಸೂಚಿಸುತ್ತದೆಂಬುದರಲ್ಲಿ ಸಂಶಯವಿಲ್ಲ.

ನಾನೆಂದೂ ಇದಕ್ಕಾಗಿ ಅವನನ್ನು ದೂರಿದವನಲ್ಲ, ವ್ಯಂಗ್ಯದ ಮಾತೂ ಆ ಬಗ್ಗೆ ನನ್ನ ಬಾಯಿಂದ ಬಂದಿಲ್ಲವೆಂದು ಖಂಡಿತವಾಗಿ ಹೇಳಬಲ್ಲೆ. ಇನ್ನೂ ರಮಾ ಆ ಬಗ್ಗೆ ಕೆಲವೇಳೆ ತಮಾಷೆಯಾಗಿಯೋ, ಮತ್ತೆ ಕೆಲವು ಸಂದರ್ಭಗಳಲ್ಲಿ ನೇರವಾಗಿ ಚುರುಕಾಗಿಯೋ ಹೇಳಿದ್ದಾಳೆ. ನಾನೆಷ್ಟಾಗಲೀ ಅವನನ್ನು ಮೊದಲಿನಿಂದ ಬಲ್ಲವನು; ಜೊತೆಯಲ್ಲಿ ಬೆನ್ನಲ್ಲಿ ಬಿದ್ದವನು. ಅವನ ಸ್ವಭಾವ, ಅವನಿರುವ ವಿಚಿತ್ರ ಪರಿಸ್ಥಿತಿ ನನಗೆ ಇತರರೆಲ್ಲರಿಗಿಂತ ಚೆನ್ನಾಗಿ ತಿಳಿದಿದೆ, ಆ ಬಗ್ಗೆ ವ್ಯಂಗ್ಯದ ಮಾತುಗಳನ್ನಾಡುವುದಿರಲಿ, ಕಷ್ಟದ ಪ್ರಸಂಗಗಳಲ್ಲಿ ಪ್ರತಿಫಲವಿಲ್ಲದೆ ಅವನಿಗೆ ಸಹಾಯ ಮಾಡಿದ್ದೇನೆ. ಸಾಮಾನ್ಯವಾಗಿ ಅವನ ಔಷಗಳನ್ನು ಶಶಿಯೇ ತರುತ್ತಿದ್ದುದು. ಆದರೆ ಅವನು ಔಷಯನ್ನು ಕ್ರಮ ತಪ್ಪದೆ ತೆಗೆದುಕೊಳ್ಳಬೇಕೆಂಬ ಬಗ್ಗೆ ನನಗೆ ಹೆಚ್ಚು ಕಾತರವಿದ್ದು ಎಷ್ಟೋ ವೇಳೆ ಇನ್ನೊಂದೆರಡು ದಿನಗಳಲ್ಲಿ ಮುಗಿಯುತ್ತದೆ ಎನಿಸಿದಾಗ, ಮರೆತು ಹೋದೀತು ಎಂದು ನಾನೇ ಅವನ ಔಷಧಿಯನ್ನು ತಂದದ್ದುಂಟು, ಹಾಗೆಯೇ ಹಬ್ಬ ಹರಿದಿನಗಳಲ್ಲಿ ಮಕ್ಕಳಿಗೆ ನಮಗೆ ಎಂದು ಬಟ್ಟೆ ತೆಗೆದುಕೊಂಡಾಗ ಅವನೊಬ್ಬನನ್ನು ದೂರವಿರಿಸುವ ಮುಜುಗರವುಂಟಾಗಿ ಅವನಿಗಾಗಿ ಬಟ್ಟೆ ಹರಿಸಿದ ಪ್ರಸಂಗಗಳುಂಟು.

ಅಷ್ಟೇ ಅಲ್ಲ, ಎರಡು ವರ್ಷಗಳ ಹಿಂದೆ ಅವರ ಫ್ಯಾಕ್ಟರಿಯಲ್ಲಿ ದೀರ್ಘ ಕಾಲದ ಮುಷ್ಕರ ಹಿಂಸಾಚಾರಗಳೆಲ್ಲ ನಡೆದವು; ಅಂಥ ಸಂದರ್ಭಗಳಲ್ಲಿ ಏನಾದೀತೋ ಎಂಬ ಭಯದಿಂದ ಫ್ಯಾಕ್ಟರಿಗೆ ಹೋಗಬೇಡವೆಂದು ನಾನು ತಡೆದಿದ್ದೆ. ಮುಂದೆ ಎರಡು ತಿಂಗಳ ಕಾಲ ಲಾಕ್‌ಔಟ್ ಘೋಷಣೆಯಾಗಿ ಅವನಿಗೆ ಸಂಬಳ ಬಾರದಾದಾಗ ಅವನನ್ನು ಹಣ ಹೇಗಾದರೂ ಕೊಡು ಎಂದು ಹೇಳಿದವನಲ್ಲ. ಯಾವತ್ತೂ ದುಡ್ಡು ಕೊಡಲಿಲ್ಲವಲ್ಲಾ ಎಂದು ಅವನಿಗೆ ನಾನು ಹೇಳಿದ್ದೇ ಇಲ್ಲ. ಆದರೆ ಅವನೂ ಸಾಮಾನ್ಯವಾಗಿ ಸಂಬಳದ ದಿನ ಸಾಯಂಕಾಲ ನಿಯತವಾದ ಹಣವನ್ನು ನನಗೆ ತಂದೊಪ್ಪಿಸುತ್ತಿದ್ದ; ಇದನ್ನು ಹೇಳದೆ ಇದ್ದರೆ ಅವನಿಗೆ ಅನ್ಯಾಯ ಮಾಡಿದಂತಾದೀತು.

ಮಿಕ್ಕ ದುಡ್ಡನ್ನು ಅವನು ಹೇಗೆ ಖರ್ಚು ಮಾಡುತ್ತಿದ್ದನೋ, ಆ ತನಿಖೆಗೆ ನಾನೆಂದೂ ಕೈಹಾಕಿರಲಿಲ್ಲ. ಬಟ್ಟೆ ಬರೆ, ಓಟಾಟ ಎಂದು ಪ್ರತಿ ನಿತ್ಯದ ವೆಚ್ಚ ಅವನಿಗೊಂದಷ್ಟು ಇದ್ದೇ ಇರುತ್ತದಲ್ಲ. ಆದರೂ ಸುಮಾರು ಹಣ ಉಳಿಯುತ್ತದೆಂದು ಬಲ್ಲೆ. ಅದನ್ನು ಹೇಗೆ ಬೇಕಾದರೂ ವಿತರಣೆ ಮಾಡಿಕೊಳ್ಳುವ ಅಧಿಕಾರ ಅವನಿಗಿದೆ ಎಂದು ನಾನು ಸುಮ್ಮನಿರುತ್ತಿದ್ದೆ. ಅವನು ಹಣವನ್ನು ತನ್ನ ಸ್ನೇಹಿತರಲ್ಲಿಯೇ ಬಡ್ಡಿಗಾಗಿ ಕೊಡುತ್ತನೆಂದು ಕೇಳಿದ್ದೆ. ಅದನ್ನಿನ್ನು ವಿಚಾರಿಸಲು ಹೋದರೆ ನನ್ನ ಬಗ್ಗೆ ತಪ್ಪು ತಿಳಿದಾನೆನ್ನುವುದಲ್ಲದೆ, ಅವನ ಮನಸ್ಸಿಗೆಬೇಸರವಾದೀತೆಂಬ ಕಾರಣದಿಂದ ಅದನ್ನು ವಿಚಾರಿಸುವ ಗೋಜಿಗೇ ಹೋಗಿರಲಿಲ್ಲ. ಈ ವ್ಯವಹಾರದ ಬಗ್ಗೆ ನನಗಿಂತ ರಮಾಗೆ ಚೆನ್ನಾಗಿ ಗೊತ್ತಿದ್ದಂತೆ ತೋರುತ್ತದೆ. ಅವನ ಜಿಪುಣತನ, ಸಂಗ್ರಹ ಬುದ್ಧಿಯನ್ನು ಕಂಡು ರಮ ಶಶಿಯನ್ನು "ಜಿಪುಣ ಶೆಟ್ಟೀ'ಯೆಂದೇ ಅಡ್ಡ ಹೆಸರಿನಿಂದ ಕರೆಯುತ್ತಿದ್ದಳು. ಆದರೆ ನನ್ನ ಸ್ವಭಾವ ತಿಳಿದ ಅವಳು ನನ್ನಲ್ಲಿ ಆ ವಿಷಯ ಹೆಚ್ಚೇನನ್ನೂ ಹೇಳುತ್ತಿರಲಿಲ್ಲ.

ಅವನ ಬಡ್ಡಿ ವ್ಯವಹಾರದ ಬಗ್ಗೆ ನನಗೆ ಸ್ಪಷ್ಟವಾಗಿ ಗೊತ್ತಾದದ್ದು ಅವನ ಸ್ನೇಹಿತನೊಬ್ಬನ ಮೂಲಕ. ಒಮ್ಮೆ ಒಂದೆರಡು ದಿನಗಳು ಶಶಿ ಯಾಕೋ ಮಂಕಾಗಿದ್ದಾನೆಂದು ಅನ್ನಿಸಿತ್ತು. ಪ್ರತಿನಿತ್ಯ ಅವನ ಓಡಾಟದ ರೀತಿ ಕಂಡ ನನಗೆ ವ್ಯತ್ಯಾಸ ಗೊತ್ತಾಗದೇ? ರಮಳಿಗೂ ಹಾಗನ್ನಿಸಿರಬೇಕು. ಆದರೆ ಅವಳು ಅಂತಹದನ್ನೆಲ್ಲ ಹೆಚ್ಚು ಮನಸ್ಸಿಗೆ ಹಚ್ಚಿಕೊಳ್ಳುವವಳಲ್ಲ. ಶಶಿ ಎಷ್ಟಾದರೂ ನನಗಿಂತ ಅವಳಿಗೆ ದೂರ. ಅವನ ಕಾಯಿಲೆ ನರಳಿಕೆ ದುಃಖನೋವುಗಳ ಬಗ್ಗೆ ಅವಳು ಸೂಕ್ಷ್ಮ ಪ್ರತಿಕ್ರಿಯೆ ಪರಿತಾಪ ತೋರುವುದಿಲ್ಲವೆಂದು ಅವಳ ಬಗ್ಗೆ ಎಷ್ಟೋ ಸಾರಿ? ನನಗೆ ಬೇಸರವಾಗಿದೆ. ಆದರೆ ಅದನ್ನೆಲ್ಲ ಹೇಳಿ ಕಲಿಸುವ ಹಾಗಿಲ್ಲವಲ್ಲ. ಹೃದಯಕ್ಕೆ ತಾಗದಿದ್ದರೇ ಏನು ಮಾಡುವುದು? ನನಗೆ ಅವತ್ತೆರಡು ದಿನ ಅವನ ಮಂಕು ಮುಖ ಎದ್ದು

ಕಾಣಿಸಿತ್ತು. ಯಾಕೆ ಎಂದು ವಿಚಾರಿಸಿದ್ದೆ. ಏನಿಲ್ಲ ಎಂದು ಮುಖ ಕೊಟ್ಟು ಮಾತಾಡದೆ ಜಾರಿಕೊಂಡಿದ್ದ. "ಮೈಗಿಯ್ ಸರಿಯಾಗಿಲ್ಲವೇನೋ? ಎಂದು ಬಲವಂತ ಪಡಿಸಿ ಕೇಳಿದಾಗ "ನಂಗೇನೋ ಆಗಿದೆ. ನೀನು ಸುಮ್ಮನಿರು ಸಾಕು' ಎಂದು ಸಿಡುಕಿದ್ದ. ನಾನು ಸುಮ್ಮನಾಗಿದ್ದೆ.

ಆಮೇಲೆ ಒಂದೆರಡು ದಿನದ ಬಳಿಕ ಪೇಟೆಯಲ್ಲಿ ಅವನ ಆಫೀಸಿನವರೊಬ್ಬರು ಸಿಕ್ಕಿದ್ದರು. ಪರಸ್ಪರ ಕುಶಲಗಳಾದ ಮೇಲೆ ಅವರು ಮಾತಿಗೆ ಮಾತು ಬಂದು ಶಶಿಯ ಸಮಾಚಾರ ಹೇಳಿದ್ದರು. ನನಗೆ ಆ ವಿಚಾರತಿಳಿದಿದೆಯೆಂಬಂತೆ ಸಹಾನುಭೂತಿ ವ್ಯಕ್ತಪಡಿಸಲು ಆ ಮಾತುಗಳನ್ನು ಆತ ಹೇಳಿದ್ದು ಸ್ಪಷ್ಟವಾಗಿತ್ತು. ನಾನು ಅವರನ್ನು ಕಾಫಿಗೆ ಬನ್ನಿರೆಂದು ಹತ್ತಿರದ ಹೋಟೆಲಿಗೆ ಕರೆದುಕೊಂಡು ಹೋಗಿದ್ದಾಗ ಅವರು ಮಧ್ಯೆ, "ಪಾಪ, ಶಶಿಧರ್‌ಗೆ ಒಳ್ಳೆ ಮೋಸವಾಯಿತು" ಅಂದರು.

"ಏನು ಸಮಾಚಾರ? ಯಾಕೆ?"

"ಅದೇ ಸಾರ್, ಅವರು ಕೊಟ್ಟಿದ್ದ ದುಡ್ಡಿಗೆ ಮೋಸವಾಯ್ತಲ್ಲ" ಅಂದರು.

"ಯಾವ ದುಡ್ಡು?" ಎಂದೆ.

"ತಮಗೆ ಗೊತ್ತೇ ಇಲ್ಲವಾ ಸಾರ್! ನಮ್ಮ ಆಫೀಸಿನ ಶ್ರೀನಿವಾಸ ಅನ್ನೋರಿಗೆ ಅವರು ಬಡ್ಡೀಗೆ ಅಂತ ದುಡ್ಡು ಕೊಟ್ಟಿದ್ದರಲ್ಲ ಅದು."

ಯಾರಿಗೋ ದುಡ್ಡು ಕೊಟ್ಟಿದ್ದಾನೆ, ಅವರು ಕೈಕೊಟ್ಟಿದ್ದಾರೆ ಅಂತ ಗೊತ್ತಾಯಿತಲ್ಲ; ಕುತೂಹಲವುಂಟಾಯಿತು. ಮುಂದಿನ ವಿಚಾರ ತಿಳಿಯಬೇಕು ಎನ್ನಿಸಿತು. ಆದರೆ ಈ ಸಮಾಚಾರ ನನಗೆ ಗೊತ್ತಿಲ್ಲವೆಂದು ತಿಳಿದು ಅವರ ಮುಖ ಪೆಚ್ಚಾಯಿತು; ಗೊಂದಲಕ್ಕೆ ಬಿದ್ದರು. ಹೇಳಬಾರದ್ದನ್ನು ಹೇಳಿದೆನೇನೋ ಎಂಬ ಭಾವನೆಯವರಲ್ಲುಂಟಾದಂತಿತ್ತು. ಅವರಿಗೆ ಮುಜುಗರವಾಗಬಾರದೆಂದು ಅವರಿಗೆ ಮುಜುಗರವಾಗಬಾರದೆಂದು ಒಂದು ಕಡೆ, ವಿಷಯ ತಿಳಿದುಕೊಳ್ಳಬೇಕೆಂದು ಇನ್ನೊಂದು ಕಡೆ ಸ್ವಲ್ಪ ನಟನೆ ಮಾಡಿದೆ.

"ಓ, ಅದಾ? ಸರಿ, ಸರಿ. ಅವನೇನೋ ಹೇಳ್ತಾ ಇದ್ದ. ನಾನೇ ಬೇರೆ ಕಡೆ ಗಮನ ಹರಿಸ್ತಿದ್ದಾಗ ಹೇಳಿದ್ದರಿಂದ ಎಲ್ಲ ಕೇಳಿಸ್ಕೊಳ್ಳಿಲ್ಲ" ಎಂದು ವಿಷಯ ನನಗೆ ಸ್ವಲ್ಪ ತಿಳಿದಿದೆಯೆಂದು ತೋರಿಸಿಕೊಂಡು ಮಿಕ್ಕ ವಿಚಾರವನ್ನೆಲ್ಲ ಎಳೆಎಳೆಯಾಗಿ ಕೇಳಿ ತಿಳಿದುಕೊಂಡೆ.

ಅವರ ಆಫೀಸಿನಲ್ಲಿ ಒಂದು ವರ್ಷದಿಂದ ಶ್ರೀನಿವಾಸ ಎನ್ನುವ ಹುಡುಗನೊಬ್ಬ ಟೆಂಪೋರರಿಯಾಗಿ ಕೆಲಸಮಾಡುತ್ತಿದ್ದನಂತೆ ಅವನೂ ಡ್ರಾಫ್ಟ್‌ಮನ್ನೇ ಅಂತೆ. ಒಂದು ವರ್ಷದ ಪರಿಚಯ. ಅವನೂ ತುಂಬ ತಮಾಷೆ ಆಸಾಮಿ. ಒಂದೆರಡು ತಿಂಗಳ ಹಿಂದೆ ಶಶಿಧರನನ್ನು ಪುಸಲಾಯಿಸಿ ತಿಂಗಳಿಗೆ ನೂರಕ್ಕೆ ಎರಡು ರೂಪಾಯಿ ಬಡ್ಡಿ ಕೊಡುತ್ತೇನೆಂದು ಎರಡು ಸಾವಿರ ರೂಪಾಯಿ ಸಾಲ ತಗೊಂಡಿದ್ದನಂತೆ. ಒಂದು ವಾರದ ಹಿಂದೆ ಅವನು ನಾಪತ್ತೆ ಆದನಂತೆ. ಆಮೇಲೆ ವಿಷಯ ತಿಳೀತು. ಅವನಿಗೆ ಕೊಯಮತ್ತೂರಿನ ಕಾರ್ಖಾನೆಯೊಂದರಲ್ಲಿ ಪರ್ಮನೆಂಟ್ ಕೆಲಸ ಸಿಕ್ಕಿದೆ ಅಂತ. ಅವರ ಮನೆಗೆ ಹುಡುಕಿಕೊಂಡು ಹೋದರೆ, ಅವನಿರಲಿಲ್ಲ. ಆಗಲೇ ಹೊರಟುಬಿಟ್ಟಿದ್ದ. ಇಲ್ಲಿನದು ಟೆಂಪೋರರಿ, ಒಂದನೇ ತಾರೀಕು ಸಂಬಳ ತೆಗೆದುಕೊಂಡು ಒಂದುವಾರ ರಜ ಹಾಕಿದನಂತೆ. ಆಮೇಲೆ ಬರಲೇ ಇಲ್ಲ. ಇಲ್ಲಿನ್ನೇನೂ ಅವನ ಮೇಲೆ ಹಿಡಿತವಿಲ್ಲ. ಪ್ರಾಯಶಃ ಆ ಕಾರ್ಖಾನೆಗೆ ಹಾಕಿದ್ದ ಅರ್ಜಿಯಲ್ಲಿ ತಾನು ನಿರುದ್ಯೋಗಿ ಅಂತಲೇ ಹಾಕಿಕೊಂಡಿದ್ದನೇನೋ. ಶಶಿಗೆ ಸಿಕ್ಕಿದ್ದು ಒಂದು ತಿಂಗಳ ಬಡ್ಡಿ ನಲವತ್ತು ರೂಪಾಯಿ ಅಷ್ಟೆ. ಇನ್ನಿವನು ಅವನನ್ನು ಹುಡುಕಿಕೊಂಡು ಕೊಯಮತ್ತೂರಿಗೆ

ಹೋಗೋದೆ? ಅಲ್ಲಿ ಸಿಕ್ಕದಿರಬಹುದು. ಸಿಕ್ಕಿದರೂ ಇವನು ದುಡ್ಡು ಕೊಟ್ಟಿದ್ದಕ್ಕೆ ದಾಖಲೆಯಿಲ್ಲವಲ್ಲ, ಎಲ್ಲಿ ಕೊಟ್ಟಿದ್ದೀಯಾ ಅಂತ ಕೇಳಿದರೆ ಮುಗಿಯಿತಲ್ಲ ವಸೂಲಿಯ ಕೆಲಸ! ತಮಗೂ ಅದಕ್ಕೂ ಸಂಬಂಧವಿಲ್ಲವೆಂದಿದ್ದರು ಮನೆಯವರು.

ಈ ಬಗ್ಗೆ ಶಶಿಯ ಹತ್ತಿರ ವಿಚಾರಿಸೋಣವೇ ಅಂದುಕೊಂಡೆ. ಅವನು ಈ ವಿಷಯ ತುಂಬ ಹಚ್ಚಿಕೊಂಡಂತೆ ತೋರುತ್ತದೆ. ಈವರೆಗೂ ಅಂಥ ವಿಚಾರಗಳಲ್ಲಿ ನಾನು ಕೈಹಾಕಿಲ್ಲ. ಇವತ್ತು ಯಾಕೆ ವಿಚಾರಿಸಬೇಕು. ಅವನು ಕಳೆದುಕೊಂಡದ್ದು ಅವನದೇ ಹಣ, ನನ್ನದಲ್ಲವಲ್ಲ. ಅದರ ಮೇಲೆ ನನಗೆ ಯಾವ ಅಧಿಕಾರವೂ ಇಲ್ಲ. ಅದನ್ನೆಲ್ಲ ಕೇಳಿ ಅವನ ಮನಸ್ಸಿಗೆ ಮತ್ತಷ್ಟು ಬೇಸರವನ್ನೇಕೆ ಉಂಟುಮಾಡಬೇಕೆಂದು ಸುಮ್ಮನಾದೆ. ಆದರೆ ವಿಷಯ ನನ್ನ ಬಾಯಲ್ಲೇ ಇರಲಿಲ್ಲ. ಯಾವಾಗಲೋ ಏಕಾಂತದ ಕ್ಷಣದಲ್ಲಿ ರಮಳ ಹತ್ತಿರ ಇದನ್ನೆಲ್ಲ ಗಂಟುಬಿಚ್ಚಿದ್ದೆ. ಅವಳು ಎಲ್ಲ ಕೇಳಿಯಾದ ಮೇಲೆ "ಹಾಗೆ ಆಗಬೇಕು ಜಿಪುಣಶೆಟ್ಟಿಗೆ. ಒಂದು ದಿವಸ ಮಕ್ಕಳಿಗೆ ಒಂದು ಚಾಕಲೇಟ್ ತಂದು ಕೊಡದೆ ಕಾಸಿಗೆ ಕಾಸು ಗಂಟುಹಾಕಿದ್ದ. ಸರಿಯಾಗಿ ಬುದ್ಧಿ ಬರಬೇಕು ಅವಂಗೆ" ಎಂದು ಖಾರವಾಗಿ ಮಾತಾಡಿದ್ದಳು. ಇವಳ ಹತ್ತಿರ ಹೇಳಿದ್ದು ಸರಿಯಾಗಲಿಲ್ಲ ಎಂದು ಆಗ ಗೊತ್ತಾಯಿತು.

ಇದನ್ನೆಲ್ಲ ಅವಳೇ ಅನಂತರ ಮೈದುನನನ್ನು ಕೇಳಿದ್ದಳು ಅಂತ ತೋರುತ್ತೆ. ಒಂದು ದಿನ ಶಶಿ ನನ್ನನ್ನು "ನಾನು ಸಾಲ ಕೊಟ್ಟಿದ್ದು ಮುಳುಗಿತು ಅಂತ ನಿನಗಾರು ಹೇಳಿದರು" ಅಂತ ಕೇಳಿದ. ನನಗಾಗಲೇ ಅದು ಅರ್ಧಂಬರ್ಧ ಮರೆತು ಹೋಗಿತ್ತು. "ಯಾವ ಸಾಲ?" ಅಂದೆ.

"ನಮ್ಮ ಆಫೀಸಿನೋನಿಗೆ ಕೊಟ್ಟ ಸಾಲದ್ದು" ಅಂದ. ಆಗ ಜ್ಞಾಪಕಕ್ಕೆ ಬಂತು. "ಅದಾ, ನಿಮ್ಮ ಆಫೀಸಿನ ನಿನ್ನ ಸ್ನೇಹಿತ ಹೇಳಿದರು."

"ಯಾವ ಸ್ನೇಹಿತ?" ಅವನದು ಯಾವಾಗಲೂ ಈ ರೀತಿಯ ಪಾಟೀ ಸವಾಲಿನ ವೈಖರಿಯೇ.

"ಅವರ ಹೆಸರು ಗೊತ್ತಿಲ್ಲ ಕಣೋ."

"ಹೇಗಿದ್ದರು ಅವರು?"

"ಸ್ವಲ್ಪ ಬೆಳ್ಳಗಿದ್ದಾರಲ್ಲ ಅವರು" ಎಂದೆ.

"ಬೆಳ್ಳಗೆ ದಪ್ಪಗಿರೋರೋ, ಸಣಕಲಾಗಿ ಎತ್ತರವಾಗಿರೋರೋ?" ನನಗೆ ಅಷ್ಟೆಲ್ಲ ವಿವರಗಳು ಸ್ಪಷ್ಟವಾಗಿ ನೆನಪಿರಲಿಲ್ಲ.

"ಹೋಗೋ ಯಾರೋ ಒಬ್ಬರು. ಇವಾಗ್ಯಾಕೆ ಅವೆಲ್ಲ. ಆಯ್ತಲ್ಲ ಇನ್ನೂ ಆಕಾಶ ತಲೆಮೇಲೆ ಬಿದ್ದೋನ ಹಾಗಿರಬೇಡ" ಎಂದೆ. ಅವನು ಸುಮ್ಮನೇನೋ ಆದ. ಮುಖ ಮಾತ್ರ ದಿನಪೂರ್ತಿ ಉರುಂ ಅಂತಿತ್ತು.

ಶಶಿಗೆ ಯಾಕೆ ಹಣದ ಬಗ್ಗೆ ಅಷ್ಟೊಂದು ವ್ಯಾಮೋಹ; ಅದನ್ನು ಮರಿ ಹಾಕಿಸಬೇಕೆನ್ನುವ ಚಪಲ ಎಂದು ನನಗೆ ಹಲವು ಬಾರಿ ಯೋಚನೆ ಬಂದಿದೆ. ಅವನು ಯಾರಿಗಾಗಿ ಕೂಡಿಹಾಕಬೇಕು? ಅಥವಾ ಕೂಡಿಸಿಡುವ ಮನೋಭಾವದವರಿಗೆ ಅದಕ್ಕೊಂದು ಕಾರಣವೇ ಬೇಕಿಲ್ಲವೇನೋ! ಮುಂದೆ ಕಾಯಿಲೆಯ ಮನುಷ್ಯನಾದ ನನಗೆ ಆಪದ್ಧನವಿರವೆಂಬ ದೂರಾಲೋಚನೆಯಿಂದ ಹೀಗೆ ಮಾಡುತ್ತಾನೆಯೇ ಅವನು? ಅವನ ಪ್ರಾವಿಡೆಂಟ್ ಹಣ, ಇನ್‌ಶೂರೆನ್ಸ್, ದುಡ್ಡು. ಬೋನಸ್ಸು ಇಷ್ಟು ಸಾಲದೆ? ಬಡ್ಡಿಗೆ ಕೊಟ್ಟು ಹಣ ಬೆಳೆಸಬೇಕೆ?" ನನಗೇ ಕೊಡೋ ಒಂದು ಸೈಟಾದರೂ ಕೊಂಡುಕೋತೀನಿ. ಒಂದು ವರ್ಷ ನೀನು ಕೊಡೋ ದುಡ್ಡು ಒಟ್ಟಿಗೇ ಕೊಡು, ತಿಂಗಳು ತಿಂಗಳು ಕೊಡಬೇಡ" ಎಂದು ಕೇಳಬೇಕೆನ್ನುವ ತುಂಟತನ ನನ್ನಲ್ಲಿ ಹೊಕ್ಕಿತ್ತು. ಆದರೆ ವ್ಯವಹಾರ ಬೇರೆಯವರ ಜೊತೆಗಿರಲಿ, ಅವನೊಡನೆ ಬೇಡ ಎಂದು, ಸುಮ್ಮನಾಗಿದ್ದೆ.

ಅವನು ಇನ್ನಾವ ಸುಖವೂ ಪಡಲಾರ, ಪಾಪ. ತನ್ನ ಆಸೆ–ಆಕಾಂಕ್ಷೆಗಳನ್ನೆಲ್ಲ ದುಡ್ಡಿನಲ್ಲಿಯೇ ಕಾಣ್ತಿದ್ದನೇನೋ. ! ಎಲ್ಲ ಅನಿಸಿಕೆಗಳನ್ನೂ ದುಡ್ಡಿನಲ್ಲಿ ಜೋಪಾನ ಮಾಡುವ ಬುದ್ಧಿಯೇ? ನೆರವೇರದ ಆಸೆ, ಸುತ್ತುವರಿದ ಕಾಯಿಲೆ ಕೀಳರಿಮೆ ಇವುಗಳು ಬದಲಿಗೆ ಹಣದ ರಾಶಿಯಿಂದ ಕಾಂಪನ್‌ಸೇಟ್ ಮಾಡುವುದು ಅವನ ಈ ಚರ್ಯೆಯ ಹಿಂದಿರುವ ಮನೋಭಾವವೇ ಎಂಬ ಆಲೋಚನೆ ನನಗಾಗುತ್ತದೆ. ಅದು ಪ್ರಾಯಶಃ ಅವನಿಗೆ ಹೆಮ್ಮೆಯ ಪ್ರತೀಕ; ದುಡ್ಡು ಬೆಳೆದಷ್ಟೂ ಅವನಿಗೆ ಸುಖವಿರಬಹುದು.

ಆದರೆ ಈ ರೀತಿ ಹಣ ಕೂಡಿಹಾಕುವುದೆಂದರೆ? ನನಗೆ, ಮಕ್ಕಳಿಗೆ ಬೇಡ. ತಾನಾದರೂ ಧಾರಾಳಿಯಾಗಿದ್ದಾನೆಯೇ ಎಂದರೆ ಅದೂ ಇಲ್ಲ. ಇವನ ಬಟ್ಟೆಬರೆ ನೋಡಿ ಎಷ್ಟೋ ಸಲ ಬೈದಿದ್ದೇನೆ. ಯಾಕೆ ಹೀಗೆ ಇವನು ಶಾಬಿಯಾಗಿರಬೇಕು, ಅಂಥ ದರಿದ್ರವೇನೂ ಇಲ್ಲವಲ್ಲ! ಒಂದಷ್ಟು ಒಳ್ಳೆ ಬಟ್ಟೆ ಹೊಲಿಸಿಕೊಳ್ಳಬಾರದೇ? ಬಾಯಿಬಿಟ್ಟು ಹೇಳಿದರೂ "ಇರಲಿ ಬಿಡೋ ನನಗೇನು" ಎಂದು ಹಾರಿಕೆಯ ಉತ್ತರ ಕೊಡುವವನು. ಯಾಕೆ ಒಳ್ಳೆಯ ಬಟ್ಟೆ ಧರಿಸಬಾರದು? ಅವನಿಗಿಂತ ಕಡಿಮೆ ಸಂಪಾದಿಸುವವರು, ಹೆಚ್ಚು ತಾಪತ್ರಯವಿರುವವರು ಅವನಿಗಿಂತ ಚೆನ್ನಾಗಿ ಉಡುಪು ಧರಿಸುತ್ತಾರೆ, ಇವನಿಗೇನು ಧಾಡಿ. ಎಷ್ಟೋ ಸಲ ಅವನಿರುವ ರೀತಿಯಲ್ಲಿ ಇವನು ನನ್ನ ತಮ್ಮ ಎಂದು ಕಾಣದವರು ನಂಬಲಾರದಷ್ಟು ಮಟ್ಟಿಗೆ ಕೊಳಕಾಗಿರುತ್ತಾನೆ. ಇವನಿಗೆ ಉಂಟಾಗುವ ಅಟ್ಯಾಕ್‌ಗಳಿಂದ ಅವನ ನವುರುತನ, ಸೂಕ್ಷ್ಮತೆ, ಸೌಂದರ್ಯಪ್ರಿಯತೆಗಳು ಹೊರಟುಹೋಗಿವೆಯೇ? ತಾನು ಚೆನ್ನಾಗಿ ಕಾಣಿಸಿಕೊಳ್ಳಬೇಕೆಂಬ ಚಪಲೂ ಅವನಲ್ಲಿ ಉಂಟಾಗದೆ? ಇತರರು ತನ್ನ ಬಟ್ಟೆ ಬರೆ ರೀತಿ ನೀತಿ ನೋಡಿ ಹೊಗಳಿದರೆ ಅವನಿಗೆ ಸಂತೋಷ ವಾಗುವುದಿಲ್ಲವೆ? ಅವನಿಗೆ ಈ ಬಗೆಯ ಆಸೆಗಳೇ ಉದಿಸುವುದಿಲ್ಲವೇ? ಬರೀ ಹಣ ಕೂಡಿಡುವ ಬುದ್ಧಿ ಮಾತ್ರ ಯಾಕೆ ಬೆಳೆಯಬೇಕು; ತನಗೆ ಉಪಯೋಗಕ್ಕೆ ಬಾರದ ರೀತಿಯಲ್ಲಿ ಹಣವನ್ನು ಕೂಡಿಡುವ ವಿಚಿತ್ರ ಮನೋಭಾವಕ್ಕೆ ಏನನ್ನಬೇಕೋ ತಿಳಿಯದು.

ಚೆನ್ನಾಗಿ ಉಡುಪು ಧರಿಸಿ, ಅಲಂಕಾರ ಮಾಡಿಕೊಂಡು ಹೆಣ್ಣುಗಳ ಗಮನವನ್ನಾದರೂ ಸೆಳೆಯಬೇಕೆಂಬ ಬಯಕೆ ಅವನಿಗೇಕೆ ಉಂಟಾಗುವುದಿಲ್ಲ? ಮಿಕ್ಕೆಲ್ಲ ರೀತಿಯಲ್ಲಿ ಅವನು ನಾರ್ಮಲ್ ಆದ ಮೇಲೆ ಈ ರೀತಿ ಅನ್ನಿಸಬೇಕಲ್ಲ. ಇದೇನು ತನ್ನ ಸ್ಥಿತಿಯನ್ನು ಅರ್ಥಮಾಡಿಕೊಂಡಿದ್ದರಿಂದ ಉಂಟಾದ ನಿರಾಶೆಯ ಪರಿಣಾಮವೋ, ವೈರಾಗ್ಯವೋ? ಆದರೆ ಕೂಡಿಹಾಕಲು ಈ ವೈರಾಗ್ಯ ಅಡ್ಡಿ ಬರುವುದಿಲ್ಲವೆ?

ಹೆಣ್ಣಿನ ವಿಚಾರ ಬಂದಾಗ ಆವತ್ತು ನಡೆದ ಪ್ರಸಂಗವೊಂದು ನೆನಪಿಗೆ ಬರುತ್ತದೆ. ರಾತ್ರಿ ಮಕ್ಕಳು ಮಲಗಿದ ಮೇಲೆ ನನ್ನ ರಮಳ ಏಕಾಂತತೆಗೆ ರಂಗು ಬಂದಿತ್ತು. ಆ ಕ್ಷಣದಲ್ಲಿ ಲೋಕದ ಎಲ್ಲ ತಾಪತ್ರಯಗಳೂ ಮರೆತು ಹೋಗುತ್ತದಲ್ಲ! ಮಕ್ಕಳಿಗೆ ಸರಿಯಾಗಿ ಹೊದ್ದಿಸಿ ನಮ್ಮ ಸರಸ ಪ್ರಾರಂಭಿಸಿದ್ದೆವು. ಎಷ್ಟೋ ವೇಳೆ, ಅನಿರೀಕ್ಷಿತವಾಗಿ ಇಂಥ ಕ್ಷಣಗಳು ಹೆಚ್ಚು ಮಾಧುರ್ಯದಿಂದ ಕೂಡುತ್ತವೆ. ವಿನಾ ಕಾರಣ ನಮ್ಮ ಕ್ರಿಯೆಯಲ್ಲಿ ಹೆಚ್ಚಿನ ಉತ್ಸಾಹ ಕಾಣುತ್ತದೆ. ಅಂದೂ ಹಾಗೆಯೇ ಆಗಿತ್ತು. ಇಬ್ಬರೂ ಪೂರ್ತಿ ಬತ್ತಲಾಗಿದ್ದೆವು. ಎಷ್ಟೋ ಹೊತ್ತಿನ ತನಕ ಹಾಯಾಗಿ ಹಾಗೇ ಮಲಗಿದ್ದೆವು. ಎಲ್ಲ ಪೂರ್ತಿಯಾದ ಮೇಲೆ ಸದ್ದಾಗದಂತೆ ರಮ ಬೋಲ್ಟು ತೆಗೆದಳು. ತನ್ನ ಸೀರೆಯನ್ನು ಸುಮ್ಮನೆ ಮೈಮೇಲೆ ಎಳೆದುಕೊಂಡು ಬಚ್ಚಲ ಮನೆಯ ಕಡೆಗೆಂದು ಹೊರಟಳು. ರೂಮಿನಿಂದ ಹಾಲಿಗೆ ಕಾಲಿಟ್ಟದ್ದೇ ಕ್ಷಣ "ಯಾರು?" ಎಂದು ಕೂಗಿದಳು. ಅವಳ ಧ್ವನಿಯಲ್ಲಿ ಅನಿರೀಕ್ಷಿತವಾದದ್ದನ್ನು ಕಂಡಾಗಿನ ಗಾಬರಿಯ ಜೊತೆಗೆ ಭಯವೂ ಸ್ಪಷ್ಟವಾಗಿ ಮೂಡಿತ್ತು. "ನಾನು ಎಂಬ ಮೆಲ್ಲಗಿನ ಧ್ವನಿ ಕೇಳಿತು. ನಾನು ಸರಸರ ಬಟ್ಟೆ ಧರಿಸಿ ಹೊರಗೆ ಬಂದೆ. ಅಲ್ಲಿ ನಿಂತಿದ್ದವನು ಶಶಿಧ್ಯ! ಹಾಲಿನಲ್ಲಿ ಲೈಟು ಹಾಕಿರಲಿಲ್ಲ. ಇವನಿಗಿಲ್ಲೇನು ಕೆಲಸ. ಕತ್ತಲೆಯಲ್ಲಿ ಯಾಕೆ ಕೂತಿದ್ದಾನೆ ಎಂಬ ವಿಚಾರವೂ ಬಂತು.

"ಇಲ್ಯಾಕೆ ನಿಂತಿದ್ದೀಯೊ ಕತ್ತಲಲ್ಲಿ?" ಎಂದಳು ರಮ ಸಿಡುಕಿನಿಂದ. ಯಾರನ್ನೂ ನಿರೀಕ್ಷಿಸದೆ ಯದ್ವಾತದ್ವ ಬಂದ ಅವಳ ಅವಸ್ಥೆಯಲ್ಲಿ ಕೋಪವಲ್ಲದೆ ಇನ್ನೇನೂ ಬರಲು ಸಾಧ್ಯ?

"ನೀರು ಬೇಕಾಗಿತ್ತು, ಅಡಿಗೆ ಮನೆಗೆ ಹೋಗಾಕೆ ಬಂದೆ" ಎಂದ.

"ಲೈಟು ಹಾಕಿ ಹೋಗೋದಲ್ಲವಾ? ನಿನಗೆ ವಯಸ್ಸು ಬಂದದ್ದು ದಂಡ" ಎಂದು ಮತ್ತೆ ಬೈಯುತ್ತಲೇ ರೂಮಿನೊಳಗೆ ಬಂದು ಸೀರೆಯನ್ನು ಸರಿಯಾಗಿ ಉಡಲು ತೊಡಗಿದ್ದಳು.

"ಸರಿ, ಮಲಕ್ಕೋ ಹೋಗು" ಎಂದು ಅವನನ್ನು ಕಳಿಸಿಬಂದೆ, ಮಾತಾಡದೆ ಹೋದ.

ಪುನಃ ಮಲಗಿಕೊಂಡ ಮೇಲೆ ರಮಳ ಕ್ಯಾತೆ ಪ್ರಾರಂಭವಾಯಿತು. ಅವನು ಎಲ್ಲವನ್ನೂ ಬಾಗಿಲ ಸಂದಿಯಿಂದ ನೋಡಲೆಂದೇ ಕತ್ತಲಲ್ಲಿ ಗೊತ್ತಾಗದ ಹಾಗೆ ಕೂತಿದ್ದ ಎಂದು ಅವಳು ತಕರಾರು ಹೂಡಿದಳು. "ನೀವೊಬ್ಬರು, ಇಷ್ಟು ವರ್ಷವಾದರೂ, ಈಗಲೂ ಎಲ್ಲ ಸಾಂಗವಾಗಿ ಆಗಬೇಕು. ಲೈಟು ಬೇರೆ ಯಾಕೆ ಹಾಕ್ಕೋ ಬೇಕಾಗಿತ್ತು ರೂಮಲ್ಲಿ?" ಎಂದು ಗೊಣಗಿದಳು. ನನಗೆ ಆ ಸ್ಥಿತಿಯಲ್ಲೂ ತಮಾಷೆ ಅನ್ನಿಸಿತು, ನನಗೊಬ್ಬನಿಗೆ ಮಾತ್ರ ಸಾಂಗವಾಗಿ ಆಗಬೇಕೆಂದು ಆರೋಪಿಸುವ ಇವಳು ಎರಡೇ ಕ್ಷಣಗಳ ಹಿಂದೆ ಹೇಗೆ ತನ್ನನ್ನು ಪೂರ್ತಿ ನನ್ನಲ್ಲಿ ಸೇರಿಸಿಕೊಂಡು ಬಿಟ್ಟಿದ್ದಳು! "ಪಾಪ, ನಿನಗಾಗಲೇ ಋಷಿ ಪಂಚಮಿ ಯೋಚನೆ" ಎಂದು ಚುಡಾಯಿಸಿದೆ. "ನೀವೋ ನಿಮ್ಮ ದರಿದ್ರ ತಮಾಷೆಯೋ" ಎಂದು ಮತ್ತಷ್ಟು ಸಿಡುಕಿದಳು. "ಅವನಿಗೇನು ಧಾಡಿ, ಈ ರೀತಿ ಮಾಡೋಕೆ, ಮದುವೆ ಮಾಡಿಕೊಂಡು ಸಾಯಬಾರದೇ" ಎಂದಳು. "ಹಿಂಗೆ ನೋಡುತ್ತ ನಮ್ಮ ಮರ್ಯಾದೆಯನ್ನೇಕೆ ಕಳೆಯಬೇಕು" ಎಂದಳು. "ನೋಡಲಿ ಬಿಡೆ, ನಮಗೇನು ನಷ್ಟ?" ಎಂದೆ; ಇನ್ನೂ ನಾನು ಹಾಸ್ಯದ ಮೂಡಿನಲ್ಲಿಯೇ ಇದ್ದೆ. "ನಿಮಗೆ ಸ್ವಲ್ಪವಾದರೂ ಮರ್ಯಾದೆ ಬೇಡವೇ?" ಎಂದು ಮೂತಿ ತಿವಿದಳು. "ಎಲ್ಲಾದರೂ ಬೇರೆ ಕಡೆಗೆ ಸಾಗ ಹಾಕಿ ಅವನ್ನ" ಎಂದು ಅದೆಷ್ಟನೆಯ ಬಾರಿಯೋ ಹೇಳಿದಾಗ ಮಾತ್ರ ನಾನು ಗಂಭೀರನಾದೆ. "ದಯವಿಟ್ಟು ಸಾಕುಮಾಡು. ನಿನ್ನ ಪುರಾಣ ಸುರುಮಾಡಬೇಡ" ಎಂದು ಗದರಿದೆ. ನನ್ನ ಧ್ವನಿಯಲ್ಲಿದ್ದ ಕಾಠಿಣ್ಯವನ್ನು ಗಮನಿಸಿ ರಮ ಸುಮ್ಮನಾದಳು.

ನನಗೆ ನಿದ್ರೆ ಬಾರದೆ ಶಶಿಯ ನಡವಳಿಕೆಯ ಬಗ್ಗೆಯೇ ಯೋಚಿಸುವಂತಾಯಿತು. ಇಂಥ ದೃಶ್ಯಗಳನ್ನು ಕಂಡು ರೋಮಾಂಚನಗೊಂಡು ತೃಪ್ತಿ ಪಡೆಯು ತ್ತಾನೆಯೇ ಅವನು. ಆದರೆ ನಮ್ಮನ್ನೇ ತನ್ನ ಮನರಂಜನೆಯ ಸಾಮಗ್ರಿಯಾಗಿ ಶಶಿ ಬಳಸಿಕೊಂಡನೆಂದು ಸ್ವಲ್ಪ ಕಸಿವಿಸಿಯಾಯಿತು. ನಿಜವಾಗಿಯೂ ರಮ ಹೇಳಿದ ಹಾಗೆ ಅವನು ಮಾಡಿದ್ದನೇ? ಅಥವಾ ನೀರು ಕುಡಿಯಲೆಂದು ಅಡಿಗೆ ಮನೆಗೆ ಹೋಗಿಬಂದನೇ? ಯಾವತ್ತೂ ಅವು ಮಲಗಿದ ಮೇಲೆ ಮಧ್ಯ ಏಳುವ ಅಭ್ಯಾಸದವನಲ್ಲ. ಅದೂ ಮಲಗಿ ಗಂಟೆ ಗಟ್ಟಲೆಯೇನಾಗಿಲ್ಲ ಇನ್ನೂ. ಅಂಥದರಲ್ಲಿ ಅವನ ಮಾತನ್ನು ನಂಬುವುದು ಹೇಗೆ? ತನ್ನ ರೂಮಿನ ಲೈಟು ಹಾಕಿಲ್ಲ, ಹಾಲಿನ ಲೈಟಿಲ್ಲ, ನೀರು ತುಂಬಿ ಕೊಂಡ ಸದ್ದಿಲ್ಲ?! ಆದರೂ ಅವನ ವಿವರಣೆಯನ್ನು ನಂಬಬೇಕೆ? ರಮ ಹೇಳಿದ ಹಾಗೆ ನಮ್ಮನ್ನು ಈ ರೀತಿ ನೋಡಲೆಂದೇ ಹೊಂಚುಹಾಕಿ ಕಾಯುತ್ತಿದ್ದನೇನೋ. ರಮ ಸದ್ದಾಗದಂತೆ ಬಾಗಿಲು ತೆರೆದಿದ್ದರಿಂದಾಗಿ ಅವನು ಸರಕ್ಕನೆ ಹೋಗಿಬಿಡಲು ಸಾಧ್ಯವಾಗಲಿಲ್ಲ ವೇನೋ. ಹೀಗೆ ನೋಡಬೇಕು ಎಂಬ ಆಸೆ ನಮಗೂ ಆಗುತ್ತದಲ್ಲ, ಅದರಲ್ಲಿ ಅಸಹಜವಾದದ್ದೇನಿಲ್ಲ. ಸಿನಿಮಾದಲ್ಲಿ ಪ್ರಣಯ ದೃಶ್ಯಗಳನ್ನು ಕಾಣುವಾಗ ರಮಳೇ ನನ್ನತ್ತ ವಾಲಿ ಅಂಟಿಕೊಂಡು ಕೂತು ನನ್ನ ಬೆರಳಿಗೆ ತನ್ನ ಬೆರಳು ಹೆಣೆಯುವ ಆಟವಾಡುತ್ತಾಳೆ! ಸರಿಯೇ, ಆದರೆ ಶಶಿ ನಮ್ಮನ್ನು ಈ ರೀತಿ ಕಾಣಬಾರದಿತ್ತು. ಎಷ್ಟು ದಿನಗಳಿಂದ ಹೀಗೆ ನೋಡುತ್ತಿದ್ದಾನೋ, ನಮ್ಮ ಮಾತುಗಳನ್ನೆಲ್ಲ ಕೇಳಿಸಿಕೊಳ್ಳುತ್ತಿರುವನೇನೋ, ಏನೋ ವಿಚಿತ್ರ ಅವನ ನಡತೆ! ಹೇಳೋ ಹಾಗಿಲ್ಲ, ಅನುಭವಿಸುವ ಹಾಗಿಲ್ಲ.

ಅವನಲ್ಲಿ ಆಸೆಗಳಿವೆ, ಆದರೆ ಅವುಗಳನ್ನು ಪೂರೈಸಿಕೊಳ್ಳುವ ರೀತಿ ವಿಚಿತ್ರ. ಅದನ್ನೇ ಅಲ್ಲವೇ ಅಬ್‌ನಾರ್ಮಾಲಿಟಿ ಎನ್ನುವುದು? ಅವನ ಒಂದೇ ಹವ್ಯಾಸ ಅಂದರೆ ದೋಸೆಗಳನ್ನು ತಿನ್ನುವುದು; ಮನೆಯಲ್ಲಲ್ಲ, ಹೋಟೆಲಿನಲ್ಲಿ, ಮಸಾಲೆ ದೋಸೆಗಳನ್ನು! ಹಲವಾರು ಬಾರಿ ಅವನಿಗೆ ನಾನು ಹೇಳಿದ್ದೆ – ಮೊದಲು ಮೊದಲು ಹೋಟೆಲಿನ ತಿಂಡಿ, ಅದರಲ್ಲೂ ಎಣ್ಣೆಯ ಪದಾರ್ಥಗಳನ್ನು ತಿನ್ನಬೇಡವೆಂದು. ಆಲೂಗಡ್ಡೆಯಂತಹ ವಾಯುವಿನ ತಿಂಡಿಗಳನ್ನು ತಿಂದರೆ ಅವನ ಮೂರ್ಛೆ ಜಾಸ್ತಿಯಾಗುತ್ತದೇನೋ ಎಂಬ ಹೆದರಿಕೆಯಿತ್ತು. ಮೂರ್ಛೆ ರೋಗಕ್ಕೆ "ವಾಯು ಬರುವುದು' ಎಂದೂ ಕೆಲವರು ಹೇಳುತ್ತಾರಲ್ಲ. ಆದ್ದರಿಂದ ವಾಯುಪದಾರ್ಥಗಳನ್ನು ತಿಂದರೆ ಕಾಯಿಲೆ ಜಾಸ್ತಿಯಾದೀತೆಂದು ನಿರ್ಬಂಧ ಹಾಕುತ್ತಿದ್ದೆ. ಆದರೆ ಡಾಕ್ಟರರಿಂದ ಈ ವಿಚಾರವಾಗಿ ವಿವರಣೆ ಪಡೆದೆ, ಅದಕ್ಕೂ ಇದಕ್ಕೂ ಸಂಬಂಧವಿಲ್ಲವೆಂದು ಹೇಳಿದ್ದರು. ಈ ರೋಗ ಮಿದುಳಿಗೆ ಸಂಬಂ ಸಿದ್ದು ಮಾತ್ರ, ಹೊಟ್ಟೆಯ ಆಹಾರ ಈ ರೋಗಕ್ಕೂ ಸಂಬಂಧವೇ ಇಲ್ಲವೆಂದಮೇಲೆ ಶಶಿಗೆ ಹೋಟೆಲಿಗೆ ಹೋಗಬೇಡವೆಂದು ಅಡ್ಡಿಪಡಿಸುತ್ತಿರಲಿಲ್ಲ. ಅವನಿಗೆ ತುಂಬ ಫೇವರಿಟ್ ಆದ ಹೋಟೆಲೊಂದಿದೆಯಂತೆ. ಚಾಮರಾಜಪೇಟೆಯಲ್ಲೋ ಚಾಮರಾಜ ರೋಡಿನಲ್ಲೋ, ಅಲ್ಲಿಗೆ ಹೋದರೆ ಸಾಕು. ಇವನನ್ನು ತುಂಬ ದಿನದಿಂದ ಕಾಣುತ್ತಿದ್ದ ಮಾಣಿ ಎರಡು ಮಸಾಲೆ ದೋಸೆಗಳನ್ನು ತಂದಿಡುತ್ತಿದ್ದನಂತೆ, ತಾನಾಗಿಯೇ.

ಬರೀ ಮಸಾಲೆ ದೋಸೆಗಳನ್ನು ಮಾತ್ರವಲ್ಲ ಯಾವುದನ್ನು ತಿನ್ನುವುದರಲ್ಲೂ ಇವನದು ಅಂಥ ರೀತಿಯೇ. ಹೈಸ್ಕೂಲಿನಲ್ಲಿ ಓದಿದ್ದ ಸದ್ಯದ ನೆನಪು ಇವನ ಊಟದ ರೀತಿ ಕಂಡು: "ಅರ್ಧಭಾಗ ವೃಕೋದರರಂಗೆ" ಎಂದೋ ಏನೋ ಭೀಮನಿಗೆ, ಪಾಂಡವರೆಲ್ಲರಿಗೂ ಎಂದು ಇರಿಸಿದ್ದ ಅಡಿಗೆಯ ಅರ್ಧ ಭಾಗವನ್ನು ಅವನ ತಾಯಿ ಬಡಿಸುತ್ತಿದ್ದಳಂತೆ. ಒಂದು ರೀತಿ ಹಾಗೆಯೇ ಇವನ ಊಟ. ನಾವಿಬ್ಬರೂ, ಮಕ್ಕಳಿಬ್ಬರೂ ತಿನ್ನುವಷ್ಟು ತಿನ್ನುತ್ತಾನೆ. ಎಂದು ರಮ ಹೇಳುತ್ತಿದ್ದಳು. ಆಗ ನಾನು ಗದರಿಕೊಳ್ಳುತ್ತಿದ್ದೆ. ಆದರೆ ನನ್ನ ಮನಸ್ಸಿನಲ್ಲಿದ್ದದ್ದೂ ಅದೇ ಭಾವನೆಯಲ್ಲವೇ? ಸಿಹಿ ತಿಂಡಿಗಳನ್ನು ಅವನು ತಿನ್ನುತ್ತಿದ್ದ ರೀತಿಯನ್ನು ಕಂಡರೇ ನನಗೆ ವಾಕರಿಕೆ ಬರುತ್ತಿತ್ತು. ಎಂಟು–ಹತ್ತು ಲಾಡುಗಳನ್ನು ತಿನ್ನುತ್ತಿದ್ದ. ಒಂದೊಂದು ಲಾಡುವನ್ನು ಪೂರ್ತಿ ಬಾಯೊಳಗಿಟ್ಟುಕೊಂಡು ಮಕ್ಕಳಿಗೆ ರಂಜನೆಯೊದಗಿಸುತ್ತಿದ್ದ. ಜಾಮೂನುಗಳಾದರೆ ಲೆಕ್ಕವಿಲ್ಲ. "ಅವನು ತಿನ್ನೋ ಊಟಕ್ಕೂ ಅವನು ಕೊಡೋ ದುಡ್ಡಿಗೂ ಅರ್ಥಾತ್ ಸಂಬಂಧವಿಲ್ಲ " ಎಂದು ರಮ ಹೇಳುತ್ತಿದ್ದಳು. ಹಾಗೆಯೇ ಇವನ ನಿದ್ದೆಯ ವೈಖರಿ ಕೂಡ. ರಾತ್ರಿ ಮಲಗಿದವನೆಂದರೆ ಬೆಳಗ್ಗೆಯೇ ಎಚ್ಚರ; ಮಧ್ಯದಲ್ಲಿ ಏಳುವಂತೆಯೇ ಕಂಡಿರಲಿಲ್ಲ. ನನಗಂತೂ? ಅವನ ನಿದ್ದೆಯನ್ನು ನಾನೂ ಪೋ್ರೀತ್ಸಾಹಿಸುತ್ತಿದ್ದೆ. ಮಿದುಳಿಗೆ ದಣಿವಾಗಿ, ದೇಹಕ್ಕೆ ಆಯಾಸವಾದರೆ ಎಲ್ಲಿ ರೋಗ ಕೆರಳುತ್ತದೋ ಎಂಬ ಭಯ ನನಗೆ. ಮೂಛೆರ್Éಯೆಂದರೆ ಮಿದುಳಿನ ವಿದ್ಯುತ್‌ನ ಅಕೋತ್ಪಾದನೆ, ಆದ್ದರಿಂದ ಅದನ್ನು ಆದಷ್ಟೂ ಶಾಂತಿಸ್ಥಿತಿಯಿಂದಿಡಬೇಕೆಂದು ಭಾವಿಸಿ ಅವನನ್ನು ರಾತ್ರಿ ಹನ್ನೊಂದರ ನಂತರ ಯಾವ ಕಾರಣಕ್ಕೂ ಎಚ್ಚರದಿಂದಿರಲು ಬಿಡುತ್ತಿರಲಿಲ್ಲ. ರಾತ್ರಿಯ ಸಿನಿಮಾಗಳಂತೂ ಅವನಿಂದ ದೂರಾ. ನನ್ನ ಮೀರಿಹೋದರೆ ಮನೆಯ ಬಾಗಿಲು ತೆಗೆಯುವುದಿಲ್ಲವೆಂದು ಹೆದರಿಸಿದ್ದೆ; ಅವನೆಂದೂ ಹಾಗೆ ಮಾಡಿ ನನ್ನನ್ನು ನಿಷ್ಠುರನನ್ನಾಗಿ ಮಾಡಿರಲಿಲ್ಲ. ಬೇರೆ ಯಾವುದಾದರೂ ಊರಿಗೆ ಹೋದಾಗಲೂ ಅಷ್ಟೆ. ಅವನಿಗಾಗಿ ಹೆಚ್ಚಿನ ಎಚ್ಚರ ವಹಿಸಿ ಬೇಗ ನಿದ್ದೆ ಮಾಡಲು ಏರ್ಪಾಡು ನಡೆಸುತ್ತಿದ್ದೆ. ಸ್ನೇಹಿತರ ಜೊತೆಗೇನಾದರೂ ಅವನು ಟ್ರಿಪ್‌ಗಿಪ್ ಹೋಗುವಾಗಲಂತೂ ಅವನ ಸ್ನೇಹಿತರಿಗೂ ಎಚ್ಚರ ಹೇಳಿಕಳುಹಿಸುತ್ತಿದ್ದೆ. ಎಲ್ಲೂ ಹೋಗಬೇಡ. ಏನೂ ಮಾಡಬೇಡ ಎಂದು ಎಲ್ಲದಕ್ಕೂ ಅಡ್ಡಿ ಮಾಡಿದರೆ ಇಂಥ ರೋಗಿಗಳ ವ್ಯಕ್ತಿತ್ವ ಮತ್ತಷ್ಟು ಕುಂಠಿತಗೊಳ್ಳುತ್ತದೆ. ತಾವು ಎಲ್ಲದಕ್ಕೂ ಅನರ್ಹರು ಎಂಬ ಭಾವನೆ ಬೆಳೆದು ಕೀಳರಿಮೆಯುಂಟಾಗಿ ಅವರ ಪರಿಸ್ಥಿತಿ ಇನ್ನಷ್ಟು ಹದಗೆಡಬಹುದು. ಆದ್ದರಿಂದ ಸ್ವತಂತ್ರವಾಗಿ ಬೆಳೆಯಲು, ಸ್ವಲ್ಪಮಟ್ಟಿಗಿನ ಸಾಹಸ ಕಾರ್ಯದಲ್ಲಿ ಭಾಗವಹಿಸಲು ಈ ರೋಗಿಗಳನ್ನು ಉತ್ತೇಜಿಸಬೇಕು. ಆದರೆ ಇಷ್ಟೆಲ್ಲದರ ಮೇಲೆ ಉಸ್ತುವಾರಿ ಅಗತ್ಯವೆಂದು ಡಾಕ್ಟರುಗಳು

ಹೇಳುತ್ತಿದ್ದುದನ್ನು ಕೇಳಿದ್ದ ನಾನು ಅವನ ನಾರ್ಮಲ್ ಚಟುವಟಿಕೆಗಳಿಗೆ ಅಡ್ಡಿಯುಂಟುಮಾಡಲು ಪ್ರಯತ್ನಿಸಿದವನಲ್ಲ. ಆದರೆ ಮಿತಿಯಲ್ಲಿಡಲು ನಿಗಾ ವಹಿಸಿದ್ದೆ.

ಮೂರ್ಛೆ ರೋಗಿಗಳಿಗೆ ನೀರು ಬೆಂಕಿಯೆಂದರೆ ಒಂದು ಬಗೆಯ ವಿಲಕ್ಷಣ ಆಕರ್ಷಣೆಯಂತೆ. ಅದಕ್ಕೇ ಅವನನ್ನು ಎಂದೂ ಒಲೆಯ ಮುಂದೆ ಒಂಟಿಯಾಗಿರಲು ಬಿಟ್ಟಿರಲಿಲ್ಲ ನಾನು. ಆದರ ನೀರಿಗೆ ಮಾತ್ರ ಅವನು ಬಲು ಹತ್ತಿರ. ಶಶಿಗೆ ಚೆನ್ನಾಗಿ ಈಜು ಬರುತ್ತಿತ್ತು. ಆಗಾಗ್ಗೆ ಊರ ಹೊರಗಿದ್ದ ದೊಡ್ಡ ಬಾವಿಗಳಿಗೆ ಸ್ನೇಹಿತರ ಪಟಾಲಂ ಜೊತೆ ಹೋಗಿ ಈಜಿ ಬರುತ್ತಿದ್ದ. ಹಲವಾರು ಮಂದಿ ಸ್ನೇಹಿತರಿಗೆ ಅವನೇ ಈಜು ಕಲಿಸಿದ್ದನಂತೆ. ಹೀಗಾಗಿ ನೀರು ಎಂದರೆ ಶಶಿಗೆ ಪಂಚಪ್ರಾಣ. ಆದರೆ ಅವನ ಪಂಚಪ್ರಾಣಗಳೆಲ್ಲ ನೀರಲ್ಲೇ ಮುಳುಗುವಂತಾಯಿತೇ? ಅಷ್ಟು ಚೆನ್ನಾಗಿ ಈಜಲು ಬರುತ್ತಿದ್ದರೂ ನೀರಿನಲ್ಲಿ ಅವನು ಮುಳುಗಿ ಸತ್ತದ್ದು ಹೇಗೆ? ಅವನನ್ನು ಇದುವರೆಗೆ ಹಗುರವಾಗಿ ತೇಲಿಸುತ್ತಿದ್ದ ನೀರು ಈಗ ಅವನನ್ನೇಕೆ ಮುಳುಗಿಸಿತು? ನೀರಲ್ಲಿ ಬಿದ್ದವನು ಎಂಥವನಾದರೂ ಕೈಕಾಲು ಬಡಿಯುತ್ತಾ ನೆಂದ ಮೇಲೆ, ಈಜಲು ಚೆನ್ನಾಗಿ ಕಲಿತ ಶಶಿ ಬಿದ್ದಾಕ್ಷಣವೇ ಮೇಲೇಕೆ ತೇಲಲಿಲ್ಲ? ಕೈಕಾಲುಗಳನ್ನು ಆಡಿಸಲೇಬಾರದು, ತೇಲಬಾರದು ಎಂಬ ನಿರ್ಧಾರದಿಂದ ಅವನು ನೀರಲ್ಲಿ ಬಿದ್ದನೆ? ಇಂತಹ ಮಾನುಷ ನಿರ್ಧಾರವನ್ನು ಮೀರಿದ್ದಲ್ಲವೇ ನೀರಲ್ಲಿ ಬಿದ್ದಾಗ ಕೈಕಾಲಾಡಿಸುವುದರ ಮೂಲಕ ಬಚಾವಾಗಲು ಪ್ರಯತ್ನಿಸುವ ಜೀವ ಶಕ್ತಿಯ ನಿಶ್ಚಯ? ಏನಾದರೂ ಭಾರವಾದುದನ್ನು ಸೊಂಟಕ್ಕೆ ಕಟ್ಟಿಕೊಂಡು ಬಿದ್ದನೇ? ಆದರೆ ಹೆಣ ಮೂರು ದಿನಗಳ ನಂತರ ಮೇಲೆ ತೇಲಲು ಸಾಧ್ಯವಾಯಿತೇಕೆ? ಆತ್ಮಹತ್ಯೆಯನ್ನೇ ಮಾಡಿಕೊಳ್ಳಬೇಕೆಂಬ ನಿರ್ಧಾರದಿಂದ ಶಶಿ ಹೊರಟಿದ್ದರೆ ನೀರನ್ನೇ ಏಕೆ ಆರಿಸಿಕೊಂಡ? ಅವನನ್ನು ಸದಾ ಸೆಳೆಯುತ್ತಿದ್ದ ನೀರಿನ ಅದಮ್ಯ ಆಕರ್ಷಣೆ ಅವನನ್ನು ಈ ರೀತಿ ಸಾಯಲು ಪ್ರೇರೇಪಿಸಿತೇ? ಅಥವಾ ಇದು ಆಕಸ್ಮಿಕ ಮರಣವೊ? ಚೆನ್ನಾಗಿ ಈಜು ಬಂದರೂ ಅವನು ಸಾಯಲು ಕಾರಣವೇನು? ಹೆಡ್ ಇಂಜುರಿಯೆಂದು ಇನ್ಸ್‌ಪೆಕ್ಟರ್ ಹೇಳಿದ್ದರಲ್ಲ. ಬಿದ್ದಾಗ ತಲೆಗೇನಾದರೂ ತಗುಲಿ ತಲೆಯೊಡೆದು ಸತ್ತನೇ? ಅಥವಾ ನೀರಲ್ಲಿ ಬಿದ್ದಾಗಲೇ ಅವನಿಗೆ ಅಟ್ಯಾಕ್ ಉಂಟಾಗಿ ನೀರು ಕುಡಿದು ಸಾಯುವ ಹಾಗಾಯಿತೇ? ಅವನು ಹೇಗೂ ಸತ್ತಿರಬಹುದು. ಅದು ಅಷ್ಟೊಂದು ಗಾಢಸಮಸ್ಯೆಯಾಗಿ ಕಾಡುವುದಿಲ್ಲ. ಅವನು ಬಾಣಸವಾಡಿಗೆ ಹೋದದ್ದೇಕೆ? ಅವನು ಮನೆ ಬಿಟ್ಟದ್ದು ನಸುಕಿನಲ್ಲಿ. ಆ ಹೊತ್ತಿಗೇ ಅಲ್ಲಿ ಯಾಕೆ ಹೋದ? ನನಗೆ ತಿಳಿದಂತೆ ಅವನಿಗೆ ಅಆಲ್ಲಿ ಯಾರೂ ಗುರುತಿದ್ದಂತೆ ಕಾಣದು. ಅಥವಾ ಮನೆಯನ್ನು ಬಿಟ್ಟು ಹೊರಟವನು ನೇರವಾಗಿ ಅಲ್ಲಿಗೆ ಹೋಗಲಿಲ್ಲವೋ? ಇನ್ನೆಲ್ಲಾದರೂ ಹೋಗಿ ನಿಧಾನವಾಗಿ ಅಲ್ಲಿಗೆ ಹೋಗಿರ ಬಹುದೇ? ಆ ಬಾವಿಯನ್ನು ಅವನು ಮೊದಲೇ ಕಂಡಿದ್ದನೇ? ಅದನ್ನೇ ಅರಸಿಕೊಂಡು ಹೋದದ್ದೇಕೆ? ಬಾಣಸವಾಡಿಯ ಬಾವಿ ಮತ್ತು ಶಶಿ – ಈ ಇಬ್ಬರ ಸಂಬಂಧ ವಿನಾಕಾರಣವುಂಟಾಗಿ ಈ ರೀತಿ ಪರಿಸಮಾಪ್ತಿಯಾದದ್ದರ ಹಿಂದೆ ಏನೇನಾಗಿರಬಹುದು? ಬರೀ ಯೋಚನೆ, ಯೋಚನೆ, ತಲೆ ಚಿಟ್ಟು ಹಿಡಿಯುತ್ತದೆ!

೩

ಬರೋದು ಎಷ್ಟು ಹೊತ್ತಾಗುತ್ತೋ, ಆದ್ದರಿಂದ ಊಟಮಾಡಿಕೊಂಡೇ ಹೋಗೋಣ ಅಂತ ಪ್ರಭಾಕರರಾವ್ ನಿನ್ನೆಯೇ ಹೇಳಿದ್ದರು; ಅದೂ ನಿಜವೇ ಅನ್ನಿಸಿತ್ತು. ನನ್ನ ಜೊತೆಯಲ್ಲಿ ಅವರೂ ಒಣಗುವ ಹಾಗೆ ಆಗಬಾರದಲ್ಲ. ಆದ್ದರಿಂದಲೇ ಸುಮಾರು ಹತ್ತುಗಂಟೆಯ ಹೊತ್ತಿಗೆ ಸಿದ್ಧವಾಗಿರ್ತೀನಿ, ಬನ್ನಿ ಅಂತ ಹೇಳಿದ್ದುದು. ಅಷ್ಟರೊಳಗೆ ಲಾಂಡ್ರೀಗೂ

ಟೈಲರಿಂಗ್ ಶಾಪಿಗೂ ಹೋಗಿಬಿಟ್ಟು ಬರೋಣ ಅಂದುಕೊಂಡೆ; ಅದಕ್ಕೂ ಪ್ರಭಾಕರರಾವ್ ಜೊತೆಗೇಕೆಬೇಕು, ಅಲ್ಲದೆ ಈಗ ಹೇಗಿದ್ದರೂ ಹತ್ತು ಗಂಟೇವರೆಗೆ ಕೆಲಸವಿಲ್ಲವಲ್ಲ ಅಂದುಕೊಂಡೆ. ಶರ್ಟಿನ ಮೇಲಿದ್ದ ಲೇಬಲ್ಲಿನ ಗುರುತನ್ನು ಬರೆದುಕೊಂಡಿದ್ದೆ, ಹಾಗೆಯೇ ಲಾಂಡ್ರಿಯ ಗುರುತನ್ನೂ.

ಎಂಟುಗಂಟೆಗೇ ಹೊರಟೆ. "ಬೇಗ ಬಂದ್ಬಿಡ್ತೀನಿ ಊಟ ಮಾಡಿಕೊಂಡು ಹೋಗ್ತೀನಿ, ಅಡಿಗೆ ಮಾಡಿಟ್ಟಿರು' ಅಂತ ರಮಂಗೆ ಹೇಳಿದೆ. ಅವಳಿಗೆ ಶಶಿಯ ವಿಚಾರ ತಲಾಷ್ ಮಾಡೋದಕ್ಕೆ ನಾನು ಓಡಾಡ್ತಿದ್ದೀನಿ ಅಂತ ಅಷ್ಟೇ ಗೊತ್ತು. ಪೇಪರಿನ ಸುದ್ದಿಯನ್ನಾಗಲೀ, ನಿನ್ನೆ ಪೋಲೀಸ್ ಕಮಿಷನರ್ ಆಫೀಸಿನಲ್ಲಿ ಗೊತ್ತಾದ ವಿಚಾರವಾಗಲೀ ಅವಳಿಗೆ ತಿಳಿದಿರಲಿಲ್ಲ. ಎಲ್ಲವೂ ಖಾತರಿ ಆಗೋದಕ್ಕೆ ಮುಂಚೆಯೇ ಯಾಕೆ ಸುದ್ದಿ ತಿಳಿಸಬೇಕು ಅಂತ ನಾನೂ ಪ್ರಭಾಕರರಾವ್ ಯೋಚನೆ ಮಾಡಿದ್ದೆವು. ಅವಳೂ ಹೆಚ್ಚು ಕೆದಕಿರಲಿಲ್ಲ. ಸ್ವಲ್ಪ ಕೇಳಿದಾಗ ನಾನು ಮೌನವಾಗಿದ್ದನ್ನು ಕಂಡು ಹೆಚ್ಚು ಚುಚ್ಚಿ ಕೇಳಿದರೆ ರೇಗಿಯಾನೆಂಬ ಅಳುಕು ಇದ್ದಂತೆ ಕಾಣುತ್ತದೆ. ನಾನು ಸೈಕಲ್ ಹತ್ತಿ ಹೊರಟೆ.

ಲಾಂಡ್ರಿ ಎಲ್ಲಿತ್ತೂಂತ ಗೊತ್ತಿತ್ತು. ದೂರವೇನಲ್ಲ, ನಮ್ಮ ಮನೆಯಿರುವ ಬೀದಿಯ ಹಿಂದಿನದಲ್ಲ ಅದರ ಹಿಂದಿನ ಬೀದಿಯಲ್ಲಿತ್ತು. ನಾನು ಅದನ್ನು ನೋಡಿದ್ದೇನೆ. ಇಷ್ಟು ಹೊತ್ತಿಗೇ ಅಂಗಡಿ ತೆಗೆದಿರುತ್ತೋ ಇಲ್ಲವೋ ಅಂದುಕೊಂಡೇ ಬಂದೆ. ಆದರೆ ಲಾಂಡ್ರಿ ತೆಗೆದಿತ್ತು. ನಾನು ನಿನ್ನೆಯೇ ಅಂದುಕೊಂಡ ಹಾಗೆ ಅದು "ಪದ್ಮಾ ಲಾಂಡ್ರಿ.' ಅಲ್ಲಿ ಹೆಂಗಸೊಬ್ಬಳಿದ್ದಳು. ಅವಳನ್ನು ಏನೂಂತ ಕೇಳುವುದು? ಬರಿಯ ಲಾಂಡ್ರಿಯ ಇನಿಶಿಯಲ್ ಯಾವುದು ಅಂತ ಕೇಳುವುದೇ? ಹೀಗೆ ಕೇಳಿದರೆ ಅವಳಿಗೆ ಭಯವಾಗಿ ಹೇಳದೇ ಇದ್ದರೆ! ಅಂಥದ್ದೇನೂ ಆಗದೇ ಇರಬಹುದು. ಆದರೆ ನನಗೇ ಒಂದು ರೀತಿ ಸಂಕೋಚ. ಹತ್ತಿರ ಹೋಗಿ "ಏನಮ್ಮ, ನನ್ನ ತಮ್ಮ – ಶಶಿಧರ ಅಂತ – ಬಟ್ಟೆ ಏನಾದರೂ ಕೊಟ್ಟಿದ್ದನಾ?" ಅಂದೆ ನನ್ನ ಉದ್ದೇಶವೆಂದರೆ ಹಾಗೆ ಕೇಳುತ್ತ ಅಲ್ಲೇ ಇರಬಹುದಾದ ಯಾವುದಾದರೂ ಬಟ್ಟೆಯನ್ನು ಸುಮ್ಮನೆ ಪರಿಶೀಲಿಸಿ ನೋಡಿ ಇನಿಶಿಯಲ್ ಬರೆದ ರೀತಿಯನ್ನು ನೋಡಿ ನೆನಪಿನಲ್ಲಿ ಇಟ್ಟುಕೊಳ್ಳುವುದು. ಸಶಿ ಬಟ್ಟೆಯನ್ನು ಒಗೆಯುವುದಕ್ಕೆ ಕೊಟ್ಟಿರಲಾರನೆಂದು ನನ್ನ ಅನಸಿಕೆಯಾಗಿತ್ತು. ಆದರೆ ನಾನು ಹಾಗೆ ಕೇಳಿದ್ದೇ ತಡ ಬಹಳ ನಿಸ್ಸಂದೇಹವಾಗಿ "ಹೌದು ಸ್ವಾಮಿ, ಆಗಲೇ ಕೊಟ್ಟು ಒಂದು ವಾರ ಆಯ್ತು. ಯಾಕೆ ಸ್ವಾಮಿಯೋರು ತಗೊಂಡೇ ಓಗ್ಲಿಲ್ಲ? ಊರಲಿಲ್ಲವ್ರಾ?' ಎಂದು ಕೇಳಿದಾಗ ನನಗೆ ಗಾಬರಿಯೇ ಆಯಿತು. ಯಾರನ್ನಿವಳು ನನ್ನ ತಮ್ಮ ಎಂದು ತಿಳಿದಿದ್ದಾಳೋ ಅನಿಸಿ "ನಾನು ಹೇಳ್ತಾ ಇರೋದು ಮುಂದಿನ ಬೀದಿ ಅಲ್ಲ, ಅದರ ಮುಂದಿನ ಬೀದೀಲಿ ಎಡಗಡೆ ನಾಲ್ಕನೇ ಮನೇಲಿರೋರ ವಿಷಯ..." ಎಂದೆ ಅನುಮಾನದಿಂದ, "ಗೊತ್ತು ಬಿಡಿ ಸ್ವಾಮಿ" ಅಂದಳು. ಒಳಗೆ ಹೋಗಿ ಪ್ಯಾಂಟೊಂದು–ಶರ್ಟೊಂದನ್ನು–ಇಸ್ತ್ರಿ ಮಾಡಿಟ್ಟಿತ್ತು–ತಂದು ಕೊಟ್ಟಳು. ನನಗೆ ಗುರುತು ನೋಡೋ ಅವಸರ, ಜೊತೆಗೆ ಬಟ್ಟೆಗಳು ಶಶಿಯವೇ ಅಲ್ಲವೇ ಅಂತ ನೋಡೋದಕ್ಕಾಗಿ. ಶರ್ಟ್‌ನ ಮಡಿಕೆ ಬಿಚ್ಚಿ ಹಿಡಿದು ನೋಡಿದೆ. ಅಳತೆ ಅವನದೇ ಶರ್ಟ್ ಅಂತ ಹೇಳ್ತಿತ್ತು. "ಓ, ಮಡಿಕೆ ಬಿಚ್ಚಿದಿರಾ?" ಅಂದಳು. "ಅವಂದೋ ಅಲ್ಲವೋ ಅಂತ ನೋಡಕ್ಕೆ" ಅಂದೆ. "ಅವರದ್ದೇ ಸ್ವಾಮೀ ನಂಗೊತ್ತಿಲ್ಲವಾ? ನಿಮ್ಮ ಮನೆಯೋರೆಲ್ಲ ಗೊತ್ತು ಬಿಡಿ" ಅಂದು ಶರ್ಟನ್ನು ಮತ್ತೆ ತಗೊಂಡು ಮಡಿಸಿಕೊಟ್ಟಳು; ದುಡ್ಡು ಕೊಟ್ಟು ಬಂದೆ.

ಸೈಕಲ್ ಕ್ಯಾರಿಯರ್‌ಗೆ ಬಟ್ಟೆಗಳನ್ನು ಸಿಕ್ಕಿಸಿ ಟೈಲರ್‌ಶಾಪ್ ಕಡೆ ನಿಧಾನವಾಗಿ ನಡೆದೆ. ಶಾಪ್ ಯಾವ ಬೀದಿಯಲ್ಲಿದೆ ಅಂತ ಕೇಳಿದ್ದೆ. ಶಶಿ ಯಾವಾಗಲೂ ಬಟ್ಟೆ ಹೊಲಿಸೋ ಅಂಗಡಿ ಇಂಥ ಕಡೆ ಇದೇಂತ ನಾನು ಕೇಳಿದ್ದೆ. ಆದರೆ ನನ್ನ ಟೈಲರ್ ಬೇರೆ. ಆದ್ದರಿಂದ ಅವನ ಹತ್ತಿರ ಹೋಗೋ ಪ್ರಮೇಯ ಬಂದಿರಲಿಲ್ಲ. ಶಾಪಿನ ಹೆಸರು ತಿಳಿದಿತ್ತಲ್ಲ. ಹುಡುಕೋಣವೆಂದುಕೊಂಡು ಹೋದೆ. ಬರೋ ಹೊತ್ತಿಗೆ ಇನ್ನೂ ಅಂಗಡಿ ತೆಗೆದಿರಲಿಲ್ಲ. ಗಡಿಯಾರ ನೋಡಿಕೊಂಡೆ; ಇನ್ನೂ ಎಂಟೂ ಇಪ್ಪತ್ತೈದು. ಎಷ್ಟು ಹೊತ್ತಿಗೆ ತೆಗೀತಾನೋ ಅಂತ ಬೇಜಾರಾಯಿತು. ಅಂಗಡಿ ಬಾಗಿಲ ಹತ್ತಿರ ಒಂದು ಸಣ್ಣ

ಬೋರ್ಡ್ ಹಾಕಿತ್ತು. ಬರೆದದ್ದೇನು ಅಂತ ದೂರದಿಂದ ಕಾಣ್ತಾ ಇರಲಿಲ್ಲ. ಹತ್ತಿರ ಹೋಗಿ ನೋಡಿದೆ. ಕೆಲಸದ ವೇಳೆ ಬೆಳಿಗ್ಗೆ ೯ ರಿಂದ ಮಧ್ಯಾಹ್ನ ೧; ಸಾಯಂಕಾಲ ೫ ರಿಂದ ೯ ಗಂಟೆ ಅಂತ ಬರೆದಿತ್ತು. ಇನ್ನೂ ಮೂವತ್ತೈದು ನಿಮಿಷ ಕಾಯೋದು ಹೇಗೆ; ಒಂದು ಲೋಟ ಕಾಫಿ ಆದರೂ ಕುಡಿದುಬರೋಣ ಎಂದುಕೊಂಡು ಹತ್ತಿರವಿರ ಬಹುದಾದ ಹೋಟಲ್ ಕಡೆ ಹೊರಟೆ. ಕಾಲ ಕಳೆಯುವುದೇ ಸದ್ಯದ ಉದ್ದೇಶ ವಾದ್ದರಿಂದ ಸೈಕಲ್ ನೂಕಿಕೊಂಡೆ ಬೀದಿಯ ಕೊನೆಯಲ್ಲಿದ್ದ ಹೋಟಲೊಂದಕ್ಕೆ ಬಂದು ಕಾಫಿಗೆ ಆರ್ಡರ್ ಮಾಡಿದೆ. ಅವನೋ ದರಿದ್ರದವನು, ಹೇಳಿದ ಒಂದೇ ನಿಮಿಷಕ್ಕೆ ಕಾಫಿ ತಂದಿಟ್ಟ. ನಿಧಾನವಾಗಿ ಕುಡಿದರೂ ಐದೇ ನಿಮಿಷದಲ್ಲಿ ಕಾಫಿ ಕುಡಿದಾಗಿತ್ತು. ಸುಮ್ಮನೇ ಮೇಲೆ ನೋಡುತ್ತ ಕೂತೆ.

ಹಾಗೂ ಹೀಗೂ ಗಡಿಯಾರ ಒಂಬತ್ತು ತೋರಿಸುವವರೆಗೂ ಕೂತಿದ್ದು ಮೇಲೆದ್ದೆ. ಈ ಅಂಗಡಿಗಳೋರಿಗೆ ಹೇಳೋರು ಕೇಳೋರು ಯಾರು? ಹಾಕಿ ಕೊಂಡಿರೋ ಸಮಯಕ್ಕೆ ಬಾಗಿಲು ತೆಗೆದರೂ ಆಯಿತು, ಬಿಟ್ಟರೂ ಆಯಿತು. ಬೇಜಾರಾದರೆ ಒಂದು ದಿನ ಅಂಗಡಿಯನ್ನು ತೆಗೆಯದೇ ಇದ್ದರೂ ಕೇಳುವವ ರಾರು. ಈ ಮನುಷ್ಯ ಏನು ಮಾಡುತ್ತಾನೆಯೋ ಎಂದು ಗೊಣಗಿಕೊಂಡೇ ಅಂಗಡಿಯ ಹತ್ತಿರ ಬಂದಾಗ, ಬಾಗಿಲು ತೆಗೆದಿದ್ದದ್ದು ಕಾಣಿಸಿತು; ಸಧ್ಯ ಅಂದುಕೊಂಡೆ. ಅಂಗಡಿಗೆ ಬರುವಷ್ಟರಲ್ಲಿ ಅವನಾಗಲೇ ಬಾಗಿಲು ತೆಗೆದು ಸಾಕಷ್ಟು ಹೊತ್ತಾಗಿರುವವನಂತೆ ಸೆಟಲ್ ಆಗಿದ್ದ. ಅಂಗಡಿಯಲ್ಲೆಲ್ಲ ಹೊಸದಾಗಿ ಹಚ್ಚಿಟ್ಟಿದ್ದ ಊದುಕಡ್ಡಿಯ ವಾಸನೆ, ಫೋಟೋಕ್ಕೆ ಹಾಕಿದ್ದ ಹೊಸ ಹೂವಿನ ಪರಿಮಳ ಹರಡಿತ್ತು. ಇನ್ನೂ ಒಂದು ಹತ್ತು ನಿಮಿಷ ಮುಂಚೆಯೇ ಬರಬಹುದಾಗಿತ್ತೇನೋ ಅಂದುಕೊಂಡೆ.

"ನಮಸ್ಕಾರ" ಅಂದೆ. "ನಮಸ್ಕಾರ ಸಾರ್, ಬನ್ನಿ."

"ಒಂದು ವಿಷಯ ತಿಳಿಕೋಬೇಕಾಗಿತ್ತು. ನಿಮ್ಮ ಹತ್ತಿರ" ಅಂದೆ.

"ಯಾವ ಡಿಪಾರ್ಟ್‌ಮೆಂಟಿನೋರು ಸಾರ್, ತಾವು?" ಅಂದ ಭಯಭಕ್ತಿಯಿಂದ.

"ನಾನು ಯಾವ ಡಿಪಾರ್ಟ್‌ಮೆಂಟಿನಿಂದಲೂ ಬಂದಿಲ್ಲ. ನನ್ನ ತಮ್ಮ ಶಶಿಧರ ಅಂತ, ನಿಮ್ಮ ಹತ್ತಿರಾನೇ ಬಟ್ಟೆ ಹೊಲಿಸ್ತಾ ಇದ್ದನಂತೆ...." ಎಂದೆ.

"ಯಾವ ಶಶಿಧರ ಸಾರ್, ಅದೇ ಗುಂಗುರು ಕೂದಲು ಸ್ವಲ್ಪ ಬೆಳ್ಳಗೆ."

"ಹೌದು, ಅದೇ ಈ ಕಡೆ ಹೋದರೆ, ಆ ದೇವಸ್ಥಾನದ ಹತ್ತಿರವೇ ನಮ್ಮ ಮನೆ."

"ಸರಿ ಸಾರ್, ಏನು ವಿಷಯ, ಅವರೆಲ್ಲಿ ಹೋದರು ಸಾರ್?"

"ಎಲ್ಲೂ ಹೋಗಿಲ್ಲ. ಅವನು ಸ್ವಲ್ಪ ಕಾಲದ ಮುಂಚೆ ನಿಮ್ಮ ಹತ್ತಿರ ಶರ್ಟ್ ಏನಾದ್ರೂ ಹೊಲಿಸಿದ್ದನೇನು?" ಎಂದೆ ಸ್ವಲ್ಪ ಅಸಹನೆಯಿಂದ.

"ಏನೂ ಕೊಟ್ಟಿರಲಿಲ್ಲವಲ್ಲ ಸಾರ್."

"ತೀರ ಈಚೆಗೆ ಅಲ್ರೀ. ಈಗೊಂದು ತಿಂಗಳೋ ಎರಡು ತಿಂಗಳೋ ಹಿಂದೆ ಶರ್ಟ್ ಹೊಲಿಯಕ್ಕೆ ಹಾಕಿದ್ದನಾ?"

"ಏನು ಸಮಾಚಾರ ಸಾರ್?" ಎಂದ. ಅವನ ಮಾತಿನ ಧಾಟಿಯಲ್ಲಿ ಕುಚೋದ್ಯವೇನಾದರೂ ಇದೆಯೇ ಎಂಬ ಅನುಮಾನ ಬಂದು ಅವನ ಕಡೆ ನೋಡಿದೆ. ಏನೋ ಅವನು ಅರ್ಥವಾಗುವಂತೆ ಕಾಣಲಿಲ್ಲ.

"ಯಾವುದಕ್ಕೋ ಬೇಕಾಗಿತ್ತು. ಸ್ವಲ್ಪ ನಿಮ್ಮ ಪುಸ್ತಕ ತೆಗೆದು ನೋಡಿ ಹೇಳಿ" ಎಂದೆ. ನನ್ನ ಧ್ವನಿಯಲ್ಲಿ ನನಗೇ ಅಷ್ಟು ಪರಿಚಿತವಲ್ಲದ ಅಧಿಕಾರವಾಣಿಯಿತ್ತು, ದರ್ಪವಿತ್ತು. ಅಂಗಡಿ ದೊಡ್ಡದೇನಲ್ಲ. ಇವನೊಬ್ಬನೇ ಟೈಲರ್ ಅಂತ ಕಾಣಿಸುತ್ತೆ. ಒಂದೇ ಮೆಶಿನ್ ಇತ್ತು. ಜೊತೆಗೆ ಒಬ್ಬ ಹುಡುಗ ಸಹಾಯಕ್ಕಿದ್ದ. ಅವನು ಹೊಲಿಗೆಗೆ ಬಟ್ಟೆಗಳನ್ನು ತೆಗೆದುಕೊಳ್ಳುವಾಗ ರಸೀತಿ ಪುಸ್ತಕದಲ್ಲಿ ಬರೆಯದೆ ಒಂದು ರಿಜಿಸ್ಟರಿನಲ್ಲಿ ಬರೆಯುತ್ತಿದ್ದುದು ಅವನು ಟೇಬಲ್ ಮೇಲೆ ಇಟ್ಟುಕೊಂಡಿದ್ದ ಪುಸ್ತಕವೇ ಸೂಚಿಸುತ್ತಿತ್ತು. ನನ್ನ ಮಾತು ಕೇಳಿ ವಿಧೇಯನಾಗಿ ಆ ಟೈಲರ್ ಪುಸ್ತಕದ ಹಾಳೆಗಳನ್ನು ತೆಗೆದು ಒಂದೊಂದಾಗಿ ಹೆಸರುಗಳನ್ನು ನೋಡುತ್ತ ಹೋದ. ನಾನೂ ಸ್ವಲ್ಪ ವಾರೆಯಾಗಿ ಕತ್ತು ಬಗ್ಗಿಸಿ ಶಶಿಯ ಹೆಸರಿಗಾಗಿ ರಿಜಿಸ್ಟರಿನ ಹಾಳೆಗಳ ಮೇಲೆ ಕಣ್ಣೋಡಿಸಿದೆ, ಕೊನೆಗೂ ಸಿಕ್ಕಿತು. ಈಗ್ಗೆ ಒಂದೂವರೆ ತಿಂಗಳ ಹಿಂದೆ ಒಂದು ಶರ್ಟ್ ಹೊಲಿಸಿದ್ದ. ಅವನ ಹೆಸರಿದ್ದ ಕಾಲಮ್ಮಿನಲ್ಲಿ ಶರ್ಟ್‌ನ ಬಟ್ಟೆಯ ಚೂರನ್ನು ಸ್ಟೇಪ್ಲರ್‌ನಿಂದ ಸೇರಿಸಲಾಗಿತ್ತು. ಕಮೀಷನರ್ ಆಫೀಸಿನಲ್ಲಿ ನಾನು ಕಂಡಿದ್ದ ಶರ್ಟ್ ಹೊಸದಿದ್ದ ಹಾಗೆ ಕಂಡಿತ್ತಲ್ಲ. ಅದೇ ಇರಬೇಕು ಇದು. ಬಣ್ಣವೂ ಅದೇ ಎಂದು ಕಾಣುತ್ತದೆ. ಸರಿಯಾಗಿ ನೆನಪಿಲ್ಲ. "ಆ ಬಟ್ಟೆ ಚೂರು ಕೊಡಿ" ಎಂದೆ. ಅವನು ಪಿನ್ ನಿಧಾನವಾಗಿ ತೆಗೆದು ಅದನ್ನು ಕೊಟ್ಟ, "ಥ್ಯಾಂಕ್ಸ್" ಎಂದು ಹೊರಡಲನುವಾದೆ, ಅವನು ಯಾವುದೋ ಭಯ ಅನುಮಾನಗಳಿಂದ ನೋಡಿದ. ನಾನದನ್ನು ಗಮನಿಸದವನಂತೆ ಸೈಕಲ್ ಹತ್ತಿದೆ.

ಸರಸರ ಒಂದಷ್ಟು ಊಟದ ಶಾಸ್ತ್ರ ಮುಗಿಸಿ ಬಟ್ಟೆ ಧರಿಸಿ ರೆಡಿಯಾಗಿ ನಿಂತೆ. ಇವತ್ತೂ ನನ್ನ ಜೊತೆಯಲ್ಲಿ ಬನ್ನಿ ಅಂತ ಪ್ರಭಾಕರರಾಯರಿಗೆ ಹೇಗೆ ಹೇಳೋದು ಎಂಬ ಯೋಚನೆ ನಿನ್ನೆಯೇ, ಪೋಲೀಸರನ್ನು ವಿಚಾರಿಸಿ ವಾಪಸಾಗುವಾಗ ನನ್ನ ಮನಸ್ಸನ್ನು ಕಾಡುತ್ತಿತ್ತು. ಯಾಕೋ ನಾನೊಬ್ಬನೇ ಈ ವಿಚಾರವನ್ನು ತೃಪ್ತಿಕರವಾಗಿ ನಿಭಾಯಿಸಬಲ್ಲೆ ಎಂಬ ಧೈರ್ಯ ನನಗಿರಲಿಲ್ಲ. ಎಷ್ಟಾದರೂ ಶಶಿಯ ವಿಚಾರ, ಅದೂ ಅವನ ಸಾವಿಗೆ ಸಂಬಂಸಿದ್ದು. ನಾನು ನಿರ್ವಿಕಾರವಾಗಿ ಪ್ರಶ್ನೆಗಳಿಗೆ ಉತ್ತರವನ್ನು ಕೊಡಲು ಸಾಧ್ಯವಿಲ್ಲ, ಯಾವ ಯಾವ ವಿಷಯ ಕೇಳಿ ತಿಳಿದುಕೊಳ್ಳಬೇಕು ಎಂಬ ಸಮಚಿತ್ತವಿರಲಿಕ್ಕೆ ಸಾಧ್ಯವಿಲ್ಲ ಅನ್ನಿಸಿತ್ತು. ಆದರೆ ಎರಡನೆಯ ದಿನವೂ ಪ್ರಭಾಕರರಾಯರಿಗೆ ರಜಹಾಕಿ ಅಂತ ಹೇಗೆ ಹೇಳುವುದು? ಆದರೆ ಅವರೇ "ನಾಳೆ ಹತ್ತಕ್ಕೆ ಹೊರಡೋಣ"ವೆಂದು ನನ್ನ ಸಮಸ್ಯೆ ಪರಿಹಾರ ಮಾಡಿದ್ದರು. "ನಂಗೋಸ್ಕರ ನೀವು ಎರಡು ದಿನ ರಜ ಹಾಳುಮಾಡಿಕೊಳ್ಳಬೇಕಾಯಿತಲ್ಲ" ಎಂದಿದ್ದೆ. "ರಜದ ಮನೆ ಹಾಳಾಯ್ತು. ಅದಿರೋದೇ ಅಂಥ ಕೆಲಸಕ್ಕೆ. ಶಶಿ ನಂಗೆ ತಿಳೀದ ಹುಡುಗನೇ. ಒಬ್ಬರ ಕಷ್ಟದಲ್ಲಿ ಆಗದಿದ್ದರೆ ಏನು ಬಂದಂತಾಯಿತು" ಎಂದು ಸಮಾಧಾನ ಮಾಡಿದ್ದರು. ಪಾಪ, ಆತ ತುಂಬ ಒಳ್ಳೆಯ ಮನುಷ್ಯ ಅಂದುಕೊಂಡೆ.

ಪೋಲೀಸ್ ಕಮೀಷನರ್ ಆಫೀಸು ತಲುಪಿ ಸಂಬಂಧಪಟ್ಟ ಇನ್ಸ್‌ಪೆಕ್ಟರ್ ಹತ್ತಿರ ಬಂದು ನಮಸ್ಕಾರ ಮಾಡಿದೆವು. "ಏನು ಸಮಾಚಾರ?" ಅಂದರು. ನಾನು ಜೇಬಲ್ಲಿ ಇಟ್ಟುಕೊಂಡು ಬಂದಿದ್ದ ಟೈಲರ್ ಶಾಪಿನಿಂದ ತಂದ ಬಟ್ಟೆಯ ಚೂರನ್ನು ಹೊರ ತೆಗೆದು ಟೇಬಲ್ ಮೇಲಿಟ್ಟು ವಿಚಾರ ಹೇಳಿದೆ. ಇನ್ಸ್‌ಪೆಕ್ಟರ್ ಒಳಗಿನಿಂದ ಬಟ್ಟೆಗಳನ್ನು ತರಿಸಿದರು. ಶರ್ಟ್‌ನ ಬಣ್ಣ, ಈ ಬಟ್ಟೆ ಚೂರಿನ ಬಣ್ಣ ಒಂದೇ ಆಗಿತ್ತು. ಆದರೆ ಶರ್ಟಿನ ಬಣ್ಣ ಸ್ವಲ್ಪವೇ ಮಾಸಲಾಗಿತ್ತು. ಹಾಗಾದರೆ ಈ ಬಟ್ಟೆಗಳು ಅವನವೇ ಅಂತ ತೀರ್ಮಾನಿಸಬೇಕು. "ನಿಮ್ಮ ತಮ್ಮನೇ ಇರಬೇಕು, ಬಿಡಿ. ಇನ್ನಾವುದೂ ಕ್ಲೈೀಮ್ಸ್ ಬಂದಿಲ್ಲ" ಅಂದರು ಇನ್ಸ್‌ಪೆಕ್ಟರು. ಪ್ರಭಾಕರರಾಯರು ಬಟ್ಟೆ ಚೂರು ಶರ್ಟುಗಳನ್ನು ಹತ್ತಿರವಿಟ್ಟು ಪರೀಕ್ಷೆ ಮಾಡಿದರು; ನಿಟ್ಟುಸಿರು ಬಿಟ್ಟರು. ನನ್ನ ಬಾಯಿಂದಲೂ ನಿಟ್ಟುಸಿರು ಬಂತು. ಶಶಿಯ ಪ್ಯಾಂಟಿನ ಜೇಬಲ್ಲಿ ಕೆಲವು ಚಿಲ್ಲರೆ ನಾಣ್ಯಗಳನ್ನು ಬಿಟ್ಟರೆ ಬೇರೇನೂ ಇರಲಿಲ್ಲವಂತೆ. ಯಾವುದೇ ಕುರುಹು ಸಿಕ್ಕಲಿಲ್ಲ; ಬಾಡಿ ಬೇರೆ ಆಗಲೇ ಡೀಕಂಪೋಸ್ ಆಗಲು ತೊಡಗಿತ್ತು. ನಾವೇ ಬಾರದಿದ್ದರೆ ಅವನ ವಿಚಾರ ತಿಳಿಯುತ್ತಲೇ ಇರಲಿಲ್ಲವೇನೋ ಅನ್ನಿಸಿತು. ಪೇಪರಿನ ಸುದ್ದಿ ಓದದೇ ಇದ್ದಿದ್ದರೆ, ಶಶಿ ಎಲ್ಲೋ ಹೋಗಿದ್ದಾನೆ ಅಂತ ತಿಳಿಕೊಂಡೇ ಕಾಲ ಸವೆಸಬೇಕಾಗಿತ್ತು. ಅಂತೂ ಇದು ಅವನದೇ ದೇಹ, ಹಾಗಾದರೆ ಎಂದು ತೀರ್ಮಾನಿಸದೆ ವಿಧಿ ಇರಲಿಲ್ಲ.

ಸ್ವಲ್ಪ ಹೊತ್ತಾದ ಮೇಲೆ ಇನ್‌ಸ್ಪೆಕ್ಟರ್ "ಪೋಸ್ಟ್ ಮಾರ್ಟಂ ರಿಪೋರ್ಟ್ ಬಂದಿದೆ" ಅಂದರು. ನಂಗೆ ಕುತೂಹಲ ಆಯಿತು, ಕತ್ತು ಮುಂದೆ ಚಾಚಿದೆ. ಅವರು ಫೈಲನ್ನು ನಮ್ಮ ಮುಂದೆ ತಳ್ಳಿದರು. ತಲೆ ನೇರವಾಗಿ ಪೆಟ್ಟು ಬಿದ್ದು ಸಾವುಂಟಾಗಿದೆ ಎಂದು ಅಲ್ಲಿ ಬರೆಯಲಾಗಿತ್ತು. ಹೊಟ್ಟೆಯಲ್ಲಿ ವಂಡು ನೀರಿತ್ತಂತೆ. ಪ್ರಾಯಶಃ ಬಾವಿಯಲ್ಲಿ ಡೈವ್ ಮಾಡುವಾಗ ನೇರವಾಗಿ ಹೆಚ್ಚು ಆಳವಿಲ್ಲದ ಬಾವಿಯ ತಳಕ್ಕೆ ಹೋಗಿ ಅಲ್ಲಿರಬಹುದಾದ ಕಲ್ಲಿಗೆ ತಲೆ ತಾಕಿದೆ; ತಳ ತಾಕಿದ್ದರಿಂದ ನೀರು ವಂಡಾಗಿ ಅದನ್ನು ಕುಡಿದಿರಬೇಕು ಎಂದು ತೀರ್ಮಾನಿಸಲಾಗಿತ್ತು. ಹೊಟ್ಟೆಯಲ್ಲಿ ಜೀರ್ಣವಾಗದ ಸ್ವಲ್ಪ ಆಹಾರಾಂಶಗಳೂ ಇತ್ತು ಎಂದಿದ್ದರು. ಕೊನೆಯಲ್ಲಿ "ದೇರ್ ಈಸ್ ನೋ ಅಟಾಪ್ಸಿಕಲ್ ಎವಿಡೆನ್ಸ್ ಟು ಸಸ್‌ಪೆಕ್ಟ್ ಫೌಲ್ ಪ್ಲೇ" ಎಂದು ಬರೆದು ಡಾಕ್ಟರು ಸಹಿ ಹಾಕಿದ್ದರು. ಆ ವಾಕ್ಯವನ್ನು ಓದಿದ ಮೇಲೆ ನಿಟ್ಟುಸಿರು ಬಂತು.

"ಕಂಗ್ರಾಜುಲೇಶನ್ಸ್ ರಿಪೋರ್ಟ್ ತುಂಬ ಕ್ಲಿಯರ್ರಾಗಿದೆ. ಅವರೇನಾದರೂ ಕೊಕ್ಕೆ ಹಾಕಿದ್ರೆ ನಿಮಗೆ ಕಷ್ಟವಾಗೋದು" ಎಂದು ಇನ್‌ಸ್ಪೆಕ್ಟರು ಕೈಚಾಚಿದರು. ಯಾಂತ್ರಿಕವಾಗಿ ನನ್ನ ಕೈ ಅವರದನ್ನು ಹಿಡಿಯಿತು. ಆದರೆ ಯಾತಕ್ಕೆ ಇನ್‌ಸ್ಪೆಕ್ಟರು ನನ್ನ ಕಂಗ್ರಾಜುಲೇಟ್ ಮಾಡಿದ್ದು. ಶಶಿಧರ, ಸತ್ತದ್ದಕ್ಕೋ, ಅವನಿಂದ ನನಗೆ ಯಾವ ತೊಂದರೆಯೂ ಆಗದಂತೆ ಪ್ರಾಣ ಬಿಟ್ಟಿದ್ದಕ್ಕೋ? ಕಣ್ಣು ಮಂಜಾಯಿತು. ಹಾಳು ಹುಡುಗ ಏನೋ ಮಾಡಿಕೊಂಡನಲ್ಲ. ನಾನೇ ಅದಕ್ಕೆ ಕಾರಣವೇನೋ! ತಲೆ ತಗ್ಗಿಸಿದ್ದನ್ನು ಮೇಲಕ್ಕೆತ್ತಿ ಇನ್‌ಸ್ಪೆಕ್ಟರಿಗೆ ತೋರಿಸುವ ಧೈರ್ಯ ಉಂಟಾಗಲಿಲ್ಲ. ಪ್ರಭಾಕರರಾಯರು ನನ್ನ ಬೆನ್ನು ನೇವರಿಸುತ್ತಿದ್ದರು. ಇನ್‌ಸ್ಪೆಕ್ಟರು "ನಿಮ್ಮ ದುಃಖ। ನನಗೆ ಅರ್ಥವಾಗತ್ತೆ. ತಮ್ಮನನ್ನು ಕಳಕೊಳ್ಳೋದೂಂದ್ರೆ ಸಾಮಾನ್ಯವೆ?" ಅಂದರು. ತಮ್ಮನನ್ನು ನಾನು ಕಳಕೊಂಡನೋ ಅಥವಾ ನಾನೇ ಕಳೆದೆನೋ ಅನ್ನಿಸಿತು.

"ಈಗ ಸಮಾಧಾನ ತಂದುಕೊಳ್ಳಲೇಬೇಕು ನೀವು. ಪೋಸ್ಟ್ ಮಾರ್ಟಂ ವರದಿಯಲ್ಲೇನಾದರೂ ಸಂಶಯದ ಅಂಶಗಳು ಇದ್ದಿದ್ದರೆ ನಿಮ್ಮ ಪರಿಸ್ಥಿತಿ ಎಷ್ಟು ಕಷ್ಟ ಆಗೋದು" ಎಂದರು ಇನ್‌ಸ್ಪೆಕ್ಟರು.

"ಸಾರ್, ನೀರಲ್ಲಿ ಬೀಳೋದಕ್ಕೂ ಎಪಿಲೆಪ್ಟಿಕ್ ಅಟ್ಯಾಕ್ ಆಗೋದಕ್ಕೆ ಕಾಕತಾಳ ಏನಾದರೂ ಆಗಿ, ಏಟು ಬಿದ್ದು ನೀರು ಕುಡಿದು ಹೋಗಿರಬಹುದಲ್ಲವೇ?" ಎಂದೆ ಮೆಲ್ಲಗೆ. ಯಾಕೆ ನಾನು ಅಟ್ಯಾಕ್‌ನ ವಿಚಾರವನ್ನೇ ಪ್ರಮುಖವಾಗಿ ಮತ್ತೆ ಮತ್ತೆ ಎತ್ತುತ್ತೇನೆ ಎಂದು ನನಗೇ ಅರ್ಥ ಆಗುವುದಿಲ್ಲವಲ್ಲ!

"ಅದೆಲ್ಲ ಯಾಕಿವಾಗ? ಕ್ಲಿಯರ್ ರಿಪೋರ್ಟ್ ಬಂದಿದೆ. ಇಲ್ಲದ ಕಾಂಪ್ಲಿಕೇಶನ್ ಯಾಕೆ ನಾವೇ ತಂದುಕೋಬೇಕು, ಅಲ್ಲವಾ?"

"ನಿಜ ಸಾರ್." ಎಂದು ಹೇಳಿ ತಲೆ ಕೆಳಗೆ ಹಾಕಿದೆ.

ಮನೆಯಿಂದ ಹೊರಡುವಾಗಲೇ ಪ್ರಭಾಕರರಾಯರ ಸಲಹೆಯಂತೆ ಒಂದಷ್ಟು ದುಡ್ಡು ತಂದಿದ್ದೆ. ಮೆಲ್ಲಗೆ ಇನ್ನೂರು ರೂಪಾಯಿಗಳನ್ನುತೆಗೆದುಕೊಂಡು ಆಕಡೆ ಈಕಡೆ ನೋಡಿ ಯಾರೂ ಇಲ್ಲದ್ದನ್ನು ಕಂಡು ಮೇಜಿನ ಮೇಲಿಟ್ಟೆ. "ಏನಿದು?" ಎಂದರು ಕಣ್ಣರಳಿಸಿ.

"ತಾವು ತುಂಬ ಉಪಕಾರ ಮಾಡಿದಿರಿ ಸಾರ್. ಇಲ್ಲದಿದ್ದರೆ ಇನ್ನೇನು ಫಜೀತಿ ಆಗ್ತಿತ್ತೋ" ನನ್ನ ಪರವಾಗಿ ಪ್ರಭಾಕರರಾವ್ ಉತ್ತರಿಸಿದರು.

"ನನ್ನ ಕೆಲಸ ನಾನು ಮಾಡಿದ್ದೀನಿ ಬಿಡಿ. ಅಲ್ಲದೆ ರಿಪೋರ್ಟ್ ಕ್ಲಿಯರ್ ಆಗಿದೆಯಲ್ಲ. ಇನ್ನೊಂದು ವಿಚಾರ ನೋಡಿ. ಈ ಎಪಿಲೆಪ್ಟಿಕ್ ಆಗಿರೋರ ವಿಚಾರದಲ್ಲಿ ಸ್ವಲ್ಪ ಎಚ್ಚರಿಕೆಯಿಂದಗಿರಬೇಕು ನಾವೂನು. ಮೂರ್ಛೆ ರೋಗ ಇದ್ದವರು

ಆಕ್ಸಿಡೆಂಟಾಗಿ ಸತ್ತರು ಅಂತಲೋ ಬಿದ್ದು ಸತ್ತರು ಅಂತಲೋ ಪ್ರಚಾರ ಮಾಡಿದರೆ ಅಂಥ ಪೇಶಂಟ್‌ಗಳು ಇರೋರ ಮನೆಯವರು ಪ್ಯಾನಿಕಿ ಆಗ್ತಾರೆ ಅನವಶ್ಯಕವಾಗಿ" ಅಂದರು.

"ತುಂಬ ಥ್ಯಾಂಕ್ಸ್ ಸಾರ್" ಅಂದೆ.

ನಿಧಾನವಾಗಿ ದುಡ್ಡನ್ನು ತೆಗೆದು ಕೊಂಡ ಇನ್‌ಸ್ಪೆಕ್ಟರು ಪ್ಯಾಂಟು ಜೇಬಲ್ಲಿಡುತ್ತ, "ಥ್ಯಾಂಕ್ಯೂ" ಎಂದರು.

ಸರ್ಟಿಫಿಕೇಟ್ ತೆಗೆದುಕೊಂಡು ಮನೆಯ ಕಡೆ ಹೊರಟೆವು. ನನಗೀಗ ಸೂತಕ ಅನ್ನಿಸಿತು, ತಮ್ಮ ಸತ್ತ ಸೂತಕ, ಸತ್ತ ದಿನದಿಂದ ಹನ್ನೊಂದು ದಿನಗಳವರೆಗೆ. ಆದರೆ ಅವನು ಸತ್ತದ್ದು ಯಾವತ್ತು, ಮನೆಬಿಟ್ಟು ಹೋದ ದಿನವೇ, ಎಷ್ಟು ಹೊತ್ತಿಗೆ? ನಿನ್ನೆಯೂ ಸೂತಕವಿತ್ತಲ್ಲ. ಆದರೆ ಮನೆಗೆ ಹೋದ ತಕ್ಷಣ ರಮಂಗೆ "ಮೊದಲು ಊಟ ಹಾಕು" ಅಂತ ಅವರವಸರವಾಗಿ ಊಟ ಮಾಡಿದ್ದೆ. ಹಸಿವು ತಾಳಲಾರದೆ. ಇವತ್ತು ಹೊತ್ತಾಗಬಹುದು ಅಂತ ಮೊದಲೇ ಊಟ ಮುಗಿಸಿ ಬಂದಿದ್ದೀನಿ. ಯಾವುದು ಹೆಚ್ಚು ಇವೆರಡರಲ್ಲಿ; ಹಸಿವೆಯ ಬಾಧೆಯೋ, ಸಾವಿನ ದುಃಖವೋ ಅನ್ನಿಸಿತು. ಆದರೆ ನಿನ್ನೆ ಈ ದೇಹ ಶಶಿಯದೇ ಅಂತ ಖಂಡಿತವಾಗಿರಲಿಲ್ಲವಲ್ಲ ಎಂಬ ಸಮಾಧಾನವೂ ಹಿಂದೆಯೇ ಬಂತು.

ದಾರಿಯಲ್ಲಿ ಬರುವಾಗ ಯೋಚನೆಗಳ ಸರಮಾಲೆ. ಶಶಿ ಮುಂಜಿಯಾದ ವನಲ್ಲ. ಯಾವ ಕರ್ಮಗಳನ್ನೂ ಮಾಡಬೇಕಾಗಿಲ್ಲ. ಆದರೆ ಅವನಿಗೆ ಊಟ– ತಿಂಡಿಯೆಂದರೆ ಪ್ರಾಣ. ಅವನ ಸ್ನೇಹಿತರು, ನನ್ನ ಸ್ನೇಹಿತರುಗಳಿಗೆ ಹದಿಮೂರನೇ ದಿನ ಊಟ ಹಾಕಿಸಿ ಅವನ ಆತ್ಮಕ್ಕೆ ಶಾಂತಿಯಾಗುವಂತೆ ಮಾಡಬೇಕು ಅನ್ನಿಸಿತು. ಆದರೆ ಇದ್ದಾಗ ಅವನ ಆತ್ಮಕ್ಕೆ ಶಾಂತಿಯಿತ್ತೇ? ನಾನೇ ಅವನಿಗೆ ಅಶಾಂತಿಯುಂಟುಮಾಡಿ ಈಗ ಸತ್ತ ಮೇಲೆ ಬೇರೆ ಯಾರಿಗೋ ಊಟ ಹಾಕಿ ಶಾಂತಿ ತಂದುಕೊಡಲು ಪ್ರಯತ್ನಿಸುತ್ತಿದ್ದೀನಲ್ಲ. ಎಂಥ ವಿರೋಧಾಭಾಸ! ಆದರೆ ಅವನ ಬಗ್ಗೆ ನನಗೆ ಪ್ರೀತಿಯಿರಲಿಲ್ಲವೇ? ನನ್ನ ಕಣ್ಣುಗಳ ಹಾಗೆ ನೋಡಿಕೊಂಡಿದ್ದೆ. ನನ್ನ ಸ್ವಂತ ಮಕ್ಕಳಿಗಿಂತ ಹೆಚ್ಚಾಗಿ ಅವನ ಆರೋಗ್ಯದ ಬಗ್ಗೆ ಗಮನಹರಿಸಿದ್ದೆ. ಕೊನೆಗೂ ನನ್ನ ಮೇಲೆ ಸೇಡು ತೀರಿಸಿಕೊಳ್ಳೋ ಹಾಗೆ ಸತ್ತ ಅವನು.

ಅವನ ಹೆಸರು ಶಾಶ್ವತವಾಗಿರೋ ಹಾಗೆ ಏನಾದರೂ ಮಾಡಬೇಕು. ಯಾವುದಾದರೂ ಹಾಸ್ಟಲಿನಲ್ಲಿ ಒಬ್ಬ ಹುಡುಗನಿಗೆ ಬೇಕಾಗುವಷ್ಟು ಬಡ್ಡಿ ಬರುವಂತೆ ಒಂದು ನಿಯನ್ನು ಸ್ಥಾಪಿಸಬಹುದು. ಅಥವಾ ಬಡ ವಿದ್ಯಾರ್ಥಿಗೆ ಸ್ಕಾಲರ್‌ಶಿಪ್ ಕೊಡುವುದೇ? ಅವನು ಓದಿದ ಸ್ಕೂಲಿನಲ್ಲಿ ಪ್ರತಿವರ್ಷ ಅತ್ಯಂತ ಮೇಧಾವಿ ಹುಡುಗನಿಗೆ ಬಹುಮಾನ ಕೊಡುವ ಏರ್ಪಾಟು ಮಾಡಿ ಒಂದು ಪುದುವಟ್ಟು ಇಡಬಹುದಲ್ಲ. ಅವನು ಸಾಯುವುದಕ್ಕಿಲ್ಲ ಇನ್ನೂ, ಆಗಲೇ ಅವನ ಸ್ಮಾರಕದ ಬಗ್ಗೆ ಯಾಕೆ ಯೋಚಿಸಬೇಕು? ಹೇಗಿದ್ದರೂ ಅವನದೇ ಸಾಕಷ್ಟು ಹಣ ಬರುತ್ತದೆ? ಎಷ್ಟು ಬರಬಹುದು? ನನಗೇ ಗೊತ್ತಿರುವಂತೆ ಅವನ ಇನ್‌ಶೂರೆನ್ಸ್ ಹಣ ಹದಿನೈದು ಸಾವಿರ ರೂಪಾಯಿ. ಪ್ರಾವಿಡೆಂಟ್ ಫಂಡ್ ಹಣ ಎಷ್ಟಿರಬಹುದು? ನಾಲ್ಕೈದು ಸಾವಿರ ಇರಬಹುದೇ? ಸ್ನೇಹಿತರಿಗೆ ಯಾರಿಗಾದರೂ ಸಾಲಗೀಲ ಕೊಟ್ಟಿದ್ದನೇನೋ. ಅವರು ಯಾರು ನಿಯತ್ತಾಗಿ ಅದನ್ನೀಗ ವಾಪಸ್ಸು ಕೊಡುತ್ತಾರೆ. ಇಪ್ಪತ್ತಂತೂ ಗ್ಯಾರಂಟಿ ತಾನೇ? ಒಂದು ಸೈಟು ಬರಬಹುದೇ? ಎಂಥಾ ಉಚ್ಚ ಮನುಷ್ಯ ನಾನು! ಅವನು ಸತ್ತ ಸೂತಕವೇ ಹೋಗಿಲ್ಲ. ಆಗಲೇ ಇಂಥ ಯೋಚನೆ ಬರುತ್ತಿದೆಯಲ್ಲ. ಆದರೆ ಅವನು ಸತ್ತ ದುಃಖ ನನಗಿಲ್ಲವೇ, ಇದನ್ನೂ ನಾನೇ ತಾನೇ? ತೀರ್ಮಾನಿಸಬೇಕಾದೋನು! ಅವನ ದುಡ್ಡಿನ ಮೇಲೆ ನನಗೆ ಹಕ್ಕಿಲ್ಲವೇ? ಇಷ್ಟು ದಿನ ಅವನನ್ನು ನಾನು ನೋಡಿಕೊಂಡೆನಲ್ಲ, ಅವನು ಸತ್ತ ಅಂತ. ಅವನ ಸಾವಿನ ಹಿನ್ನೆಲೆಯಲ್ಲಿ ನಾನು ಅವನೊಡನೆ ಆಡಿದ ಜಗಳವಿರಬಹುದು. ಅಂತ ಅವನ ಮೇಲಿದ್ದ ಪ್ರೀತಿ ನಾಶವಾಗುತ್ತದೆಯೇ, ಹಕ್ಕು ಹಾಳಾಗಿ ಹೋಗುತ್ತದೆಯೇ?ಇದ್ಯಾಕೆ ಈ ರೀತಿ ನನ್ನ ಮನಸ್ಸು ಆಲೋಚನೆ ಮಾಡುತ್ತಿದೆ. ಛೆ, ತುಂಬ ಸಣ್ಣ ಬುದ್ಧಿ ನನ್ನದು, ಎಂದು ಕೊಂಡು ತಲೆ ಝಾಡಿಸುತ್ತೇನೆ.

"ತುಂಬ ತಲೇಗೆ ಹಚ್ಚಿಕೊಳ್ಳಬೇಡಿ. ಋಣಾನುಬಂಧವಿದ್ದಷ್ಟೇ ಲಭ್ಯ" ಎಂದರು ಪ್ರಭಾಕರರಾಯರು. ನನ್ನ ಮನಸ್ಸಿನಲ್ಲಿ ನಡೆಯುತ್ತಿದ್ದ ವಿಚಾರದ ಸುಳಿವು ಸಿಕ್ಕಿ ಅವರೇನಾದರೂ ವ್ಯಂಗ್ಯದಿಂದ ಈ ಮಾತುಗಳನ್ನಾಡಿದರೋ ಎಂಬ ಅನುಮಾದಿಂದ ಅವರೆಡೆಗೆ ನೋಡುತ್ತೇನೆ. ಅವರು ಭುಜ ಹಿಡಿದುಕೊಂಡು ಅದುಮುತ್ತಾರೆ, ಸಹಾನುಭೂತಿಯಿಂದ. ನನ್ನ ಕಣ್ಣಿನಲ್ಲಿ ನೀರು ತುಂಬುತ್ತದೆ.

ಮನೆಯ ಹತ್ತಿರ ಬಂದಾಗ ಪ್ರಭಾಕರರಾಯರನ್ನು ಬೀಳ್ಕೊಡುತ್ತೇನೆ. ಮನೆಗೆ ಬಂದಾಗ ನನ್ನ ಮುಖಭಾವವಿರುವ ರೀತಿಯಿಂದ ರಮ ಆತಂಕದ ಮುಖ ಮಾಡಿಕೊಂಡು ಎದುರುಗೊಳ್ಳುತ್ತಾಳೆ. ಅವಳನ್ನು ಕಂಡು ನನ್ನ ಕಣ್ಣೀರು ಹೆಚ್ಚಾದಂತೆ ಎನಿಸುತ್ತದೆ. ತಲೆ ಕೆಳಗೆ ಹಾಕಿಕೊಂಡು ಬಂದು ನೇರವಾಗಿ ನನ್ನ ರೂಮು ಹೊಕ್ಕು ಕುರ್ಚಿಯಲ್ಲಿ ಕುಸಿಯುತ್ತೇನೆ. ಅವಳೂ ನನ್ನ ಹಿಂಬಾಲಿಸಿ ಬರುತ್ತಾಳೆ. "ಏನಾದರೂ ಗೊತ್ತಾಯಿತಾ?" ಎಂದು ಕೇಳುತ್ತಾಳೆ. '"ಎಲ್ಲ ಆಯಿತು. ಇನ್ನೇನಿದೆ ಗೊತ್ತಾಗೋದಕ್ಕೆ" ಅಂತ ಸಿಡುಕಿನ ಮನಸ್ಸು ಅಂದು ಕೊಂಡರೂ ಅವಳ ಕೈಗೆ ಸರ್ಟಿಫಿಕೇಟ್ ಕೊಡುತ್ತೇನೆ, ಮಾತನಾಡದೆ.

"ಏನಾಯಿತು?" ಎನ್ನುತ್ತಾಳೆ.

"ಬಾವಿಯಲ್ಲಿ ಅವನ ಹೆಣ ತೇಲ್ತಿತ್ತು."

"ನೀವು ನೋಡಿದ್ರಾ?"

ಸರಿ, ನಿಧಾನವಾಗಿ ಕತೆಯೆಲ್ಲ ಹೇಳುತ್ತೇನೆ. "ಅವನದೇ ಅಂತ ಹ್ಯಾಗೆ ಗ್ಯಾರಂಟಿ" ಅನ್ನುತ್ತಾಳೆ. ಅಳುಮುಖದಿಂದ, ಇನ್ನೂ ವಿಶದವಾಗಿ ನಡೆದ ಸಮಾಚಾರವನ್ನೆಲ್ಲ ಹೇಳುತ್ತೇನೆ. ಅವಳು ಮುಸುಮುಸು ಅಳುತ್ತ ಮೂಲೆ ಸೇರುತ್ತಾಳೆ. ಮಕ್ಕಳು ಇನ್ನೂ ಸ್ಕೂಲಿನಿಂದ ಬಂದಿಲ್ಲ. ಮನೆಯಲ್ಲಿ ಶ್ಮಶಾನ ಮೌನ, ಬಿಕೋ ಅನ್ನುತ್ತಿದೆ. ಏನು ಮಾಡಬೇಕೆಂದು ತೋಚುವುದಿಲ್ಲ.

ಯಾರೋ ಹೊರಗಡೆ ಬಾಗಿಲು ತಟ್ಟಿದ ಸದ್ದಾಗುತ್ತದೆ. ರಮ ಹಾಗೇ ಕೂತಿರುತ್ತಾಳೆ. ನಾನು ಅವಳ ಕಡೆ ನೋಡುತ್ತೇನೆ; ಮತ್ತೊಂದು ಬಾರಿ ಶಬ್ದ. ಅವಳು ನಿಧಾನವಾಗಿ ಮೇಲೆದ್ದು ಹೊರಗೆ ನಡೆಯುತ್ತಾಳೆ. ಬಾಗಿಲು ಮುಂದು ಮಾಡಿದ್ದನ್ನು ತೆಗೆದು ನೋಡುತ್ತಾಳೆ. ಯಾರೋ ಗುರುತಿನವರು, ಏನು ಕೇಳಲು ಬಂದಿದ್ದಾರೋ? ನಾನೂ ಇಣುಕಿ ನೋಡುತ್ತೇನೆ.

"ಯಾಕ್ರೀ ರಮ ಹೀಗಿದ್ದೀರಾ? ಏನಾಯಿತು?" ಆಕೆ ವಿಚಾರಿಸುತ್ತಾರೆ.

"ನಮ್ಮ ಶಶಿ ಹೋಗಿಬಿಟ್ಟ ಕಣ್ರೀ" ಈ ಮಾತುಗಳನ್ನು ಹೇಳುವಾಗ ರಮಳ ಕಂಠ ಗದ್ಗದವಾಗುತ್ತಿದೆ. ಅಳು ತುಂಬಿಕೊಂಡು ಹೊರಬರುತ್ತಿದೆ.

"ಅಯ್ಯೋ ಪಾಪವೇ, ಏನಾಗಿತ್ತು?"

"ಬಾವಿಯಲ್ಲಿ ಜಾರಿ ಬಿದ್ದನಂತೆ" ರಮ ಕೂಡ ಏನನ್ನೋ ಹೇಳುತ್ತಿದ್ದಾಳಲ್ಲ. ದುಃಖದಲ್ಲಿಯೂ ಇಂತಹ ವಿಚಾರಗಳ ಬಗ್ಗೆ ಮನಸ್ಸು ಎಚ್ಚರ ವಹಿಸುತ್ತದೆಯೇ, ಅಥವಾ ರಮ ತನಗೇ ತಿಳಿಯದೆ ಹೀಗೆ ಹೇಳುತ್ತಾಳೆಯೋ!"

"ಛೆ, ಛೆ, ಛೆ ಹೀಗಾಗಬಾರದಿತ್ತು. ಚಿನ್ನದಂಥ ಹುಡುಗ" ಎಂದು ಲೊಚಗುಟ್ಟಿಕೊಂಡು "ಬರ್ತೀನ್ರಿ, ಪಾಪ," ಎಂದು ಹೇಳಿ ಹೋಗುತ್ತಾರೆ.

ಮಕ್ಕಳು ಶಾಲೆಯಿಂದ ಬರುತ್ತವೆ. ಆ ಹೊತ್ತಿಗಾಗಲೇ ಪಕ್ಕದ ಮನೆಯವರನ್ನು ಕರೆದು ಒಲೆ ಉರಿ ಹಾಕಲು ಹೇಳಿರುತ್ತಾಳೆ ರಮ, ಮೊದಲು ತಾನು ನೀರು ಹಾಕಿಸಿಕೊಂಡು ಆಮೇಲೆ ನನಗೆ ಮಕ್ಕಳಿಗೆ ನೀರು ಹಾಕಲು ರಮ ಸಿದ್ಧಳಾಗುತ್ತಾಳೆ. ಮಕ್ಕಳಿಗೆ ಈ ವಿಚಾರ ಏನೆಂದು ಹೇಳುವುದು? ಈ ಎರಡು ಮೂರು ದಿನಗಳಿಂದ ಅವೇನೋ "ಶಶಿ ಎಲ್ಲಿ?" ಎಂದು ಕೇಳಿವೆ. ಆದರೆ ನಾವಿಬ್ಬರೂ "ಎಲ್ಲೋ ಹೋಗಿದ್ದಾನೆ" ಎಂದು ಬಾಯಿ ಮುಚ್ಚಿಸಿದ್ದೆವು. ಈಗ "ನೀರು ಹೊಕ್ಕಬೇಕು, ಏನನ್ನೂ ಮುಟ್ಟಬೇಡಿ" ಎಂದು ಅವರಮ್ಮ ಹೇಳಿದಾಗ ಅವಕ್ಕೆ ಅರ್ಥವಾಗುವುದಿಲ್ಲ. "ಯಾಕೆ?" ಎಂಬ ಸಹಜ ಪ್ರಶ್ನೆ ಹಿಂಬಾಲಿಸುತ್ತದೆ. ನಾನು ಸುಷ್ಮಳನ್ನು ತಬ್ಬಿಕೊಂಡು "ಶಶಿ ಹೋಗಿಬಿಟ್ಟ" ಎನ್ನುತ್ತೇನೆ. "ಎಲ್ಲಿಗೆ ಹೋದ?" ಎಂಬ ಅವಳ ಪ್ರಶ್ನೆಗೆ ಏನನ್ನಬೇಕು? "ಸತ್ತುಹೋದ" ಎಂದು ಹೇಳುತ್ತೇನೆ ಅವಳಿಗೆ ಸ್ವಲ್ಪ ಅರ್ಥವಾಗಬಹುದೇನೋ ಸಾವು ಅಂದರೆ "ಹೋ" ಎಂದು ಜೋರಾಗಿ ಅಳಲು ತೊಡಗುತ್ತಾಳೆ. ಪೃಥ್ವಿಗೆ ಏನೂ ಅರ್ಥವಾಗುವುದಿಲ್ಲ. ಆದರೆ ಅಕ್ಕ ಹೇಳುವುದನ್ನು ಕಂಡು ತಾನೂ ಅಳುವುದಕ್ಕೆ ಪ್ರಾರಂಭ ಮಾಡುತ್ತಾನೆ.

ನೀರು ಹಾಕಿಕೊಂಡು ಬೇರೆ ಬಟ್ಟೆ ಧರಿಸಿ ಹಾಲಿನಲ್ಲಿ ಕೂತುಕೊಳ್ಳುತ್ತೇನೆ. ಪಕ್ಕದ ಮನೆಯವರೇ ಆ ರಾತ್ರಿಯ ಅಡಿಗೆ ಮಾಡಲು ತೊಡಗಿ ಅಡುಗೆ ಮನೆಯಲ್ಲಿರುತ್ತಾರೆ. ಪೃಥ್ವಿ ಎದ್ದು ಒಳಗಡೆ ಹೋಗಲು ಪ್ರಯತ್ನ ಮಾಡಿದಾಗ ಅವರಮ್ಮ ಎಳೆದುಕೊಂಡು "ಎಲ್ಲೂ ಹೋಗಬೇಡ. ಯಾರನ್ನು ಮುಟ್ಟಬಾರದು. ಇಲ್ಲೇ ಕುಕ್ಕರು ಬಡಿ" ಎಂದು ಕೂಡಿಸಿಕೊಳ್ಳುತ್ತಾಳೆ. ಪರಿಸ್ಥಿತಿಯ ಗಾಂಭೀರ್ಯ ಅರ್ಥವಾಗಿರಬೇಕೇನೋ ಮಕ್ಕಳಿಬ್ಬರೂ ಆಕಾಶ ಕಳಚಿ ಬಿದ್ದವರಂತೆ ಮೂಲೆಯಲ್ಲಿ ಗುಮ್ಮನೆ ಕೂತುಕೊಳ್ಳುತ್ತಾರೆ. ಮಾತಿಲ್ಲ, ಕತೆಯಿಲ್ಲ. ಒಳಗೆ ಪಕ್ಕದ ಮನೆಯಾಕೆ ಕೆಲಸ ಮಾಡುತ್ತಿದ್ದಾಗ ಆಗುವ ಶಬ್ದ ಮಾತ್ರ ಕೇಳಿಸುತ್ತದೆ. ನಮಗೆ ಸಾವಿನ ಸೂತಕ ದುಃಖ ಅಂಟಿಕೊಂಡಿರುವಾಗಲೂ ಒಳಗೆ ನಮಗಾಗಿ ಅಡುಗೆ ಸಿದ್ಧವಾಗುತ್ತಿದೆ! ತಮ್ಮ ಸತ್ತ? ದುಃಖದಿಂದ ಊಟವೇ ಬೇಕಾಗದ ಹಾಗೆ ಯಾಕೆ ಆಗುತ್ತಿಲ್ಲ. ನಮ್ಮದು ಕಪಟ ದುಃಖವೋ ಎನ್ನಿಸುತ್ತದೆ. ಮಧ್ಯಾಹ್ನ ಅನಿಸಿದ್ದ ಪ್ರಶ್ನೆಯು ಬೃಹದಾಕಾರ ಪಡೆಯುತ್ತದೆ. ಯಾವುದು ಹೆಚ್ಚು; ಸಾವೋ, ಬದುಕೋ?

ಸಾಯಂಕಾಲವಾಗುತ್ತ ಬಂದಂತೆ ವಿಷಯ ತಿಳಿದ ಹಲವಾರು ಮಂದಿ ಪರಿಚಿತರು ಬರುತ್ತಾರೆ. ಅಯ್ಯೋ ಪಾಪ ಎನ್ನುತ್ತಾರೆ. ಏನಾಗಿತ್ತು ಎನ್ನುತ್ತಾರೆ. ಅವನೇ ಬಿದ್ದನೊ ಆಕಸ್ಮಿಕವೊ? ಯಾವತ್ತೂ ಹೋದದ್ದು. ಈಗ ಸ್ವಲ್ಪ ದಿವಸಗಳಿಂದ ಮನೇಲಿರಲಿಲ್ಲ, ಇತ್ಯಾದಿ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಕೊಟ್ಟು ಸಾಕಾಗುತ್ತದೆ. ಅವನು ಸಾಯುವುದಿರಲಿ, ಇವರೆಲ್ಲ ನಮ್ಮ ಪ್ರಾಣಾನೇ ಹಿಂಡ್ತಿದಾರೆ ಅನ್ನಿಸಿ ಬೇಸರ ವಾಗುತ್ತದೆ. ಮೊದಲೇ ಇದರಿಂದ ನಜ್ಜುಗುಜ್ಜಾಗಿರುವ ನಾವು ಇವರ ಪ್ರಶ್ನೆಗಳ ಬಾಣಗಳನ್ನೇ ಎದುರಿಸಬೇಕಲ್ಲ. ಎಂದು ಸಿಟ್ಟು ಬರುತ್ತದೆ. ದುಃಖಗೊಳ್ಳುವ ಈ ಪರಿಸ್ಥಿತಿಯಲ್ಲಿ ಸಿಟ್ಟು ಬರುವುದೇಕೆ ಎಂಬ ಪ್ರಶ್ನೆ ನನ್ನೆದುರು. ಈ ಜನರೂ ಪಾಪ ನಮ್ಮ ದುಃಖದಲ್ಲಿ ಸಹಾನುಭೂತಿ ತೋರಿಸಲು ಬಂದವರೇ ಅಲ್ಲವೇ? ಏನೋ ಯಾಕೆ ಸತ್ತ ಎಂಬ ಬಗ್ಗೆ ವಿಚಾರ ತಿಳಿದುಕೊಳ್ಳಬೇಕೆಂಬ ಕುತೂಹಲದಿಂದ ಪ್ರಶ್ನೆಗಳನ್ನು ಹಾಕುತ್ತಾರೆ. ಅದಕ್ಕೇ ಬೇಸರ ಮಾಡಿಕೊಂಡರೆ ಹೇಗೆ? ಇಂಥ ಪರಿಸ್ಥಿತಿಬೇರೆಯವರಿಗೆ ಉಂಟಾದಾಗ ನಾವೇ ಈ ಬಗೆಯ ಪ್ರಶ್ನೆಗಳನ್ನು ಹಾಕುವುದಿಲ್ಲವೇ? ಆದರೀಗ ತಿಳಿಯುತ್ತಿದೆ ಇಂಥ ಪ್ರಶ್ನೆಗಳು ಸಂಬಂಧಪಟ್ಟವರಿಗೆ ಎಂಥ ಕಿರಿಕಿರಿಯುಂಟುಮಾಡುತ್ತದೆಂದು. ಒಬ್ಬರಿಬ್ಬರಾದರೆ ಸರಿ, ಹತ್ತಾರು ಜನ ಬಂದು ಕೇಳಿದ ಪ್ರಶ್ನೆಗಳನ್ನೇ ಕೇಳಿದಾಗ ಹೇಳಿದ್ದನ್ನೇ ಹೇಳುವುದು ಅಂದರೆ? ಮೊದಲನೆಯವನಿಗೆ ಹೇಳುವಾಗ ಕಂಠ ಗದ್ಗದವಾಗಿದ್ದ ತೀವ್ರತೆ ಎರಡನೆಯವನಿಗೆ ಹೇಳುವಾಗ ಕಡಿಮೆಯಾಗುತ್ತದೆ. ಬರಬರುತ್ತ ಭಾವನೆಯೇ ಇಲ್ಲದೆ ಕೇವಲ ವರದಿಯಾಗಿ, ಕೊನೆಗೆ ಹೇಳಿದ್ದನ್ನೇ ಹೇಳಲು ಬೇಸರವಾಗುತ್ತದೆ. ಉತ್ತರಿಸಲು ಇಷ್ಟವಾಗದೆ ಸಿಟ್ಟೇ ಬರುತ್ತದೆ. ಅಂತೂ ದುಃಖಕ್ಕೂ ಸಿಟ್ಟಿಗೂ ಏನೋ ಸಂಬಂಧವಿದೆ!

ರಾತ್ರಿ ಪಕ್ಕದ ಮನೆಯಾಕೆ ಬಡಿಸಿದ್ದನ್ನು ಊಟ ಮಾಡಿ ಎಲ್ಲರೂಹಾಲಿನಲ್ಲೇ ಮಲಗಲು ಸನ್ನಾಹ ನಡೆಸುತ್ತೇವೆ. ನಾಳೆಯಿಂದ ಇನ್ನೂ ಅಷ್ಟು ದಿನ ಹೀಗೆ ಬೇರೆಯವರ ಕೈಲಿ ಅಡುಗೆ ಮಾಡಿಸಿಕೊಂಡು ನಾವು ಊಟ ಮಾಡಬೇಕೆ? ಯಾಕೆ? ಸೂತಕವೆಂದು ತಾನೆ? ಸೂತಕದಲ್ಲಿ ನಾವೇ ಎಂದಿನಂತಿದ್ದರೆ ಯಾಕಾಗುವುದಿಲ್ಲ? ರಮಳೇ ಅಡುಗೆ ಮಾಡುವುದು, ಎಂದಿನಂತೆ ರೂಮಿನಲ್ಲಿ ಮಂಚದ ಮೇಲೆ ಮಲಗುವುದು, ಎಲ್ಲೆಂದರಲ್ಲಿ ಓಡಾಡಿಕೊಂಡಿರುವುದರಿಂದ ಏನಾಗುತ್ತದೆ? ಹಾಗೆ ನೋಡಿದರೆ ಈ ನಾಲ್ಕೈದು ದಿನಗಳಿಂದಲೂ ನಮಗೆ ಸೂತಕವೇ ತಾನೇ? ಶಶಿ ಸತ್ತದ್ದು ಬಹುಮಟ್ಟಿಗೆ ಅವನು ಮನೆಬಟ್ಟು ಹೋದ ದಿನವೇ; ಆದರೆ ಇಷ್ಟು ದಿನ ನಾವು ಏನೂ ಮನಸ್ಸಿಗೆ ತಂದುಕೊಳ್ಳದೆ ಯಥಾ ಪ್ರಕಾರ ಇದ್ದೆವಲ್ಲ, ಅದರಿಂದ ಏನಾಯಿತು? ಈ ಮಕ್ಕಳು ಜಮಖಾನೆಯ ಮೇಲೆ ಮಲಗುವಂತೆ ರಮ ವ್ಯವಸ್ಥೆ ಮಾಡಿದ್ದಾಳೆ. ನಾವು ಚಾಪೆಯ ಮೇಲೆ – ಹೊದ್ದುಕೊಳ್ಳಲು ಒಂದೆರಡು ಬೆಡ್‌ಶೀಟ್‌ಗಳನ್ನು ಬಿಟ್ಟರೆ ಏನಿಲ್ಲ – ಮಕ್ಕಳಿಗೆ ಮೈಕೈ ನೋಯುವು ದಿಲ್ಲವೇ? ಎಂದಿನಂತೆ ಇದ್ದರೆ ಏನಾದೀತು? ಹೀಗಿದ್ದರೆ ಮಾತ್ರವೇ ನಮ್ಮ ದುಃಖ ಕಾಣುವುದು? ದುಃಖ ಕಾಣಬೇಕೆ? ಹಾಗಾದರೆ ಶಶಿ ಸತ್ತಿದ್ದರಿಂದ ನಮಗೆ ದುಃಖವುಂಟಾಗಿದೆಯೆಂದು ಬೇರೆಯವರಿಗೆ ತೋರಿಸಿಕೊಳ್ಳಬೇಕೆ? ಇಲ್ಲದೆಯೂ ತೋರಿಸಿಕೊಳ್ಳಬಹುದಲ್ಲ. ಅಂತೂ ನಮ್ಮ ಭಾವನೆಗಳು ನಮ್ಮವೇ ಅಲ್ಲ ಹಾಗಾದರೆ, ಬೇರೆಯವರಿಗಾಗಿಯೇನೋ ಈ ವಿಧಿಗಳು!

"ಪಾಪ ನಮ್ಮ ಮನೆ ಕೆಲಸ ಯಾಕೆ ಮಾಡಬೇಕು ಆಕೆ? ನೀನೇ ನಾಳೆಯಿಂದ ಅಡಿಗೆ ಮಾಡಿದರಾಗಲ್ಲವಾ?" ಎಂದೆ ರಮಳತ್ತ ತಿರುಗಿ.

"ನೀವು ಸರಿ, ಸೂತಕದಲ್ಲಿ ಎಲ್ಲ ಮುಟ್ಕೊಳ್ಳೋದು ಹೇಗೆ?"

"ನಮ್ಮ ಪಾಡಿಗೆ ನಾವಿದ್ದರಾಯಿತು. ಹೊರಗಡೆ ಬಾಗಿಲು ಹಾಕಿದ್ದು ಒಳಗೆ ಕೆಲಸ ಮಾಡ್ತಿರೋದು. ಯಾರು ಬಂದು ತನಿಖೆ ಮಾಡ್ತಾರೆ? ಪಾಪ, ಮಕ್ಕಳು ನೋಡು ಎಷ್ಟು ಕಷ್ಟಪಡಬೇಕು."

"ಪಡಲಿ ಬಿಡಿ. ಒಂದೆರಡು ದಿನ ತಾನೇ."

"ಇದರಲ್ಲೇನೇ ತಪ್ಪು, ಈಗ ಐದು ದಿನದ ಹಿಂದೇನೇ ಅವನು ಹೋದ. ಇರ್ಲಿಲ್ವ, ಏನಾಯಿತು?"

"ಗೊತ್ತಾಗಿರಲಿಲ್ಲ. ಇದ್ವಿ. ಈಗೆಲ್ಲ ವಿಚಾರ ತಿಳಿದಿದೆಯಲ್ಲ."

"ಏನೋ ಮುಟ್ಕೊಂಬಿಟ್ಟರೆ ಏನಾಗತ್ತೆ ಮಹಾ, ಈಗಾಗಲೇ ಸ್ನಾನ ಬೇರೆ ಮಾಡಿದ್ದೀವಿ."

"ನೀವು ಸುಮ್ನಿರಿ, ದೊಡ್ಡೋರು ಮಾಡಿರೋದನ್ನ ಹಾಗೆಲ್ಲ ತಪ್ಪಿಸೋದಕ್ಕೆ ಸಾಧ್ಯ ಏನು?"

"ಏನಾಗತ್ತೆ?"

ರಮ ಉತ್ತರಿಸಲಿಲ್ಲ. ಮೂತಿ ಊದಿಸಿಕೊಂಡಳು.

– – –

ಅವನನ್ನ ಸಾಗಹಾಕಿ ಸಾಗಹಾಕಿ ಅಂತ ಹಗಲೆಲ್ಲ ಈ ರಮ ಹಾಡುತ್ತಾ ಹಾಡುತ್ತಾ ಇದ್ದಳಲ್ಲ. ಅವನು ತೀರಿಹೋದ ಅಂತ ತಿಳಿದ ಮೇಲೆ ಅಷ್ಟೊಂದು ಅತ್ತಳು. ಅದೇನು ಹೊರ ನೋಟಕ್ಕೋ, ಅಥವಾ ನಿಜವಾಗಿಯೂ ಅವಳ ಮನಸ್ಸಿಗೆ

ಅವನ ಸಾವು ತಟ್ಟಿದೆಯೋ? ಅವಳೂ ಅವನನ್ನು ಸುಮಾರು ವರ್ಷದಿಂದ ಒಂಥರ ನೋಡಿಕೊಂಡಿದ್ದಾಳೆ ಅಲ್ಲವೇ? ಅವನ ಊಟ ತಿಂಡಿ ತಯಾರಿ ಎಲ್ಲ ಅವಳದೇ. ಅಲ್ಲದೆ ಯಾರ ಸಾವಾದರೂ ಮಿಕ್ಕವರನ್ನೂ ಒಂದು ಕ್ಷಣವಾದರೂ ಸಹಾನುಭೂತಿಪರರನ್ನಾಗಿ ಮಾಡುತ್ತೇನೋ. ಅಂಥದರಲ್ಲಿ ತನ್ನ ಕಣ್ಣ ಮುಂದೆ ಮೊನ್ನೆ ಮೊನ್ನೆಯವರೆಗೂ ಇದ್ದವನು ಈಗ ಇಲ್ಲವೇ ಇಲ್ಲ ಅಂದರೆ ಮನಸ್ಸಿಗೆ ಏನಾಗಬೇಡ? ಆದರೆ ಅವಳು ನೋಡಿಕೊಂಡದ್ದು, ಅವನ ಅಡಿಗೆ– ತಿಂಡಿ ತಯಾರಿಸಿದ್ದು ಅವಳ ಕರ್ತವ್ಯದ ಒಂದು ಭಾಗ ತಾನೇ? ಅವನನ್ನು ನೋಡಿಕೊಳ್ಳುವ ನನ್ನ ಜವಾಬ್ದಾರಿಯ ಪಾಲು. ನನ್ನ ಮದುವೆಯಾದ ಕ್ಷಣದಿಂದಲೇ ಅವಳದೂ ಆಯಿತಲ್ಲವೇ? ಅಡಿಗೆಯೇನೊ ಮಾಡಿ ಬಡಿಸುತ್ತಿದ್ದಳು, ಎಂದೂ ನೇರವಾಗಿ ಅವನನ್ನು ನೋಡಿಕೊಂಡವಳೇನಲ್ಲ. ಅಟ್ಯಾಕ್ ಆದಾಗಲೂ ಅವಳಿಗೆ ಅವನನ್ನು ಹಿಡಿದುಕೊಳ್ಳಲು ಭಯ. ಯಾಕೆ ಸಹಾನುಭೂತಿಯುಂಟಾಗಬೇಕಾದ ಸ್ಥಳದಲ್ಲೂ ಭಯವುಂಟಾಗುವುದು? ಅಥವಾ ಭಯದಿಂದಲೇ ನಮ್ಮ ಸಹಾನುಭೂತಿಯೂ ಹೊಮ್ಮುತ್ತದೆಯೋ? ಕಷ್ಟದಲ್ಲಿರುವವರಿಗೆ ನಾವು ಸಹಾನುಭೂತಿಯನ್ನು ವ್ಯಕ್ತಪಡಿಸುವುದ ಹಿಂದೆ ನಾವು ಆ ಕಷ್ಟಕ್ಕೆ ಹೆದರಿಕೊಳ್ಳುವುದು, ಅಂಥದ್ದೇನಾದರೂ ಆದರೆ ನಮ್ಮ ಬಗ್ಗೆ ಇತರರು ಅನುಕಂಪ ವ್ಯಕ್ತಪಡಿಸಲೆಂಬ ಹಂಬಲವಿರುತ್ತದೆಯೇ?

ಶಶಿಗೆ ಮೂರ್ಛೆ ಬರುವುದಲ್ಲದೆ ನಮ್ಮೆಲ್ಲರಿಗೆ ಬರುವ ಹಾಗೆಯೇ ಇತರ ಚಿಕ್ಕ ಪುಟ್ಟ ಅಸ್ವಾಸ್ಥ್ಯಗಳೂ ಬರುವುದು ಸಹಜತಾನೆ? ಹಾಗೆಯೇ ಅವನಿಗೊಂದು ಬಾರಿ ಪ್ಯಾರಾ ಟೈಫಾಯ್ಡ್ ಬಂತು. ಅವನು ಜ್ವರದ ತಾಪದಿಂದ ಕನವರಿಸಿಕೊಂಡ ನರಳುತ್ತಿದ್ದರೂ ರಮ ಎಂದೂ ಅವನ ಶುಶ್ರೂಷೆ ಮಾಡಿರಲಿಲ್ಲ. ಹಾಗಂತ ಅವನ ಕಡೆ ಕಣ್ಣೆತ್ತಿ ನೋಡಿರಲಿಲ್ಲ ಅಂಥ ಅರ್ಥವಲ್ಲ. ಅವನಿಗೆ ಬೇಕಾದ ಬೋರ್ನ್‌ವೀಟಾ, ಕಾಫಿ, ಗಂಜಿ–ಅಂತ ಆಹಾರವನ್ನು ಹೇಳಿದಾಗಲೆಲ್ಲ ತಯಾರಿಸುತ್ತಿದ್ದಳು. ಆದರೆ ಜ್ವರ ಜಾಸ್ತಿಯಾದಾಗ ಅವನ ಹಣೆಗೆ ತಣ್ಣೀರು ಬಟ್ಟೆ ಹಾಕುವುದೋ ಅವನನ್ನು ಎತ್ತಿ ಕುಳ್ಳರಿಸಿ ಆಹಾರ ಸೇವಿಸುವಂತೆ ಮಾಡುವುದೋ ಕಾರ್ಯಗಳಲ್ಲಿ ಅವಳೆಂದೂ ತಾನಾಗಿ ಮುಂದೆ ಬಂದಿರಲಿಲ್ಲ. ನಾನೇ ಕೆಲವು ವೇಳೆ ನನಗೊಬ್ಬನಿಗೇ ಕಷ್ಟವೆನಿಸಿದಾಗ ಅವಳನ್ನು ಕರೆದು, "ಇಲ್ಲಿ ಹಿಡಕೋ,' "ಅದನ್ನು ಕೊಡು', "ಇದನ್ನು ತಗೊಂಬಾ' ಅಂತ ಹೇಳುತ್ತಿದ್ದೆ. ಅವಳು ಅವುಗಳನ್ನೆಲ್ಲ ಮಾಡೇನೋ ಮಾಡುತ್ತಿದ್ದಳು. ಆದರೆ ಅವಳ ಮುಖದಲ್ಲಿ ತುಂಬಿಸುತ್ತಿದ್ದುದುನಿರ್ಭಾವ ಅಥವಾ ಆ ಮುಖವಾಡದ ಹಿಂದೆ ಅಸಮಾಧಾನವೂ ತುಂಬಿಕೊಂಡಿರುತ್ತಿತ್ತೋ? ಇಷ್ಟಾದರೂ ಆಮೇಲೆ ಅವನ ಬಗ್ಗೆ ಅಸಮಾಧಾನಗೊಂಡು ಮಾತಾಡೋವಾಗ ಅವನಿಗೆ ನಾನೇನು ಕಡಿಮೆ ಸೇವೆ ಮಾಡುತ್ತಿದ್ದೇ ವೆಯೇ? ಸ್ವಲ್ಪವಾದರೂ ಗೌರವ ಇರಬೇಡವೇ?" ಅನ್ನುತ್ತಿದ್ದಳು. "ಮಹಾ ಸೇವೆ ನೀನು ಮಾಡಿರೋದು" ಅಂತ ನಾನೇನಾದರೂ ಚುಡಾಯಿಸಿದರೆ, "ನಾನು ಮಾಡಿರೋದು ಹಾಳಾಗಲಿ, ನೀವು ಮಾಡಿರೋದಕ್ಕಾದರೂ ಬೆಲೆ ಬೇಡವೇ?" ಎನ್ನುತ್ತಿದ್ದಳು.

ಆದರೆ ನನ್ನ ಇಬ್ಬರು ಮಕ್ಕಳಿಗೂ ಅವನ ನರಳಾಟದಿಂದ ತುಂಬ ವೇದನೆ ಆಗಿದ್ದುದು ಸ್ಪಷ್ಟವಿತ್ತು. ಬಂದವರ ಮುಂದೆಲ್ಲ "ಪಾಪ, ನಮ್ಮ ಚಿಚಿಗೆ ಜ್ವರ" ಎಂದು ಪೃಥ್ವಿ ತುಂಬ ಅನುತಾಪಪೂರ್ವಕ ಮಾತುಗಳಲ್ಲಿ ತಿಳಿಯಪಡಿಸುತ್ತಿದ್ದ. ಸುಷ್ಮಾ ಕೂಡ ಅವನನ್ನು ದೂರದಿಂದಲೇ ಕಂಡು ಮರುಕ ವ್ಯಕ್ತಪಡಿಸುತ್ತಿದ್ದಳು. "ತುಂಬ ನೋವಾಗುತ್ತೇನೋ?" ಅಮ್ಮನಿಗೆ ಹೇಳಿ ಹಾಲು ತಗೊಂಬರ್ಲಾ?" ಎಂಬ ಉಪಚಾರ ಮಾಡುತ್ತಿದ್ದಳು. ಆದರೆ ತೀರ ಸಮೀಪಕ್ಕೆ ಸುಳಿಯದ ಹಾಗೆ, ಅವನ ಹಾಸಿಗೆಯಲ್ಲಿ ಕುಳಿತುಕೊಳ್ಳದ ಹಾಗೆ, ಅವನನ್ನು ಮುಟ್ಟದ ಹಾಗೆ ರಮ ಎಚ್ಚರವಹಿಸಿ ನೋಡಿಕೊಂಡಿದ್ದಳು. ಶಶಿಯೇನು ಮಗುವೇ. ಈ ವರ್ತನೆಯ ಹಿಂದಿರುವ ಮನೋಭಾವ ಅರ್ಥವಾಗದವನೇ. ಇವಳು ಕೆಲವು ವೇಳೆ ಪ್ರಕಟವಾಗಿಯೇ ಅವನನ್ನು ತೋರ್ಪಡಿಸುವುದು ಕಂಡು ಅವನ ಮನಸ್ಸಿಗೆ ಬೇಗುದಿಯಾಗದೇ ಎಂದು ನನಗನ್ನಿಸುತ್ತಿತ್ತು. "ಮಕ್ಕಳು ಅವನ ಹತ್ತಿರ ಹೋಗದ ಹಾಗೆ ಯಾಕೆ ಮಾಡ್ತೀಯ?" ಎಂದು ಮೇಲುಧ್ವನಿಯಲ್ಲಿ ಕೇಳಿದರೆ, "ಇವಕ್ಕೂ ಜ್ವರಗಿರ ಅಂತ ತಗುಲಿದರೆ

ಗತಿಯೇನು? ಇವನ ನರಳಾಟವನ್ನೇ ನೋಡಕ್ಕೆ ಆಗಲ್ಲ, ಇನ್ನು ಎಳೆಯ ಜೀವಗಳು, ಅವುಗಳ ಸಂಕಟ ನೋಡೋದು" ಎಂದು ಹೇಳುತ್ತಿದ್ದಳು. ಅದರಲ್ಲಿ ತಪ್ಪೇನು ಇಲ್ಲ, ನಿಜ, ಆದರೆ ಮಕ್ಕಳ ಬಗ್ಗೆ ಜಾಗ್ರತವಾಗಿ ರುವ ರೀತಿಯೊಂದಿಲ್ಲವೇ? ಏನೋ ಅಗ್ನಿಕುಂಡದಿಂದ ದೂರವಿರಿಸಬೇಕೆಂಬ ರೀತಿಯಲ್ಲಿ ಮಕ್ಕಳನ್ನು ತಡೆಹಿಡಿಯುವುದು ಯಾವ ನ್ಯಾಯ? ಒಂದೆರಡು ಬಾರಿ ಮಕ್ಕಳು ಅವನ ಪಕ್ಕದಲ್ಲಿ ಕೂತರೆ ಅವನ ಕಾಯಿಲೆ ಅವಕ್ಕೆ ಬರುತ್ತದೆಯೇ? ಹಾಗಿದ್ದಿದ್ದರೆ ಒಬ್ಬರಿಂದೊಬ್ಬರಿಗೆ ಇನ್ನೊಬ್ಬರಿಗೆ ಮತ್ತೊಬ್ಬರಿಗೆ ಕಾಯಿಲೆ ಅಂಟಿ ಲೋಕದಲ್ಲಿರುವ ಪ್ರತಿಯೊಬ್ಬರೂ ಕಾಯಿಲೆಯಿಂದ ನರಳಬೇಕಾಗಿತ್ತಲ್ಲ. ಇವಳದೇಕೋ ಅತಿಯಾಯಿತು ಅನ್ನಿಸುತ್ತಿತ್ತು

ಅವನು ಜ್ವರದ ಕಾಲದಲ್ಲಿ ಒಮ್ಮೆ ಅನ್ನ ತಿನ್ನಿಸಿದಾಗ ಸ್ವಲ್ಪ ಹೊತ್ತಿನಲ್ಲಿಯೇ ಎಲ್ಲವನ್ನೂ ವಾಂತಿ ಮಾಡಿಕೊಂಡು ಬಿಟ್ಟಿದ್ದ. ರಮಳನ್ನು ಕೂಗಿದೆ. ಅವಳು ಬಂದು ಆಗಿದ್ದ ರಾದ್ಧಾಂತ ನೋಡಿದಳು; ಶರ್ಟೆಲ್ಲ ವಾಂತಿ ಆಗಿತ್ತು. ಕಾಲಮೇಲೆ ಹೊದ್ದುಕೊಂಡಿದ್ದ ಬೆಡ್‌ಶೀಟ್ ಮೇಲೆಲ್ಲಾ ವಾಂತಿಯಾಗಿತ್ತು. ನೋಡಿ ಹಣೆ ಬಡಿದುಕೊಂಡಳು; "ಕರ್ಮ, ಕರ್ಮ" ಅಂತ ಗೊಣಗಿಕೊಂಡಳು. ಒಳಗಿನಿಂದ ಬೋಸಿಯಲ್ಲಿ ನೀರು ತಂದು ನನ್ನ ಮುಂದಿಟ್ಟಳು. ನಾನು ಅವನ ಮುಖ ಒರೆಸಿದೆ. ಶರ್ಟು ಬಿಚ್ಚಲು ನೆರವಾಗಿ ಬೇರೆ ಅಂಗಿ ತೊಡಿಸಿದೆ. ಒಂದು ಕ್ಷಣ ಬೇರೆಡೆ ಕೂತಿರುವಂತೆ ಹೇಳಿ ಹಾಸಿಗೆಯನ್ನೆಲ್ಲ ಮತ್ತೊಮ್ಮೆ ಸಿದ್ಧಪಡಿಸಿ ಕರೆತಂದು ಮಲಗಲು ಅವನಿಗೆ ನೆರವಾಗಿದ್ದೆ. ರಮ ತಾನಾಗಿ ಈ ಕೆಲಸಕ್ಕೆ ಮುಂದೆ ಬರಲಿಲ್ಲ. "ಇವಳು ಸಾಯೋ ಕಾಲಕ್ಕೆ ಯಾರೂ ನೋಡಿಕೊಳ್ಳಕ್ಕೆ ಬೇಕಾಗಲ್ಲವೇನೋ. ನೋಡೋಣ" ಎಂಬ ಕಡು ಭಾವನೆಯಿಂದ ಅವಳನ್ನು ಕಡೆಗಣಿಸಿ ನಾನೇ ಅದನ್ನೆಲ್ಲ ನಿರ್ವಹಿಸಿದ್ದೆ. ಮಕ್ಕಳು ಇದನ್ನೆಲ್ಲ ನೋಡುತ್ತಿದ್ದರೂ ತಾಯಿಯ ಆಜ್ಞೆಯಿಂದ ದೂರದಲ್ಲೆ ನಿಂತು ನೋಡುತ್ತಿದ್ದವು. ಬೆಡ್‌ಶೀಟನ್ನು ಒಗೆಯಲು ಹಾಕುವುದಕ್ಕೆಂದು ತೆಗೆದೊಯ್ಯುವಾಗ ಮೂಗು ವಾಸನೆ ಸಹಿಸದ ಥರ ಮಾಡಿಕೊಂಡು ಎಡಗೈ ಹೆಬ್ಬೆರಳು ತೋರು ಬೆರಳುಗಳ ತುದಿಯಲ್ಲಿ ಅದನ್ನೆತ್ತಿ ಕೊಂಡು ಹೊರಟಳು. ಬೆರಳ ಬಲ ಭಾರವಾದ ಬೆಟ್‌ಶೀಟನ್ನು ಹಿಡಿಯಲು ಸಮರ್ಥವಾಗದೆ ಕೆಳಕ್ಕೆ ಬಿದ್ದು ವಾಂತಿಯ ಅಗಳು ನೆಲಕ್ಕೆ ಬಿದ್ದವು. "ಸರಿಯಾಗಿ ತಗೊಂಡು ಹೋಗೋದು ಆಗದಿದ್ದರೆ ಅಲ್ಲಿ ಬಡಿದಿದೆ. ನಾನೇ ಆಮೇಲೆ ಎತ್ತಿಕೊಂಡು ಹೋಗ್ತೀನಿ ಎಂದು ಕಿರುಚಿದ್ದೆ. ಮರುಮಾತಾಡದೆ ಸರಿಯಾಗಿ ತಗೊಂಡು ಹೋಗಿದ್ದಳು.

– – –

ಮಕ್ಕಳಿಗೆ ಇರುವ ಸಹಾನುಭೂತಿಯ ಶುದ್ಧತೆ ನಮ್ಮ ಭಾವನೆಯಲ್ಲಿ ಇರುವುದಿಲ್ಲವೇಕೆ ಎಂದು ಎಷ್ಟೋ ಬಾರಿ ಅನ್ನಿಸುತ್ತದೆ. ಶಶಿಯ ಸೇವೆ ಮಾಡುವ ನಾನು ಎಲ್ಲರ ಶುಶ್ರೂಷೆಯನ್ನೂ ಹೀಗೆಯೇ ಮಾಡುತ್ತೇನೆಯೇ? ಸೇವೆ ಮಾಡುವುದರ ಹಿಂದೆ ಆತ್ಮೀಯತೆಯೇ ಅಲ್ಲವೇ ಕೆಲಸ ಮಾಡುವುದು? ರಮಂಗೆ ಶಶಿಯ ಬಗ್ಗೆ ನನಗಿರುವಷ್ಟು ಆತ್ಮೀಯತೆ ಬರಲು ಸಾಧ್ಯ ಇಲ್ಲದ್ದು ಸಹಜವಲ್ಲವೇ? ಶಶಿಯ ಯೋಗಕ್ಷೇಮ ನನ್ನ ಕರ್ತವ್ಯವಾಗಿದ್ದಂತೆ ಅವಳ ಸ್ವಂತ ಕರ್ತವ್ಯವಲ್ಲ. ನನ್ನ ಎಲ್ಲದರಲ್ಲೂ ಭಾಗಿಯಾದ ಅವಳು ಈ ನನ್ನ ಕರ್ತವ್ಯದಲ್ಲಿಯೂ ಭಾಗಿಯೇ ಹೊರತು ಇದು ಅವಳದೇ ಆದ ಕರ್ತವ್ಯವಲ್ಲ. ಅಲ್ಲದೆ ಈ ಕರ್ತವ್ಯದ ಪರಿಕಲ್ಪನೆ ನಮ್ಮ ಸಾಮಾಜಿಕ ಪದ್ಧತಿಗಳನ್ನು ಅವಲಂಬಿಸಿದೆಯಲ್ಲವೇ? ಹೆಂಡತಿ ಗಂಡನಿಗೆ ನೆರವಾಗಬೇಕು, ಆದ್ದರಿಂದ ಅವಳನ್ನು ಗಂಡ ಸಾಕುತ್ತಾನೆ. ನಮ್ಮ ಸಮಾಜ ವ್ಯವಸ್ಥೆಯಲ್ಲಿ, ನನ್ನ ಕರ್ತವ್ಯದಲ್ಲಿ ರಮ ಭಾಗಿಯಾಗುತ್ತಾಳೆ. ಅವಳ ಕರ್ತವ್ಯದಲ್ಲಿ ನಾನು ಭಾಗಿಯೇ? ಅಂದರೆ ಅವರ ಮನೆಯವರಿಗಾಗಿಯಾದರೂ ಈ ರೀತಿಯ

ಕಾಯಿಲೆ ಕಸಾಲೆ ಬಂದರೆ, ಬೇರೆ ರೀತಿಯ ಕಷ್ಟವುಂಟಾದರೆ ನಾನು ಸಹಾಯಕ್ಕೆ ಬಿಡುಮನಸ್ಸಿನಿಂದ ಹೋಗುತ್ತೇನೆಯೇ? ಆಗಾಗ್ಗೆ ಕಾಗದ ಬರೆದಾಗ "ಅಲ್ಲಿ ಎಲ್ಲ ಕ್ಷೇಮವೆಂದು ನಂಬಿದ್ದೇನೆ" ಎಂದು ಹೇಳುವಷ್ಟನ್ನು ಬಿಟ್ಟು ಇನ್ನು ಯಾವ ರೀತಿಯಲ್ಲಿ ರಮಳ ತಾಯಿತಂದೆಗಳ ಬಗ್ಗೆ, ಅವರ ಸಂಸಾರದ ಬಗ್ಗೆ ನೆರವಾಗಿದ್ದೇನೆ? ಅವಳ ತಾಯಿ ಒಮ್ಮೆ ಬಚ್ಚಲ ಮನೆಯಲ್ಲಿ ಜಾರಿ ಬಿದ್ದು ಇಪ್ಪತ್ತು ದಿನ ನರಳಿದರು. ರಮನ್ನ ಒಂದಷ್ಟು ದಿನ ಕಳಿಸಿಕೊಡಿ ಎಂದು ಮಾವ ಬರೆದಿದ್ದರು. ರಮ ಅದನ್ನು ಓದಿ ಗೋಳಾಡಿದ್ದಳು. ತೌರಿಗೆ ಹೋಗ್ತೀನಿ ಎಂದು ಹಟಮಾಡಿ ಹೋಗಿದ್ದಳು. ಆದರೆ ಒಂದು ವಾರವಾಗುವುದರೊಳಗೆ ಅವಳಿಗೆ ಕಾಗದ ಬರೆದು ಜೊತೆಯಲ್ಲಿ ಕರೆದುಕೊಂಡು ಹೋಗಿರುವ ಮಕ್ಕಳ ಸ್ಕೂಲು ಹೋಗುತ್ತದೆ. ಜೊತೆಗೆ ನನಗೂ ಕಷ್ಟವಾಗುತ್ತದೆ ಬಾ ಎಂದು ಬರೆದು ವಾಪಸು ಕರೆಸಿಕೊಂಡಿದ್ದೆ. ನಾನು ಅವಳ ಭಾವನೆಯಲ್ಲಿ ಸಂಪೂರ್ಣ ತಾದಾತ್ಮ್ಯ ಪಡೆಯಲು ಸಾಧ್ಯ ಇಲ್ಲದಾಗ, ಶಶಿಯ ಬಗ್ಗೆ ನನಗಿರುವ ಕಕ್ಕುಲತೆಯಂತೆಯೇ ಅವಳೂ ಭಾವನೆ ಹೊಂದಿರಬೇಕೆಂದು ನಿರೀಕ್ಷಿಸುವುದು ಎಷ್ಟರ ಮಟ್ಟಿಗೆ ಸರಿಯಾದ್ದು?

ನಾನು ಶಶಿಯ ಸೇವೆ ಮಾಡುತ್ತೇನೆ ಎಂದಾಕ್ಷಣ ಅದು ಸಂಪೂರ್ಣವಾಗಿ, ಕಾವ್ಯಗಳಲ್ಲಿ ಬರುವಂತಹ ನಿಷ್ಕಲ್ಮಷ ಪ್ರೀತಿಯ ಕುರುಹಾಗುತ್ತದೆಯೇ? ಕೆಟ್ಟವಾಸನೆ ಬಂದಾಗ, ಅಸಹ್ಯವಾದದ್ದನ್ನು ಕಂಡಾಗ ಮೂಗು ಕಳವಳಿಸುತ್ತದೆ. ಕಣ್ಣು ಮುಚ್ಚುತ್ತದೆ. ಅದನ್ನೇ ತಿರಸ್ಕಾರವೆಂದೇಕೆ ಭಾವಿಸಬೇಕು? ಅಲ್ಲದೆ ಶಶಿ ಒಂದು ರೀತಿಯಲ್ಲಿ ನನ್ನ ಜೀವನದ ಅನಿವಾರ್ಯ ಅಂಗವಾಗಿದ್ದಾನೆ. ಬೊಜ್ಜು ಹೊಟ್ಟೆಯಿರುವವನು ಅದನ್ನು ಹೊತ್ತುಕೊಂಡೇ ಎಲ್ಲೆಡೆ ಓಡಾಡಬೇಕು. ಅದೆಷ್ಟು ಭಾರವಾದರೂ, ಅದರ ಇರುವಿಕೆ ಎಷ್ಟೇ ಬೇಸರ ತರುವಂತಹುದಾದರೂ ಅದನ್ನು ಹೋಗಲಾಡಿಸಿಕೊಳ್ಳುವುದು ಅಸಾಧ್ಯ. ಹಾಗೆಯೇ ಶಶಿ ನನ್ನ ಜೀವನದಲ್ಲಿ. ಹೀಗಾಗಿ ನಾನು ಶಶಿಯನ್ನು ನೋಡಿಕೊಳ್ಳುತ್ತಿರುವುದು ಪ್ರೀತಿಯ ಭರಪೂರದ ಭಾವನೆಯಿಂದಲೋ ಅಥವಾ ನನ್ನ ಮನಸ್ಸಿನಾಳದಲ್ಲಿ ಇರುವುದ ಅನಿವಾರ್ಯವಾದದ್ದನ್ನು ಸಹಿಸಿಕೊಳ್ಳದೇ ವಿಯಿಲ್ಲವೆಂಬ ಭಾವನೆಯೋ? ವಾಟ್ ಕೆನಾಟ್ ಬಿ ಕ್ಯೂರ್ಡ್ ಮಸ್ಟ್ ಬಿ ಎನ್‌ಡ್ಯೂರ್ಡ್ ಅಲ್ಲವೇ? ಹೀಗಾಗಿ ಎಲ್ಲ ಸೇವೆಯ ಹಿಂದೆ ಪ್ರೀತಿ ನೆಲಸಿದೆಯೆಂಬುದು ಸರಿಯಿಲ್ಲವೇನೋ.

ಇನ್ನು, ಒಂದು ಸೇವೆಯನ್ನೋ ಶುಶ್ರೂಷೆಯನ್ನೋ ದೀರ್ಘಕಾಲ ಮಾಡುತ್ತ ಹೋದರೆ ಅದರ ಹಿಂದಿರುವ ಭಾವನೆ ಕಾಲಕ್ರಮೇಣ ಬತ್ತಿ ಹೋಗುವುದು ಸಹಜ. ಡಾಕ್ಟರು ನರ್ಸುಗಳು ರೋಗಿಗಳು ಶುಶ್ರೂಷೆ ನಡೆಸುತ್ತಾರಲ್ಲ. ನಮಗೆ ಅತ್ಯಂತ ಪ್ರಿಯವಾದ ವೃತ್ತಿಗಳಲ್ಲೂ ಅಸಹ್ಯಪಡುವ ಅಂಶಗಳನ್ನು, ತಮಗೆ ಶಾರೀರಿಕ ಮಾನಸಿಕ ಸಂಬಂಧವಿಲ್ಲದಿದ್ದರೂ ನಿರ್ವಿಕಾರವಾಗಿ ಸಹಿಸಿಕೊಳ್ಳುತಾರಲ್ಲ. ಅವರ ಸೇವೆಯ ಹಿಂದೆ ಭಾವನೆಯ ಆದ್ರ್ರತೆಯಿರುವುದಿಲ್ಲ. ಕೆಲವು ವೇಳೆ ಭಾವನೆಯಿದ್ದರೆ ಸೇವೆಯ ರೀತಿ ಅಸಮರ್ಪಕವಾಗಿ ಬಿಡಬಹುದು. ಅಷ್ಟು ಕಾರಣದಿಂದಲೇ ಡಾಕ್ಟರು ನರ್ಸುಗಳು ಮಾಡುವುದು ಸೇವೆಯಲ್ಲ ಎನ್ನಲಾದೀತೆ? ಆ ಸೇವೆ ಪ್ರೊಫೆಷನಲೈಸ್ಡ್ ನಿಜ; ಸೇವೆಗಾಗಿ ಅವರು ವೇತನ ಪಡೆಯುತ್ತಾರೆಂಬುದೂ ನಿಜ. ಆದರೆ ಅದು ಉಪಯುಕ್ತವಾಗದೇನೂ ಹೋಗುವುದಿಲ್ಲವಲ್ಲ. ಶಶಿಯ ಶುಶ್ರೂಷೆಯಲ್ಲಿ ನನಗೆ ಸಂತೋಷ ಇದೆಯೇ? ಅದನ್ನು ಹೇಳಿಕೊಳ್ಳುವ ಧೈರ್ಯ ನನಗಿಲ್ಲ. ಹಾಗಾದರೆ ನನ್ನ ಸೇವಾ ರೀತಿಯೂ ನಿರ್ವಿಕಾರವಾದದ್ದೇ. ದೀರ್ಘ ಸಹಚರ್ಯದಿಂದ ತಾನಾಗಿಯೇ ಉಂಟಾಗುವ ನಿರ್ಲಿಪ್ತತೆ ರಮಳಲ್ಲಿ ಬರಲು ಸಾಧ್ಯವಾಗದ್ದು ಅಕ್ಷಮ್ಯವೇನಲ್ಲ. ಅಲ್ಲದೆ ಶಶಿ– ಒಂದು ರೀತಿಯ ಸಾಂಸಾರಿಕ ಪರಿಸರದಲ್ಲಿ– ಅವಳ ಎದುರಿನ ದಡಕ್ಕೆ ಸೇರಿದವನು; ಆದ್ದರಿಂದ ತನ್ನವನು ಎನ್ನಿಸಿಕೊಳ್ಳಲಾರ. ಜೊತೆಗೆ ತನ್ನ ಮಕ್ಕಳ ಬಗ್ಗೆ ಎಲ್ಲ ತಾಯಿಯರಿಗೆ ಸಹಜವಾದ ಕಾಳಜಿಯಿಂದಾಗಿ ಪೂರ್ವಗ್ರಹದಿಂದಾಗಿ ಅವಳ ವರ್ತನೆ ನನಗೆ ಸ್ವಲ್ಪ ಕಠಿಣವೆಂಬಂತೆ ಕಾಣಬಹುದೇನೋ!

ನಾನೇ ಎಷ್ಟೋ ವೇಳೆ ಶಶಿಯ ಬಗ್ಗೆ ಕಹಿಯಾದ ರೀತಿಯಲ್ಲಿ ನಡೆದು ಕೊಂಡದ್ದೂ ಉಂಟಲ್ಲವೇ? ಹೀಗನ್ನಿಸಿದಾಗ ಆವತ್ತಿನ ಘಟನೆಯೊಂದು ಮನಸ್ಸಿನಲ್ಲಿ ರೀಲು ಬಿಚ್ಚಿಕೊಳ್ಳುತ್ತದೆ. ಶಶಿಗೆ ಹೀರೆಕಾಯಿಯೆಂದರೆ ಆಗದು. "ಎಲ್ಲ ತರಕಾರಿಗಳನ್ನೂ ತಿನ್ನಬೇಕು ಕಣೋ. ನಿನ್ನಂತೆ ಕಾಯಿಲೆ ಇರೋರು ಅದು. ಬೇಡ ಇದು ಬೇಡ ಅನ್ನಬಾರದು" ಎಂದು ಎಷ್ಟೋ ಸಲ ಅವನಿಗೆ ಬುದ್ಧಿ ಹೇಳಿದ್ದೆ. ಶಶಿಯದು ಏತಿ ಎಂದರೆ ಪ್ರೇತಿ ಅಂತಾರಲ್ಲ. ಅಂತಹ ಸ್ವಭಾವ. ತನಗೆ ಬೇಡ ಎಂದರೆ ಬೇಡವೇ ಬೇಡ ಎಂಬ ಹಟ. "ಒಂದುಸಲ ಬಾಯಿಗಿಟ್ಟುಕೊಂಡು ನೋಡಯ್ಯ ಸೇರದಿದ್ದರೆ ಬಿಟ್ಟುಬಿಡುವೆಯಂತೆ ಎಂದು ಹೇಳಿದರೂ ಕೇಳ; ತಾನು ಅಂದುಕೊಂಡದ್ದೇ ಸರಿ ಎಂಬ ಶಠತನ, ಆದರೆ ವಿಚಿತ್ರವೆಂದರೇ ನಮ್ಮ ಸುಷ್ಮಗೆ ಹೀರೇಕಾಯಿ ಅಂದರೆ ಪ್ರಾಣ. ಅವರ ಕ್ಲಾಸಲ್ಲಿ ಟೀಚರ್ರು ಯಾವ ಯಾವ ತರಕಾರಿಯಲ್ಲಿ ಯಾವ ಯಾವ ವಿಟಮಿನ್ನುಗಳಿರುತ್ತೆ, ಯಾವ ವಿಟಮಿನ್ನಿನಿಂದ ದೇಹಕ್ಕೆ ಯಾವ ಪುಷ್ಟಿ ಸಿಕ್ಕತ್ತೆ ಎಂದೆಲ್ಲ ಹೇಳುತ್ತಾರಂತೆ ಅದಕ್ಕೇ ಅವಳು ನಿತ್ಯ ಊಟಕ್ಕೆ ಕೂತಾಗ ಒಂದಷ್ಟು ಆರೋಗ್ಯದ ಪಾಠ ಮಾಡುತ್ತಾಳೆ. ಹುಳಿಗೋ ಪಲ್ಯಕ್ಕೋ ತೊವ್ವೆಗೋ ಹಾಕಿರುವ ತರಕಾರಿ ಯಾವುದೆಂದು ತಿಳಿದು ಅದರ ಪೌಷ್ಟಿಕಾಂಶದ ಬಗ್ಗೆ ಲೆಕ್ಚರ್ ಹೊಡೆಯೋದು ರೂಢಿ. ಅವರ ಟೀಚರ್‌ನಿಂದಾಗಿ ಅವಳಂತೂ ಎಲ್ಲ ತರಕಾರಿಗಳನ್ನೂ ತಿನ್ನುತ್ತಾಳೆ; ಹೀರೇಕಾಯಿ ಅಂದರೆ ಅವಳಿಗೆ ವಿಶೇಷ ಮಮತೆ. ಈ ವಿಶೇಷ ಪ್ರೀತಿಗೆ ಅವರ ಟೀಚರ್ ಕಾರಣವಾಗಿರಲಾರರು.

ಹೀರೇಕಾಯಿ ಅವಳಿಗೆ ಇಷ್ಟ ಅನ್ನುವ ಕಾರಣದಿಂದ ರಮ ಅವತ್ತು ಅದರ ತೊವ್ವೆ ಮಾಡಿದ್ದಳು. ಹಾಗಂತ ಅದನ್ನ ಶಶಿಗೆ ಬಲವಂತವಾಗಿ ತಿನ್ನಿಸುವ ಪ್ರಯತ್ನವೇನೂ ಮಾಡಲಿಲ್ಲ. ಆದರೆ ಅವತ್ತು ಕ್ಯಾರಿಯರ್‌ಗೆ ಊಟ ಕಲಸಿ ಹಾಕುವಾಗ, ಒಂದೇ ಸೌಟಿಂದ ಹುಳಿ ತೊವ್ವೆಗಳೆರಡನ್ನೂ ಉಪಯೋಗಿಸಿದ್ದಳೋ ಏನೋ, ಅವನ ಹುಳಿಯನ್ನದ ಡಬ್ಬಿಯಲ್ಲಿ ಒಂದೆರಡು ಹೀರೇಕಾಯಿ ಹೋಳುಗಳಿದ್ದುವಂತೆ. ರಮಳೇನೂ ಉದ್ದೇಶಪೂರ್ವಕವಾಗಿ ಹಾಗೆ ಮಾಡಿದ್ದಾಳೆನ್ನಲು ಸಾಧ್ಯವಿರಲಿಲ್ಲ. ಯಾರು ಮಾಡಿದರೂ ಗಡಿಬಿಡಿಯಲ್ಲಿ ಈ ರೀತಿ ಆಗುವಂಥದೇ. ಆದರೆ ಅವತ್ತು ಮಧ್ಯಾಹ್ನ ಕ್ಯಾರಿಯರ್ ಹುಡುಗ ಡಬ್ಬಿಯನ್ನು ವಾಪಸ್ ಮನೆಗೆ ತಂದುಕೊಟ್ಟಾಗ ನೋಡಿದರೆ ಕಳಿಸಿದ್ದ ಅನ್ನಪೂರ್ತಿ ಹಾಗೇ ಇತ್ತಂತೆ, ಮಂಜ್ಜಿಗೆ ಅನ್ನವನ್ನು ಕೂಡ ಅವನು ಮುಟ್ಟಿರಲಿಲ್ಲ.

ಸರಿ, ಸಂಜೆ ಆಫೀಸಿನಿಂದ ಬಂದಾಗ ರಮ ದೂರು ನೀಡಿದಳು. ಅವಳೂ ಸಾಮಾನ್ಯಳೇನಲ್ಲ. ನಾನು ಬರುವವರೆಗೆ ಕ್ಯಾರಿಯರ್‌ನ ತೊಳೆದು ಕೂಡ ಇಡದೆ ಶಶಿ ಹೇಗೆ ವಾಪಸ್ಸು ಕಳಿಸಿದ್ದನೋ ಅದೇ ರೀತಿಯೇ ಇಟ್ಟಿದ್ದಳು. ಅದನ್ನ ತಂದು ನನ್ನ ಮುಂದೆ ಡಬ್ಬಿಗಳಲ್ಲಿ ಬೇರೆ ಬೇರೆಯಾಗಿರಿಸಿ ತೋರಿಸಿದಳು. "ಏನೇ ಇದು!"

"ನೋಡಿ, ಅಷ್ಟು ಕಷ್ಟಪಟ್ಟು ಟೈಮಿಗೆ ಸರಿಯಾಗಿ ಅಡಿಗೆ ಮಾಡಿ ಕಳಿಸಿದರೆ ರಾಜಕುಮಾರರು ಹೀಗೆ ವಾಪಸ್ಸು ಕಳಿಸಿದ್ದಾರೆ?" ಎಂದಳು ಮಗುಮ್ಮಾಗಿ.

"ಯಾರು ಶಶೀನಾ?"

"ಮತ್ತಿನ್ನಾರು? ಅವನಲ್ಲದೆ ಇನ್ಯಾರಿದ್ದಾರೆ ರಾಜಕುಮಾರರು ನಮ್ಮ ಮನೇಲಿ" ಎಂದು ಮೂತಿ ಊದಿಸಿದಳು.

"ಯಾಕಂತೆ."

"ನೀವೇ ವಿಚಾರಿಸಿ" ಎಂದು ಹೊರಟೇಬಿಟ್ಟಳು. ಮನೆಗೆ ಕಾಲಿಡುವುದಕ್ಕಿಲ್ಲ, ಈ ರೀತಿಯ ಫಿರ್ಯಾದುಗಳ ವಿಚಾರಣೆ ಮಾಡುವುದು ಯಾರಿಂದಾಗುತ್ತದೆ? ನನ್ನ ಸಹನೆಗಾದರೂ ಮಿತಿಯಿರಬೇಡವೇ?

"ಲೋ, ಶಶಿ, ಬಾರೋ ಇಲ್ಲಿ" ಎಂದೆ. ಅನು ತಲೆಬಾಚಿಕೊಳ್ಳುತ್ತಿದ್ದವನು ಕೈಯಲ್ಲಿ ಬಾಚಣಿಗೆ ಹಿಡಿದೇ ರೂಮಿನಿಂದ ಹೊರಗೆ ಬಂದ.

"ಏನೋ ಇದು? ಯಾಕೋ ಊಟ ಮಾಡಲಿಲ್ಲ?"

"ನೋಡು ನಿಂಗೇನು ಕಾಣಿಸಲ್ಲವಾ?" ಅಂದ. ನನ್ನ ಕಂಡರೆ ಇವನಿಗೆಷ್ಟು ತಿರಸ್ಕಾರ. ಏನಾದರೂ ಕೇಳಿದರೆ ನೀನೇ ನೋಡಿಕೋ ಎಂದು ಹೇಳುತ್ತಾನಲ್ಲ. ಕೋಪ ಬಂತು. "ಯಾಕೆ ಊಟ ಮಾಡ್ಲಿಲ್ಲ ಅಂದರೆ ಏನೋ ಹೇಳ್ತಾನೆ! ಬೊಗಳೋ" ಎಂದೆ ಗಟ್ಟಿಯಾಗಿ. ಅವನು ದಾರಿಗೆ ಬಂದ.

"ನೋಡು ಮತ್ತೆ, ನಂಗೆ ಸೇರಲ್ಲ ಅಂತ ಗೊತ್ತಿದ್ದರೂ ಹೀರೇಕಾಯಿ ಅಡಿಗೆ ಮಾಡಿ ಕಳಿಸಿರೋದು? ನಾನು ಊಟ ಮಾಡೋದು ಅತ್ತಿಗೆಗೆ ಬೇಕಿಲ್ಲ" ಎಂದು ವಿವರಣೆ ನೀಡಿದ.

ಇದನ್ನು ಒಳಗಿನಿಂದಲೇ ಕೇಳಿಸಿಕೊಂಡ ರಮ ಬಂದಳು. ಬರುತ್ತ ಒಳಗಿನಿಂದ ಅಡಿಗೆ ತುಂಬಿದ್ದ ಪಾತ್ರೆಗಳನ್ನು ಒಂದೊಂದಾಗಿ ತಂದು ನನ್ನ ಮುಂದೆ ಸಾಲಾಗಿರಿಸಿದಳು ನೆಲದ ಮೇಲೆ. ಮೂಕಳಾಗಿ ಅವಳು ಮಾಡುತ್ತಿದ್ದ ಕೆಲಸ ನನ್ನ ರೇಗಿಸಿತ್ತು. "ಏನೇ ಇದೆಲ್ಲ ರಾದ್ಧಾಂತ" ಎಂದೆ. ಕೊನೆಯ ಪಾತ್ರೆಯನ್ನು ತಂದು ನೆಲದ ಮೇಲಿಟ್ಟು ಒಂದೊಂದರ ಮುಚ್ಚಳವನ್ನೇ ತೆಗೆದು ಇದು ನೋಡಿ, ಅನ್ನ. ಇದು ಹುರುಳೀಕಾಯಿ ಹುಳಿ. ಇದು ಹೀರೇಕಾಯಿ ತೊವ್ವೆ – ಎಂದು ತೋರಿಸಿ "ಸುಷ್ಮಂಗೇ ಇಷ್ಟವಲ್ಲಾಂತ ಹೀರೇಕಾಯಿ ತೊವ್ವೆನೇನೋ ಮಾಡಿದೆ. ಆದರೆ ಇಲ್ಲಿ ನೋಡಿ ಅದು ಬೇರೆಯೇ ಇದೆ. ಏನೋ ಕಲಸುವಾಗ ಒಂದೆರಡು ಹೀರೇಕಾಯಿ ಹೋಳು ಹುಳಿ ಅನ್ನದಲ್ಲಿ ಹೇಗೋ ಸೇರ್ಕೊಂಡಿದೆ. ಅದಕ್ಕೆ ನಾನೇನು ಮಾಡಲಿ" ಎಂದಳು. ಅವಳು ತಂದಿಟ್ಟ ಪಾತ್ರೆಗಳಿಂದ, ನೀಡಿದ ವಿವರಣೆಯಿಂದ ಅವಳಲ್ಲಿ ತಪ್ಪಿಲ್ಲ ಎಂದು ತಿಳಿಯಿತು, ನನ್ನ ಮುಖ ಗಡುಸಾಗಿ ಶಶಿಯ ಕಡೆ ತಿರುಗಿತು. ನಾನು ನನ್ನ ಕಡೆಗೆ ಬಂದಿದ್ದೇನೆ ಎಂಬುದನ್ನು ರಮ ತಿಳಿದಳೇನೋ. "ಏನೋ ಒಂದೆರಡು ಹೋಳು ಬಿದ್ದರೆ ಅವನು ಊಟ ಮಾಡಬಾರದು ಅಂತ ನಾನು ಹಾಗೆ ಕಳ್ಸಿದ್ದೀನಿ ಅಂತಾನಲ್ಲ" ಎಂದು ಅಳುವಿನ ಮಧ್ಯೆ, ಹೇಳಿದಳು. ನನ್ನ ಪರಿಸ್ಥಿತಿ ತೀರ ಕಷ್ಟದ್ದು!

"ನೀನೇನು ಎಳೇ ಮಗುನೇನೋ, ಆ ಹೋಳನ್ನೆಲ್ಲ ತೆಗೆದು ತಿಂದಿದ್ದರೆ ಏನಾಗ್ತಿತ್ತು" ಎಂದು ಶಶಿಯನ್ನು ಕೇಳಿದೆ.

"ನನಗೆ ಅದು ಸೇರಲ್ಲ" ಎಂದು ಹಾಡಿದ ರಾಗವನ್ನೇ ಹಾಡಿದ ಅವನದು ಯಾವತ್ತೂ ಇದೇ ಗೋಳು.

"ನಿಂಗೆ ಬೇಕಾದ್ದನ್ನು ಮಾತ್ರವೇ ಮಾಡಬೇಕಾ? ಬೇರೆಯೋರಿಗೆ ಇಷ್ಟವಾದದ್ದನ್ನ ಅಡಿಗೆ ಮಾಡುವ ಅಧಿಕಾರ ಅವಳಿಗೆ ಇಲ್ಲವಾ? ಇದೇನು ನಿಮ್ಮಪ್ಪನ ಮನೇನಾ?" ಎಂದಿದ್ದೆ ಸಿಟ್ಟಿನಿಂದ.

"ನಂಗೆ ಸೇರಲ್ಲ ಅಂತ ಗೊತ್ತಿದ್ದೂ, ಹೋಳನ್ನ ಯಾಕೆ ಸೇರಿಸ್ಬೇಕು? ನಾನು ಊಟ ಮಾಡಬಾರದೂಂತ ತಾನೇ!" ಅವನ ಮೊಂಡುವಾದದಿಂದ ನನಗೆ ಬೇಸರವಾಯಿತು.

"ನೋಡಿದಿರಾ? ನಿಮ್ಮೆದುರಿಗೇನೇ ಹೇಗೆ ಮಾತಾಡ್ತಾನೆ! ಅವನಿಗೆ ಎಷ್ಟು ಮಾಡಿದರೂ ಅಷ್ಟೇನೇ. ನಾಯೀನ ಸಿಂಹಾಸನದ ಮೇಲೆ ಕೂಡಿಸಿದಂತೆ" ಎಂದು ಒಳಗೆ ಹೋದಳು. ಅವಳ ಮೇಲೆ ಇಲ್ಲದ ಆರೋಪ ಹೊರಿಸುತ್ತಾನೆ ಇವನು! ತಿಳಿದು ಮಾಡಿದ್ದಲ್ಲ ಎಬುದು ಸ್ಪಷ್ಟವಾಗಿಯೇ ಇದೆ. ಆದರೂ ಇವನ ಹಟಮಾರಿತನ ಹೇಳಿದ್ದನ್ನೇ ಸಾಸುವಂತೆ ಮಾಡುತ್ತಿದೆಯಲ್ಲ!

"ನಾಳೆಯಿಂದ ಊಟಾನೇ ಕಳಿಸಬೇಡ ಕಣೆ. ಇವತ್ತು ಎಲ್ಲಿ ತಿಂದನೋ ಅಲ್ಲೇ ತಿಂದುಕೋತಾನೆ" ಎಂದು ರೇಜಿಗೆಯಿಂದ ಹೇಳಿ ಮುಂದಿನ ಕೆಲಸಕ್ಕೆ ಮೇಲೆದ್ದೆ. ಇವರಿಬ್ಬರ ಮಧ್ಯೆ ನಾನು ನರಳುವ ಹಾಗೆ ಆಯಿತಲ್ಲ. ನಾನೇನು ಕರ್ಮ ಮಾಡಿದ್ದಕ್ಕೆ ಈ ಜನ್ಮದಲ್ಲಿ ಶಿಕ್ಷೆ ಅನ್ನಿಸಿತ್ತು.

ಮಾರನೇ ದಿನ ರಾತ್ರಿ ರಮ ಎಲ್ಲರಿಗೂ ತಟ್ಟೆ ಹಾಕಿದಳು. ಮಕ್ಕಳು ಬಂದರು. ಶಶಿ ಬರಲಿಲ್ಲ. ಸ್ವಲ್ಪ ಹೊತ್ತು ಕಾದೆವು. "ಊಟಕ್ಕೆ ಬಾರೋ" ಅಂತ ಕೂಗಿದೆ. ಮಕ್ಕಳನ್ನು ಎಬ್ಬಿಸಿ "ಅವನನ್ನು ಕರಕೊಂಡು ಬಾ" ಅಂತ ಹೇಳಿಕಳಿಸಿದೆ. ಅವನು ಬರಲಿಲ್ಲ. ನಾನೇ ಎದ್ದು ಅವನ ರೂಮಿಗೆ ಹೋದೆ. ಮುಸುಕು ಹಾಕಿಕೊಂಡು ಮಲಗಿಯೇಬಿಟ್ಟಿದ್ದ. "ಯಾಕೋ?" ಎಂದೆ. "ಹಸಿವಿಲ್ಲ" ಎಂದ. "ಯಾಕೆ ಹಸಿವಿಲ್ಲ? ಮಧ್ಯಾಹ್ನ ಊಟ ಮಾಡಿದ್ದು ತಾನೇ?"

"ಸಾಯಂಕಾಲ ತಿಂಡಿ ತಿಂದುಕೊಂಡು ಬಂದೆ."

"ಅದ್ಯಾಕೆ ತಿಂಡಿ ತಿನ್ನಬೇಕಾಗಿತ್ತು? ಮನೆಗೆ ಬಂದು ಊಟ ಮಾಡೋದು ಗೊತ್ತಿರಲಿಲ್ಲವಾ? ತಿಂದರೂ ಹೊಟ್ಟೆ ಬಿರಿಯಾ ಯಾಕೆ ತಿನ್ನಬೇಕು?"

"ಯಾಕೆ ಅಂದ್ರೆ, ಇಲ್ಲಿ ಬಂದು ಉಪವಾಸ ಬೀಳಬೇಕಾ?" ಎಂದ ಮುಸುಕು ತೆರೆದು. ಅವನ ಮಾತು ಅರ್ಥವಾಗಲಿಲ್ಲ.

"ಯಾಕೆ ಉಪವಾಸ ಬೀಳಬೇಕು? ದಿನಾನು ನಿಂಗೆ ಊಟ ಹಾಕಲ್ಲವಾ ಇಲ್ಲಿ. ಯಾವತ್ತೂ ಇಲ್ಲದ್ದು ಇವತ್ತೇನು ಸ್ಪೆಷಲ್ಲು?"

"ಏನು ಸ್ಪೆಷಲ್ಲೋ ನಿನ್ನ ಹೆಂಡತೀನೇ ಕೇಳು" ಎಂದ. ತನಗೆ ರಮ ಸಂಬಂಧವಿಲ್ಲದವಳಂತೆ 'ನಿನ್ನ ಹೆಂಡತೀನ' ಎಂದು ಲಘುವಾಗಿ ಕರೆದದ್ದು ನನಗೆ ಸಹಿಸಲಾಗಲಿಲ್ಲ.

"ಜ್ಞಾನ ಬೇಡವೇನೋ ನಿಂಗೆ ಅತ್ತಿಗೇನ ಹೀಗಾ ಕರೆಯೋದು? ಅತ್ತಿಗೆ ಅಂದರೆ ತಾಯಿ ಸಮಾನ" ಅಂದೆ.

"ತಾಯಿ ಆಗಿದ್ದಿದ್ದರೆ ಮಕ್ಕಳನ್ನೇನೂ ಉಪವಾಸ ಸಾಯ್ಸಲ್ಲ" ಎಂದ.

"ಅದಕ್ಕೇ, ಊಟಕ್ಕೆ ಬಾ ಅಂತಿರೋದು."

"ಇದು ನೀನು ಕರೆಯೋದು ಅಷ್ಟೆ." ಅವನ ಮಾತು ವಿಚಿತ್ರವಾಗಿತ್ತು. ನಾನು ಕರೆದರೆ ಸಾಲದೆ, ಇನ್ನಾರು ಕರೆಯಬೇಕು ಇವನನ್ನು?

"ಏನೋ ಇದು ರಗಳೆ. ಮೇಳದ ಸಮೇತ ಬಂದು ನಿನ್ನ ಕರಕೊಂಡು ಹೋಗಬೇಕಾಗ? ನಿನ್ನೆ ದಿನ ಯಾರು ಕರೀತಿದ್ದದ್ದು?"

ಪ್ರತಿದಿನದ ಹಾಗಲ್ಲವಲ್ಲ ಇವತ್ತು?" "ಇನ್ನೆಂಥದು ಮತ್ತೆ?"

"ಅವರನ್ನೇ ಕೇಳು."

ಪುನಃ ಮಾತು ಪ್ರಾರಂಭವಾದ ಕಡೆಗೆ ಹೊರಳ್ತಾ ಇದೆ. ಇದಕ್ಕೆ ಕೊನೆಯೇ ಇಲ್ಲವೇ ಅನ್ನಿಸಿತು.

"ಏನೇ ಇದು ಮತ್ತೆ ನಿಮ್ಮದು" ಅಂದು ಒಳಗಿದ್ದ ರಮಳ ಕಡೆ ಮುಖ ಮಾಡಿ ಕೂಗಿದೆ. ಅವಳು ಬಂದಳು. ಹಿಂದೆಯೇ ಮಕ್ಕಳೂ ಎದ್ದು ಬಂದಿದ್ದವು. ಅವರಿಗಂತೂ ಈ ದೃಶ್ಯಗಳು ತುಂಬ ಪರಿಚಿತವಾದುವೇ.

"ಏನೇ ಇವನು ಹೇಳ್ತಾ ಇರೋದು?"

"ಏನೋಪ್ಪ ನಿಮ್ಮ ಅಣ್ಣ-ತಮ್ಮಂದಿರ ರಹಸ್ಯ ನಂಗೇನು ಗೊತ್ತು ಎಂದಳು ವ್ಯಂಗ್ಯವಾಗಿ. ಇಬ್ಬರೂ ಒಂದೊಂದು ತುದಿಯಲ್ಲಿ ನಿಂತು ನನ್ನನ್ನು ಆಟವಾಡಿಸ್ತಾ ಇದಾರೆ ಇವರು. ಇಬ್ಬರ ಮಾತುಗಳೂ ಒಗಟುಗಳೇ. ನನ್ನ ಸಹನೆಯ ಕಟ್ಟೆ ಒಡೆದಿತ್ತು. ಶಶಿಯ ಹತ್ತಿರ ಹೋಗಿ ಅವನ ಹೊದಿಕೆಯೆಳೆದು, ಅವನ ರಟ್ಟೆ ಹಿಡಿದು ಮೇಲೆತ್ತಿ "ನನ್ನ ಏನೂಂತ ತಿಳಿದಿದ್ದೀರಿ ನೀವು? ಬೇವಾರ್ಸಿ ಸೂಳೇಮಕ್ಕಳ" ಎಂದು ಅವನ ಮೇಲೆ ಕೈಯೆತ್ತಿದೆ. ಆಗವನು ಮಾತಿಗೆ ಇಳಿದ.

"ಹಾಗಾದ್ರೆ ಮಧ್ಯಾಹ್ನ ಯಾಕೆ ಕ್ಯಾರಿಯರ್ ಊಟ ಕಳಿಸಲಿಲ್ಲವಂತೆ" ಅಂದ. ನಾನು ಎಲ್ಲ ಉದ್ವೇಗ ಕಳೆದುಕೊಂಡು ಜರ್ರನೆ ಇಳಿದುಹೋದೆ. ನನ್ನ ಕೋಪ ರಮಳ ಕಡೆಗೆ ತಿರುಗಿತು. "ಇವನು ಹೇಳೋದು ನಿಜವಾ?"

"ನೀವೇ ನಿನ್ನೆ ಹೇಳಿದ್ರಿ, ಅವನಿಗೆ ಊಟ ಕಳಿಸಬೇಡ ಅಂತ. ಅದಕ್ಕ ಕಳಿಸಲಿಲ್ಲ" ಅಂದಳು ತಣ್ಣಗೆ.

"ಏನೋ ಕೋಪದಲ್ಲಿ ಕಳಿಸಬೇಡಾಂತ ಹೇಳಿದರೆ ಯೋಚನೆ ಮಾಡದೆ ಕಳಿಸದೇ ಇದ್ದು ಬಿಡೋದಾ!" ನನ್ನ ಮಾತಿನ ಕಾವು ಮತ್ತೆ ಏರಿತ್ತು.

"ನೀವು ಕೋಪದಲ್ಲಿ ಬೇಡಾಂತೀರಿ. ಕಳಿಸಿದರೆ ತಿರುಗಾ ಕೋಪ ಮಾಡಿಕೊಂಡು ಯಾಕೆ ಕಲಿಸಿದೆ ಅಂದ್ರೆ ನಾನೆಲ್ಲಿ ಹೋಗಬೇಕು. ಒಂದೊಂದು ಕ್ಷಣಕ್ಕೆ ಒಂದೊಂದು ಮಾತಾಡಿದರೆ ಹೇಗೆ ನಾನು ಸಂಸಾರ ಮಾಡಿ ಸಾಯೋದು?"

ಒಟ್ನಲ್ಲಿ ನನ್ನ ತಲೆಯ ಮೇಲೇ ಗೂಬೆ ಕೂತುಕೊಂಡಿತು. ಯಾವುದೋ ಕೋಪದ ಭರದಲ್ಲಿ ಒಂದು ಮಾತಾಡಿದರೆ ಅದರ ಹಿಂದಿನ ಭಾವನೆಯೇನು ಅಂತ ಅರ್ಥಮಾಡಿಕೊಳ್ಳದೆ ಮಕ್ಕಿಕಾಮಕ್ಕಿ ನಡೆದುಕೊಂಡರೆ ಗತಿಯೇನು? ಅವನ ಮೇಲಿನ ಕೋಪದಿಂದ ಹೀಗೆ ಮಾಡಿ ನನ್ನನ್ನೇ ಈ ರಮ ಜವಾಬ್ದಾರನನ್ನಾಗಿ ಮಾಡುತ್ತಿದ್ದಾಳಲ್ಲ. ಇದು ಯಾವತ್ತು ಕೊನೆಯಾಗೋದು? ನಾವು ಈ ರೀತೀನೇ ಜಗಳ ಆಡ್ತಾ ಇದ್ದರೆ ಮಕ್ಕಳ ಮನಸ್ಸಿನ ಮೇಲೆ ಎಂಥ ಪರಿಣಾವುಂಟಾಗುತ್ತೆ; ಮುಂದೆ ಅವರು ನಮ್ಮ ಬಗ್ಗೆ ಯಾವ ರೀತಿ ಆಲೋಚನೆ ಮಾಡ್ತಾರೆ?

ನಾನೊಂದು ಹೇಳಿದರೆ ಅದರ ಅಕ್ಷರಾರ್ಥವನ್ನು ಹಿಡಿದು ನನ್ನ ಭಾವನೆ ತುಂಬಿ ಇವಳು ಹೇಗೆ ಕೋಪ ತೀರಿಸಿಕೊಡಳು. ನಮ್ಮ ಮತ್ತು ಭಾವನೆ ಬೇರೆಯಾದರೆ ನಮಗೇ ಅದು ಹೇಗೆ ಬೂಮರಾಂಗ್ ಆಗಬಹುದು. ಯಾಕೆ ಹೀಗೆ ಆಗತ್ತೆ. ಜಗಳ ಅಂದ್ರೆ ಅದೇ ಅಲ್ಲವೆ. ಕೋಪ ಒಂದೇ ಅಲ್ಲಿ ನಿಜ. ಅದನ್ನು ಹೊರಹಾಕುವ ಭಾಷೆಗೆ ಅಲ್ಲಿ ಬೆಲೆಯೇ ಇಲ್ಲ. ಆದರೆ ಈ ಜಗಳದಿಂದ ಎಳೆಯ ಮನಸ್ಸಿಗೆ ಅದೆಂಥ ಅನರ್ಥಕಾರಿ ಪರಿಣಾಮವಾಗತ್ತೆ. ನಮ್ಮ ಜಗಳ ಯಾವತ್ತು ನಿಲ್ಲತ್ತೆ? ಇಲ್ಲ ಇವನು ದೂರ ಹೋಗಬೇಕು. ಇವಳು ಹೋಗಬೇಕು. ಇವಳು ಹೋದರೆ ಮಕ್ಕಳ ಗತಿಯೇನು? ಇನ್ನೊಂದು ಮದುವೆಯಾಗಿ ಮಕ್ಕಳನ್ನ ಸಾಕಬೇಕೆ? ಆಗ ಮಲಮಕ್ಕಳು-ಮಲತಾಯಿ ಸಮಸ್ಯೆ ಬೇರೆ ಹೊಸದಾಗಿ ಸೇರಿ ಕೊಳ್ಳುತ್ತಲ್ಲವೆ? ಜೊತೆಗೆ ರಮ ನನಗೆ ಬೇಕಾದೋಳಲ್ಲವೇ? ಅಷ್ಟು ಸುಲಭವಾಗಿ ಇವಳನ್ನು ನಾನು ಕಳಕೊಳ್ಳೋದು ಸಾಧ್ಯವೇ? ಅದರ ಪರಿಣಾಮಗಳನ್ನ ನಾನು ಎದುರಿಸಬಲ್ಲೆನೇ? ಇಷ್ಟು ವರ್ಷಕಾಲ ನನ್ನ ಮೈಯ ಬಿಸುಪನ್ನು ಕೊಟ್ಟು ಜೀವನ ಹಗುರಮಾಡಿದ ಅವಳ ಬಗ್ಗೆ ಇಂಥ ಭಾವನೆ ನನಗೆ ಬರಬಹುದೇ?

– – –

ಶಶಿ ಹೋಗೋದೂಂದ್ರೆ ಅರ್ಥ ಏನು? ಸಾಯೋದೆ? ಅವನು ಬೇರೆ ಕಡೆ ಹೋದರೆ ಅಲ್ಲಿನ ಸುದ್ದಿ ಕೇಳುತ್ತಲೇ ಇರಬೇಕು. ಹಾಗೂ ನಮ್ಮ ಮನಸ್ಸಿನ ಕಿರಿಕಿರಿ ಹೋಗುವುದಿಲ್ಲ. ಅಂದರೆ ಅವನು ಸತ್ತರೆ.... ಅನ್ನೋ ಅರ್ಥ ನನ್ನ ಮನಸ್ಸಿನಲ್ಲಿ ಸುಳಿಯುತ್ತಿದೆಯೇ? ನನ್ನ ಸಂಸಾರವಷ್ಟೇ ಉಳಿಯುತ್ತದೆ. ಅವನೂಂದ್ರೆ ಒಂದು ರೀತಿ ಲಯಬಿಲಿಟಿ ಮಾತ್ರವೇ ಹಾಗಾದರೆ? ಈ ಜಗಳವೂ ಇಲ್ಲದ, ಜವಾಬ್ದಾರಿಯೂ ಇಲ್ಲದ, ಸಂಪೂರ್ಣ ನಮಗೆ ನಾವೇ ಇರಬಹುದಾದ ಪರಿಸ್ಥಿತಿ ಇದರಿಂದಾಗಬಹುದಲ್ಲವೇ? ನನ್ನ ಮನದಾಳದಲ್ಲಿ ಅವನು ಬೇಡವೆಂಬ ಭಾವನೆ ಇದೆಯೇ? ಇದ್ದಕ್ಕಿದ್ದಂತೆ ಜವಾಬ್ದಾರಿ ಸ್ವಾತಂತ್ರ್ಯ ಲಭಿಸಿದರೆ ಜೀವನ ಹಗುರ ಆಗುವುದಲ್ಲ! ಥೂ ನನ್ನ ಮನಸ್ಸಿಗಿಷ್ಟು ಬೆಂಕಿ ಹಾಕ! ಏನು ಯೋಚನೆ ನನ್ನದು. ಅವನು ಜೀವನದ ಜವಾಬ್ದಾರಿ ಅಂದರೆ ದುಡ್ಡು ತಗೊಂಡು ಜತೆಯಲ್ಲಿಟ್ಟುಕೊಳ್ಳುತ್ತ ಊಟ ಹಾಕೋದಲ್ಲವೇ? ಸ್ವಲ್ಪ ಎಚ್ಚರ ವಹಿಸಿದರಾಯಿತು. ಆದರೆ ಇವನ ಜವಾಬ್ದಾರಿ ಇಷ್ಟೆಯೇ? ಅಷ್ಟೆ ಆಗಿದ್ದಿದ್ದರೆ ಇಷ್ಟೆಲ್ಲ ರಾದ್ಧಾಂತಗಳು ಏಕಾಗಬೇಕಾಗಿತ್ತು. ಮನುಷ್ಯರು ಒಟ್ಟಿಗೇ ಒಂದೇ ಮನೆಯಲ್ಲಿ ಬಾಳುವುದು ಎಂದರೆ ಬರೀ ಊಟಮಾಡುವುದಲ್ಲವಲ್ಲ. ಒಂದು ಸಣ್ಣ ವಿಷಯ ಎಲ್ಲರ ತಲೆ ಬಿಸಿಮಾಡಿ ಜೀವನವನ್ನು ಅದೆಷ್ಟು ಕಹಿಯಾಗಿ ಮಾಡುತ್ತದಲ್ಲ. ಏನು ಮಾಡಲು ಹೋದರೂ ನಮ್ಮ ಮೇಲೆ ಸವಾರಿ ಮಾಡುತ್ತವೆ ಸಮಸ್ಯೆಗಳು. ಇದರಲ್ಲಿ ಸೇರಿಕೊಳ್ಳದೆ ನಿರ್ಲಿಪ್ತನಾಗಿರಲು ಸಾಧ್ಯವಿಲ್ಲ. ಸೇರಿಕೊಂಡು ಸುಳಿಗೆ ಬೀಳಲೂ ಆಗುವುದಿಲ್ಲ.

ಹಳೆಯ ನೆನಪುಗಳೆಲ್ಲ ಬಂದು, ಹಾಗಾದರೆ ಶಶಿ ಸತ್ತ. ನಾನು ಸ್ವತಂತ್ರನಾಗಿದ್ದೇನೆಯೇ ಎನಿಸುತ್ತದೆ. ಇನ್ನು ಮೇಲೆ ಅವನ ಮಾತ್ರೆ ಔಷಗಳ ಎಚ್ಚರ ವಹಿಸಬೇಕಾಗಿಲ್ಲ; ಕ್ಯಾರಿಯರ್ ಕಳಿಸುವ ಜವಾಬ್ದಾರಿಯನ್ನು ರಮ ವಹಿಸುವ ಹಾಗಿಲ್ಲ. ಅವನ ಹತ್ತಿರ ಹೋದರೆ ತನ್ನ ಮಕ್ಕಳಿಗೆ ರೋಗ ಅಂಟುತ್ತದೇನೋ ಎಂಬ ಭೀತಿ ಅವಳಿಗಿರಬೇಕಾಗಿಲ್ಲ. ಅವನಿಗೆ ಅಟ್ಯಾಕ್ ಬಂದು ಹಿಡಿದುಕೊಳ್ಳುವ ಪ್ರಮೇಯ ನನಗಿಲ್ಲ. ನಾವಿಬ್ಬರೂ ಜಗಳ ಆಡಲು ಇನ್ನು ಶಶಿ ಕಾರಣವಾಗಲಾರ. ಅಂತೂ ಅವನು ಸತ್ತು ನನ್ನ ಭಾರ ಇಳಿಸಬೇಕಾಯಿತೇ? ಒಂಥರ ಅವನದು ತ್ಯಾಗವೆ ಎನಿಸಿ ಅವನ ಮುಖ ಮನಸ್ಸಿನಲ್ಲಿ ಮೂಡಿ ಕಣ್ಣುಗಳಲ್ಲಿ ನೀರು ತುಂಬುತ್ತದೆ. ನಾವು ಹೊಂದಿಕೊಳ್ಳಲಾರದೆ ಆದ ಜಗಳಗಳಿಗೆ ಅವನೇ ಕಾರಣವೆಂದು ಹೇಳುವುದು ಸರಿ ಆದೀತೇ? ಅವನು ಎಳಸು ನಿಜ, ವಿಚಿತ್ರ ನಿಜ, ಆದರೆ ಅವನು ನಮ್ಮ ಜೀವನದಲ್ಲಿ ಮುಳ್ಳು ಎಂಬುದು ಸರಿಯೇ? ಅವನಿಗೆ ನಾನೆಷ್ಟು ಅನ್ಯಾಯ ಮಾಡಿದೆ? ನನ್ನಿಂದಲೇ ಅಲ್ಲವೇ ಅವನು ಸತ್ತದ್ದು? ನನ್ನ ಕೋಪ ಅವನನ್ನು ಸಾವಿಗೆ ನೂಕಿತಲ್ಲವೇ?

ಈ ಅನಿಸಿಕೆಗಳು ನನ್ನನ್ನು ನುಗ್ಗುನುರಿ ಮಾಡುತ್ತಿವೆ. ನಿದ್ದೆ ಬಾರದೆ ಆಚೆ ಈಚೆ ಹೊರಳಾಡುತ್ತೇನೆ. ನಿಟ್ಟುಸಿರು ಹೊಮ್ಮುತ್ತದೆ. ರಮಳೂ ಪಕ್ಕ ಬದಲಾಯಿಸಿ "ಛ್ಚ" ಎಂದು ಲೊಚಗುಟ್ಟಿಕೊಳ್ಳುತ್ತಾಳೆ.

"ಯಾಕೆ ನಿದ್ದೆ ಬರಲಿಲ್ಲವೇ?" ಎಂದು ಕೇಳುತ್ತೇನೆ.

ಮೌನ.

"ನಿದ್ದೆ ಬರಲಿಲ್ಲವಾ?" ಎನುತ್ತೇನೆ ಮತ್ತೆ.

"ಅವನು ಸತ್ತು ನಮ್ಮ ಮೇಲೆ ಅಪವಾದ ಬರೋಹಾಗಾಯಿತು" ಎಂದಳು ನನ್ನ ಪ್ರಶ್ನೆಯನ್ನು ಗಮನಕ್ಕೆ ತೆಗೆದುಕೊಳ್ಳದೆ.

"ಯಾಕೆ ಅಪವಾದ ಬರತ್ತೆ?"

"ಇನ್ನೇನು? ಇಷ್ಟು ದಿನ ನೋಡಿಕೊಂಡರೂ, ಅವನು ಸತ್ತ ರೀತಿ ನೋಡಿ ಜನ ಏನಂದುಕೊಳ್ಳುವುದಿಲ್ಲ."

"ಏನಂದುಕೊಳ್ತಾರೆ?"

"ಮನೇಬಿಟ್ಟು ಹೋಗಿ ಬಾವಿಯಲ್ಲಿ ಬಿದ್ದು ಸತ್ತ. ಅವರಣ್ಣ ಅತ್ತಿಗೆ ಕೊಡೋ ಹಿಂಸೆ ಸಹಿಸಲಾರದೆ ಆತ್ಮಹತ್ಯೆ ಮಾಡಿಕೊಂಡ ಅನ್ನಲ್ವಾ?"

"ಪೋಸ್ಟ್ ಮಾರ್ಟಂ ರಿಪೋರ್ಟ್ ಕ್ಲಿಯರ್ ಆಗಿದೆಯಲ್ಲ."

"ಎಲ್ಲರಿಗೂ ಪೋಸ್ಟ್‌ಮಾರ್ಟಂ ರಿಪೋರ್ಟನ್ನು ತೋರಿಸ್ತಾ ಹೋಗ್ತೀರಾ? ದುಡ್ಡು ಕೊಟ್ಟು ಸರ್ಟಿಫಿಕೇಟ್ ತಗೊಂಡಿದ್ದಾರೆ ಅಂತ ಅಂತಾರೆ ಜನ."

"ಅಂದುಕೊಳ್ಳಲಿ ಬಿಡು. ಎಲುಬಿಲ್ಲದ ನಾಲಿಗೆ' ಎಂದು ಮಲಗುವವನಂತೆ ಈಚೆ ಮಗ್ಗುಲಿಗೆ ತಿರುಗುತ್ತೇನೆ.

'ಅಂದುಕೊಳ್ಳಲಿ' ಬಿಡು ಎಂದರೂ ಹಾಗೆ ಬಿಡಲು ಸಾಧ್ಯವೇ? ನಾನು ಇನ್‌ಸ್ಪೆಕ್ಟರಿಗೆ ಇನ್ನೂರು ರೂಪಾಯಿ ಕೊಟ್ಟದ್ದು ಯಾಕೆ? ನಮಗೆ ವಾಸ್ತವ ಸಂಗತಿಯೇ ಮುಖ್ಯವಾದರೆ ಯಾಕೆ ಹೀಗೆ ಮಾಡಬೇಕು? ಜೀವನದಲ್ಲಿ ಮುಕ್ಕಾಲು ಪಾಲಿನ ನಮ್ಮ ಚರ್ಯೆಗಳು ಬೇರೆಯವರಿಗಾಗಿಯೇ ಅಲ್ಲವೇ? ಜನ ಏನಂದುಕೊಳ್ಳುತ್ತಾರೋ ಅಂತಲೇ ನಮ್ಮ ಜೀವನವೆಲ್ಲ ರೂಪುಗೊಳ್ಳುವುದಲ್ಲವೇ? "ಅಂದುಕೊಳ್ಳಲಿ ಬಿಡು' ಎಂದಷ್ಟು ಸುಲಭವಾಗಿ ಜನಗಳು ನಮ್ಮ ಬಗ್ಗೆ ಅಂದುಕೊಳ್ಳುವುದನ್ನು ಕಡೆಗಣಿಸಲು ಯಾಕೆ ಸಾಧ್ಯವಾಗುವುದಿಲ್ಲ? ಶಶಿಯ ಹೊಟ್ಟೆಯಲ್ಲಿ ಜೀರ್ಣವಾಗದ ಸ್ವಲ್ಪ ಆಹಾರಾಂಶಗಳಿದ್ದವು ಎಂದು ಪೋಸ್ಟ್ ಮಾರ್ಟಂ ರಿಪೋರ್ಟಿನಲ್ಲಿತ್ತು. ಇಲ್ಲಿಂದ ಆವತ್ತು ಬೆಳಿಗ್ಗೆ ಎದ್ದುಹೋದವನು ತಿಂಡಿಗಿಂಡಿಯೇನಾದರೂ ತಿಂದುಕೊಂಡು ಹೋದನೇನೋ. ಎಲ್ಲವೂ ಪೂರ್ವ ಯೋಜನೆಯಂತೆಯೇ ಆಗಿರಬೇಕು. ಅವನು ಹಿಂದೆ ಬಾಣಸವಾಡಿಯ ಆ ಬಾವಿಯನ್ನು ಕಂಡಿದ್ದಿರಬೇಕು. ಅದೇಕೆ ಅವನ ಮನಸ್ಸಿನಲ್ಲಿ ಮೂಡಿ ನಿಂತಿತ್ತು? ಇಲ್ಲಿಂದ ಅಷ್ಟು ದೂರ ಹೋಗುವವರೆಗೆ ಸಾಯಬೇಕೆಂಬ ದೃಢ ನಿರ್ಧಾರ ಅವನಲ್ಲಿರಬೇಕಾದರೆ ಅವನದಿನ್ನೆಂತಹ ಕಲ್ಲು ಮನಸ್ಸು! ರಿಪೋರ್ಟು ಏನಾದರೂ ಹೇಳಿಕೊಳ್ಳಲಿ. ಶಶಿ ಆತ್ಮಹತ್ಯೆಯನ್ನೇ ಮಾಡಿಕೊಂಡು ಸತ್ತನೆಂದೇ ನನಗನ್ನಿಸುತ್ತಿದೆ. ಆದೆ ಈಜುವುದಕ್ಕೆ ಇಳಿಯುವವನ ಹಾಗೆ ಬಟ್ಟೆಗಳನ್ನೆಲ್ಲ ಬಿಚ್ಚಿಟ್ಟು ಬರಿಯ ಚಡ್ಡಿಯಲ್ಲಿ ಬಾವಿಗೆ ಹಾರಿದ್ದಾನೆ. ಅವನ ಮನಸ್ಸಿನಲ್ಲಿ ಸಾವಿನ ಭಯ ಸುಳಿಯಲಿಲ್ಲವೇ? ಅವನದು ಸಾವಿನ ಭಯವನ್ನೂ ಮೀರಿದ ನಿರ್ಧಾರವೇ? ಅಥವಾ ಸಾವೇ ಮೇಲು ಎಂದು ನಿರ್ಧರಿಸುವಂತಹ ಮಾನಸಿಕ ಯಾತನೆಯನ್ನು ಅವನು ಅನುಭವಿಸಿರಬಹುದೇ? ನೀರಿಗೆ ಬೀಳುವಾಗಲಾದರೂ ಅವನಿಗೆ ಏನೂ ಅನಿಸದಿರುವುದೆಂದರೆ! ನೇರವಾಗಿ ತಲೆಗೆ ಏಟು ಬಿದ್ದು ಅವನು ಸತ್ತನೆಂಬ ರಿಪೋರ್ಟು ಸರಿಯಿರಬಹುದು. ಆದರೆ ಸಾಯುವುದಕ್ಕೆಂದೇ ನೇರವಾಗಿ ತಲೆಯನ್ನು ಕೊಟ್ಟು ಬಿದ್ದನೇ? ತಲೆಗೆ ಪೆಟ್ಟು ಬಿದ್ದು ಸತ್ತಿದ್ದರೂ ಅದರ ಹಿಂದೆಯೇ ಸಾವು ನಿಶ್ಚಿತವಾಗಿತ್ತೆನಿಸುತ್ತದೆ. ಬಿದ್ದ ತಕ್ಷಣ ಸತ್ತಿರಲಾರ. ಅವನೇನಾದರೂ ನೋವು ಅನುಭವಿಸುತ್ತ. ಏಟಿನ ತೀವ್ರತೆಯಿಂದಾಗಿ ಮೇಲೆ ಬಾರದೆ ನೀರು ಕುಡಿದು ಸತ್ತನೇ? ಯಾತನೆಯನ್ನವನು ಹೇಗೆ ಅನುಭವಿಸಿರ ಬಹುದು! ಆಗೆಲ್ಲ ನಮ್ಮ ನೆನಪು ಅವನಿಗೆ ಬಂದಿರಬಹುದೇ? ಆತ್ಮಹತ್ಯೆಯನ್ನು ಎದುರಿಸುವ ಧೈರ್ಯ ಅವನಿಗೆ ಬಂದಿರುವುದು ಆ ದಿನದ ಹಿಂದಿನ ರಾತ್ರಿ ನಡೆದ ಜಗಳದಿಂದಿರಬೇಕು. ಆದ್ದರಿಂದ ಸಾಯುವವರೆಗೆ ನಮ್ಮ ನೆನಪು ಅವನಿಗಿದ್ದೇ ಇರಬೇಕು. ಸಾಯುವ ಕ್ಷಣದಲ್ಲಿ ನನ್ನ ಬಗ್ಗೆ ಅವನೇನೂ ಯೋಚಿಸಿರಬಹುದು? ಸೇಡುತೀರಿಸಿಕೊಂಡನೆಂಬ ತೃಪ್ತಿಯೇ. ನನಗೆ ಆಗ ಬಹುದಾದ ಮಾನಸಿಕ ನೋವನ್ನು ಕಲ್ಪಿಸಿಕೊಂಡ ಆನಂದವೇ, ಬೇರೆಯವರು ಅವನ ಸಾವಿಗೆ ನನ್ನನ್ನೇ ಕಾರಣನೆಂದು ದೂಷಿಸಿಕೊಳ್ಳುವ ಚಿತ್ರದಿಂದ ಸೇಡಿನ ಅಟ್ಟಹಾಸವೇ, ಅಥವಾ ಇದಾವುದೂ ಇರದ ನಿರ್ಲಿಪ್ತತೆಯೇ?

ನಾನೂ ಹತ್ತಿರದಿಂದ ಇಬ್ಬರು ಆಪ್ತರ ಸಾವುಗಳನ್ನು ಕಂಡವನು. ಅಮ್ಮ ಸತ್ತಾಗ ನಾನು ಮನೆಯಲ್ಲೇ ಇದ್ದರೂ ಅದರ ನೆನಪು ಹೆಚ್ಚಾಗಿ ಉಳಿದಿಲ್ಲ. ತುಂಬ ವರ್ಷಗಳಾಗಿವೆ ಅವಳು ಸತ್ತು. ಆದರೆ ಅಪ್ಪನ ಸಾವನ್ನು ಒಂದು ರೀತಿ ಪ್ರತಿಕ್ಷಣವೂ ಕಂಡಿದ್ದೇನೆ ಎನ್ನಬಹುದು. ಸುಮಾರು ಐದು ತಿಂಗಳು ಲಕ್ವ ಹೊಡೆದು ಸಾವಿನ ಜೊತೆ ಹೋರಾಡುತ್ತಾ ಬದುಕಿದ್ದರು. ಒಂದೇ ಕಡೆ ಮಲಗಿ ಜೀವನ ಸಾಗಿಸುವ ದುರ್ಭರ ಪರಿಸ್ಥಿತಿ. ಪ್ರತಿಯೊಂದಕ್ಕೂ ಇನ್ನೊಬ್ಬರ ನೆರವು ಬೇಕು, ಆಸರೆ ಬೇಕು. ಒಂದು ಕಡೆಯಿಂದ ಇನ್ನೊಂದು ಮಗ್ಗುಲಿಗೆ ಹೊರಳಬೇಕಾದರೆ ಕಷ್ಟ. ಎಷ್ಟೋ ಸಲ ತಮ್ಮ ಪರಿಸ್ಥಿತಿಯಿಂದ ಜಿಗುಪ್ಸೆಗೊಂಡವರಂತೆ "ಬೇಗ ಸ್ವಾಮಿಯ ಪಾದ ಸೇರಿದರೆ ಸಾಕು" ಎನ್ನುತ್ತಿದ್ದರು. "ನಿಮಗೆಲ್ಲ ಎಷ್ಟು ಭಾರವಾಗಿಬಿಟ್ಟೆ" ಎಂದು ಕೆಲವೊಮ್ಮೆ ಕಣ್ಣೀರು ಸುರಿಸುತ್ತಿದ್ದರು. "ಯಾವ ಪಾಪಕ್ಕೆ ಶಿಕ್ಷೆ ಅಂತ ಈ ರೀತಿ ದೇವರು ಕಾಡಿಸುತ್ತಿದ್ದಾನೆ" ಎಂದು ಪರಿತಪಿಸುತ್ತಿದ್ದರು.

ಅವರು ಹೀಗೆ ನರಳುತ್ತ ಬಿದ್ದಿರುವಾಗ ಒಂದು ದಿನ ಅವರ ಆಪ್ತ ಸ್ನೇಹಿತರೊಬ್ಬರ ಸಾವಿನ ವಿಷಯ ತಿಳಿದಿತ್ತು. ಅದನ್ನವರಿಗೆ ಹೇಳಿದಾಗ ಜೋರಾಗಿ ಅತ್ತುಬಿಟ್ಟಿದ್ದರು. ನನ್ನ ಇಡೀ ಜೀವನದಲ್ಲಿ ಅವರು ಈ ರೀತಿ ಗಟ್ಟಿಯಾಗಿ ಅತ್ತಿದ್ದನ್ನು ಕಂಡಿರಲಿಲ್ಲ. ಅಮ್ಮ ಸತ್ತಾಗಲೂ ಅವರು ಎಲ್ಲೋ ಮೂಲೆಯೊಂದರಲ್ಲಿ ಉಸಿರು ಬಿಗಿ ಹಿಡಿದು ಕೂತಿದ್ದ ದೃಶ್ಯ ತುಂಬ ಮಸುಕಾಗಿ ನನ್ನ ನೆನಪಿನಲ್ಲಿದೆ. ಆದರೆ ಸ್ನೇಹಿತನ ಸಾವು ಅವರಿಗೇಕೆ ಅಂತಹ ದುಃಖವನ್ನು ತಂದಿರಬಹುದು? ಅಳುವ ರೀತಿಯಿಂದ ದುಃಖದ ಆಳವನ್ನು ಅಳೆಯಲಾಗುವುದಿಲ್ಲ ಎಂಬುದು ನಿಜ. ಅಮ್ಮ ಸತ್ತಾಗ ಅವರಿಗೆ ಕಡಿಮೆ ದುಃಖವಾಯಿತೆಂದು ಹೇಳಲು ಸಾಧ್ಯವೇ? ಎಷ್ಟೋ ವರ್ಷ ಕಷ್ಟ ಸುಖಗಳಲ್ಲಿ ಭಾಗಿಯಾದ ಅತ್ಯಂತ ಆಪ್ತಳು ಸತ್ತಾಗ ಅವನರಿಗೆ ಸ್ನೇಹಿತ ಸತ್ತಾಗ ಆಗುವುದಕ್ಕಿಂತ ಕಡಿಮೆ ದುಃಖವಾಯಿತೆಂದು ಹೇಳಲು ಬರುವುದಿಲ್ಲ. । ಪ್ರಾಯಶಃ ಆಗ ಅವರಿಗೆ ಹೆಚ್ಚು ಧಾರಣಶಕ್ತಿಯಿತ್ತೇನೋ! ವಯಸ್ಸು ಹೆಚ್ಚಾದಂತೆ, ದೇಹ ಶಿಥಿಲ ಆದಂತೆ ಅಂಥ ಧಾರಣಶಕ್ತಿ ಕಡಿಮೆಯಾಗುವುದೇ? ಅಂದರೆ ವಯಸ್ಸಿಗೂ ಸಾವಿಗೂ ಸಂಬಂಧವಿರುವುದು ಕಂಡ ವಿಷಯವೇ!

ಸ್ನೇಹಿತರ ಸಾವಿನ ಸುದ್ದಿ ಕೇಳಿ ಅಪ್ಪ ಅತ್ತಾಗ ಅವರ ಮನಸ್ಸಲ್ಲಿ ಸುಳಿದಾಡುತ್ತಿದ್ದ ಭಾವನೆ ಯಾವುದು? ಸ್ನೇಹಿತನ ಸಾವೇ ದುಃಖವುಂಟುಮಾಡಿತೇ? ಅಥವಾ ತಾನು ಹೀಗೆ ಕಷ್ಟದಿಂದ ನರಳುತ್ತಿದ್ದೇನೆ, ನನಗಿನ್ನೂ ಬಿಡುಗಡೆಯಾಗಿಲ್ಲವಲ್ಲ ಎಂಬ ಕೊರಗೇ? ಅಥವಾ ಸ್ನೇಹಿತನ ಸಾವು ತಮ್ಮದೇ ಸಾವಿನ ಬಗ್ಗೆ ಅವರಲ್ಲಿ ನೆನಪು ಉಂಟುಮಾಡಿ ಅದನ್ನು ಎದುರಿಸಲಾಗದ ಭಯದಿಂದ ಅತ್ತರೇ? ಭಯ, ದುಃಖ – ಈ ಎರಡು ಭಾವನೆಗಳು ಎಷ್ಟೊಂದು ಅನನ್ಯವಾದದಲ್ಲವೇ?

ದೀರ್ಘಕಾಲ ನರಳುತ್ತ ಕೆಲಸಕ್ಕೆ ಬಾರದೆ ಮಲಗಿದ್ದ ಅಪ್ಪನಿಗೆ ನಿಜವಾಗಿಯೂ ಸಾವು ಬರಬಾರದೇ ಎಂಬ ಹಂಬಲವುಂಟಾಗಿರಬಹುದೇ? ನನಗೆಷ್ಟೋ ಸಲ ಅನ್ನಿಸಿದೆ: ಸಾವಿನ ಭಯ ಬೇಕಾದಷ್ಟು ಇದ್ದರೂ, ಅದು ಅನಿವಾರ್ಯವಾಗಿರುವುದರಿಂದ ಒಪ್ಪಿಕೊಳ್ಳಲೇಬೇಕು. ಒಪ್ಪಿಕೊಳ್ಳುವುದಿಲ್ಲ ಎಂಬುದು ಸಾಧ್ಯವೇ ಇಲ್ಲವಲ್ಲ. ಆದ್ದರಿಂದ ತಾನೇ ತಾನಾಗಿ ನನಗೆ ಗೊತ್ತಾಗದ ಹಾಗೆ ಸಾವು ಬರಬೇಕು. ಮಲಗಿದ್ದಾಗ ನಿದ್ದೆಯಲ್ಲಿ ಸಾಯಬೇಕು. ಎಂಬ ಆಸೆ ಎಲ್ಲರಂತೆ ನನಗೂ ಆಗಾಗ ಬಂದುಂದುಂಟು. "ಅನಾಯಾಸ ಮರಣ' ಎಂಬ ನಮ್ಮ ಹಿಂದಿನವರ ಆದರ್ಶವೆಂದರೆ ಇದೇ ಅಲ್ಲವೇ? ಬೇರೆಯವರಿಗೆ ಹೊರೆಯಾಗಿ ಒಂದೆಡೆ ಮಲಗಿಕೊಂಡೇ ಬದುಕು ನೂಕಬೇಕೆಂಬ ಕಾರಣಕ್ಕಿಂತ ನಾನು ಸಾಯಲಿದ್ದೇನೆ ಎಂಬ ಪ್ರಜ್ಞೆಯಿಂದಾಗುವ ಭಯವನ್ನು ಅನುಭವಿಸಲಾರದ್ದ ರಿಂದಲೇ ಈ ಆದರ್ಶವುಂಟಾಗಿರುವುದು? ಸಾಯುವುದು ಒಂದು ಬಗೆಯ ಅನುಭವ ನಿಜ. ಆದರೆ ಅದರ ಬಗೆಯೇನೆಂದು ಹೇಳಲಾಗದ ರೀತಿ ಅದರದ್ದು. ಅಂದರೆ ಸಾವು ಭಯಂಕರವಲ್ಲ. ಅದರ ಆಲೋಚನೆ ಭಯ ತರುವಂಥದ್ದು.

ನಾನೆಷ್ಟೋ ಬಾರಿ ಆಲೋಚಿಸಿದ್ದೇನೆ, ಬೇರೆಯವರಿಗೆ ಹೊರೆಯಾಗಿಬಾಳುವ ಪರಿಸ್ಥಿತಿ ಬಂದರೆ ಬೇಗ ಸಾಯುವ ಹಾಗೆ ಏನಾದರೂ ಮಾಡಿಕೊಳ್ಳಲು ಸಾಧ್ಯ ಆಗದೇ? ಬೇರೆಯವರು; ಅವರಷ್ಟೇ ಆಪ್ತರಾಗಲೀ ದೀರ್ಘಕಾಲ ಸೇವೆ ಮಾಡಬೇಕೆಂದರೆ, ಅಸಹ್ಯ ಹುಟ್ಟಿಸುವ ಕೆಲಸಗಳನ್ನು ನಿರ್ವಹಿಸಬೇಕೆಂದರೆ ಬೇಸರಗೊಳ್ಳುವುದರಲ್ಲಿ ಆಶ್ಚರ್ಯವಿಲ್ಲ. ಪ್ರಾಯಶಃ ನಮಗೆ ಇಂಥ ಕೆಲಸ ಮಾಡಬೇಕಾದಾಗ ಉಂಟಾಗುವ ಬೇಸರದ ಆಧಾರದಿಂದಲೇ ಅಲ್ಲವೇ ಈ ಬಗೆಯ ತೀರ್ಮಾನಗಳುಂಟಾಗುವುದು. ಆಪ್ತರು ಕಷ್ಟ ಅನುಭವಿಸುವಾಗನೆರವಾಗುವುದಕ್ಕೆ ಮಿತಿಯೂ ಉಂಟು. ನಾವೇನೇ ಮಾಡಲಿ ಬಾಹ್ಯ ಪರಿಚರ್ಯೆ ಮಾಡಬಹುದಷ್ಟೆ; ಅವರ ನೋವು, ಭಯ, ಆತಂಕಗಳನ್ನು ನಾವು ತಡೆಯುವುದು ಸಾಧ್ಯವಿಲ್ಲ. ಹೀಗಾಗಿ ನಮ್ಮ ಅನುಭವಗಳು ಸಂಪೂರ್ಣವಾಗಿ ನಮ್ಮವೇ. ಮನಸ್ಸು ನಿರುಮ್ಮಳವಾಗಿದ್ದಾಗ ಬರುವ ಈ ಆಲೋಚನೆಗಳ ಕಾರಣದಿಂದಲೇ, ಅದನ್ನು ಊಹಿಸಿಕೊಳ್ಳಬಲ್ಲ ಸಾಧ್ಯತೆಯಿರುವುದರಿಂದಲೇ ಅನಾಯಾಸ ಮರಣವು ಉಂಟಾಗಬೇಕು ಅನಿಸುವುದು. ನಿಡುಗಾಲ ಹೊರೆಯಾಗುವ ಕಾಲ ಬಂದಾಗ ಸಾವನ್ನು ತ್ವರಿತಗೊಳಿಸಿಕೊಳ್ಳುವ ಸಾಧ್ಯತೆಯಿಲ್ಲವೇ ಎಂದು ಆಲೋಚಿಸುವುದು.

ಈಗೇನೋ ನನಗೆ ಹಾಗನ್ನಿಸಬಹುದು; ಆದರೆ ಹಾಗೆ ಮಲಗಿಕೊಂಡು ನರಳುವ ಅಪ್ಪನಿಗೆ ಹಾಗನ್ನಿಸಲು ಸಾಧ್ಯವೇ? ಅಥವಾ ನಾನೇ ಆ ರೀತಿ ಮಲಗುವ ಸ್ಥಿತಿಯೊದಗಿದರೆ ಹಾಗನ್ನಿಸುತ್ತದೆಯೇ? ಜೀವಿಸಬೇಕೆಂಬ ಹಂಬಲ ಎಂಥ ಕಾಲದಲ್ಲೂ ಇರುತ್ತದೆಂದು ಹೇಳುವರಲ್ಲ. ಜೀವನದ ಹಂಬಲ, ಸಾವು ಇವುಗಳ ನಡುವಣ ಹೋರಾಟವೇ ನರಳುವಿಕೆಯೆಂದು ಹೇಳಬಹುದೇನೋ. ಎಲ್ಲೋ ಕೆಲವು ದುರ್ಬಲ ಕ್ಷಣಗಳಲ್ಲಿ ಸಾವನ್ನು ತಂದುಕೊಳ್ಳಬಹುದು ಅಥವಾ ಆದರ್ಶದ ಹುಸಿ ಹಿನ್ನೆಲೆಯಲ್ಲಿ ಸಾವು ಸಹ್ಯವಾಗಬಹುದು. ಆದರೆ ಈ ಎರಡೂ ಅಸಹಜ ಸನ್ನಿವೇಶಗಳೇ. ಸಾಧಾರಣ ಪರಿಸ್ಥಿತಿಯಲ್ಲಿ ಬದುಕಬೇಕೆಂಬುದೇ ನಿಸರ್ಗ ನಿಯಮ ತಾನೇ? ಮರ ಕಡಿದರೆ, ಚಿಗುರಿಕೊಳ್ಳುವಷ್ಟು ಅದಮ್ಯ ಈ ಜೀವನದ ಬಯಕೆ. ಹೀಗಿದ್ದಾಗ ಬೇಗ ಸಾಯಬೇಕು ಎಂದು ಅನ್ನಿಸಲಾರದೇನೋ.

ಒಮ್ಮೆ ನನಗೆ ಪರಿಚಯದ ಬಯಾಲಜಿ ಲೆಕ್ಚರರ್ ಒಬ್ಬರನ್ನು ಕೇಳಿದ್ದೆ; ಜೀವ ವಿಜ್ಞಾನವು ಸಾವನ್ನು ಹೇಗೆ ವಿವರಿಸುತ್ತದೆ ಎಂದು. "ಕಂಪ್ಲೀಟ್ ಸೆಸೇಷನ್ ಆಫ್ ಕೆಟಬಾಲಿಕ್ ಅಂಡ್ ಆನಬಾಲಿಕ್ ಆಕ್ಟಿವಿಟೀಸ್ ಇನ್ ದಿ ಬಾಡಿ" ಎಂದು ಒಂದೇ ವಾಕ್ಯದಲ್ಲಿ ಹೇಳಿದ್ದರು. ದೇಹದಲ್ಲಿ ಪ್ರತಿಕ್ಷಣ ನಡೆಯುವ ರಚನಾತ್ಮಕ, ವಿನಾಶಾತ್ಮಕ ಕ್ರಿಯೆ ಸಂಪೂರ್ಣವಾಗಿ ನಿಲ್ಲುವುದನ್ನು ಸಾವು ಎಂದು ವರ್ಣಿಸಿದರೆ ಏನು ಹೇಳಿದ ಹಾಗಾಯಿತು? ಸತ್ತರೆ ದೇಹದಲ್ಲಿ ಯಾವ ಕ್ರಿಯೆಯೂ ಆಗದು ಎಂಬುದು ಎಲ್ಲರಿಗೂ ತಿಳಿದ ಅಂಶವೇ ಅಲ್ಲವೇ! ಹೀಗೆ ವಿವರಿಸುವುದು ಎಷ್ಟು ಸುಲಭ; ಆದರೆ ಅದರ ಅನುಭವ, ಕಲ್ಪನೆ ಅದೆಷ್ಟು ಸಂಕೀರ್ಣ, ದುಸ್ಸಾಧ್ಯ.

ಅಪ್ಪ ತಮ್ಮ ನರಳುವಿಕೆಯ ಅವಯಲ್ಲಿ ಎಷ್ಟೋ ಬಾರಿ ಶಶಿಯ ಬಗ್ಗೆ ನನಗೆ ಹೇಳುತ್ತಿದ್ದರು; ಅವನನ್ನು ತಾವು ತೀರಿಕೊಂಡ ಮೇಲೆ ಚೆನ್ನಾಗಿ ನೋಡಿಕೋ. ಬೇರೆಡೆಗೆ ಕಳಿಸಿಬಿಡಬೇಡ ಎಂದು. ತಾನು ಅಂತಹ ಸಂದರ್ಭಗಳಲ್ಲೆಲ್ಲ ಅವರಿಗೆ ಸಮಾಧಾನ ಹೇಳಿದ್ದೆ, ಆಶ್ವಾಸನೆಯಿತ್ತಿದ್ದೆ. ನಾನಿರುವವರೆಗೂ ಅವನನ್ನು ಜೊತೆಯಲ್ಲಿ ಇಟ್ಟುಕೊಂಡಿರುತ್ತೇನೆಂದು ಅವರ ಕೈ ಹಿಡಿದು ನಂಬಿಕೆ ಬರುವಂತಹ ರೀತಿಯಲ್ಲಿ ಮಾತುಕೊಟ್ಟಿದ್ದೆ, ನನಗೆ ಅನೇಕ ವೇಳೆ ಅನ್ನಿಸುವುದೇನೆಂದರೆ ನಾನು ಸತ್ತ ಮೇಲೆ ಪ್ರಪಂಚ ಏನಾದರೇ ಏನು? ಎಂದು. ಪ್ರಪಂಚ ಚೆನ್ನಾಗಿರುವುದು. ಇನ್ನೇನೇನು ಜಗತ್ತಿನಲ್ಲಿ ಇದೆಯೋ ಅವೆಲ್ಲ ನಾನು ಬದುಕಿರುವವರೆಗೂ ಮಾತ್ರ ನನಗೆ ರೆಲೆವೆಂಟ್ ಅಲ್ಲವೇ? ಎಲ್ಲವನ್ನೂ ನೋಡುವುದು ನಮ್ಮ ನಮ್ಮ ವೈಯಕ್ತಿಕ ಬದುಕಿನ ಹಿನ್ನೆಲೆಯಲ್ಲಿ ಮಾತ್ರ. ಹೀಗಾಗಿ ನಾನು ಸತ್ತಮೇಲೆ ಪ್ರಪಂಚವೇನಾಗ ಬಹುದು ಎಂಬುದು ಅಪ್ರಸ್ತುತವಾದದ್ದು. ಹಾಳಾಗಿ ಹೋಗಲಿ, ನನಗಾಗಬೇಕಾದದ್ದೇನು? ಎನ್ನಿಸುತ್ತಿತ್ತು. ಆದರೆ ಸಾಮಾನ್ಯವಾಗಿ ಸಾಯುವಾಗ ಉಳಿದವರಿಗೆಏನೇನೋ

ಹೇಳಿಹೋಗುವರಲ್ಲ, ಯಾಕೆ? ಸತ್ತಮೇಲೆ ತನ್ನನ್ನು ಯಾರೂ ನೆನಸಿ ಕೊಳ್ಳದಿರಬಹುದು ಎಂಬ ಕಲ್ಪನೆ ಹೆಚ್ಚು ಯಾತನೆಯನ್ನು ನೀಡುವಂತಹ ದೇನೋ. ಒಂದು ರೀತಿ ಸಾವು ಎಂದರೆ ಯಾವ ಕುರುಹೂ ಇಲ್ಲದ ಮರೆ ಆಗುವುದೇ! ಹಾಗಾಗಿ ತಮ್ಮನ್ನು ಸಾವಿನ ನಂತರವೂ ನೆನಪು ಮಾಡಿಕೊಳ್ಳುತ್ತಿರಲಿ ಎಂದೇ ಈ ರೀತಿ ಆಸೆಗಳನ್ನು ಹಂಬಲುಗಳನ್ನು ವ್ಯಕ್ತಪಡಿಸುತ್ತಾರೇನೋ? ಒಂದು ರೀತಿಯಲ್ಲಿ ಸಾರ್ವತ್ರಿಕವಾಗಿ ಈ ಹಂಬಲದ ಹಿನ್ನೆಲೆಯೇ ತಿಥಿಯ ಆಚರಣೆಯಲ್ಲಿರಬಹುದು.

ಅಪ್ಪ ಸತ್ತಮೇಲೆ ಅವರನ್ನು ಸುಡುವಾಗ, ಚಿತೆಯ ಸುತ್ತು ತಿರುಗುವಾಗಲೂ ಏನೇನೋ ಆಲೋಚನೆಗಳು ಮೂಡುತ್ತಿದ್ದುದು ನೆನಪಾಗುತ್ತದೆ. ಬೆಂಕಿಯಲ್ಲಿದ್ದರೂ ಏನೂ ಆಗದ ಪರಿಸ್ಥಿತಿಯೆಂದರೆ ಹೇಗಿರಬಹುದು? ಈ ಸಾವು ನಮ್ಮನ್ನು ಹೇಗೆ ಬಂಸಿಬಿಡುತ್ತದೆ! ಇದು ನಮ್ಮೆಲ್ಲ ಶಕ್ತಿ ಸಾಮರ್ಥ್ಯ ಆಸೆ– ಆಕಾಂಕ್ಷೆಗಳ ಬೇಲಿಕಟ್ಟು. ಆದರೆ ನಮ್ಮ ಸಾಧನೆಯನ್ನೆಲ್ಲ ನಮ್ಮನ್ನಿದು ಕಬಳಿಸುವ ಮುನ್ನವೇ ಮಾಡಬೇಕು. ಹಾಗಾಗಿ ನಮ್ಮ ಎಲ್ಲ ಕ್ರಿಯಾಶೀಲತೆಗೆ ಸಾವು ಒಂದು ಪ್ರಚೋದಕಶಕ್ತಿ ಆಗುತ್ತದೆ. ಅಪ್ಪ ಸತ್ತ ದುಃಖಕ್ಕಿಂತ ಏನೇನೋ ಯೋಚನೆ ಬರುತ್ತದೆ ಅನ್ನಿಸಿತ್ತು ಅಂತಹ ಸಮಯಗಳಲ್ಲಿ.

ಆ ಮೇಲೆ ಅಪ್ಪನ ಕರ್ಮಗಳು. ಏನೇನೊ ವಿಗಳು, ಪುರೋಹಿತ್ಯ ಮಂತ್ರ ಹೇಳಿದ್ದು, ನಾನು ಯಾಂತ್ರಿಕವಾಗಿ ಮಾಡಿದ್ದು. ದಕ್ಷಿಣೆ, ದುಡ್ಡು, ಖರ್ಚು, ಸಾವಿನ ಸಂದರ್ಭದಲ್ಲೂ ಇವಕ್ಕೆಲ್ಲ ಹೊಂದಿಸಬೇಕಾದ ಹಣದ ಯೋಚನೆ. ನಾವು ಸಾವಿನ ಭಯದಿಂದ ಜೀವನವನ್ನು ಎಷ್ಟು ಕಾಂಪ್ಲಿಕೇಟ್ ಮಾಡಿಕೊಂಡು ಬಿಟ್ಟಿದ್ದೇವೆ! ದುಃಖಕ್ಕಿಂತ ಹೆಚ್ಚಾಗಿ ತಾಪತ್ರಯವೇ ಕಾಡುತ್ತದಲ್ಲವೇ? ಆಪ್ತರನ್ನು ಕಳೆದುಕೊಂಡ ಬೇಗುದಿಗಿಂತ ಯಾಂತ್ರಿಕ ಆಚರಣೆಗಳು ನಮ್ಮನ್ನು ಆವರಿಸುತ್ತವಲ್ಲ; ಈ ವಿಗಳನ್ನೆಲ್ಲ ಮಾಡದಿದ್ದರೆ ಸದ್ಗತಿಯಿಲ್ಲವಂತೆ! ದುರ್ಮರಣವನ್ನು ಪಡೆದವರಿಗೆ, ಸಂಸ್ಕಾರಕ್ರಿಯೆ ನಡೆಯದವರಿಗೆ ವ್ಯಂತರ ಸ್ಥಿತಿಯುಂಟಾಗುತ್ತದಂತೆ. ಅದೆಂಥ ಸ್ಥಿತಿ. ಶಶಿಗೆ ಈ ಎರಡೂ ಇಲ್ಲ. ಬಹುತೇಕ ಅವನದು ಆತ್ಮಹತ್ಯೆ. ಹಾಗಾಗದಿದ್ದರೂ ಅಸಹಜ ಮರಣಮುಂಜಿಯಾಗದಿದ್ದುದರಿಂದ ಅಪರಕರ್ಮಗಳನ್ನು ಮಾಡಬೇಕಾಗಿಲ್ಲ. ಆದ್ದರಿಂದ ಅವನೂ ವ್ಯಂತರನಾಗುತ್ತಾನೆಯೆ? ಹಾಗಂದರೇನು? ದೇಹವಿಲ್ಲದ ಜೀವ ಇನ್ನಾವುದೋ ರೂಪದಲ್ಲಿರುವುದು ಸಾಧ್ಯವೇ?

೪

ಪ್ರಭಾಕರರಾಯರು ಹೇಳಿದ್ದರು. ಸೂತಕ ಕಳೆದ ಮೇಲೆ ಶಶಿಯ ಹೆಸರಲ್ಲಿ ಒಂದಷ್ಟು ಜನಕ್ಕೆ ಊಟಕ್ಕೆ ಹಾಕಬೇಕೆಂದು. ಆಗಬಹುದು ಎಂದಿದ್ದೆ. ಅದಕ್ಕೇನು? ಆದರೆ ಸಂತೋಷದ ಕಾರಣದಿಂದ ಬೇರೆಯರಿಗೆ ನೀಡುವ ಔತಣಕ್ಕೂ ಸತ್ತವರ ಹೆಸರಲ್ಲಿ ಊಟ ಹಾಕುವುದಕ್ಕೂ ವ್ಯತ್ಯಾಸವಿಲ್ಲವೇ? ಹಾಗೆ ನೋಡಿದರೆ ನನಗೆ ಸತ್ತವರ ನೆನಪು ಹಸಿಯಿರವಾಗ, ಅವರ ಹೆಸರಲ್ಲಿ, ಸಿಹಿತಿಂಡಿಗಳನ್ನು ತಿನ್ನುವುದು ಎಂದರೆ ಯಾಕೋ ಹೇಸಿಕೆಯೆನಿಸುತ್ತಿದೆ. ಭೂತತೃಪ್ತಿಯಾಗಬೇಕಂತೆ. ನನಗೇನು ಅನ್ನಿಸುತ್ತದೆ ಎನ್ನುವುದು ಇಂಥ ಸಂದರ್ಭಗಳಲ್ಲಿ ಮುಖ್ಯವಾಗುವುದಿಲ್ಲ; ಎಲ್ಲರೂ ಹೇಗೆ ಮಾಡುತ್ತಾರೋ ಹಾಗೆ ಮಾಡುವುದು. ಪ್ರತಿಕ್ಷಣಕ್ಕೂ ಇದಕ್ಕೇನು ಅರ್ಥ, ಸಂಕೇತ ಎಂದು ವಿಚಾರಿಸುವುದಕ್ಕೂ ಮಿತಿ ಇಲ್ಲವೇ? ಹಾಗಾಗಿ, ಪ್ರಭಾಕರರಾವ್ ಸೂಚಿಸಿದ್ದಕ್ಕೆ ನಾನು ತಕ್ಷಣ ಸಮ್ಮತಿಯಿತ್ತಿದ್ದೆ.

ಮೊದಲು ಎರಡೇ ದಿನ ರಜ ಹಾಕಿದ್ದವನು, ಶಶಿಯ ವಿಚಾರ ಎಲ್ಲ ತೀರ್ಮಾನವಾದಾಗ ಹದಿನೈದು ದಿನಗಳ ರಜ ಮಂಜೂರು ಮಾಡಿಸಿಕೊಂಡಿದ್ದೆ. ಹತ್ತು ದಿನಗಳು ಸೂತಕ ಕಳೆಯಬೇಕು. ವೈಕುಂಠಸಮಾರಾಧನೆಯಾಗಬೇಕು ಎಂದು.

ಸೂತಕ ಸಮಾರಾಧನೆಯ ಏರ್ಪಾಟಿಗೆ ತೊಡಗುತ್ತೇನೆ. ಅಡಿಗೆಯವರು ಬಂದಿರುವುದನ್ನು ಕಂಡು; ರಾಶಿ ರಾಶಿ ತರಕಾರಿ, ಧಾನ್ಯಗಳು, ತೆಂಗಿನಕಾಯಿ, ಬೆಲ್ಲ, ಮುಂತಾದುವನ್ನು ನೋಡಿ ಹುಡುಗರಿಗೆ ಸಂಭ್ರಮ. ಅವು ಇವತ್ತು ಹಬ್ಬವೆಂದೇ ತಿಳಿದಿವೆಯೋ ಏನೋ! ಒಳಹೊರಗೆ ಓಡಾಡುತ್ತವೆ; ಎಲ್ಲದಕ್ಕೂ ಕೈಹಾಕುತ್ತವೆ. ಇಷ್ಟು ದಿನ ಎಲ್ಲೂ ಹೋಗದಂತೆ ಹಾಲು ಬಿಟ್ಟು ಮನೆಯ ಇನ್ನೆಲ್ಲೂ ಸುಳಿಯದಂತೆ ಅವರಮ್ಮ ನಿರ್ಬಂಧ ಹಾಕಿದ್ದುದು ಇವತ್ತು ತೆಗೆದಿದೆಯಲ್ಲ. ಅದರ ಸಂಭ್ರಮವೂ ಇರಬಹುದು. ಪೋಲೀಸ್ ಕಮೀಷನರ ಆಫೀಸಿನಲ್ಲಿಯ ಕೆಲಸಗಳೆಲ್ಲ ಮುಗಿದ ಮೇಲೆ ಈ ನಡುವೆ ಒಂದೆರಡು ದಿನ ಕೆಲಸವೇ ಇಲ್ಲ. ಮನೆಯಲ್ಲಿ ಕೂತು ಏನು ಮಾಡುವುದು? ಯೋಚನೆ ಮಾಡುತ್ತ ಕೂರುವುದು ಸಾಧ್ಯವೇ? ಹನ್ನೊಂದನೇ ದಿನಕ್ಕೆ ಜನಗಳನ್ನು ಕರೆಯಬೇಕಲ್ಲ, ಅದಕ್ಕಾಗಿ ಓಡಾಡುವುದು ಇದ್ದೇ ಇತ್ತು. ಅದಕ್ಕೆ ಒಂದು ದಿನ ಸಾಕು. ಅದಕ್ಕೇ ಕುತೂಹಲದಿಂದ ಬಾಣಸವಾಡಿಗೆ ಒಂದು ಬೆಳಿಗ್ಗೆಹೋಗಿರುತ್ತೇನೆ. ಅವನನ್ನು ಆಹುತಿ ತೆಗೆದುಕೊಂಡ ಬಾವಿ ಹೇಗಿರಬಹುದು. ಪರಿಸರ ಎಂಥದ್ದು ಎಂಬ ಬಗ್ಗೆ ತಲೆಯಲ್ಲಿ ಕಲ್ಪನೆಗಳು.

ಒಬ್ಬನೇ ಬಾಣಸವಾಡಿಯ ದೇವಸ್ಥಾನದ ಹತ್ತಿರ ಬಂದೆ. ಅಷ್ಟೇನೂ ಜನರಿರದ ದೇವಾಲಯವದು. ಆದರೆ ದೇವಸ್ಥಾನ ದೊಡ್ಡ ಪ್ರಾಕಾರದ ಒಳಗಿದೆ. ಶಶಿಯ ದೇಹ ತೇಲಿದ ವಿಷಯವನ್ನು ಮೊದಲು ತಿಳಿಸಿದ್ದವನು ಆ ಗುಡಿಯ ಅರ್ಚಕರ ಮಗನಂತೆ. ಅವನನ್ನು ಕಂಡು ವಿಚಾರವನ್ನೇಕೆ ತಿಳಿಯಬಾರದೆಂದು ಯೋಚಿಸಿ ನೇರವಾಗಿ ಅವರ ಮನೆಗೆ ಹೋದೆ. ಅರ್ಚಕರ ಮನೆ ದೇವಾಲಯದ ಪ್ರಾಕಾರದೊಳಗೇ ಇದೆ ಎಂದು ತಿಳಿದುಕೊಂಡಿದ್ದೆ. ನನಗೆ ಸೂತಕ ಬೇರೆ, ಒಳಗೆ ಹೋಗಬಾರದೇನೋ ಎಂದುಕೊಂಡು ಹೊರಗಿನಿಂದಲೇ ಮನೆಯವರನ್ನು ಕರೆಯತೊಡಗಿದೆ. ಆದರೆ ಏನೆಂದು ಕರೆಯುವುದು? ಅಲ್ಲಿನವರು ಯಾರೂ ನನಗೆ ಪರಿಚಿತರಲ್ಲವಲ್ಲ! "ಸ್ವಾಮಿ" ಎಂದು ಕೂಗಿದೆ. ಹತ್ತಿರ ಮನೆಗಳಿರಲಿಲ್ಲ. ನಾನು ದೇವಸ್ಥಾನದ ಹೊರಗೆ ನಿಂತುಕೊಂಡು ಕೂಗಿದ್ದರಿಂದ ಒಳಗಿನವರಿಗೆ ಕೇಳಿಸಲಿಲ್ಲವೇನೋ, ಜೊತೆಗೆ ಸ್ವಲ್ಪ ಬಯಲು ಬೇರೆ ಉತ್ತರ ಬರಲಿಲ್ಲ. ಮತ್ತೊಂದೆರಡು ಬಾರಿ ಕೂಗಿದೆ. ಸುಸ್ತಾಗಿ ಸುಮ್ಮನಾದೆ.

ಒಂದೆರಡು ನಿಮಿಷಗಳಾದ ಮೇಲೆ ಐವತ್ತು ವರುಷಗಳಾಗಿರಬಹುದಾದ ಒಬ್ಬರು ಬ್ರಾಹ್ಮಣರು ಹೊರಗೆ ಬಂದರು. ನನ್ನ ಕಡೆ ನೋಡಿದರು, "ಯಾರು ಬೇಕು?" ಎಂದರು.

"ತಮ್ಮ ಮಗ ಇದ್ದಾರಾ?" ಅಂದೆ. ಇವರ ಮಗನೇ ಪೋಲೀಸರಿಗೆ ವಿಷಯ ತಿಳಿಸಿರಬೇಕೆಂದು ಅನ್ನಿಸಿತ್ತು. ಆದರೆ ಅವರು ಕಕ್ಕಾವಿಕ್ಕಿಯಾದರು.

"ಅವರು ಊರಲ್ಲಿಲ್ಲವಲ್ಲ, ಯಾರು ನೀವು?"

"ಅವರನ್ನು ಸ್ವಲ್ಪ ಕಾಣಬೇಕಾಗಿತ್ತು. ಯಾವ ಊರಿಗೆ ಹೋಗಿದ್ದಾರೆ?"

"ಅವನು ಇರುವುದೇ ನಾಗಪುರದಲ್ಲಿ" ಎಂದಾಗ ನನಗೆ ನಿಜವಾಗಿ ಗಾಬರಿಯಾಯಿತು. ಕಕ್ಕಾವಿಕ್ಕಿಯಾಗುವ ಸರದಿ ಈಗ ನನ್ನದಾಗಿತ್ತು.

"ಯಾವತ್ತು ಬರುತ್ತಾರೆ?" ವಿಷಯ ತಿಳಿದುಕೊಂಡೇ ಹೋಗೋಣ ವೆಂದುಕೊಂಡೆ.

"ಯಾಕೆ, ಅವನೆಲ್ಲಿ ಬರುತ್ತಾನೆ ಈಗ! ಒಂದು ವರ್ಷಕ್ಕೋ ಆರು ತಿಂಗಳಿಗೋ ಒಂದು ಸಾರಿ ಬರುತ್ತಾನೆ. ಯಾಕೆ ತಾವೇನಾದರೂ ಅವನ ಸ್ನೇಹಿತರೇನು? "

"ಹಾಗಲ್ಲ, ಒಂದು ವಿಷಯ ತಿಳಿದುಕೊಳ್ಳಬೇಕಾಗಿತ್ತು."

"ಯಾವ ವಿಚಾರ?" ಎಂದರು. ಇವರ ಹತ್ತಿರ ವಿಷಯವನ್ನು ಪ್ರಸ್ತಾಪ ಮಾಡಬಹುದೇ ಬೇಡವೇ ಎಂಬ ಅನುಮಾನ ಬಂತು ನನಗೆ. ಆರು ತಿಂಗಳಿಗೋ ವರ್ಷಕ್ಕೋ ಬರುವ ಮಗ, ನಾಗಪುರದಲ್ಲಿದ್ದಾರೆ. ಅಂದರೆ ಕಮೀಷನರ್ ಆಫೀಸಿಗೆ ತಿಳಿಸಿದವರು ಇವರ ಮಗ ಇರಲಾರರು. ನಾನು ತಪ್ಪಿ ಬಂದಿರಬೇಕು ಎನಿಸಿತು.

"ಬಾಣಸವಾಡಿ ದೇವಸ್ಥಾನ ಅಂದರೆ ಇದೇ ಏನು?"

"ಹೌದು, ಆದರೆ ಏನಾಗಬೇಕಾಗಿತ್ತು. ಅಂತ ಹೇಳಲೇ ಇಲ್ಲವಲ್ಲ?"

"ಗುಡಿಯ ಅರ್ಚಕರ ಮನೆಯೆಂದರೆ....."

"ನಮ್ಮದೇನೆ? ಸರಿಯಾಗಿಯೇ ಬಂದಿದೀರಿ, ವಿಚಾರವೇನು?"

ನಾನು ಅನುಮಾನದಿಂದಲೇ ವಿಚಾರ ಹೇಳಲು ತೊಡಗಿದೆ. ಹೇಗೆ ಪ್ರಸ್ತಾಪ ಮಾಡಲಿ ಎಂಬ ಯೋಚನೆಯಲ್ಲಿ ಬಿದ್ದೆ.

"ಗುಡಿಯ ಹತ್ತಿರ ಒಂದು ಬಾವಿಯಿದೆಯಂತಲ್ಲ, ಅದೆಲ್ಲಿ?"

"ಆ ಕಡೆ" ಅಂತ ಕೈ ತೋರಿಸಿದರು."ಸುಮಾರು ಒಂದು ವಾರದ ಹಿಂದೆ ಅದರಲ್ಲಿ ಒಂದು ಹೆಣ ತೇಲುತ್ತಿದ್ದುದನ್ನು ಯಾರೋ ಪೋಲೀಸರಿಗೆ ತಿಳಿಸಿದರಂತಲ್ಲ."

"ಹೌದು, ನಾನೇ. ಯಾಕೆ ತಾವೇನಾದರೂ ಮಫ್ತಿ ಪೋಲೀಸರೇನು?"

"ಹಾಗೇನಿಲ್ಲ. ನಾನು ಹಾಗೆ ಸತ್ತೋನ ದುರದೃಷ್ಟ ಅಣ್ಣ" ಎಂದೆ. ಈಮಾತು ನನಗೆ ಅಪರಿಚಿತವೆನಿಸಿತ್ತು. ದುರದೃಷ್ಟವಂತ ಇತ್ಯಾದಿ ನಾಟಕೀಯ ಮಾತುಗಳೇಕೆ ನನ್ನ ಬಾಯಿಂದ ಹೊರಬೀಳುತ್ತಿವೆ?

"ಓ. ಇನ್ನೇನೋ ಪೋಲೀಸು ತನಿಖೆ ಏನೋ ಅಂದುಕೊಂಡೆ. ಹೌದು, ನಾನೇ ಪೋಲೀಸರಿಗೆ ಫೋನ್ ಮಾಡಿದ್ದು."

ಅಂದರೆ ಇವರೇ ಅರ್ಚಕರ ಮಗ; ಇವರ ತಂದೆ ಹಾಗಾದರೆ ಇನ್ನೂ ಬದುಕಿದ್ದು ಅರ್ಚಕ ವೃತ್ತಿಯಲ್ಲಿರಬೇಕು. ಇವರೇ ಪೂಜೆ ಮಾಡುತ್ತಿರಬಹುದಾದರೂ, ತಂದೆ ಬದುಕಿರುವುದರಿಂದ ಅರ್ಚಕರ ಮಗನೆಂದು ಕರೆಸಿಕೊಳ್ಳುತ್ತಿ ದ್ದಾರೆ. "ಬನ್ನಿ ಒಳಗೆ" ಎಂದರು. "ಇಲ್ಲ, ನನಗಿನ್ನೂ ಮೈಲಿಗೆ" ಅಂದೆ, "ಹೌದಲ್ಲ, ಅದು ಆಗಿ ಇನ್ನೂ ಎಂಟು ದಿನ ಆಗಿರಬಹುದಷ್ಟೆ" ಅಂದುಕೊಂಡರು.

"ಏನು ವಿಚಾರ ತಿಳಿದುಕೋಬೇಕಾಗಿತ್ತು? ಏನಾದರೂ ತೊಂದರೆಯೇ?"

"ಹಾಗೇನಿಲ್ಲ. ಎಲ್ಲ ಸರಿಹೋಗಿದೆ. ಆದರೆ ಅವನು ಬಿದ್ದ ಬಾವಿ ನೋಡಿಕೊಂಡು ಹೋಗೋಣ ಅಂತ ಬಂದೆ."

"ಪಾಪ, ತಮ್ಮ ದುಃಖ ನನಗೆ ಅರ್ಥವಾಗತ್ತೆ, ಈ ಕಡೆ ಬನ್ನಿ ನೋಡುವಿರಂತೆ" ಎಂದು ದೇವಸ್ಥಾನದ ಇನ್ನೊಂದು ಬದಿಗೆ ಕರೆದುಕೊಂಡು ಹೋದರು. ನಾನು ಹಿಂಬಾಲಿಸಿದೆ.

ಒಂದು ಕಡೆಯಲ್ಲಿ ದೇವಸ್ಥಾನ. ಇನ್ನೊಂದು ಕಡೆಯಲ್ಲಿ ತೋಟ. ನಡುವೆ ಬಾವಿ. ಏಕಾಂತ ಸ್ಥಳವೇ. ಜನಗಳ ಸಂಚಾರ ಹೆಚ್ಚೇನೂ ಇರಲಿಲ್ಲ. ಆದರೆ ದಾರಿಯಲ್ಲಿ ಹೋಗುವವರಿಗೆ ಬಾವಿ ಕಾಣಿಸುತ್ತದೆ. ನಾನು ಹೋದಾಗ ಅದಾಗಲೇ ಹನ್ನೊಂದು ಗಂಟೆಯಾದ್ದರಿಂದ ಜನಸಂಚಾರವಿತ್ತು: ಅವನು ಬಿದ್ದಾಗ ತೀರ ಬೆಳಿಗ್ಗೆಯೇನೋ; ಜನರು

ಓಡಾಡುತ್ತಿದ್ದಿರಲಾರರು. ದೊಡ್ಡದಾದ ಬಾವಿ; ನೀರು ಅಷ್ಟೇನೂ ಮೇಲಿರಲಿಲ್ಲ; ಭರ್ಜರಿಯಾದ ಕಲ್ಲು ಕಟ್ಟಡ ಕಟ್ಟಲಾಗತ್ತು. ಆದರೂ ಉಪಯೋಗ ಪಡೆಯುತ್ತಿದ್ದುದು ಕಡಮೆಯೆಂದು ಕಾಣುತ್ತದೆ. ಶಿಥಿಲವಾಗುತ್ತಿತ್ತು. ಕಟ್ಟಡದೊಳಗಿಂದಲೇ ಚಾಚಿಕೊಂಡ ಕಲ್ಲಿನ ಮೆಟ್ಟಿಲುಗಳು. ಸ್ವಲ್ಪ ಎತ್ತರವೇ; ಸಲೀಸಾಗಿ ಹತ್ತಿಕೊಂಡು ಬರುವುದಾಗಲೀ, ಇಳಿಯುವುದಾಗಲೀ ಸುಲಭವಲ್ಲ, ಹಾಗೆಯೇ ಮೆಟ್ಟಿಲುಗಳು ತಳದವರೆಗೂ ಹೋಗಿರಬಹುದು.

"ನೀರು ಎಷ್ಟಿರಬಹುದು?"

"ಇರಬಹುದು, ಒಂದು–ಒಂದೂವರೆ ಆಳುದ್ದ. ಹಿಂದೆ ಇದು ದೇವಸ್ಥಾನಕ್ಕೇ ಸೇರಿದ್ದು. ಈಗ ತಕರಾರಿನಲ್ಲಿದೆ, ಆ ತೋಟದವನು ಬಾವಿ ತಮ್ಮ ಹಿರೀಕರದ್ದು ಅಂತ ದಾವಾ ಹಾಕಿದ್ದಾನೆ" ಎಂದರು ಅರ್ಚಕರ ಮಗ.

"ಮಳೆಗಾಲದಲ್ಲಿ ನೀರು ಬಾವಿಯ ತುಂಬ ಬರುತ್ತೇಂತ ಕಾಣುತ್ತೆ."

"ಹೌದು, ಹೌದು. ಈಗ ಯಾರೂ ನೋಡಿಕೊಳ್ಳೋರು ಇಲ್ಲ. ಬೇಕಾದಷ್ಟು ಹೂಳು ಬಿದ್ದುಬಿಟ್ಟಿದೆ." ಶಶಿಯ ತಲೆ ಹೋಗಿ ಹಾಗೆ ಬಿದ್ದಿರಬಹು ದಾದ ಹೂಳು ಅಂದರೆ ಕಲ್ಲುಗಳಿಗೆ ಬಡಿದಿರಬಹುದು; ಅಥವಾ ಚಾಚು ಮೆಟ್ಟಿಲಿಗೆ ತಾಕಿರಬಹುದು. ನಿಟ್ಟುಸಿರುಬಿಟ್ಟೆ.

"ಬೆಳಗ್ಗಿನ ಹೊತ್ತೂ ಜನರ ಸಂಚಾರ ಕಡಮೆಯೇನೋ?"

"ಹೌದು, ನೋಡಿ, ಇಲ್ಲಿ ಹೆಚ್ಚು ಮನೆಗಳಿಲ್ಲ, ಅಂಗಡಿಮುಂಗಟ್ಟಿಲ್ಲ, ಊರಿಂದ ದೂರ ಬೇರೆ. ಅದಕ್ಕೆ" ಅಂದರು, ಅದು ಕಾಣಿಸುತ್ತಿತ್ತು. ಸುತ್ತಲೂ ಕಣ್ಣು ಹಾಯಿಸಿದೆ. ಇಂಥ ಜಾಗದ ಪರಿಚಯ ಶಶಿಗೆ ಮೊದಲೇ ತಿಳಿದಿದ್ದಿರಬೇಕು; ಇಲ್ಲವಾದರೆ ನೇರವಾಗಿ ಇಲ್ಲಿಗೇ ಹೇಗೆ ಬರುತ್ತಾನೆ. ಅವನದೆಲ್ಲ ಲೆಕ್ಕಾಚಾರದ ಕೆಲಸ ಹಾಗಾದರೆ.

ಅವರು ನನ್ನ ಕಡೆ ನೋಡಿದರು. ಏನಾದರೂ ತನಿಖೆಯ ಪ್ರಶ್ನೆಗಳನ್ನು ಹಾಕುತ್ತಾರೇನೋ ಅಂದುಕೊಂಡು, ಅವುಗಳನ್ನು ಎದುರಿಸಬೇಕಾದ ಮುಜುಗರ ದಿಂದ ತಪ್ಪಿಸಿಕೊಳ್ಳಲು ನಾನೇ ಕೇಳಿದೆ: "ತಾವೇನಾ ಅದನ್ನ ಕಂಡವರು?"

"ಛೆ ಛೆ, ನಾನು ದೇಹವನ್ನೇನೂ ನೋಡಲಿಲ್ಲ. ಯಾಕೋ ಈ ಕಡೆ ಹೋಗಬೇಕಾಗಿ ಬಂತು ಅಂತ ನಡೆದುಬರುತ್ತಿರುವಾಗ ಇಗೋ ನೋಡಿ, ಈ ಕಲ್ಲಿನ ಮೇಲೆ ಲಕ್ಷಣವಾಗಿ ಮಡಿಸಿಟ್ಟ ಬಟ್ಟೆಗಳು ಒಂದೆರಡು ಕಾಣಿಸಿದವು. ನಾನೂ ಯೋಚನೆ ಮಾಡಿದೆ. ಇಲ್ಲಿಗೆ ಬಂದು ಬಟ್ಟೆಗಳನ್ನು ಯಾಕೆ ಬಿಚ್ಚಿಟ್ಟಿದ್ದಾರೆ ಅಂತ. ನೀರೇನು ಅಷ್ಟು ಕೆಟ್ಟಿಲ್ಲ, ನೀವು ಕಾಣೋ ಹಾಗೇನೆ. ಯಾವಾಗಲೋ ಒಂದಿಬ್ಬರು ಸ್ನಾನ ಮಾಡೋದು ಉಂಟು. ಆದರೆ ಹಾಗೇನಾದರೂ ಯಾರಾದರೂ ಬಂದಿದ್ದರೆ ವ್ಯಕ್ತಿ ಕಾಣಿಸಬೇಕಾಗಿತ್ತು. ಆದರೆ ಬಟ್ಟೆ ಕಂಡದ್ದರಿಂದ ಅನುಮಾನ ಬಂತು, ಪೋಲಿಸರಿಗೆ ಹೇಳೋದು ವಾಸಿ ಅನ್ನಿಸ್ತು. ಆಗ ಸುಮಾರು ಮಧ್ಯಾಹ್ನ ಒಂದು ಗಂಟೆ ನೋಡಿ" ಅಂದರು.

ನಾನು ಹ್ಞೂಂ ಅನ್ನುತ್ತಿದ್ದೆ.

"ಮದುವೆ ಆಗಿತ್ತಾ?" ತನಿಖೆ ಪ್ರಾರಂಭ ಆಯಿತು ಅಂದುಕೊಂಡೆ. ನಾನು ಕೇಳುವ ವಿಷಯ ಅವರು ಹೇಳಬೇಕು. ಆದರೆ ಅವರೇನೂ ಕೇಳಬಾರದು ಎಂದು ಹೇಗೆ ಹೇಳಲಾದೀತು. ಪ್ರಶ್ನೆಗಳನ್ನು ಹೇಗೆ ನಿವಾರಿಸಿಕೊಳ್ಳುವುದು?

"ಉಹ್ಞೂಂ" ಎಂದೆ.

"ದೇವರು ದೊಡ್ಡೋನು. ಅದೂ ಆಗಿದ್ದಿದ್ರೆ ಉಳಿದೋರನ್ನ ನೋಡೋದು ಕಷ್ಟವಾಗ್ತಾ ಇತ್ತು" ಅಂದರು.

"ನಿಜ" ಅಂದೆ ಅನ್ಯಮನಸ್ಕನಾಗಿ.

"ಏನು ಮಾಡೋಕಾಗತ್ತೆ ಹೇಳಿ, ಎಲ್ಲ ದೈವಸಂಕಲ್ಪ. ಆತ ಒಂದು ರೀತಿ ದೈವಸಾನ್ನಿಧ್ಯದಲ್ಲಿ ಸತ್ತಿದಾನೆ, ಅಲ್ಲೇ ಹೋಗಿರ್ತಾನೆ. ಅವರ ಹಿರಿಯರಾದ ನಿಮಗೆ ಆಗೋ ದುಃಖ ಸಹಜವೇ. ಆದರೆ, ಏನು ಮಾಡಕ್ಕಾಗತ್ತೆ? ಎಲ್ಲ ಅವನ ಇಚ್ಛೆ" ಒಂದು ಕೈ ಮೇಲೆ ತೋರಿಸಿ, ವಾಪಸಾಗಲು ತಿರುಗಿದರು. ನಾನೂ ಹಿಂಬಾಲಿಸಿದೆ. ಹೆಚ್ಚು ತನಿಖೆಯ ಬುದ್ಧಿಯವರಲ್ಲ ಅನ್ನಿಸಿ ಸಮಾಧಾನವಾಯಿತು. ಮತ್ತೆ ಮೌನವಾಗಿಯೇ ದೇವಸ್ಥಾನದವರೆಗೂ ಬಂದೆವು.

"ತುಂಬ ಉಪಕಾರವಾಯಿತು. ತಾವು ಸುದ್ದಿ ಕೊಡದಿದ್ದರೆ ಅವನ ವಿಚಾರ ನನಗೆ ತಿಳೀತಾನೇ ಇರಲಿಲ್ಲ."

"ಎಲ್ಲ ಋಣಾನುಬಂಧ, ಮೇಲಾಗಿ ಅವನ ಇಚ್ಛೆ." ಅವರಿಂದ ಬೀಳ್ಕೊಂಡು ಬಂದಿದ್ದೆ.

ಮಾರನೆಯ ದಿನ ಪೋಲೀಸ್ ಇನ್‌ಸ್ಪೆಕ್ಟರ್ ಹೇಳಿದ್ದ, ಶಶಿಯ ದೇಹವನ್ನು ಹೂಳಿದ್ದ ಶ್ಮಶಾನದ ಬಳಿಗೆ ಹೋಗಿ ಬಂದಿದ್ದೆ. ಅವರಿಗೆ ಹತ್ತಿರವಾದ ಶ್ಮಶಾನದಲ್ಲಿ ಹೂತಿದ್ದರು. ಹುಡುಕಿಕೊಂಡು ಹೋದೆ. ದೊಡ್ಡ ಕಲ್ಲಿನ ಕಾಂಪೌಂಡಿನ ಒಳಗಿದ್ದ ಸ್ಮಶಾನವದು. ಎಷ್ಟೋ ಸಮಾಗಳು, ಕೆಲವು ಸುಂದರವಾಗಿ, ಕಪ್ಪುಕಲ್ಲು– ಅಮೃತಶಿಲೆ ಇವುಗಳಿಂದ ನಿರ್ಮಿತವಾಗಿದ್ದವು. ಇನ್ನು ಕೆಲವು ಕೇವಲ ಒರಟಾದ ಬಂಡೆಗಳಿಂದ ನಿರ್ಮಿತವಾದದ್ದು. ಸಮಾಯ ರೀತಿಯಿಂದಲೇ ಸತ್ತವರ ಆರ್ಥಿಕ ಪರಿಸ್ಥಿತಿಯನ್ನು ತಿಳಿಯಬಹುದಾಗಿತ್ತು. ಭೂಮಿಯ ಮೇಲ್ಮೈಯಿಂದ ಕೆಳಗೆ ಎಲ್ಲ ಒಂದೇ. ಆದರೆ ಮೇಲ್ಮೈ ಮೇಲೆ ವ್ಯತ್ಯಾಸಗಳು ಕಾಣುತ್ತಿದ್ದವು. ಏನೇನೋ ಬರಹಗಳು. ಸತ್ತವರ ಹೆಸರು, ಸತ್ತ ತಾರೀಕು, ಕೆಲವದರ ಮೇಲೆ ಇನ್ನೇನೊ ವಾಕ್ಯಗಳು. ಒಂದಷ್ಟು ಕಡೆಯಲ್ಲಿ ಗಿಡಗಳು. ಅವೇ ಬೆಳೆದಿದ್ದುದೋ, ಹಾಕಿದ್ದುದೋ?

ನನ್ನ ಮನಸ್ಸಿಗೆ ಒಂದು ಆಲೋಚನೆ ಬಂತು. ಸುತ್ತಲೂ ನೋಡಿದೆ. ಗಿಡಗಳೇನೋ ಇದ್ದವು. ಸ್ಪಷ್ಟವಾಗಿ ಶ್ಮಶಾನದ ಆವರಣದೊಳಗೆ ಬೆಳೆದ ಮರಗಳನ್ನು ಸತ್ತವರ ಪೈಕಿಯ ಜನ ನೆಟ್ಟಿದ್ದಿರಬೇಕೆನಿಸಿತು. ಮನೆ ಆವರಣದಿಂದ ಹೊರಗೆ ಬಂದು ಕಣ್ಣಾಡಿಸಿದೆ. ಕಾಂಪೌಂಡಿಗೆ ಅಂಟಿಕೊಂಡಂತೆ ಒಂದು ಕಡೆ ಒಂದು ಎಳೆಯ ಅರಳಿಯ ಸಸಿ ಬೆಳೆದಿದ್ದುದು ಕಾಣಿಸಿತು. ಅದರ ಬಳಿ ಹೋದೆ. ಚೂಪಾದ ಕಲ್ಲೊಂದರಿಂದ ಅದರ ಬುಡದ ಸುತ್ತಲೂ ಕೆದಕಿದೆ; ಸ್ವಲ್ಪ ಪ್ರಯತ್ನ ಪಟ್ಟಮೇಲೆ ಬುಡವನ್ನು ಕೀಳುವುದು ಸಾಧ್ಯವಾಯಿತು. ಅದನ್ನು ತೆಗೆದುಕೊಂಡು ಮತ್ತೆ ಆವರಣದೊಳಗೆ ಹೋಗಿ, ಇನ್‌ಸ್ಪೆಕ್ಟರು ಹೇಳಿದ್ದ ಜಾಗಕ್ಕಾಗಿ ಹುಡುಕಿದೆ.

ಒಂದು ಮೂಲೆಯಲ್ಲಿ ಸುತ್ತಲೂ ಹುಲ್ಲು ಬೆಳೆದಿದ್ದು, ಹೊಸದಾಗಿ ಕೆತ್ತಿದಂತೆ ಕಾಣುವ ಆಯಾಕಾರದ ಜಾಗ ಕಾಣಿಸಿತು. ಅದೇ ಇರಬೇಕು ಅದೇ ಎಂದು ಸ್ಪಷ್ಟಮಾಡಿಕೊಳ್ಳಲು ಸುತ್ತಲೂ ಒಂದಷ್ಟು ತಾರಾಡಿಕೊಂಡು ನೋಡಿ ಬಂದೆ; ಇನ್‌ಸ್ಪೆಕ್ಟರು ಹೇಳಿದ್ದ ಗುರುತನ್ನು ಜ್ಞಾಪಿಸಿಕೊಡೆ. ಅದೇ ಎಂಬುದು ಸ್ಪಷ್ಟವಾಯಿತು. ಈ ಜಾಗದಲ್ಲಿ ಶಶಿ ಬೆಚ್ಚಗೆ ಮಲಗಿದ್ದಾನಲ್ಲವೇ ಎನ್ನಿಸಿತು. ಮೈನಡುಕವುಂಟಾಯಿತು. ನಿಧಾನವಾಗಿ ಅದರತ್ತ ಕಾಲೆಳೆಯುತ್ತ ನಡೆದೆ. ಯಾಕೋ ಕಣ್ಣು ತುಂಬಿಕೊಂಡು ಬಂತು. ಚೂಪು ಕಲ್ಲೊಂದರಿಂದ ಆ ಕೆತ್ತಿದ್ದ ಸ್ಥಳದಲ್ಲೇ ಸಣ್ಣ ಗುಂಡಿ ಮಾಡಲು ಪ್ರಯತ್ನಿಸಿದೆ, ಕೆಲವೇ ದಿನಗಳ ಹಿಂದೆ ಹೂಳಲು ಗುಂಡಿ ತೋಡಿ ಮುಚ್ಚಿದ್ದಲ್ಲವೇ? ಇನ್ನೂ ಮಣ್ಣು ಸಡಿಲವಾಗಿತ್ತು. ಗುಂಡಿ ತೋಡುವುದು ಸುಲಭವಾಯಿತು. ಅದರಲ್ಲಿ ಆ ಅರಳಿಯ ಸಸಿಯನ್ನು ಇಟ್ಟು ಗುಂಡಿ ಮುಚ್ಚಿದೆ. ಹತ್ತಿರದಲ್ಲಿ ನೀರಿದೆಯೇ ಎಂದು ನೋಡಿದೆ. ಕಾಣಿಸಲಿಲ್ಲ. ಅರಳಿಯ ಮರವೇನೂ ಎಲ್ಲಾದರೂ ಬೆಳೆಯುತ್ತದೆ. ಇದೂ ಬೆಳೆಯಬಹುದು ಅಂದು ಕೊಂಡೆ. ಒಂದಷ್ಟು ದಿನಗಳಾದ ನಂತರ ಬಂದು ಮತ್ತೊಮ್ಮೆ ನೋಡಿಕೊಂಡು ಹೋಗಬೇಕು, ಸಸಿ ಬೆಳೆದಿರುತ್ತದೆಯೋ ಏನೋ ಅಂದುಕೊಂಡು ಮನೆಗೆ ವಾಪಸು ಬಂದೆ. ಈ ವಿಚಾರಗಳನ್ನು ರಮಳಿಗೆ ಹೇಳಲಿಲ್ಲ; ಅವಳೇನು ಅನ್ನುತ್ತಾಳೋ ಎಂಬ ಅಳುಕಿರಬೇಕು ನನಗೆ.

ಶಶಿಯ ಆಫೀಸಿನ ಜನ ಬರುತ್ತಾರೆ, ಗೋವಿಂದಯ್ಯ ಬರುತ್ತಾರೆ. ನನ್ನ ಸ್ನೇಹಿತರು, ಬಾಂಧವರು ಸೇರುತ್ತಾರೆ. ನನ್ನ ಕಂಡು ಕನಿಕರದ ಮುಖ ಮಾಡಿಕೊಳ್ಳು ತ್ತಾರೆ. "ವೆರಿ ಸಾರಿ ಸಾರ್" ಎನ್ನುತ್ತಾರೆ. ಫ್ಯಾಕ್ಟರಿಯ ಯೂನಿಯನ್‌ನಲ್ಲಿ ಸಭೆ ಸೇರಿ ಮಾಡಿದ ಸಂತಾಪ ಸಂದೇಶವನ್ನು ಅದರ ಪರವಾಗಿ ತಲುಪಿಸುತ್ತಾರೆ. ಮೃದುವಾಗಿ ಕೈಹಿಸುಕುತ್ತಾರೆ. ಸಮಾಧಾನ ಮಾಡುತ್ತಾರೆ.

"ಪಾಪ, ಶಶಿಧರ್ ಆಫೀಸಲ್ಲಿ ತುಂಬ ಜಾಲಿಯಾಗಿರುತ್ತಿದ್ದರು. ಅವರು ಒಂದು ದಿನ ಬರದೇ ಇದ್ದರೆ ಬಿಕೋ ಅನ್ನಿಸುತ್ತಿತ್ತು, ಎಂದೊಬ್ಬರು ಹೇಳುತ್ತಾರೆ. ನಿಜವಾಗಿಯೂ ಶಶಿ ತಮಾಷೆಯಾಗಿರುತ್ತಿದ್ದನೇ, ಅಥವಾ ಇದೆಲ್ಲ ಬರಿಯ ಉಪಚಾರದ ಮಾತುಗಳೋ? ಆದರೆ ಅವನ ಆಫೀಸಿನ ಜೊತೆಗಾರರು ಅವನಿಗೆ ತುಂಬ ಸಹಾಯ ಮಾಡಿದ್ದರೆಂಬುವ ವಿಷಯ ನನಗೆ ತಿಳಿಯದ್ದೇನಲ್ಲ. ಎಷ್ಟೋ ದಿನ ಕೆಲಸ ಮಾಡುತ್ತಿರುವಾಗಲೇ ಶಶಿಗೆ ಅಟ್ಯಾಕ್‌ಗಳು ಬಂದು ನರಳುವಾಗ ಜೊತೆಗಾರರು ಅವನಿಗೆ ಶುಶ್ರೂಷೆ ಮಾಡಿದ್ದರು. ಶಶಿಯೇ ಅಂಥ ಒಂದೆರಡು ಪ್ರಸಂಗಗಳನ್ನು ಹೇಳಿದ್ದ. ನಮ್ಮ ಮನೆಗೆ ಆಗಾಗ್ಗ ಬರುತ್ತಿದ್ದ ಅವನ ಸ್ನೇಹಿತರು ಅವನ ಈ ಕಾಯಿಲೆಯ ಬಗ್ಗೆ ಅಸಹ್ಯಪಟ್ಟುಕೊಂಡಿದ್ದಂತೆ ಕಂಡಿರಲಿಲ್ಲ. ಎಷ್ಟೋ ಸಾರಿ ನನಗನ್ನಿಸುತ್ತಿತ್ತು; ಆಫೀಸಿನವರಿಗೆ ಅದೆಲ್ಲಿಯ ಕರ್ಮ, ಅವನ ಕಾಯಿಲೆಯ ಉಪದ್ರವವನ್ನು ಸಹಿಸಿಕೊಳ್ಳುವುದು ಎಂದು. ನಮ್ಮ ಸಂಸಾರದಲ್ಲಿ ಹುಟ್ಟಿದ ಆಕಸ್ಮಿಕ ಕಾರಣದಿಂದಾಗಿ ಅವನ ಉಸ್ತುವಾರಿ ನನಗೆ ಗಂಟು ಬಿದ್ದಂತೆ, ಅವನ ಆಫೀಸಿನಲ್ಲಿ ಕೆಲಸ ಮಾಡಬೇಕಾದ ಪರಿಸ್ಥಿತಿಯಿಂದಾಗಿ ಜೊತೆಗಾರರು ಇದನ್ನು ಅನುಭವಿಸಬೇಕಾಗಿತ್ತು.

"ನಮಗೇ ಅವರಿಲ್ಲ ಅಂದರೆ ನಂಬಕ್ಕಾಗ್ತಾ ಇಲ್ಲ. ಇನ್ನು ನಿಮಗೆ ಹೇಗೆ ಆಗ್ತಾ ಇರಬಹುದು" ಎಂದು ಮತ್ತೊಬ್ಬ ಆಫೀಸಿನ ಸ್ನೇಹಿತರು ನನ್ನ ಬಗ್ಗೆ ಅನುತಾಪ ವ್ಯಕ್ತಪಡಿಸಿದರು.

"ಒಬ್ಬರಿಗೆ ಒಂದು ದಿವಸ ಮನಸ್ಸು ನೋಯಿಸಿದವರಲ್ಲ, ಶಶಿಧರ್" ಎಂದರು ಇನ್ನಾರೋ. "ತುಂಬ ಒಳ್ಳೆಯ ಹುಡುಗ, ಆದರೆ ಅವನ ಹಣೆಯಲ್ಲಿ ಎಂಥ ಸಾವು ಬರೆದಿತ್ತು, ನೋಡಿ ಪಾಪ" ಎಂದರು ಹಿರಿಯರೊಬ್ಬರು "ಅಲ್ಲಿಗೇಕೆ ಹೋದರೋ ಗೊತ್ತಾಗಲ್ಲವಲ್ಲ" ಎಂದರು ಯಾರೋ. "ಅವರಿಗೆ ಈ ಕಾಯಿಲೆಯೊಂದಿಲ್ಲದಿದ್ದರೆ ಅವರ ಜೀವನ ತುಂಬ ಚೊಕ್ಕವಾಗ್ತಿತ್ತು. ಎಲ್ಲಿ ಗಂಟು ಬಿತ್ತೋ! ಆ ರೋಗ" ಎಂದ ಸತ್ತ ಶಶಿಯ ರೋಗದ ಬಗ್ಗೆ ಮಗದೊಬ್ಬರು.

ಎಲ್ಲರೂ ಒಳ್ಳೆಯ ಮಾತಾಡುವವರೇ ಯಾರ ಬಾಯಿಂದಲೂ ಕೆಟ್ಟ ಅಭಿಪ್ರಾಯ ಇಲ್ಲ. ನನ್ನ ಬಗ್ಗೆ ಕೋಪವಿಲ್ಲ. ಯಾರೂ ನಾನೇ ಅವನ ಸಾವಿಗೆ ಕಾರಣವೆಂದು ದೂರಲಿಲ್ಲ! ಆದರೆ ರಮ ಆವತ್ತು ಅಂದಂತೆ ಮನಸ್ಸಿನಲ್ಲಿಯೇ ನನ್ನ ಬಗ್ಗೆ ಅನುಮಾನವನ್ನು ಪಡಲಾರರೇ? ಹೊರಗೆ ಎಲ್ಲರದೂ ಅನುತಾಪದ ಮಾತು. ಅಂಥವರ ಮನಸ್ಸಿನಾಳದ ಅಭಿಪ್ರಾಯವನ್ನು ತಿಳಿಯುವುದು ಹೇಗೆ? ಅಥವಾ ಏಕಾದರೂ ಅದನ್ನು ತಿಳಿಯಬೇಕು. ಎಲ್ಲರ ಮನಸ್ಸು ಇನ್ನೆಲ್ಲರಿಗೂ ಸಾಧ್ಯವಿದ್ದಿದ್ದರೆ, ಹಾಗೆ ತಿಳಿದುಕೊಳ್ಳುತ್ತ ಹೋದಂತೆ ನಮ್ಮ ಜೀವನ ಈಗಿರುವಂತೆ ಇರಲು ಸಾಧ್ಯವಾಗುತ್ತಿತ್ತೇ. ಎಷ್ಟೊಂದು ತೊಂದರೆಗಳಾಗುತ್ತಿದ್ದುವೋ ಏನೋ. ಒಂದು ರೀತಿ ನಮ್ಮ ಮನಸ್ಸುಗಳು ಬೇರೆಯವರಿಗೆ ಕಾಣಿಸದೇ ಇರುವುದರಿಂದ, ಅಷ್ಟೇಕೆ ನಮಗೇ ಗೊತ್ತಾಗದಿರುವುದರಿಂದ, ಜೀವನದಲ್ಲಿ ಎಷ್ಟೋ ಸಮಸ್ಯೆಗಳು ಉದ್ಭವವಾಗದೇ ಉಳಿದಿವೆ. ತೋರಿಕೆಯೇ ನಮಗೆ ಪ್ರಧಾನವಾಗಿಬಿಟ್ಟಿದೆ. ಆದ್ದರಿಂದ ನಮ್ಮ ಜೀವನದಲ್ಲಿ ಹೊರ ನಡತೆಗೇ ಪ್ರಾಮುಖ್ಯ ಜಾಸ್ತಿ. ಮನಸ್ಸಿನ ರಹಸ್ಯಮಯತೆಯಿಂದಲೇ ಮನುಷ್ಯರಲ್ಲಿ ಇನ್ನೂ ಆತ್ಮೀಯತೆ ಸ್ನೇಹಗಳು, ಉಳಿದಿರಲು ಸಾಧ್ಯವಾಗಿದೆ. ಹಾಗೆ ನೋಡಿದರೆ ಇಡೀ ಪ್ರಕೃತಿಯು ಸುಂದರವಾಗಿರುವುದು ಸೃಷ್ಟಿಯ ರಹಸ್ಯಮಯತೆಯಿಂದಲೇ ಅನ್ನಿಸುತ್ತದೆ.

"ಪಾಪ, ನೀನೂ ಸಾಧ್ಯವಾದಷ್ಟು ಮಾಡಿದಿರಿ. ನಮ್ಮ ಕೈಮೀರಿದರೆ ಏನು ಮಾಡಲು ಸಾಧ್ಯ." "ನೀವೊಳ್ಳೆ ರಾಮಲಕ್ಷ್ಮಣರಿದ್ದಂತೆ ಇದ್ದೀರಿ" ಎಲ್ಲ ಬಗೆಯ ಮಾತುಗಳನ್ನು ನನ್ನ ಮುಖದೆದುರು ಆಡಿದಾಗ ಏನು ಹೇಳಬೇಕೆಂದೇ ನನಗೆ ತೋಚುವುದಿಲ್ಲ. ಏನು ಹೇಳಿದರೂ ಕೃತಕವೆನ್ನಿಸುತ್ತದೆ ಎಂಬ ಭಾವನೆಯುಂಟಾ ಗುತ್ತದೆ. ಅವರ ಮಾತುಗಳಿಗೆ ನಾನು ಏನೂ ಹೇಳದಾಗ ಅವರ ಮನಸ್ಸಿನಲ್ಲಿ ಎಂತೆಂತಹ ಅನ್ನಿಸಿಕೆಗಳುಂಟಾಗುತ್ತವೆಯೋ!

ಎಲ್ಲ ಆಗುವ ಹೊತ್ತಿಗೆ ಸಾಯಂಕಾಲ ನಾಲ್ಕು ಗಂಟೆ. ಮನೆಯೆಲ್ಲ ಗಲೀಜು, ವಸ್ತುಗಳು ಚೆಲ್ಲಾಪಿಲ್ಲಿ. ಮೈಕೈಯೆಲ್ಲ ನೋವು, ಒಡೆತು ತಲೆಭಾರ. ಎಲ್ಲಾದರೂ ಒಂದು ಕಡೆ ಹೋಗಿ ಕೈಕಾಲು ಚಾಚಿ ಮಲಗಿದರೆ ಹಾಯಾಗಿರುತ್ತದೆ ಎನ್ನಿಸುತ್ತದೆ. ಆದರೆ ಹಾಗೆ ಮಲಗಲು ಸಾಧ್ಯವಿಲ್ಲ. ಇನ್ನೂ ಇವನ್ನೆಲ್ಲ ಎತ್ತಿ ಸರಿಪಡಿ ಸುವವರೆಗೆ ವಿಶ್ರಾಂತಿ ಸಾಧ್ಯವಿಲ್ಲ. ರಮ ಕೂಡ ತುಂಬ ಆಯಾಸಪಟ್ಟಿದ್ದಾಳೆ. ಬೆವರುಗಟ್ಟಿದ ಹಣೆ, ನಿಧಾನವಾದ ನಡಿಗೆ, ಕಂದಿಹೋದ ಕಣ್ಣುಗಳು ಅದನ್ನು ಸಾರುತ್ತದೆ. ಇವತ್ತು ಕಳೆದರೆ ನಾಳೆಯಿಂದ ಬೇರೇನೂ ಕೆಲಸವಿಲ್ಲ. ಇನ್ನೂ ನಾಲ್ಕು ದಿನ ರಜ ಬೇರೆ ಉಳಿದಿವೆ. ಎಲ್ಲೂ ಹೋಗದೆ ಆರಾಮವಾಗಿ ವಿಶ್ರಾಂತಿ ಪಡೆಯಬೇಕು ಅನ್ನಿಸುತ್ತದೆ. ನೆನಪು ಅದರೊಳಗಿನ ಶಶಿಯ ಒಂದು ಫೋಟೋ ಹುಡುಕಿ ಅದನ್ನು ಎನ್‌ಲಾರ್ಜ್ ಮಾಡಿಸಿ ಕಟ್ಟು ಹಾಕಿಸಿ ತರಬೇಕು. ಅಪ್ಪ ಅಮ್ಮನ ಮಧ್ಯೆ ಇರುವಂತೆ ಅವರಿಬ್ಬರದರ ಮಧ್ಯೆ ಅವನ ಫೋಟೋ ಹಾಕಬೇಕು ಎಂಬ ಅರಿವಾಗುತ್ತದೆ. ಇದೊಂದು ರೀತಿಯ ನಾಟಕವೇನೋ? ಏನೋ ಎಲ್ಲರೂ ಆಡಿದ ಹಾಗೆಯೇ ನಾನೂ ನಾಟಕವಾಡಬೇಕಾಗುತ್ತದೆ. ಪ್ರತಿನಿತ್ಯ ಅಪ್ಪ ಅಮ್ಮರ ಫೋಟೋಗಳಿಗೆ ಊದಿನಕಡ್ಡಿ ಹಚ್ಚಿ ಹೂವಿಡುತ್ತೇನೆ. ಹೇಗೋ ಬಹುಕಾಲದಿಂದ ಆ ಪದ್ಧತಿ ಬಂದುಬಿಟ್ಟಿದೆ. ಬೆಳಿಗ್ಗೆ ಎದ್ದು ಸ್ನಾನಮಾಡಿದ ಮೇಲೆ ತಟ್ಟನೆ ಯಾಂತ್ರಿಕವಾಗಿ ಮಾಡುವ ಕೆಲಸವೇ ಅದು. ಯಾವತ್ತಾದರೂ ಮರೆತರೆ ಏನೋ ಹೊರೆಯಾದಂಥ ಭಾವನೆ ಸ್ವಲ್ಪ ಹೊತ್ತು ಮನಸ್ಸನ್ನು ಕಾಡಿ, ಆಮೇಲೆ ನೆನಪಾಗುತ್ತದೆ. ಅದೊಂದು ರೀತಿಯ ಪೂಜೆಯೇ ಅಲ್ಲವೇ? ಆದರೆ ಶಶಿ ತಮ್ಮ, ಅಪ್ಪ-ಅಮ್ಮರ ಫೋಟೋಗಳ ನಡುವೆ ಇಟ್ಟು ಅವನ ಚಿತ್ರಕ್ಕೂ ಹೂವಿಡಬೇಕೆ? ಕಿರಿಯರಿಗೆ ನಮಸ್ಕಾರ ಮಾಡಿದರೆ ಅವರಿಗೆ ಶ್ರೇಯಸ್ಸಲ್ಲವಂತೆ. ಇನ್ನು ಶಶಿಯ ಫೋಟೋಕ್ಕೆ ಹೂವಿಟ್ಟರೆ ಅವನಿಗೆ ಶ್ರೇಯಸ್ಸಾಗುತ್ತದೆಯೇ? ಇನ್ನೆಂಥ ಶ್ರೇಯಸ್ಸು ಅವನಿಗೆ; ಏನೋ ಅರ್ಥವಾಗದು! ಅಥವಾ ಸತ್ತವರು ವಯಸ್ಸನ್ನು ಮೀರಿದವರಾಗಿ ಎಲ್ಲರ ನಮಸ್ಕಾರಕ್ಕೂ ಅರ್ಹರಾಗುವರೇನೋ. ಫೋಟೋನ ಬೇರೆಡೆ ಹಾಕಬೇಕು. ಹಾಗಾದರೆ ಅವನ ಫೋಟೋನ ಹಾಲ್‌ನಲ್ಲಿಯೇ ಹಾಕೋಣ, ಬಂದವರಿಗೆ ಎದ್ದು ಕಾಣುತ್ತದೆ.

ಇನ್ನ ನಾಳೆಯಿಂದ ಅವನ ಜವಾಬ್ದಾರಿ ಇಲ್ಲವೇ ಇಲ್ಲ. ಇವತ್ತಿನವರೆಗೆ ಕೊನೆಯ ಪಕ್ಷ ಈ ವಿಗಳನ್ನು ನೆರವೇರಿಸುವ ಜವಾಬ್ದಾರಿಯಾದರೂ ಇತ್ತು, ಇನ್ನು ಮೇಲೆ ಅದೂ ಇಲ್ಲ. ಅವನ ಹೆಸರಿನಲ್ಲಿರುವ ದುಡ್ಡು ತಂದು ನಾವು ಮಜಾ ಮಾಡಬಹುದು. ಸೈಟು ತೆಗೆದುಕೊಳ್ಳಬಹುದು, ಬಟ್ಟೆ ತರಬಹುದು, ಯಾವುದಾದರೂ ಊರಿಗೂ ಹೋಗಬಹುದು. ಅಡ್ಡಿ ಆತಂಕಗಳಿಲ್ಲದೆ ಮನೆಯಲ್ಲಿ ಯಾರು ಯಾರಿದ್ದೀರಿ ಅಂದರೆ ಇನ್ನು ಮುಂದೆ ನಾನು, ನನ್ನ ಹೆಂಡತಿ ರಮ, ಮಗಳು ಸುಷ್ಮ, ಮಗ ಪೃಥ್ವೀ- ಇಷ್ಟೇ ಜನ, ನಾಲ್ಕೇ ಜನ. ನನ್ನ ತಮ್ಮ ಸತ್ತುಹೋದ. ಈಗ ನಮ್ಮ ಮನೆಯಲ್ಲಿ ನಾಲ್ಕೇ ಜನ!

– – –

ಶಶಿಯದು ತುಂಬ ಹಟ. ಅವನ ಹಟಮಾರಿತನಕ್ಕೆ ಅಮ್ಮನೂ ಕಾರಣಳೆಂದರೆ ತಪ್ಪಲ್ಲ. ಕಿರಿಯ ಮಗನೆಂಬ ಸಹಜ ಮಮತೆಯ ಜೊತೆಗೆ, ಅವನಿಗೆ ಕಾಯಿಲೆ ಕಾಣಿಸಿಕೊಂಡ ಮೇಲೆ ಅವಳ ಪ್ರೀತಿಗೆ ಕನಿಕರವೂ ಸೇರಿತ್ತು. ಅದಕ್ಕೇ ಅವನನ್ನು ತುಂಬ ಮುಚ್ಚಟೆಯಿಂದ ನೋಡಿಕೊಳ್ಳುತ್ತಿದ್ದಳು. ತಾನಿರುವ ತನಕ. ಪ್ರತಿನಿತ್ಯ ಅವನನ್ನು ಸ್ಕೂಲಿಗೆ ಕಳಿಸುವಾಗ ಅವಳು ತೆಗೆದುಕೊಳ್ಳುತ್ತಿದ್ದ ಎಚ್ಚರ ಅನನ್ಯ. ಬೇರೆ ಯಾರಿಗಾದರೂ ಅವನನ್ನು ಸ್ಕೂಲಿಗೆ ಬಿಡುವ ಕೆಲಸ ವಹಿಸಿದರೆ ಅಷ್ಟು ನಿಗಾವಹಿಸಲಾರರೆಂದು ತಾನೇ ಬೆಳಿಗ್ಗೆಯೆದ್ದು ಬಡಬಡ ಕೆಲಸ ಮಾಡುತ್ತ, ಕೆಲಸದ ಮಧ್ಯೆಯೇ ಬಿಡುವು ಮಾಡಿಕೊಂಡು

ಅವನನ್ನು ಸ್ಕೂಲಿನವರೆಗೂ ಬಿಟ್ಟುಬರುತ್ತಿದ್ದಳು. ಅವನ ಶಾಲೆ ಬಿಡುವ ಹೊತ್ತಿಗೆ ತಾನೇ ಹೋಗಿ ಕರೆತರುತ್ತಿದ್ದಳು: ಮಧ್ಯೆ ಬಿಡುವಿನ ವೇಳೆಯಲ್ಲಿ ಊಟ ತಿನ್ನಿಸಿ ಬರುತ್ತಿದ್ದಳು. ಅವನು ದೊಡ್ಡವನಾದಂತೆ ತೀರ ಇಷ್ಟರಮಟ್ಟಿಗೆ ನೋಡಿಕೊಳ್ಳದೇ ಇದ್ದರೂ ಯಾವಾಗಲೂ ಅವನ ಧ್ಯಾನವೇ.

ಚಿಕ್ಕವನಾಗಿದ್ದಾಗ ಪ್ರತಿನಿತ್ಯ ಸ್ಕೂಲಿಗೆ ಸಲೀಸಾಗಿ ಹೋಗುವಂತೆ ಮಾಡಲು ಅವನಿಗೆ ಕಾಸು ಕೊಟ್ಟು ರಮಿಸುತ್ತಿದ್ದಳು. ಚಿಲ್ಲರೆಯಿಲ್ಲವೆಂದು ಒಂದು ದಿನ ಕೊಡದಿದ್ದರೆ ಸ್ಕೂಲಿಗೇ ಹೋಗುತ್ತಿರಲಿಲ್ಲ. ಚಂಡಿ ಹಿಡಿಯುತ್ತಿದ್ದ. ಪುನಃ ತಾನು ಕಲಿಸಿದ ವಿದ್ಯೆ ತನ್ನನ್ನೇ ಸುತ್ತುತ್ತಿತ್ತು. ಮಾರನೆಯ ದಿನ ಅವನಿಗೆ ಕೊಡಬೇಕಾದ ಚಿಲ್ಲರೆ ಇದೆಯೇ ಎಂದು ಹಿಂದಿನ ರಾತ್ರಿಯೇ ಎಚ್ಚರವಹಿಸಿ ನೋಡಿಕೊಳ್ಳುವಷ್ಟರ ಮಟ್ಟಿಗೆ ಈ ಅಭ್ಯಾಸ ಮುಂದುವರೆದಿತ್ತು. ಇಲ್ಲದಿದ್ದರೆ ಮಾರನೆಯ ಬೆಳಿಗ್ಗೆ ಅವನ ರಾದ್ಧಾಂತವನ್ನು ಎದುರಿಸುವವರಾರು? ಇಷ್ಟಾದರೂ ಅವನನ್ನು ಅಮ್ಮ ಬೇಸರದಿಂದ ಒಂದು ಸಲವೂ ಕಂಡ ನೆನಪಿಲ್ಲ, ಅವನು ಚಂಡಿ ಹಿಡಿದು ತಾನು ಸಮಾಧಾನಮಾಡಲಾಗದಿದ್ದರೆ ತಾನೇ ಕಣ್ಣೀರು ಹಾಕುತ್ತಿದ್ದಳೇ ವಿನಾ, ಕೋಪದಿಂದ ಅವನ ಮೇಲೆ ಯಾವತ್ತೂ ಕೈಯೆತ್ತುತ್ತಿರಲಿಲ್ಲ. ಅಮ್ಮ ದುಡ್ಡು ಕೊಟ್ಟು ಕೊಟ್ಟು ಬಾಲ್ಯದಿಂದ ಅವನಿಗೆ ದುಡ್ಡಿನ ವ್ಯಾಮೋಹ ಬೆಳೆಸಿದಳೇನೋ ಎಂದೂ ಕೆಲವೊಮ್ಮೆ ಅನ್ನಿಸುತ್ತದೆ. ದೊಡ್ಡವನಾದ ಮೇಲೆಯೂ ಅವನು ಹಣ ಕೂಡಿ ಹಾಕುವ ಪ್ರವೃತ್ತಿಗೆ ಬಲಿ ಬಿದ್ದದ್ದು ಇದರಿಂದಾಗಿಯೇ ಇರಬಹುದು. ಅಮ್ಮ ಆ ಹಣವನ್ನು ಖರ್ಚು ಮಾಡುವ ಅವಕಾಶವನ್ನು ಮಾತ್ರ ಕೊಡುತ್ತಿರಲಿಲ್ಲ. ಏನು ಹೊರಗೆ ತಿಂದರೆ ಏನಾಗುವುದೋ ಎಂಬ ಭಯದಿಂದ ಹೊರಗಿನ ತಿಂಡಿ ತಿನ್ನಲು ಅಮ್ಮ ಆಸ್ಪದವೀಯುತ್ತಿರಲಿಲ್ಲ. ಅವನಿಗೆ ಏನು ಬೇಕೆಂದೂ ತಾನೇ ಮಾಡಿಕೊಡುತ್ತಿದ್ದಳು. ಹೀಗಾಗಿ ಅವನು ತನಗೆ ಕೊಟ್ಟ ಹಣವನ್ನು ಕೂಡಿ ಹಾಕಿ ಜೋಪಾನ ಮಾಡಬೇಕಾಗಿತ್ತೇ ಹೊರತು ಖರ್ಚು ಮಾಡುವ ಹವ್ಯಾಸಕ್ಕೆ ಅವಕಾಶವಿರಲಿಲ್ಲ. ನಾಣ್ಯದ ಚಟ ಅವನು ಬೆಳೆದ ಮೇಲೂ ಇತ್ತು. ಅವನ ಸಾವಿಗೆ ಕಾರಣವಾಗಿರ ಬಹುದಾದ ಅಥವಾ ಅದರ ಹಿಂದಿನ ಮನೋಭಾವದ ಬಗ್ಗೆ ಏನಾದರೂ ಸುಳಿವು ಸಿಕ್ಕಿತೇನೋ ಎಂದು ಅವನ ರೂಮನ್ನೆಲ್ಲ ಶೋಧಿಸಿದಾಗ ಒಂದು ಕಡೆ ಡಬ್ಬಿಯೊಂದರಲ್ಲಿ ಇಪ್ಪತ್ತೈದು ಐವತ್ತು ಪೈಸೆಗಳ ನಾಣ್ಯ ಸಂಗ್ರಹವಿದ್ದದ್ದು ಕಾಣಿಸಿತು. ದೊಡ್ಡವನಾದರೂ ಪೈಸೆಯ ಝಣತ್ಕಾರ ಅವನನ್ನು ಪುಲಕಿತಗೊಳಿಸು ತ್ತಿತ್ತೇನೋ! ಅಥವಾ ಅದರ ಶಬ್ದದಲ್ಲಿ ಅಮ್ಮನ ಸಾಂತ್ವನದ ನುಡಿಗಳೇ ಅವನ ಕಿವಿಗೆ ಬೀಳುತ್ತಿತ್ತೇನೋ.

ಈ ಹಟ ಅಮ್ಮ ಸತ್ತ ಮೇಲೆ ಅದೇ ರೀತಿ ಮುಂದುವರೆಯಲು ಹೇಗೆ ಸಾಧ್ಯ? ಅವಳು ಹೋದ ಮೇಲೆ ಅವನ ಈ ಸ್ವಭಾವದಿಂದ ಉಳಿದವರಿಗೆ ತುಂಬ ಕಿರಿಕಿರಿ ಆಗುತ್ತಿತ್ತು. ನಾನಿನ್ನೂ ಆಗ ದೊಡ್ಡವನಲ್ಲ. ಅವನ ಜವಾಬ್ದಾರಿ ನನ್ನ ಮೇಲೆ ಬಿದ್ದಿರಲಿಲ್ಲ. ಆದರೆ ಅಪ್ಪನ ಆಗಿನ ಅವಸ್ಥೆ ಹೇಳತೀರದು. ಅಡಿಗೆ ಕೆಲಸಗಳನ್ನು ಅಪ್ಪನೇ ಮಾಡಿ ಆಫೀಸಿಗೆ ಹೋಗಬೇಕಾಗಿತ್ತು. ನಾನೂ ಅಪ್ಪನ ಕೆಲಸಗಳಲ್ಲಿ ನೆರವಾಗುತ್ತಿದ್ದೆ. ಎಷ್ಟೋ ವೇಳೆ ಅಪ್ಪನ ಬದಲು ನಾನೇ ಅಡುಗೆ ಮಾಡಬೇಕಾಗಿತ್ತು. ಹಲವಾರು ವರ್ಷಗಳ ಈ ಅಭ್ಯಾಸದಿಂದಾಗಿ ನನಗೆ ಅಡಿಗೆಯ ಕೆಲಸ ಕರಗತವಾಗಿತ್ತು. ಈಗಲೂ ರಮ ಮಾಡುವ ಅಡಿಗೆಗಿಂತ ನಾನೇ ಚೆನ್ನಾಗಿ ಅಡುಗೆ ಮಾಡುತ್ತೇನೆಂಬ ಭರವಸೆ ನನಗಿದೆ, ಅಲ್ಲದೆ ಅಡುಗೆ ಮನೆಯನ್ನು ಅವಳು ಅಚ್ಚುಕಟ್ಟಾಗಿ ಇಟ್ಟುಕೊಳ್ಳದಿದ್ದುದನ್ನು ಕಂಡರೆ ನಾನು ಸಿಡಿಮಿಡಿಗೊಳ್ಳುತ್ತೇನೆ. ಅಪ್ಪ ಕಲಿಸಿಕೊಟ್ಟ ವಿದ್ಯೆ ಅದು. ರಜಾ ದಿನಗಳಲ್ಲಿ ಕೆಲವು ವೇಳೆ ನನ್ನ ಬಾಯಿ ಚಪಲ ತೀರಿಸಿಕೊಳ್ಳಲು ನಾನೇ ಸೌಟು ಹಿಡಿದು ವಿಶೇಷವಾದದ್ದೇನಾದರೂ ಈಗಲೂ ಮಾಡುತ್ತೇನೆ. ಇದನ್ನು ಬಲ್ಲ ನನ್ನ ಕೆಲವರು ಸ್ನೇಹಿತರು ಹಾಸ್ಯಮಾಡುತ್ತಿದ್ದರು. "ಅಕಸ್ಮಾತ್ ನಿನ್ನ ಕೆಲಸವೇನಾದರೂ ಹೋದರೂ ಮದುವೆ ಮುಂಜಿಗಳಲ್ಲಿ ಅಡಿಗೆ ಕೆಲಸ ಮಾಡಿಕೊಂಡೇ ನೀನು ಜೀವನ ಸಾಗಿಸಬಹುದು" ಎನ್ನುತ್ತಿದ್ದರು.

ಅಪ್ಪನಿಗೆ ಈ ರೀತಿ ಹೊರಗೆಲಸ ಒಳಗೆಲಸಗಳ ಒತ್ತಡದ ಜೊತೆಗೆ ಇವನ ರೋಗದ ಕಾಳಜಿ ಮತ್ತು ಹಟಗಳು ತುಂಬ ಮಾನಸಿಕ ನೋವನ್ನುಂಟು ಮಾಡುತ್ತಿದ್ದಿರಬೇಕು. ಆದರೆ ಅವರದೆಂದೂ ತಮ್ಮ ದುಃಖವನ್ನು ಹೊರ ಹಾಕುವ ಸ್ವಭಾವವಲ್ಲ. ಒಳಗೇ ನವೆಯುವವರು, ತನ್ನ ಹಟದಿಂದ ತಿನ್ನುತ್ತಿದ್ದ ತಿಂಡಿಯ ಪ್ಲೇಟು ಕೈಲ್ಲಿದ್ದ ಪುಸ್ತಕ ಇವುಗಳನ್ನೆಲ್ಲ ಅಪ್ಪನ ಮೇಲೆ ಶಶಿ ಎಸೆದು ರಂಪಮಾಡುತ್ತಿದ್ದ. ಸುಧಾರಿಸುವಷ್ಟರ ಮಟ್ಟಿಗೆ ಪ್ರಯತ್ನ ಮಾಡಿ ಸಾಧ್ಯವಾಗದಿದ್ದರೆ ನನ್ನನ್ನು ಕರೆದು "ಇವನನ್ನು ಕರೆದುಕೊಂಡು ಹೋಗಪ್ಪ" ಎನ್ನುತ್ತಿದ್ದರು. ನಾನು ದೊಡ್ಡವನಾದ್ದ ರಿಂದ ಅಂಥ ಪ್ರಸಂಗಗಳಲ್ಲಿ ಬಲಪ್ರಯೋಗ ಮಾಡಿ ಎಳೆದುಕೊಂಡುಹೋಗುತ್ತಿದ್ದೆ. ಮೊದಲಿನಿಂದ ಅವನನ್ನು ಈ ರೀತಿ ನಾನೇ ಪಳಗಿಸಿದವನು. ಅವನ ತಾಪ ಆರಬೇಕಾದರೆ ನಾನೇ ಬರಬೇಕು. ಅಭ್ಯಾಸಬಲವೋ ಅಥವಾ ವಾಸ್ತವತೆಯ ಅರಿವೋ ಅಂತೂ ಅವನು ನನಗೆ ಮಾತ್ರ ಬಗ್ಗುತ್ತಿದ್ದುದು. ಇದು ಈವರೆಗೂ ಮುಂದುವರೆದಿತ್ತು. ಅವನ ಸ್ನೇಹಿತ ಗೋವಿಂದಯ್ಯ ಬೆಳಿಗ್ಗೆ ಹೇಳಿದ್ದರಲ್ಲ; "ನಮ್ಮ ಅಣ್ಣನಿಗೆ ಬೇಜಾರಾಯಿತು. ಅಂತ ಅನ್ನಿಸೋವರೆಗೂ ನಾನಿರೋದು, ಅಷ್ಟೇ" ಅಂತ. ಅಂದರೆ, ನನಗೆ ಅವನ ಬಗ್ಗೆ ಬೇಜಾರಾಗಿದೆಯೆಂದು ಖಾತರಿಯಾದ್ದರಿಂದ ಅವನು ಹೋಗಿಬಿಟ್ಟನೇನೋ? ನನ್ನ ಹತೋಟಿಯಲ್ಲಿದ್ದೂ ಇದ್ದೂ ಅವನು ತನ್ನ ಮನಸ್ಸನ್ನೂ ನನಗೆ ಅಡಿಯಾಳಾಗಿಸಿ ಬಿಟ್ಟಿದ್ದನೇನೋ.

ಇಷ್ಟಾದರೂ ಅವನ ಹಟ ಮಾತ್ರ ಮುಂದುವರಿದೇ ಇತ್ತು. ಆದರೆ ಮೊದಲಿನ ರೀತಿಯಲ್ಲಿ ಉಳಿದುಬರಲು ಸಾಧ್ಯವಿಲ್ಲವಲ್ಲ. ಹೀಗಾಗಿ ಅನೇಕ ರೂಪ ರೀತಿಗಳನ್ನು ಪಡೆದುಕೊಂಡಿತ್ತು. ಈಗೊಂದು ವರುಷದ ಕೆಳಗೆ ನಡೆದ ಘಟನೆಯಿದು. ಅವತ್ತೊಂದು ಭಾನುವಾರ. ನನ್ನ ಸ್ನೇಹಿತರೊಬ್ಬರು – ನನಗಿಂತ ತುಂಬ ಹಿರಿಯರು – ತಮ್ಮ ಮಗನ ಮದುವೆಗೆ ಆಹ್ವಾನಿಸಲು ನಮ್ಮ ಮನೆಗೆ ಬಂದರು. ಶಶಿ ಮನೆಯಲ್ಲಿರಲಿಲ್ಲ. ರಜವಾದ್ದರಿಂದ ಯಾರೋ ಸ್ನೇಹಿತರೆಂದು ಹುಡುಕಿಕೊಂಡು ಹೋಗಿದ್ದ. ಆ ಸ್ನೇಹಿತರಿಗೂ ಶಶಿಯ ಬಗ್ಗೆ ವಾತ್ಸಲ್ಯ. ಹೆಚ್ಚು ಪರಿಚಯವಿಲ್ಲದಿದ್ದರೂ ಯಾವಾಗಲೋ ಒಮ್ಮೊಮ್ಮೆ ನಮ್ಮ ಮನೆಗೆ ಬರುತ್ತಿದ್ದವರು. ಅವನ ಸ್ಥಿತಿಯಿಂದ ಕನಿಕರಸಹಿತವಾದ ವಾತ್ಸಲ್ಯವೇನೋ. ಶಶಿಯನ್ನು ಮದುವೆಗೆ ಕರೆದುಕೊಂಡು ಬರಲು ಹೇಳಿದರು.

"ಹೇಳ್ತೀನಿ, ಆದರೆ ಅವನ ಸ್ವಭಾವ ನಿಮಗೆ ಗೊತ್ತಲ್ಲ, ಏನು ಮಾಡ್ತಾನೋ" ಎಂದಿದ್ದೆ ಅನುಮಾನದಿಂದ, ಇಂತಹ ಸಮಾರಂಭಗಳಿಗೆ ಶಶಿ ಎಂದೂ ಬಂದವನಲ್ಲ. ಅದಕ್ಕೆ ಅವನ ಮನಸ್ಥಿತಿ ಕಾರಣವಿರಬೇಕು. ಮೊದಮೊದಲು ಅವನಲ್ಲಿ ಧೈರ್ಯ–ಆತ್ಮವಿಶ್ವಾಸಗಳನ್ನು ಮೂಡಿಸಲು ಅವನನ್ನು ನಮ್ಮ ಜೊತೆಯಲ್ಲಿ ಎಲ್ಲೆಡೆಗೂ ಕರೆದೊಯ್ಯುವ ಪ್ರಯತ್ನ ಮಾಡುತ್ತಿದ್ದೆ. ನನ್ನ ಒತ್ತಾಯದಿಂದ ಬಂದರೂ ಅನ್ಯಮನಸ್ಕನಾಗಿರುತ್ತಿದ್ದ. ಸ್ವಲ್ಪ ಸಮಯದ ಬಳಿಕ ನೆವಹೇಳಿ ತಪ್ಪಿಸಿಕೊಳ್ಳುತ್ತಿದ್ದ; ಇನ್ನೂ ಕೆಲವು ಕಾಲವಾದ ಮೇಲೆ ಬರುವುದಿಲ್ಲವೆಂದು ಒರಟಾಗಿಯೇ ಹೇಳಿಬಿಡುತ್ತಿದ್ದ. ಅದಕ್ಕೇ ಅವರಿಗೆ ನಾನು ಏನೂ ಖಂಡಿತ ಹೇಳಲಿಲ್ಲ.

"ಹಾಗಾದರೆ ಹೇಗೆ? ಖಂಡಿತ ಕರೆದುಕೊಂಡು ಬರಬೇಕು. ನಾನು ಹೇಳಿದೆ ಅಂತ ಹೇಳಿ ಬಂದೇ ಬರ್ತಾನೆ" ಎಂದು ನನಗೇ ಇಲ್ಲದ ಆತ್ಮವಿಶ್ವಾಸದಿಂದ ಹೇಳಿದರು.

"ಏನೋ ಹೇಳ್ತೀನಿ. ಕೊನೆಗೂ ಏನ್ಮಾಡ್ತಾನೋ."

"ಎಳಕೊಂಡು ಬನ್ನಿ. ನೀವು ಖಂಡಿತವಾಗಿ ಹೇಳಿದರೆ ಅವನು ಇಲ್ಲಾನ್ನಲ್ಲ. ಅಣ್ಣ ಹಾಕಿದ ಗೆರೆ ದಾಟಲ್ಲ."

"ಆಗಲಿ" ಎಂದು ಮಾತು ಬೆಳೆಸದೆ ಅವರನ್ನು ಕಳಿಸಿಕೊಟ್ಟಿದ್ದೆ.

ಆದರೆ ನಮ್ಮ ದೇವರ ಸತ್ಯ ನನಗೆ ತಿಳಿಯದೇ? ಮದುವೆಗೆ ಹೋಗಲು ರೆಡಿಯಾದೆವು. ಅವತ್ತೂ ಇನ್ನೊಂದು ಭಾನುವಾರ; ಅದೂ ಸಾಯಂಕಾಲ; ಆರತಕ್ಷತೆಗೆ ಹೋಗುತ್ತಿದ್ದುದು. ಬೆಳಿಗ್ಗೆಯೇ ಈ ವಿಚಾರ ಹೇಳಿದ್ದೆ ಶಶಿಗೆ. ಅವನು "ನೋಡೋಣ" ಎಂದಿದ್ದ. ಅವನ ಮಾತಿನ ರೀತಿಯಿಂದ ಇವತ್ತು ಯಾಕೋ ಮೆತ್ತಗಿದ್ದಾನೆ ಅನ್ನಿಸಿತು, ಬರಬಹುದು ಅಂದುಕೊಂಡೆ. ಸಾಯಂಕಾಲ ನಾನು– ರಮ ಮಕ್ಕಳು ಸಿದ್ಧರಾದೆವು. ಅವನೂ ವೇಳೆ ತಿಳಿದಿದ್ದುದರಿಂದ ರೆಡಿಯಾಗಿರ ಬಹುದು ಅಂದುಕೊಂಡು ರೂಮಲ್ಲಿ ಇಣುಕಿ ಹಾಕಿದರೆ ಹೇಗಿದ್ದನೋ ಹಾಗೇ ಇದ್ದಾನೆ. "ಬೇಗ ಏಳೋ" ಎಂದೆ.

"ಯಾಕೆ?"

"ಇದೇನು ಹೀಗೆ ಕೇಳ್ತೀಯ? ಬೆಳಿಗ್ಗೆ ಹೇಳಿರಲಿಲ್ಲವಾ ಮದುವೆಗೆ ಹೋಗಬೇಕು ಅಂತ."

"ನಾನು ಬರಲ್ಲ ಕಣೋ."

"ಕಂಡಿತ ಕರಕೊಂಬರಬೇಕು ಅಂತ ಹೇಳಿದಾರೆ."

"ಅವರು ಹೇಳಿಬಿಟ್ಟರೆ ಬಂದುಬಿಡಬೇಕಾ?"

"ದೊಡ್ಡೋರು ವಿಶ್ವಾಸದಿಂದ ಕರೆದು ಹೋಗಿದ್ದಾರೆ. ಅವರ ವಯಸ್ಸಿಗಾದರೂ ಬೆಲೆ ಕೊಟ್ಟು ಬಾ" ಅಂದೆ.

"ದೊಡ್ಡೋರಾಗಿಬಿಟ್ಟರೆ... ಸಾಯಿ ಅಂದರೆ ಸಾಯಬೇಕಾ?" ಅಂದ. ಅವನ ಮಾತೇ ಹೀಗೆ ಏನೋ ಹೇಳಿದರೆ ಇನ್ನೇನೊ ಹೇಳುವವನು ಈ ಮಾತು ಕೇಳಿ ರಮಂಗೆ ಕೋಪ ಬಂತು. "ಬರದಿದ್ದರೆ ಹಾಳಾಗಿ ಹೋಗಲಿ, ನೀವು ಬನ್ನಿ ಹೊತ್ತಾಗುತ್ತೆ" ಅಂತ ಕಿರುಚಿದಳು.

"ಕರಕೊಂಡು ಬಂದೇ ಬರ್ತೀನೀಂತ ನಾನು ಹೇಳಿದ್ದೀನಲ್ಲೋ?"

"ನನ್ನ ಕೇಳಿ ಹೇಳಿದೆಯೇನು ನೀನು?" ಎಂದು ವಾಗ್ವಾದವನ್ನು ಮುಂದುವರೆಸುವ ಮನೋಭಾವವನ್ನು ತೋರಿಸಿದ. ಅವನ ಹಟ ಕಂಡು ನನ್ನ ಹಟಮಾರಿತನವೂ ಜಾಗ್ರತವಾಯಿತು. ಅಲ್ಲದೆ ಅಲ್ಲಿಗೆ ಹೋದ ಮೇಲೆ ಇನ್ನು ಅವರ ಪ್ರಶ್ನೆಗಳನ್ನೆಲ್ಲ ಎದುರಿಸಬೇಕು, ಏನಾದರೂ ನೆಪಗಳನ್ನು ಕಂಡುಹಿಡಿದು ಸುಳ್ಳು ಹೇಳುತ್ತ ಹೋಗಬೇಕು. ಅನೇಕ ವೇಳೆ ಈ ರೀತಿಯ ಪ್ರಸಂಗಗಳನ್ನು ಇವನಿಂದಾಗಿ ಎದುರಿಸಿದ್ದುದರಿಂದ ಇವನನ್ನು ಕರೆದುಕೊಂಡೇ ಹೋಗಬೇಕು ಇವತ್ತು ಅಂದುಕೊಂಡೆ. ಮಾತಾಡದೆ ಅವನು ಒಗೆದು ಇಸ್ತ್ರೀ ಮಾಡಿಟ್ಟ ಬಟ್ಟೆಗಳನ್ನು ತಂದು ಅವನ ಮುಂದಿಟ್ಟು "ಏಳು, ಬೇಗ ಮುಖ ತೊಳಕೊಂಡು ಬಂದು ರೆಡಿಯಾಗು" ಎಂದೆ. ನನ್ನ ಮಾತಿನಲ್ಲಿ ಆಜ್ಞೆಯ ಧಾಟಿಯಿತ್ತು. ಅದೇಕೋ ಇಂತಹ ಸಂದರ್ಭಗಳಲ್ಲಿ ಅವನು ಮೆತ್ತಗಾಗುತ್ತಿದ್ದ. ಅನುನಯದಿಂದ ಹೇಳಿದರೆ ಕೇಳದವನು ಆಜ್ಞೆಗೆ ಬಗ್ಗುತ್ತಿದ್ದ.

"ಬೇಡ ಅಂದರೆ ಯಾಕೋ ಬಲವಂತ ಮಾಡೋದು?" ಎಂದ ಮೆತ್ತಗೆ.

"ಸುಮ್ಮನೆ ಮೇಲೇಳು, ನೀನೇನು ಜಸ್ತಿ ಹೊತ್ತಿರಬೇಕಾ ಅಲ್ಲಿ? ಹೋಗಿ ಮುಖ ತೋರಿಸಿ ಬಂದರೆ ಆಯಿತು" ಎಂದೆ.

"ಹಾಗಾದರೆ ಮುಖ ತೋರಿಸಿ ವಾಪಾಸು ಬಂದುಬಿಡ್ತೀನಿ" ಎಂದ ನನ್ನ ಮಾತಿನ ಜಾಡನ್ನು ಹಿಡಿದು.

"ಹ್ಞೂ ಕಣೋ, ಹಾಗೇ ಮಾಡುವೆಯಂತೆ. ಮೊದಲು ಏಳು" ಎಂದೆ. ಅವನು ಎದ್ದ.

ನಾನು ರಮ ಮಕ್ಕಳು ಆಗಿದ್ದಿದ್ದರೆ ರಿಕ್ಷಾದಲ್ಲಿ ಸರ್ರಂತ ಹೋಗಿ ಬರಬಹುದಾಗಿತ್ತು. ಆದರೆ ಇವನು ಬೇರೆ ಇದ್ದುದರಿಂದ ಎರಡು ರಿಕ್ಷಾಗಳು ಆಗಬೇಕು. ಅಥವಾ ಬಸ್ಸಲ್ಲಿ ಹೋಗಬೇಕು. ಎರಡು ರಿಕ್ಷಾಗಳಿಗೆಂದರೆ ತುಂಬ

ದುಡ್ಡಾಗುತ್ತೆ. ಬಸ್ಸಲ್ಲೇ ಹೋಗಿಬರೋಣ; ಅಂಥ ರಶ್ ಇರೋ ಹೊತ್ತೇನಲ್ಲ ಅಂತ ತೀರ್ಮಾನಿಸಿ ಬಸ್‌ಸ್ಟಾಪಿನ ಕಡೆಗೆ ಹೊರಟೆವು. ಹೆಚ್ಚು ಹೊತ್ತು ಕಾಯಬೇಕಾಗಿಲ್ಲ. ಬೇಗನೇ ಮದುವೆಯ ಚಪ್ಪರ ತಲುಪಿದ್ದೆವು.

ಛತ್ರದ ಹೊರಬಾಗಿಲಲ್ಲಿ ಸ್ವಾಗತಿಸುತ್ತ ಓಡಾಡುತ್ತಿದ್ದ ಸ್ನೇಹಿತರಿಗೆ ಸಂತೋಷವಾಯಿತು, ಶಶಿಯನ್ನು ನೋಡಿ, "ನೋಡಿದಿರಾ ನಾನು ಹೇಳಲಿಲ್ಲವಾ? ನಾನು ಹೇಳಿದರೆ ಬರ್ತಾನೆ ಅಂತ" ಎಂದು ವಿಜಯದ ನಗೆ ಬೀರಿದರು. ನಾನೂ ಸುಮ್ಮನೆ ನಕ್ಕೆ, ಶಶಿ ಸರಸರ ಗಂಡು–ಹೆಣ್ಣುಗಳು ಆರತಕ್ಷತೆಗೆ ಕೂತಿದ್ದ ಕಡೆ ಹೋದ. ಹುಡುಗನೂ ಅವನಿಗೆ ಸ್ವಲ್ಪ ಪರಿಚಯದವನೇ, ನಾವು ನಿಧಾನವಾಗಿ ಹೋಗುತ್ತಿದ್ದರೆ ಅವನು ಮುಂದೆ ಹೋದ, ಗಂಡು–ಹೆಣ್ಣು ಎದ್ದು ನಿಂತರು. "ಹ್ಯಾಪಿ ಮ್ಯಾರೀಡ್ ಲೈಫ್ ಕಂಗ್ರ್ರೇ"ಎಂದು ಹಾರೈಸಿದ. ಮಾತು ಕೇಳಿಸಿದವು, ಗಂಡಿನ ಕೈಕುಲುಕಿ, ಹೆಣ್ಣಿಗೆ ನಮಸ್ಕಾರ ಮಾಡಿದ್ದು ಕಾಣಿಸಿತು. ಇನ್ನೂ ನಾವು ಅಲ್ಲಿ ತಲುಪೇ ಇಲ್ಲ, ಅವನು ಎದುರಾಗಿ ವಾಪಸ್ಸಾಗುತ್ತಿದ್ದ. ನಾನು ಅವನನ್ನೇ ನೋಡುತ್ತಿದ್ದೆ. ಪುನಃ ಪ್ರವೇಶದ ಕಡೆಗೆ ಅವನು ತಲುಪಿದಾಗ ಆ ಹಿರಿಯ ಸ್ನೇಹಿತರು "ಏನಪ್ಪಾ, ಈ ಕಡೆ ಬರ್ತಿದ್ದೀ ಒಳಗೇ ನಡಿ" ಅಂದರು.

"ಮುಖ ತರಿಸಿಬಿಟ್ಟು ಬಾ ಸಾಕು ಅಂದಿದ್ದ ಅಣ್ಣ; ಮುಖ ತೋರಿಸಿಯಾಯ್ತಲ್ಲ ಹೋಗ್ತೀನಿ" ಎಂದು ಹೊರಟೇಬಿಟ್ಟ!

ಇಂಥ ಕಸಿವಿಸಿಗೊಳ್ಳುವ ಪ್ರಸಂಗಗಳು ಬರಬಾರದೆಂದು ಮುಂದೆ ಅವನಿಗೆ ಬಲವಂತ ಮಾಡುತ್ತಲೇ ಇರಲಿಲ್ಲ. ಈ ವಿಚಾರಗಳಲ್ಲಿ, ಅವನಿಗೇನು ನಮ್ಮ ಇಕ್ಕಟ್ಟಿನ ಸ್ಥಿತಿ ಅರ್ಥವಾಗುತ್ತದೆಯೋ ಇಲ್ಲವೊ ಎಂಬುದೇ ತಿಳಿಯದು. ಮಿಕ್ಕೆಲ್ಲಸಂದರ್ಭಗಳಲ್ಲಿ ಸರಿಯಾಗಿರುತ್ತಾನೆ. ನಮ್ಮ ಸ್ಥಿತಿ ಅರ್ಥ ಮಾಡಿಕೊಳ್ಳಲಾರನೇ? ತನ್ನ ಹಟಸಾಧನೆಗಾಗಿ ನಮ್ಮನ್ನು ಪೇಚಿಗೆ ಸಿಕ್ಕಿಸುತ್ತಾನಲ್ಲ. ಅವನಿಗೆ ತನ್ನ ಹಟವನ್ನು ಗೆಲ್ಲುವುದು ಮುಖ್ಯವಾಗುವುದೇ ಹೊರತು, ಅದರಿಂದಾಗುವ ಪರಿಣಾಮ ಗಳಲ್ಲಿನ ಈ ಸೂಕ್ಷ್ಮಗಳನ್ನು ಗಮನಿಸಲಾರದಷ್ಟು ಅವನ ಮನಸ್ಸು ಹಾಳಾಗಿರಬಹುದು.

ಅವನ ಹಟದಿಂದ ಪೇಚಿನ ಪ್ರಸಂಗಗಳಿದ್ದಂತೆ ಕೆಲವೇಳೆ ಸಹಾಯಕವಾಗುವ ಪರಿಸ್ಥಿತಿಗಳೂ ಉಂಟಾಗುತ್ತಿದ್ದವು. ಏನನ್ನಾದರೂ ಅವನು ಮನಸ್ಸಿಗೆ ತಂದುಕೊಂಡರೆ ಅದನ್ನು ಮಾಡಿ ಪೂರೈಸಲೇಬೇಕು ಎನ್ನುವ ಯಮ ನಿರ್ಧಾರ ಅವನದು. ಮೇಲೆ ಹೇಳಿದ ಘಟನೆಗಿಂತಲೂ ಮುಂಚೆ ನಡೆದ ಒಂದು ಪ್ರಸಂಗ, ನಾವೆಲ್ಲ ಎರಡು ದಿನ ಮಂತ್ರಾಲಯದ ಯಾತ್ರೆಗೆ ಹೋಗಿದ್ದೆವು, ನಾನೂ ಆಗ ಅವನಿಗೆ "ನೀನೂ ಬಾ" ಎಂದು ಹೇಳಿದ ಕ್ಷಣವೇ ಅವನೂ ಒಪ್ಪಿಕೊಂಡಿದ್ದ. ದೇವರ ಸ್ಥಳವೆಂಬ ಭಕ್ತಿಯಿಂದಿರಬೇಕು, ಅನಿಗೆ ದೇವರು ದಿಂಡಿರುಗಳಲ್ಲಿ ಭಾರೀ ಭಕ್ತಿ. ಪ್ರತಿನಿತ್ಯ ಬೆಳಗ್ಗೆ ಯಾವುದೋ ಹಲವು ಶ್ಲೋಕಗಳನ್ನು ರೂಮಲ್ಲಿ ಒಬ್ಬನೇ ಕೂತು ಹೇಳಿಕೊಳ್ಳುತ್ತಿದ್ದ; ಇದು ಒಂದು ದಿನ ತಪ್ಪಿದ್ದನ್ನು ಕಾಣೆ. ರೂಮು ಬಾಗಿಲು ಹಾಕಿಕೊಂಡು ಒಬ್ಬನೇ ಹೇಳಿಕೊಳ್ಳುತ್ತಿದ್ದ. ಆಗ ಚಿಲುಕ ಹಾಕಿಕೊಳ್ಳಬೇಡವೆಂದು ನಾನು ಹೇಳುತ್ತಿದ್ದೆ. ಈ ಪ್ರಾರ್ಥನೆಯ ಪರಿಪಾಠ ಅವನು ಅಪ್ಪನಿಂದ ಕಲಿತದ್ದು. ಅಪ್ಪ ಕೂಡ ಹೀಗೆಯೇ ಬೆಳಿಗ್ಗೆ ಪ್ರಾರ್ಥನಾ ಶ್ಲೋಕಗಳನ್ನು ಹೇಳಿಕೊಳ್ಳುವ ಪರಿಪಾಠ. ಅದನ್ನು ಇವನಿಗೂ ಕಲಿಸಿದ್ದರು. ಇದರಿಂದ ಅವನ ಆರೋಗ್ಯ ಸುಧಾರಿಸಬಹುದೆಂಬ ನಂಬಿಕೆಯಿತ್ತೇನೋ ಭಕ್ತಿಯಿಂದಾಗಿ ಶಶಿ ನಮ್ಮ ಜತೆ ಬರು ಒಪ್ಪಿಕೊಂಡಿದ್ದ. ಅವನು ಬರೊಲ್ಲವೆಂದರೆ ಏನು ಮಾಡಬೇಕೆಂಬ ಯೋಚನೆ ನನ್ನ ಕಾಡುತ್ತಿತ್ತು. ಒಬ್ಬನನ್ನೇ ಬಿಟ್ಟು ಹೋಗುವಂತಿಲ್ಲ. ಅವನು ಬರುವುದಿಲ್ಲವೆಂದು ರಮಳ ಹರಕೆಯನ್ನು ಕಡೆಗಣಿಸಿ ಸಮಸ್ಯೆ ತಂದುಕೊಳ್ಳುವಂತಿಲ್ಲ. ತುಂಬ ಕಳವಳ ವುಂಟಾಗಿತ್ತು. ಅವನು ಏನು ಮಾಡಿದರೂ ಬರುವುದಿಲ್ಲವೆಂದು ಹಟ ಹಿಡಿದರೆ

ಗೋವಿಂದಯ್ಯನಿಗೆ ಹೇಳಿ, ಅವರ ರೂಮಿನಲ್ಲಿ ಮಲಗಲು ಅವಕಾಶ ಮಾಡಿ ಕೊಡಿರೆಂದು ಕೇಳಬೇಕಂದಿದ್ದೆ. ಆದೆ ಜೊತೆಗೆ ಬರಲು ಶಶಿ ಒಪ್ಪಿದ್ದ ರಿಂದ ಸಮಸ್ಯೆ ತಾನಾಗಿಯೇ ಪರಿಹಾರವಾಗಿತ್ತು; ಇಷ್ಟು ಸುಲಭವಾಗಿ ಪರಿಹಾರವಾದದ್ದು ನೆಮ್ಮದಿಯೆನಿಸಿತ್ತು.

ಎರಡು ದಿನಗಳ ಕಾಲ ಮಂತ್ರಾಲಯದಲ್ಲಿ ಹಾಯಾಗಿದ್ದೆವು. ಜೊತೆಗೇ ಅವನನ್ನು ಸ್ನಾನಕ್ಕೆಂದು ಕರೆದುಕೊಂಡು ಹೋಗುತ್ತಿದ್ದೆವು. ನಾವೆಲ್ಲ ದಡದಲ್ಲಿ ನಿಂತು ಸ್ನಾನಮಾಡಿದರೆ, ಸೊಂಟದವರೆಗಿನ ನೀರಲ್ಲಿ ನಿಂತರೆ, ಅವನು ಆಳವಿದ್ದ ಕಡೆ ಹೋಗಿ ಈಜುತ್ತಿದ್ದ. ಆಗ ಫೆಬ್ರುವರಿ ತಿಂಗಳಾದ್ದರಿಂದ ನದಿಯಲ್ಲಿ ತುಂಬ ನೀರಿರಲಿಲ್ಲ. ಎಲ್ಲೋ ಒಂದೆರಡು ಸೀಳುಗಳಲ್ಲಿ ನೀರು ಹರಿಯುತ್ತಿತ್ತು. ಆದರೆ ಒಂದೆರಡು ಆಳವಾದ ಕಡೆಗಳಲ್ಲಿ ನೀರು ನಿಂತು ಕೆರೆಗಳಂತಾಗಿದ್ದವು. ಅಲ್ಲಿ ಹೋಗಿ ಶಶಿ ಈಜುತ್ತಿದ್ದ. ನಾವೂ ಗಾಬರಿಯಿಂದ ಅವನು ಹೋದ ಜಾಗಕ್ಕೇ ಹೋಗಿ ದಡದಲ್ಲಿ ನಿಂತು ಸ್ನಾನ ಮಾಡಿದ್ದೆವು. ಅವನಿಗೆ ಅಷ್ಟು ಚೆನ್ನಾಗಿ ಈಜು ಬರುವುದೆಂದು ನನಗೆ ಗೊತ್ತಾದದ್ದು ಆಗಲೇ. ಆದರೆ ಆ ನದಿಯಲ್ಲಿ – ಅದೂ ಈ ಸ್ಥಳದಲ್ಲಿ ಬಂಡೆಗಳು ಹೆಚ್ಚು. ಈಜುವಾಗ ಬಂಡೆಗಳಿಗೆ ಡಿಕ್ಕಿ ಹೊಡೆಕೊಂಡಾ ನೆಂದು ಹೆಚ್ಚು ಹೊತ್ತು ಬಿಡದೆ ಬೇಗ ಎಬ್ಬಿಸಿಕೊಂಡು ಬರುತ್ತಿದ್ದೆವು.

ಮಂತ್ರಾಲಯದಿಂದ ವಾಪಸ್ಸು ಬಂದದ್ದು ಮಧ್ಯಾಹ್ನದ ಬಸ್ಸಲ್ಲಿ. ರಾತ್ರಿ ಹನ್ನೊಂದೂವರೆಗೆ ಬೆಂಗಳೂರಿಗೆ ಬಂದಿತ್ತು. ಯಾವುದೋ ಪ್ರೈವೇಟು ಬಸ್ಸಾದ್ದರಿಂದ ಕಲಾಸಿಪಾಳ್ಯದ ಬಸ್ಸ್ಟ್ಯಾಂಡಿನಲ್ಲಿ ಇಳಿಸಿದ್ದರು. ಬೆಂಗಳೂರನ್ನು ಬಸ್ಸು ಒಂಬತ್ತೂವರೆಗೆ ತಲುಪುವುದೆಂದು ಹೇಳಿದ್ದರಿಂದ ಆಬಸ್ಸಲ್ಲಿ ಬಂದಿದ್ದೆವು. ಅಷ್ಟು ಹೊತ್ತಿಗೆ ಬಸ್ಸುಗಳಲ್ಲದಿದ್ದರೆ ರಿಕ್ಷಾಗಳಾದರೂ ಸಿಕ್ಕುತ್ತವೆ. ಏನಿಲ್ಲವೆಂದರೂ ಹತ್ತೂವರೆಯೊಳಗಾಗಿ ಮನೆ ತಲುಪಬಹುದಲ್ಲ ಅನ್ನಿಸಿತ್ತು. ಆದರೆ ದಾರಿಯ ಮಧ್ಯದಲ್ಲಿ ಬಸ್ಸು ಕೆಟ್ಟು ರಿಪೇರಿ ಎಂದು ಎರಡು ಬಾರಿ ನಿಂತುಬಿಟ್ಟಿತ್ತು. ಎಲ್ಲ ಸರಿಮಾಡಿಕೊಂಡು ಇಲ್ಲಿ ಬರುವ ವೇಳೆಗೆ ಹೊತ್ತಾಗಿತ್ತು. ಸಧ್ಯ ದಾರಿಯಲ್ಲಿ ಇನ್ನೇನಾದರೂ ಆಗದೆ, ಅಲ್ಲೇ ರಾತ್ರಿಯೆಲ್ಲ ಕಳೆಯುವ ಹಾಗಾಗದೆ ಊರು ತಲುಪಿದೆವಲ್ಲ ಎಂಬುದೇ ಸಮಾಧಾನದ ವಿಷಯ.

ಆ ಹೊತ್ತಿಗೆ ಬಸ್ಸಂತೂ ಸಾಧ್ಯವಿಲ್ಲ. ನಮ್ಮ ಲಗ್ಗೇಜುಗಳೊಡನೆ ಬಸ್ಸಲ್ಲಿ ಹೋಗುವುದು ಸಾಧ್ಯವೂ ಇಲ್ಲ. ಇನ್ನು ರಿಕ್ಷಾ ಎಂದರೆ ಅಲ್ಲಿ ಇದ್ದುದು ಕೆಲವೇ ರಿಕ್ಷಾಗಳು. ನಾವು ಬಸ್ಸಿನ ಟಾಪಿನಿಂದ ಸಾಮಾನುಗಳನ್ನು ಇಳಿಸಿಕೊಳ್ಳುವ ಹೊತ್ತಿಗೆ ಬಹುಪಾಲು ಪ್ರಯಾಣಿಕರು ರಿಕ್ಷಾಗಳನ್ನು ತಗೊಂಡು ಹೋಗಿ ಬಿಟ್ಟಿದ್ದರು. ಇದ್ದಕೆಲವರು ರಿಕ್ಷಾಗಳವರು ಗಾಂಚಾಲಿ ಮಾಡತೊಡಗಿದರು. "ಆಕಡೆ ಬರುವುದಿಲ್ಲ." "ಇಷ್ಟು ಹತ್ತಿರವಾದರೆ ಬರುವುದಿಲ್ಲ." "ಇಷ್ಟು ಕೊಡಿ ಅಷ್ಟು ಕೊಡಿ" ಎಂಬ ಮಾತುಗಳು. ಹೊತ್ತು ಜಾಸ್ತಿಯಾಗಿದ್ದರೂ ತುಂಬ ದೂರವಿರದ ನಮ್ಮ ಮನೆಗೆ ವಿಪರೀತ ಬಾಡಿಗೆ ಕೇಳುತ್ತಾರೆಂದು ಒಂದಿಬ್ಬರನ್ನು ಬೇಡವೆಂದು ಕಳಿಸಿಬಿಟ್ಟೆವು. ಈ ಮಾತುಕತೆಗಳೆಲ್ಲ ಹೆಚ್ಚಾಗಿ ಶಶಿಯದೇ. ತುಂಬ ಹಣ ಕೇಳುತ್ತಾನೆ ಎಂಬ ಕಾರಣಕ್ಕಾಗಿ ಅಲ್ಲಿದ್ದ ಕೊನೆಯ ರಿಕ್ಷಾವನ್ನೂ ಅವು ತಿರಸ್ಕರಿಸಿ ಕಳಿಸಿಬಿಟ್ಟಿದ್ದ. ಆಮೇಲೆ ಎಷ್ಟು ಹೊತ್ತಾದರೂ ರಿಕ್ಷಾಗಳು ಸಿಗಲಿಲ್ಲ. ಹಾಳಾಗಿ ಹೋಗಲಿ ಅಂತ ಆ ರಿಕ್ಷಾದಲ್ಲಿ ಹೋಗಿಬಿಡಬೇಕಾಗಿತ್ತು. ಈ ಜಿಪುಣ ಶಶಿ ಮಧ್ಯೆ ಬಾಯಿ ಹಾಕಿ ಎಲ್ಲ ಹಾಳು ಮಾಡುತ್ತಾನೆ ಅನ್ನಿಸಿ ಬೇಸರವಾಯಿತು.

"ನಡೆಯಕ್ಕೆ ತಯಾರಾಗಿದ್ದೀರಾ" ಎಂದ. ಮನೆ ದೂರವೇನಲ್ಲ. ಅಬ್ಬಬ್ಬ ಎಂದರೆ ಒಂದು ಮೈಲಿಯಾಗಬಹುದು. ಹೇಗಾದರೂ ಮನೆ ತಲುಪಬೇಕಲ್ಲ. ನಡೆಯಲು ಸಿದ್ಧ. ಆದರೆ ಲಗ್ಗೇಜು? ಅದರ ಯೋಚನೆ ಬೇಡವೆಂದ. ಎಲ್ಲವನ್ನು ತಾನೇ ಹೊತ್ತುಕೊಂಡು ನಮ್ಮನ್ನು ಮುಂದಿಟ್ಟುಕೊಂಡು ಹೊರಟೇಬಿಟ್ಟ. ಸುಷ್ಮಾ ನಡೆಯಬಲ್ಲವಳು ಪೃಥ್ವಿಯನ್ನು ನಾನಷ್ಟು ಹೊತ್ತು, ರಮ ಅಷ್ಟು ಹೊತ್ತು ಎತ್ತಿಕೊಂಡು ನಡೆದೆವು. ಅಷ್ಟಕ್ಕೇ ನಮ್ಮ ಕೈಗಳು ಕಳಚಿ ಹೋಗಿವೆ ಏನೋ ಅನ್ನಿಸುತ್ತಿತ್ತು. ಆದರೆ ಶಶಿ

ಅಷ್ಟೊಂದು ಸಾಮಾನು ಹೊತ್ತು, ಆಯಾಸ ಆಗಿದ್ದರೂ ತೋರಗೊಡದೆ, "ನಾನು ತಾನೇ ರಿಕ್ಷಾ ತಪ್ಪಿಸಿದ್ದು. ಆದ್ದರಿಂದ ಆ ತಪ್ಪಿಗೆ ನಾನೇ ಸಾಮಾನು ಹೊರಬೇಕು" ಎಂದು ನಮ್ಮ ಕೈಲಿ ಒಂದು ಸಾಮಾನೂ ಹೊರಿಸದೆ ಮನೆಯವರೆಗೂ ತಂದಿದ್ದ. ಅಂಥ ಹಟ ಅವನದು!

ಹಟಮಾರಿತನ ಎಂಬುದೇ ಇನ್ನೊಂದು ಹಂತದಲ್ಲಿ ದೃಢ ನಿರ್ಧಾರ ಎಂದಾಗುತ್ತದೆಯಲ್ಲವೇ? ಅಂಥ ನಿರ್ಧಾರದಿಂದಲೇ ಅಲ್ಲವೇ ಅವನು ಈಗ ಸತ್ತಿರುವುದು. ಸಾವನ್ನು ತಂದುಕೊಳ್ಳಬಲ್ಲ ನಿರ್ಧಾರ ಎಂದರೆ ಹೇಗಿರಬೇಕು!

– – –

ಯಾವುದೋ ಹಬ್ಬದ ದಿನವೊಂದರಲ್ಲಿ ಪೃಥ್ವಿಗೆ ಅವರಮ್ಮ ಹೊಸ ಉಂಗುರ ಒಂದನ್ನು ಹಾಕಿದ್ದಳು. ಸಾಯಂಕಾಲ ಶಶಿ ಪೃಥ್ವಿಯನ್ನು ಹೊರಗೆಲ್ಲೋ ಸ್ವಲ್ಪ ಹೊತ್ತು ಕರೆದುಕೊಂಡು ಹೋಗಿದ್ದನಂತೆ, ನಾನೂ ಆಗ ಮನೆಯಲ್ಲಿರಲಿಲ್ಲ. ಎತ್ತಲೋ ಹೋಗಿದ್ದವನು ಮನೆಗೆ ಬಂದಾಗ ರಮಳ ಸಹಸ್ರನಾಮ ಪ್ರಾರಂಭವಾಗಿತ್ತು, ಅವನು ಮಗುವನ್ನು ಕರೆದುಕೊಂಡು ಹೋದುದರಿಂದಲೇ ಅವಳಿಗೆ ಅಸಮಾಧಾನವಾಗಿತ್ತು. ಅದರ ಜೊತೆಗೆ ಹೊಸ ಉಂಗುರವೊಂದನ್ನು ಹಾಕಿಕೊಂಡ ಮಗುವನ್ನು ಕರೆದುಕೊಂಡು ಹೋಗಿದ್ದ. ಅವನು ಮನೆಗೆ ಮಗುವನ್ನು ವಾಪಸು ಕರೆದುಕೊಂಡು ಬಂದಾಗ ರಮ ನೋಡುತ್ತಾಳೆ, ಮಗುವಿನ ಕೈಬೆರಳಲ್ಲಿದ್ದ ಉಂಗುರವಿಲ್ಲ! ಅವಳಿಗೆ ಗಾಬರಿಯಾಯಿತು. ಎಲ್ಲಿ ಎಂದು ಶಶಿಯನ್ನು ಕೇಳಿದಳು. "ನನಗೇನು ಗೊತ್ತು" ಎಂದ.

"ಎಂಥ ಬೇಜವಾಬ್ದಾರೀನೋ ನಿಂದು. ಮಗು ಬೆರಳಲ್ಲಿದ್ದ ಉಂಗುರ ಎಲ್ಲಿ ಹೋಯಿತು. ಅಂದರೆ ಎಷ್ಟು ಸುಲಭವಾಗಿ ನಂಗೇನು ಗೊತ್ತು ಅಂತೀಯಲ್ಲ!"

"ಇನ್ನೇನು ಮಾಡಬೇಕಾಗಿತ್ತು?"

"ಎಲ್ಲಿ ಹೋಯಿತೂಂತ ಹುಡುಕಿ ತರಬೇಕಾಗಿತ್ತು."

"ಅವನ ಕೈಯಲ್ಲಿ ಉಂಗುರವೇ ಇರಲಿಲ್ಲ, ನಾನು ಕರಕೊಂಡು ಹೋದಾಗ" ಎಂದ ಶಶಿ.

"ಸಾಯಂಕಾಲ ನಾಲ್ಕು ಗಂಟೆಗೆ ಹಾಕಿದ್ದೆ. ನೋಡ್ತಾನೇ ಇದ್ದೆನಲ್ಲ. ಇನ್ನೆಲ್ಲಿಗೆ ಹೋಗುತ್ತೆ."

"ಮತ್ತೆ, ಎಲ್ಲಿಗೆ ಹೋಗುತ್ತೆ?"

"ನಿನ್ನ ತಲೆ ಮಗೂನ ಹೊರಗೆ ಕರಕೊಂಡು ಹೋಗಿ ಕಳಕೊಂಡು ಬಂದಿದ್ದೀಯ. ಈಗ ನೋಡಿದರೆ ತಲೆಹರಟೆ ಮಾತಾಡ್ತಿದ್ದೀಯ."

"ಇಲ್ಲ ಅತ್ತಿಗಮ್ಮನೋರೆ, ಪೃಥ್ವೀನ ಕರಕೊಂಡು ಹೋದಾಗ ಅವನ ಕೈಯಲ್ಲಿ ಉಂಗುರ ಇರಲಿಲ್ಲ. ನಾನು ನೋಡಿದ್ದ ಜ್ಞಾಪಕವೇ ಬರದು!"

"ನಿಂಗೆ ಜ್ಞಾಪಕ ಬರುತ್ತ. ಜವಾಬ್ದಾರಿ ಇಲ್ಲದೋನು."

ಅವಳಷ್ಟು ಮಾತಾಡಿದರೂ ಪೃಥ್ವಿಯ ಬೆರಳಲ್ಲಿ ಉಂಗುರವಿರಲಿಲ್ಲ ಎಂಬುದೇ ಅವನ ವಾದ. ಅವಳ ವಿರುದ್ಧ ಇನ್ನಾವುದೇ ಮಾತುಗಳನ್ನಾಡಲಿಲ್ಲ. ರಮಂಗೂ ಇಂಥವನ ಜೊತೆ ಯುದ್ಧ ಮಾಡುವುದು ಕಷ್ಟವೇ. ಅವನೂ ಇವಳ ಹಾಗೆಯೇ ಮಾತಾಡುತ್ತಿದ್ದರೆ ಅವಳಿಗೆ ಇನ್ನಷ್ಟು ಹುರುಪು–ಹುಮ್ಮಸ್ಸು ಬರಬಹುದಾಗಿತ್ತು. ಜಗಳಕ್ಕೆ ರಂಗೇರುತ್ತಿತ್ತು. ಆದರೆ ಅವನದು ಒಂದೇ ಮಾತು; "ನಾನು ಕರಕೊಂಡು ಹೋದಾಗ ಅವನ ಕೈಯಲ್ಲಿ ಉಂಗುರ ಇರಲಿಲ್ಲ."

"ಕರಕೊಂಡು ಹೋಗಬೇಡಾಂತ ಬಡಕೋತೀನಿ. ಕೇಳಲ್ಲ, ಎಲ್ಲಾದರೂ ಎತ್ತಿ ಹಾಕಿದರೇನು ಗತಿ ಅಂತ ಒಂದು ಭಯ. ಹೀಗೆ ಬೇರೆ ಮಾಡಿಬಿಡ್ತಾನೆ." ಅಂತ ರಮ ಗೊಣಗಾಡಿಕೊಂಡಳು. ಅವಳು ಎಷ್ಟು ಹೊತ್ತೂಂತ ಮಾತಾಡುತ್ತಾಳೆ, ಉರುಂ ಅಂತ ಮುಖ ಮಾಡಿಕೊಂಡು ಪೃಥ್ವಿಯನ್ನೇ ಪ್ರಶ್ನೆ ಮಾಡುವುದಕ್ಕೆ ತೊಡಗಿದಳು. ಆದರೆ ಅವನಿಗೆ ಚಿನ್ನದ ಬೆಲೆಯೂ ಗೊತ್ತಿಲ್ಲ. ಅದು ಏನಾಯಿತೆಂಬ ಪರಿವೆಯೂ ಇಲ್ಲ. ಹೀಗಾಗಿ ಅವಳ ಪ್ರಶ್ನಾವಳಿಗೆ ಅವನಿಂದ ಯಾವುದೇ ಉತ್ತರವಿಲ್ಲ. ಬರೀ ಪಿಳಿಪಿಳಿ ಕಣ್ಣು ಬಿಡುತ್ತಾನೆ, ಅಷ್ಟೆ. "ಹಬ್ಬದ ದಿನ ಏನಾದರೂ ಇಂಥ ಗೋಳು ಆಗಲೇಬೇಕು. ಏನು ದರಿದ್ರ ಸಂಸಾರವೋ" ಅಂದುಕೊಂಡು ಹಾರಾಡುತ್ತಿದ್ದಳು.

ಆ ಹೊತ್ತಿಗೆ ನಾನು ಹೊರಗಡೆಯಿಂದ ಮನೆಗೆ ಬಂದೆ. ಮನೆಯ ಪರಿಸ್ಥಿತಿ ಗಂಭೀರ ಆಗಿತ್ತು. ಏನೋ ಆಗಿದೆ ಅಂದುಕೊಂಡೆ. "ಮುಖ ನೋಡಿದವಳೇ ಮೂತಿ ಸೊಟ್ಟಗೆ ಮಾಡಿದಳು ರಮ. ನಾನು ತಮಾಷೆಯಿಂದ "ಏನು ಸಮಾಚಾರ, ಮೈಮೇಲೆ ಬಂದಿರೋ ಹಾಗಿದೆ ಅಮ್ಮಾವ್ರಿಗೆ?" ಎಂದೆ. ಹಾಗಂದಿದ್ದೇ ಅವಳಲ್ಲಿ ಹುದುಗಿಕೊಂಡಿದ್ದ ಮಾತುಗಾರಿಕೆಯೆಲ್ಲ ಜಾಗ್ರತವಾಯಿತು. "ಇನ್ನೆಷ್ಟು ದಿನವೋ ಈ ಕರ್ಮ ಅನುಭವಿಸೋದು ನಾವು" ಎಂದಳು.

"ಯಾಕೆ, ಏನಾಯಿತು?"

"ಆಗೋದೇನು? ಇದ್ದುದರಲ್ಲಿ ಇಲಿ ಕಚ್ಚಿಕೊಂಡುಹೋಯಿತೂಂತ ಆಯಿತು ಸಾಲದಾ?"

"ಏನಾಯಿತು, ಹೇಳು" ಅಂದೆ.

ವಿಚಾರ ತಿಳಿಸಿದಳು. ನನಗೆ ಪರಿಸ್ಥಿತಿ ಅರ್ಥವಾಯಿತು. ಸಾಯಂಕಾಲ ಮನೆ ಬಿಡುವಾಗ ಪೃಥ್ವಿಯ ಕೈಬೆರಳಲ್ಲಿದ್ದ ಉಂಗುರ ಕಂಡಿದ್ದೆ. ಅದು ಅವನಿಗೆ ಸಡಿಲ ಆಗಿದ್ದುದು ನನ್ನ ಗಮನಕ್ಕೆ ಬಂದಿತ್ತು. ಇನ್ನು ಎಲ್ಲಾದರೂ ಕಳೆದುಕೊಂಡು ಬಿಟ್ಟಾನೆಂದು ನಾನೇ ಅದನ್ನು ಬೆರಳಿಂದ ಕಳಚಿ ಆಮೇಲೆ ಒಂದಷ್ಟು ದಾರ ಸುತ್ತಿ ಹಾಕೋಣ ಎಂದು ಬೀರುವಿನಲ್ಲಿಟ್ಟಿದ್ದೆ. ಆದರೆ ರಮಂಗೆ ಈ ವಿಚಾರ ಹೇಳುವುದು ಮರೆತು ಹೋಗಿತ್ತು. ಕಳೆದೇನೂ ಹೋಗಿಲ್ಲವಲ್ಲ. ಒಂದಷ್ಟು ತಮಾಷೆ ನೋಡೋಣವೆಂದು ಆಗಲೇ ಈ ವಿಷಯ ಬಾಯಿ ಬಿಡಲಿಲ್ಲ.

"ಎಲ್ಲಿ ಹೋಯಿತಂತೆ?" ಎಂದೆ.

"ಅದನ್ನೇ ನಾನೂ ಕೇಳ್ತಿರೋದು. ಅವನ್ನೆಲ್ಲೋ ಮಗೂನ ಕರಕೊಂಡು ಹೊರಗೆ ಹೋಗಿದ್ದ. ಬಂದಾಗ ನೋಡಿದರೆ ಇಲ್ಲವೇ ಇಲ್ಲ!"

"ಅವನು ಕರಕೊಂಡು ಹೋಗುವಾಗ ಕೈಯಲ್ಲಿ ಉಂಗುರ ಇದ್ದದ್ದನ್ನು ನೋಡಿದ್ದೆಯೇನೇ ನೀನು?"

"ಸಾಯಂಕಾಲ ನಾನೇ ತೋಡಿಸಿದೋಳು ಅಂತೀನಿ" ಆಗಲೇ ಅಸಹನೆ. "ಅದು ಸರಿಯೇ. ಆದರೆ ಅವನು ಮಗೂನ ಕರಕೊಂಡು ಹೋಗೋ ಮುಂಚೆ ಮಗು ಕೈಲಿ ಉಂಗುರ ಇದ್ದದ್ದನ್ನು ನೋಡಿದೆಯಾ?"

"ಆಗ ಅವನ ಕೈಲಿ ಉಂಗುರ ಇರಲಿಲ್ಲ ಕಣೋ ಅಣ್ಣ" ಎಂದ ಇದುವರೆಗೂ ಸುಮ್ಮನಿದ್ದ ಶಶಿ.

"ನೀನು ಸುಮ್ನಿರೋ. ಏನೇ ನೋಡಿದ್ಯಾ?"

"ಇಪ್ಪತ್ತನಾಲ್ಕು ಗಂಟೆಯೂ ನಾನೇ ನೋಡಿಕೋತಾ ಇರಬೇಕಾ! ಬೇರೇನೂ ಕೆಲಸ ಇಲ್ಲವಾ ನಂಗೆ!"

"ಅವನು ಮಗೂನ ಕರಕೊಂಡು ಹೋಗೋಕ್ಕೆ ಮುಂಚೇನೆ ಕಳೆದುಹೋಗಿರಬಹುದಲ್ಲವಾ?"

"ಅವನೆಲ್ಲಿ ಹೋಗಿದ್ದ ಅಂತೀನಿ, ಕಳಕೊಳ್ಳೋದಕ್ಕೆ ಮನೇಲೇ ಇದ್ದ."

"ಯಾಕೆ ಮನೇ ಒಳಗೇ ಎಲ್ಲಾದರೂ ಬಿದ್ದಿರಬಾರದೇನು?"

"ಅಂತೂ ನೀವು ಯಾವತ್ತೂ ಅವನ ಕಡೇನೇ. ಹೊಸ ಉಂಗುರ ಕಳಕೊಂಡು ಬಂದಿದ್ದಾನೆ. ಅವನ್ನ ಒಂದು ಮಾತು ಅಂತಾ ಇಲ್ಲ; ಅವನೂ ನಿಮಗೆ ಸರಿಯಾಗಿದಾನೆ. ಸಂಪಾದನೆ ಮಾಡೋನು. ಕಳೆದು ಹಾಕಿರೊ ಜವಾಬ್ದಾರಿ ತಗಂಡು ಹೊಸದು ಮಾಡಿಸೋಣ ಅಂತ ಹೇಳೋ ಬುದ್ಧೀನೂ ಇಲ್ಲ, ಮಾಡಿಸದೇ ಇದ್ದರೆ ಹೋಗಲಿ."

"ನಾನು ಕಳೆದು ಹಾಕಿಲ್ಲದೇ ಇರೋವಾಗ ಮಾಡಿಸ್ತೀನಿ ಅಂತ ಯಾಕೆ ಹೇಳಬೇಕು?" ಎಂದ ಶಶಿ.

"ಎಲ್ಲ ನೆಗೆದುಬಿದ್ದು ಹೋಗಲಿ ಬಿಡಿ. ಎಲ್ಲ ನನ್ನ ಮೇಲೇನೇ ಗೂಬೆ ಕೂರಿಸೋದು" ಅಂತ ಕಣ್ಣೊರೆಸಿಕೊಂಡು ಒಳಗೆ ಹೋಗಲು ತಿರುಗಿದಳು. ಇನ್ನು ತಮಾಷೆ ಸಾಕು ಅನ್ನಿಸಿತು. ಒಳಗೆ ಹೋಗಿ ಬೀರುವಿನಲ್ಲಿಟ್ಟಿದ್ದ ಉಂಗುರ ತಂದು ರಮಳ ಮುಂದೆ ಅಂಗೈಯಲ್ಲಿಟ್ಟುಕೊಂಡು ಹಿಡಿದೆ. ಅವಳ ಕಣ್ಣರಳಿತು. "ಎಲ್ಲಿತ್ತು?"ಅಂದಳು. ವಿಚಾರ ಹೇಳಿದೆ "ನಿಮ್ಮ ತಮಾಷೆ ಗಿಷ್ಟು ಬೆಂಕಿ ಬಿತ್ತು. ಎಲ್ಲ ರಾದ್ಧಾಂತವಾಗೋವಾಗ ನಿಮಗೆ ಹಾಸ್ಯ" ಅಂದಳು. "ಸಾರಿ ಅಂತ ಶಶಿ ಹತ್ರ ಹೇಳು" ಅಂದೆ. "ನಾನ್ಯಾಕೆ ಹೇಳಲಿ ಇದೆಲ್ಲಕ್ಕೂ ನೀವೇ ತಾನೇ ಕಾರಣ. ನೀವೇ ಹೇಳಿಕೊಳ್ಳಿಬೇಕಾದರೆ" ಅಂದಳು.

ನಿಜವಾದ ವಿಚಾರ ತಿಳಿದಮೇಲೂ ಶಶಿ ಅವರತ್ತಿಗೆಯನ್ನು ತೆಗಳುವ ಕೆಲಸಕ್ಕಾಗಲೀ, ಹೀಯಾಳಿಸುವುದಕ್ಕಾಗಲೀ ಕೈಹಾಕಲಿಲ್ಲ. ಅಷ್ಟೆಲ್ಲ ಅನಿಸಿಕೊಂಡರೂ, ತನ್ನದು ತಪ್ಪಿರಲಿಲ್ಲವೆಂದು ತಿಳಿದ ಮೇಲೆಯೂ ಅವನ ಕಣ್ಣುಗಳು ಕಿಡಿಕಾರಲಿಲ್ಲ. ರಮ "ನೀವೇ ಸಾರಿ ಹೇಳಿಕೊಳ್ಳಿ ಬೇಕಾದರೆ" ಅಂತ ಹೇಳಿದ್ದರೂ ಅವಳ ಮುಖದಲ್ಲಿ ಒಂದು ಬಗೆಯ ನಾಚಿಕೆ ಮನೆಮಾಡಿಕೊಂಡಿತ್ತು. ಶಶಿಯನ್ನು ಎದುರಿಸಲು ಅವಳಿಗೆ ಸಾಧ್ಯವಾಗುತ್ತಿರಲಿಲ್ಲ ಎಂಬಂತೆ ಕಾಣುತ್ತಿತ್ತು. ಆದರೆ ಶಶಿಯ ಸಹನೆ ನನಗೆ ಆಶ್ಚರ್ಯವನ್ನುಂಟು ಮಾಡಿತ್ತು. ಅಂತೂ ಬೇರೆಯವರಿಗಾಗಿ ಕೆಲವೇಳೆ ತಾನು ನೋಯುತ್ತಿದ್ದ ನಮ್ಮ ಶಶಿ. ಅವನ ಸಾವೂ ಅದೇ ರೀತಿಯದು ಏನೋ. "ಅಣ್ಣನಿಗೆ ಬೇಜಾರಾಗಿದೆಯೆಂದು ಗೊತ್ತಾದರೆ ನಾನಿರುವುದಿಲ್ಲ" ಎಂದು ಹೇಳುತ್ತಿದ್ದನಂತೆ ಅವರಿವರ ಹತ್ತಿರ, ಈಗ ಹೋಗಿಬಿಟ್ಟಿದ್ದಾನೆ. ಅಂದರೆ ನನಗೆ ಅವನ ಬಗ್ಗೆ ಬೇಜಾರಾಗಿದೆ ಎಂದು ಅವನು ತೀರ್ಮಾನಿಸಿ ಹೋಗಿ ಬಿಟ್ಟಿದ್ದಾನೆ. ಇನ್ನು ನಮಗೆ ಬೇಸರಕ್ಕೆ ಕಾರಣವಿಲ್ಲ. ಅವನು ಅನುಭವಿಸುವುದಕ್ಕೆ ಅವಕಾಶವಿಲ್ಲ ಎಂಬ ವ್ಯಂಗ್ಯಮನಸ್ಸಲ್ಲಿ ಕಹಿಯಾಗುತ್ತದೆ. ಮಗ್ಗುಲಾಗಿ ಮಲಗುತ್ತೇನೆ.

ಗಾಢವಾಗಿ ನಿದ್ದೆ ಬರುತ್ತದೆ. ಇಷ್ಟು ದಿವಸದ ಆಯಾಸವೆಲ್ಲ ಈವೊತ್ತಿನ ನಿದ್ದೆಯಿಂದಲೇ ಮಂಗಮಾಯವಾಗಿ ಬಿಡುತ್ತದೆ ಎನ್ನುವ ಭಾವನೆ ಬರುವಂತಹ ಗಾಢವಾದ ನಿದ್ದೆ. ಜೇನುತುಪ್ಪದಲ್ಲಿ ನಾಲಗೆಯನ್ನು ಮುಳುಗಿಸಿದಷ್ಟು ಮಧುರ ವಾದ ನಿದ್ದೆ, ಇಂಥ ನಿದ್ದೆ ಮಾಡಿ ಎಷ್ಟು ಕಾಲವಾಗಿತ್ತೋ, ಯುಗವಾಗಿತ್ತೋ? ಪ್ರಾಯಶಃ ಈ ಜನ್ಮದಲ್ಲಿಯೇ ನಾನಿಂತಹ ನಿದ್ದೆಯನ್ನು ಮಾಡಿರಲಿಲ್ಲ ಎಂಬಂತಹ ಸವಿನಿದ್ದೆ!

ಮಧ್ಯೆ ಯಾರೋ ಬಾಗಿಲನ್ನು ಟಕ್ ಟಕ್ ಎಂದು ಬಡಿಯುವ ಸದ್ದು ಕೇಳಿಸಿದುದರಿಂದ ಎಚ್ಚರವಾಗುತ್ತದೆ. ಎಂಥ ನಿದ್ದೆ ಕೆಟ್ಟುಹೋಯಿತಲ್ಲ ಎಂಬ ಬೇಸರದ ಬೇವು ಮನಸ್ಸನ್ನು ಆವರಿಸುತ್ತದೆ. ಆದರೆ ಇನ್ನು ಮಂಪರು, ಏಳಲು ಬೇಜಾರು.

ಯಾವ ಸದ್ದೂ ಇರಲಾರದು. ನನ್ನ ಭ್ರಮೆ ಇರಬೇಕು ಎಂದು ಕಣ್ಮುಚ್ಚಿ ಮಲಗುತ್ತೇನೆ, ಎರಡೇ ಕ್ಷಣ. ಮತ್ತೆ ಮತ್ತೆ ಸದ್ದು ಕೇಳಿಸುತ್ತದೆ, ಎಚ್ಚರವಾಗುತ್ತದೆ. ಏನಿರಬಹುದು? ಯಾರಾದರೂ ಗುರುತಿನವರು ಬಂದಿರಬಹುದೇ? ಅಥವಾ ಕಳ್ಳನಾದರೂ ಪೋಲೀಸು ಕಂಡನೆಂದು ಅಡಗಿಕೊಳ್ಳಲು ಪ್ರಯತ್ನಿಸಿ ಇಲ್ಲಿ ಬಂದಿದ್ದಾನೆಯೇ? ಯಾಕೋ ಭಯ. ಬಾಗಿಲು ತೆಗೆದರೆ ಏನು ಗ್ರಹಚಾರವೋ, ಎಂದು ಮುಸುಕ ಹಾಕಿ ಮತ್ತೆ ಮಲಗುತ್ತೇನೆ. ಆದರೆ ಆ ಸದ್ದು ಮಾತ್ರ ನಿಲ್ಲುವುದಿಲ್ಲ, ನನಗೆ ನಿದ್ದೆ ಬರಲು ಬಿಡುವುದಿಲ್ಲ. ಯಾರಿರಬಹುದು, ಹೀಗೆ ಕಾಟ ಕೊಡುತ್ತಿದ್ದಾರೆ! ಈ ದಿನವಾದರೂ ಕಣ್ತುಂಬ ನಿದ್ದೆ ಮಾಡಲು ಅವಕಾಶವಾಗುತ್ತಿಲ್ಲವಲ್ಲ. ಕೋಪ, ಬೇಸರ, ಮತ್ತೆ ಮತ್ತೆ ಸದ್ದು. ಸ್ವಲ್ಪ ದೀರ್ಘಕಾಲ ಸದ್ದಿಲ್ಲ. ಸದ್ಯ ಶನಿ ತೊಲಗಿತು – ಎಂದು ಮಲಗಲು ಪ್ರಯತ್ನಿಸುತ್ತೇನೆ. ಆದರೆ ಈಗ ಬಾಗಿಲು ಬಡಿತ ಸದ್ದು ಬರದೆ, ಮಲಗಿದ್ದ ಮಂಚದ ಹತ್ತಿರ ಇದ್ದ ಕಿಟಕಿಯ ಕಡೆಯಿಂದ ಯಾರೋ ಕೂಗುವ ಸದ್ದು, "ಬಾಗಿಲು ತೆಗಿ, ಬಾಗಿಲು ತೆಗಿ" ನನ್ನ ಎದೆ ಡವಡವ ಹೊಡೆದುಕೊಳ್ಳಲು ಪ್ರಾರಂಭವಾಗುತ್ತದೆ. ಸ್ವರ ಪರಿಚಿತವಾಗಿರುವುದೇ ಅನ್ನಿಸಿತು. ಆದರೆ ಮುಖ ಕಾಣಿಸದ ಹಾಗೆ ಮುಸುಕು ಹಾಕಿಕೊಂಡ ವ್ಯಕ್ತಿ, ಕಣ್ಣುಗಳು, ಕಾಣಿಸುವಷ್ಟು ಮಾತ್ರ ಜಾಗ. ಇಷ್ಟು ಹೊತ್ತಿನಲ್ಲಿ ಯಾರಿರಬಹುದು ಇವನು? ಇಲ್ಲಿಗೇಕೆ ಬಂದ. ಧ್ವನಿ ಗುರುತಿನವನಿದ್ದಂತೆ ಕಾಣಿಸುತ್ತದೆ. ಆದರೆ ವ್ಯಕ್ತಿ ಯಾರೆಂದು ಗೊತ್ತಾಗದಲ್ಲ. ಹಾಳಾಗಲಿ, ನನಗೆ ನಿದ್ದೆಬೇಕು, ಆಗಲೇ ಬಂದಿತ್ತಲ್ಲ ಅಂಥ ನಿದ್ದೆ ಮಾಡಬೇಕು. ಈಚೆಗೆ ಹೊರಳಿ ಮಲಗಲು ಯತ್ನಿಸುತ್ತೇನೆ. ಮತ್ತೆ ಅದೇ ಧ್ವನಿ, ಕೂಗು; "ಬಾಗಿಲು ತೆಗಿ, ತೆಗಿ" ಯಾರಿರಬಹುದು? ಭಯ ಅಷ್ಟೊಂದಿಲ್ಲ ಈಗ, ಧ್ವನಿ ಪರಿಚಯದ್ದು, ಗಾಬರಿಗೆ ಕಾರಣವಿಲ್ಲ ಎನಿಸುತ್ತದೆ. ಕುತೂಹಲ, ನೋಡೇ ಬಿಡೋಣ ಎಂದು ಎದ್ದು ಕಿಟಕಿಯ ಹತ್ತಿರ ಹೋಗಿ ಮುಖ ಸರಳುಗಳಿಗೆ ಆನಿಸಿ ನೋಡುತ್ತೇನೆ. ಅದೇ ವ್ಯಕ್ತಿ, ಮೈತುಂಬ ಹೊದ್ದಿದೆ. ಕಣ್ಣು ಮಾತ್ರ ಕಾಣಲಿಕ್ಕಾಗು ವಷ್ಟು ಜಾಗ ಮುಖದಲ್ಲಿ, ಕೈಬೀಸಿ "ಬಾಗಿಲು ತೆಗಿ ಬಾ" ಎನ್ನುತ್ತದೆ. "ಎಲ್ಲೋ ಆ ವ್ಯಕ್ತಿಯನ್ನು ನಾನು ನೋಡಿದ್ದೇನಲ್ಲ ಎನಿಸಿ ಸಹಾಯ ಮಾಡೋಣವೆಂಬ ಮನಸ್ಸಾಗುತ್ತದೆ. ನಿಧಾನವಾಗಿ ಮಂಚವನ್ನು ಸುತ್ತಿಕೊಂಡು ರೂಮುಬಿಟ್ಟು ಹೊರಕ್ಕೆ ಬರುತ್ತೇನೆ. ಬೇರೆಲ್ಲರೂ ನಿದ್ದೆಯಲ್ಲಿದ್ದಾರೆ. ಅವರಿಗೇನು ಪ್ರಾಣವಿದೆಯೋ ಇಲ್ಲವೋ ಎನ್ನುವಷ್ಟರಮಟ್ಟಿಗಿನ ನಿದ್ದೆ. ಅವರಿಗೂ ಎಚ್ಚರವಾಗಿ ರಾದ್ಧಾಂತವಾಗಿಬಿಟ್ಟರೆ! ಅವರಿಗೆ ಹಾಗೆ ನಿದ್ದೆ ಬಂದಿರುವುದೇ ಒಳ್ಳೆಯದಾಯಿತು. ಅಂಬೆಗಾಲಿಡುತ್ತಾ ಬಂದು ಹೊರಗಿನ ಚಿಲಕವನ್ನು ಸದ್ದಾಗದಂತೆ ತೆಗೆಯುತ್ತೇನೆ. ವ್ಯಕ್ತಿ ಒಳಗೆ ಬರುತ್ತದೆ. ಮಾತನಾಡಬೇಡವೆಂದು ಬಾಯಿಯ ಮೇಲೆ ಬೆರಳಿಟ್ಟು ತೋರಿಸುತ್ತದೆ. ನಾನು ಮಾತನಾಡಬೇಕೆಂದರೂ ಈಗ ಬಾಯಿ ಬರುತ್ತಿಲ್ಲ, ಆ ವ್ಯಕ್ತಿ ಒಳಗಡೆ ಬರಲು ಸನ್ನೆ ಮಾಡುತ್ತಾ ತಾನು ಮೊದಲಾಗಿ ಒಳಗೆ ಹೋಗುತ್ತದೆ. ನನಗೆ ಕುತೂಹಲ. ನಿದ್ದೆ ಹಾರಿಹೋಗಿದೆ, ಈಗ ಅದರ ಬದಲು ಕುತೂಹಲವೇ ತುಂಬಿಕೊಂಡಿದೆ ಒಳಗೆ ಬಂದಾಗ "ಏನು, ಯಾರು ನೀನು?" ಎನ್ನುತ್ತೇನೆ.

"ಗೊತ್ತಾಗಲಿಲ್ಲವಾ?"

"ಉಹ್ಞೂ, ಧ್ವನಿ ಪರಿಚಿತವಾದದ್ದೆನ್ನಿಸುತ್ತಿದೆ. ಆದರೆ ಯಾರೂಂತ ಗೊತ್ತಾಗ್ತಾ ಇಲ್ಲವಲ್ಲ" ಎನ್ನುತ್ತೇನೆ ಪಿಸುಮಾತಿನಲ್ಲಿ.

"ಗೊತ್ತಾಗತ್ತೆ. ಗೊತ್ತಾಗತ್ತೆ" ಎಂದು ಆ ವ್ಯಕ್ತಿ ತನ್ನ ತಲೆಯ ಮೇಲಿನ ಮುಸುಕು ತೆಗೆಯುತ್ತದೆ. ಶಶಿ. ನಮ್ಮ ಶಶಿ. ನನಗೆ ಸಂತೋಷವಾಗುತ್ತದೆ. "ನೀನು ಸತ್ತು ಹೋಗಿದ್ದೀ ಅಂತ ತಿಳಿಕೊಂಡಿದ್ದೆನಲ್ಲೋ. ಒಳ್ಳೇದಾಯಿತು. ಸದ್ಯ ಬದುಕಿದ್ದೀಯಲ್ಲ" ಎಂದು ಅವನನ್ನು ಹಿಡಿದುಕೊಳ್ಳಲು ಮುಂದಾಗುತ್ತೇನೆ.

"ದೂರ ನಿಲ್ಲು" ಈಗ ಶಶಿಯ ಧ್ವನಿ ಗಡುಸಾಗಿದೆ. ಕೋಪದಿಂದ ಕೂಡಿದಂತೆ ಕಠಿಣವಾಗಿದೆ.

"ಯಾಕೋ ಶಶಿ. ನಾನೇನು ಮಾಡಲಿ? ಬಾವಿಯಲ್ಲಿ ತೇಲುತ್ತಿದ್ದ ಹೆಣ ನಿನ್ನದೇ ಅಂತ ರುಜುವಾತಾಗುವಷ್ಟು ದಾಖಲೆ ಸಿಕ್ಕಿದುವಲ್ಲ."

"ಸುಳ್ಳು. ಸರಸರಾಂತ ನೀನೇ ಆ ಹೆಣ ನನ್ನದು ಅಂತ ತೀರ್ಮಾನ ಮಾಡಿ ನನ್ನನ್ನು ಸಾಯಿಸಿಬಿಟ್ಟೆ."

"ಏನು ಮಾತಾಡ್ತೀಯೋ ಶಶಿ. ನಿನ್ನ ನಾನು ಸಾಯಿಸಿದ್ದೇನೆ?"

"ಬರೀ ಸಾಯಿಸೋದಲ್ಲ. ಈಗ ನನ್ನ ಕೋಪ ಹೋಗಿದೆ. ಈಗ ಹೋದರೆ ಸತ್ತವನು ನೀನು ಎಂದು ಫ್ಯಾಕ್ಟರಿಯೋರು ಓಡಿಸುತ್ತಾರೆ. ನನಗೆ ಈಗ ಕೆಲಸವಿಲ್ಲ. ಬದುಕೋದು ಹೇಗೆ?"

"ನೀನು ಕೆಲಸಕ್ಕೆ ಹೋಗೋದು ಯಾಕೋ?"

"ಈಗ ಬೂಟಾಟಿಕೆ ಮಾತಾಡ್ತೀಯ. ನಾನು ಸತ್ತೇಂತ ಎಲ್ಲರಿಗೂ ತಿಳಿಸಿ. ನಾನು ಬಂದರೂ ನಂಬದೆ ಇರೋ ಹಾಗೆ ಮಾಡಿ ಈಗ ಎಂತಹ ಬೆಣ್ಣೇಲಿ ಕೂದಲು ತೆಗೆಯೋ ಮಾತಾಡ್ತಿದ್ದೀಯ! ಹ್ಞೂ" ಎಂದು ಹೂಂಕರಿಸಿ ಮುಂದೆ ಬರುತ್ತಾನೆ ಶಶಿ.

"ಏನು ಮಾತೂಂತ ಆಡ್ತೀಯೋ ಶಶಿ. ನಿನ್ನ ಸಾಯಿಸೋದರಿಂದ ನನಗೆ ಬರೋ ಲಾಭವೇನು. ಇದ್ಯಾಕೆ ಹೀಗೆ ಮಾತಾಡಿ ನನ್ನ ಕೊಲ್ತೀಯಾ?"

"ಕೊಲ್ಲದೇ! ನನ್ನ ಸಾಯಿಸೋದರಿಂದ ನಿನಗೆ ಲಾಭವಿಲ್ಲವಾ? ನನ್ನ ಪ್ರಾವಿಡೆಂಟ್ ಫಂಡ್ ದುಡ್ಡು. ಇನ್‌ಶೂರೆನ್ಸ್ ದುಡ್ಡು ಇವನ್ನೆಲ್ಲ ಲಪಟಾಯಿಸೋಕ್ಕೆ. ಎರಡುದಿನ ನಾನು ಕಾಣಿಸಲಿಲ್ಲಾಂತ, ಸತ್ತೇ ಹೋದೆ ಅಂತ ಸುದ್ದೀನ ಎಲ್ಲ ಕಡೆ ಹರಡಿಬಿಟ್ಟಿದ್ದೀಯಾ. ಬದ್ಮಾಷ್ ನೀನು, ಅಣ್ಣ ಅಲ್ಲ."

ಅವನ ಮಾತನ್ನು ಜೋರಾಗಿ ಪ್ರತಿಭಟಿಸಬೇಕು. ಅಂತ ಕಿರುಚಲು ಪ್ರಯತ್ನಿಸುತ್ತೇನೆ. ಅವನು ಅದಕ್ಕೆ ಅವಕಾಶ ಕೊಡದೆ ನನ್ನ ಗಂಟಲನ್ನು ಹಿಡಿದುಬಿಡುತ್ತಾನೆ. ಉಸಿರು ಕಟ್ಟಿದಂತಾಗುತ್ತದೆ, ಅವನ ಕೈಗಳನ್ನು ದೂರ ಸರಿಸಲು ಪ್ರಯತ್ನಿಸುತ್ತೇನೆ. ಎಂಥ ಕಪಿಮುಷ್ಠಿ ಅವನದು! ಕೈಗಳೋ ಕಬ್ಬಿಣದಷ್ಟು ಗಟ್ಟಿಯಾಗಿವೆ. ಕ್ಷಣಕ್ಷಣಕ್ಕೂ ಅವನ ಹಿಡಿತ ಜೋರಾಗುತ್ತಿದೆ. ಕಣ್ಣುಗಳು ದೃಷ್ಟಿ ಕಳೆದುಕೊಳ್ಳಲು ತೊಡಗಿವೆಯೇನೋ ಎಂಬ ಅನಿಸಿಕೆ. ಶಶಿ ಯಾಕೆ ಹೀಗಾಗಿ ಬಿಟ್ಟ. ನಾನು ಮಾಡಿದ್ದಾದರೂ ಏನು? ಈಗ ಅವನು ಬದುಕಿ ನಾನು ಸಾಯುವಂತಾಗುತ್ತಿದೆಯೇನೋ ಅವನು ಜೊತೆಯಲ್ಲಿರೋವರೆಗೂ ಹೇಗೆ ನೋಡಿಕೊಂಡೆ. ನನ್ನ ಸ್ವಂತ ಸುಖ, ಸಂಸಾರದ ಶಾಂತಿ ಇವನ್ನೆಲ್ಲ ಬಲಿಕೊಟ್ಟು ಅವನನ್ನು ಸುಖವಾಗಿಡಲು ಪ್ರಯತ್ನಿಸಿದೆ. ಆದರೆ ಈಗ ನನ್ನ ಮೇಲೆ ಇವನು ಹೊರಿಸುತ್ತಿರುವ ಆರೋಪವೆಂಥದು. ನಾನೇ ಅವನನ್ನು ಸಾಯಿಸಿಬಿಟ್ಟನಂತೆ, ಹಾಗಾದರೆ ಅವನು ಯಾಕೆ ಮನೇಬಿಟ್ಟು ಹೋಗಿಬೇಕಾಗಿತ್ತು. ಬೇಗ ಬಂದಿದ್ದರೆ ಈ ಸಮಸ್ಯೆಯಿರುತ್ತಿರಲಿಲ್ಲವಲ್ಲ. ಈಗ ಅವನು ಒಪ್ಪಿ ಬಂದರೂ ಅವನನ್ನು ಜೊತೆಯಲ್ಲಿರಿಸಿಕೊಳ್ಳುವುದು ಹೇಗೆ? ರಾಕ್ಷಸನಾಗಿ ಬಿಟ್ಟಿದ್ದಾನೆ. ಜೊತೆಗಿದ್ದರೆ ನಮ್ಮಗಳ ರಕ್ತವನ್ನೇ ಹೀರಿಬಿಡ್ತಾನೆ. ಅವನು ಹೋದ ಅಂತ ದುಃಖವಿತ್ತು. ಆದರೆ ಈಗಿನ ಇವನ ಆಟಾಟೋಪ ನೋಡಿದರೆ ಇವನು ಯಾಕೆ ಬದುಕಿದ್ದಾನೆ ಅನ್ನಿಸತ್ತೆ. ಅಯ್ಯೋ, ನಿಜವಾಗಿ ಇವನು ಸತ್ತೇಹೋಗಿದ್ದರೆ ಚೆನ್ನಾಗಿತ್ತು. ನನ್ನೇ ಬಲಿ ತಗೋಳಕ್ಕೆ ಬಂದಿದ್ದಾನಲ್ಲ ಇವನು. ನಾನು ಸತ್ತರೆ ರಮಳನ್ನು, ಮಕ್ಕಳನ್ನು ಹೇಗೆ ಗೋಳಾಡಿಸ್ತಾನೋ ಇವನು. ಇಲ್ಲ, ಇವನನ್ನು ಸುಮ್ಮನೆ ಬಿಡಬಾರದು. ನಾನೇ ಕೊಂದು ಬಿಡಬೇಕು. ಅದಕ್ಕೆ ಮೊದಲು ಇವನ ಬಿಗಿ ಹಿಡಿತದಿಂದ ಹೇಗಾದರೂ ಬಿಡಿಸಿಕೋಬೇಕು ಎಂದು ಜಾಡಿಸಿ ಒದೆಯುತ್ತೇನೆ. ಕಬ್ಬಿಣಕ್ಕೆ ಒದ್ದಂತೆ ಕಾಲೆಲ್ಲ ನೋವು, ಅಸಾಧ್ಯ ನೋವು!

ಎಚ್ಚರವಾಗಿ ಕಣ್ಣು ಬಿಡುತ್ತೇನೆ. ಪೃಥ್ವಿಯ ಕಾಲು ನನ್ನ ಕೊರಳ ಮೇಲೆ ಬಿದ್ದಿದೆ. ಅದನ್ನು ದೂರ ಸರಿಸಿ ಯೋಚಿಸುತ್ತೇನೆ. ನಾನು ಕಂಡದ್ದು ಕನಸು ಎಂಬುದು ಗೊತ್ತಾಗುತ್ತದೆ. ನನ್ನ ಬಲಪಾದ ನೋಯುತ್ತಿದೆ ಕನಸಿನಲ್ಲಿ, ಒದ್ದದ್ದು ನಿಜ, ಮಂಚದ ತುದಿಗೆ ಒದ್ದಿದ್ದೇನೆ ಎಂಬ ಅರಿವಾಗುತ್ತದೆ. ಅಬ್ಬಾ, ಎಂಥ ಕನಸು! ಅಲ್ಲಿ ಶಶಿ ಹೇಗೆ ರಾಕ್ಷಸನಂತೆ ಕಾಣಿಸಿದ; ಈಗಲೂ ಎದೆ ಡವಗುಟ್ಟುತ್ತಿದೆ. ಮೈ ಬೆವರಿದೆ. ದುರ್ಮರಣಕ್ಕೆ ಒಳಗಾದವರು ದೆವ್ವಗಳಾಗಿ ಕಾಡುತ್ತಾರೆ ಎಂದು ಹೇಳುತ್ತಾರಲ್ಲ. ಅದು ಈ ರೀತಿಯಲ್ಲಿಯೇ ಇರಬಹುದೇ ಎಂಬ ವಿಚಾರಕ್ಕೆ ಒಳಗಾಗುತ್ತೇನೆ ಎಷ್ಟು ಪ್ರಯತ್ನಪಟ್ಟರೂ ನಿದ್ದೆ ಬಾರದಾಗುತ್ತದೆ.

******